ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 28 | ಸಂಚಿಕೆ Issue 15 | ಪುಟ Pages 10 | ಸೋಮವಾರ 4 ಮೇ 2026 | RNI REGN NO. KARKAN/1999/2674 | www.epaper.samyukthakarnataka.com | Samyuktha Karnataka | @samyuktakarnat2 | ₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

ಕನ್ನಡಿಗರ ಸಾಕ್ಷಿಪ್ರಜ್ಞೆ

samyuktha karnataka

ಕರ್ನಾಟಕ ರಾಜ್ಯ ವಿಧಾನಸಭೆಗೆ 3 ವರ್ಷಗಳಲ್ಲಿ 7 ಉಪಚುನಾವಣೆ 7

ಸುಪ್ರೀಂ ಕೋರ್ಟ್‌ನಲ್ಲಿ ದರ್ಶನ್ ಜಾಮೀನು ವಿಚಾರಣೆ ಇಂದು 5

ಬ್ರಿಜ್ ಭೂಷಣ್ ಲೈಂಗಿಕ ದೌರ್ಜನ್ಯದ ಸಂತ್ರಸ್ತರಲ್ಲಿ ನಾನೂ ಒಬ್ಬಳು: ಫೋಗಾಟ್ 7

ಎರಡು ತಿಂಗಳ ಚುನಾವಣೆ ಸರ್ಕಸ್‌ಗೆ ಕೊನೆಗೂ ತೆರೆ

ಪಂಚರಾಜ್ಯಗಳ ಕ್ಲೈಮ್ಯಾಕ್ಸ್ ಇಂದು

ತ.ನಾಡು, ಕೇರಳ, ಪ.ಬಂಗಾಳ, ಪುದುಚೆರಿ, ಅಸ್ಸಾಂ ಚುಕ್ಕಾಣಿ ಹಿಡಿಯೋರ್‍ಯಾರು?

ಬಿಗಿ ಭದ್ರತೆ ನಡುವೆ ಮತ ಎಣಿಕೆಗೆ ಆಯೋಗ ಸಜ್ಜು | ಬೆಳಗ್ಗೆ 8 ಗಂಟೆಗೆ ಆರಂಭ

ನವದೆಹಲಿ: ರಣ ರೋಚಕವಾಗಿ ಅಂತ್ಯ ಕಂಡಿರುವ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಗಳ ಮತ ಎಣಿಕೆ ಸೋಮವಾರ ನಡೆಯಲಿದ್ದು, ಸಂಜೆ ವೇಳೆಗೆ ಬಹುತೇಕ ಫಲಿತಾಂಶಗಳು ಹೊರಬೀಳುವ ನಿರೀಕ್ಷೆಯಿದೆ.

ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳಂ ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೆರಿ ಮತದಾರರು ನೀಡಿರುವ 'ಅಂತಿಮ ತೀರ್ಪು' ಆಯಾ ರಾಜ್ಯಗಳ, ಆಯಾ ಕ್ಷೇತ್ರಗಳ ಸ್ಟ್ರಾಂಗ್ ರೂಂಗಳಲ್ಲಿನ ಇವಿಎಂಗಳಲ್ಲಿ ಗೌಪ್ಯವಾಗಿದ್ದು, ಸೋಮವಾರ ಬೆಳಗ್ಗೆ 8 ಗಂಟೆಗೆ ಅವನ್ನು ಹೊರತೆಗೆದು ಎಣಿಕೆ ಆರಂಭಿಸಲಾಗುವುದು.

ಆಯಾ ರಾಜ್ಯಗಳ ಎಲ್ಲ ಮತ ಎಣಿಕೆ ಕೇಂದ್ರಗಳ ಸುತ್ತ ವಿವಿಧ ಹಂತಗಳ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳಕ್ಕೆ 165 ಹೆಚ್ಚುವರಿ ಎಣಿಕೆ ವೀಕ್ಷಕರು ಮತ್ತು 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಲಾಗಿದೆ. ಅಂತೆಯೇ ಅಸ್ಸಾಂನಲ್ಲಿ 126 ಹಿರಿಯ ಐಎಎಸ್ ಅಧಿಕಾರಿಗಳನ್ನು ಹೊರ ರಾಜ್ಯಗಳಿಂದ ವೀಕ್ಷಕರನ್ನಾಗಿ ಕರೆಸಲಾಗಿದೆ. ಇವರ ಜೊತೆಗೆ 2348 ಸೂಕ್ಷ್ಮ ವೀಕ್ಷಕರೂ ಕಾರ್ಯ ನಿರ್ವಹಿಸಲಿದ್ದಾರೆ.

ಮತ ಎಣಿಕೆ ಕೇಂದ್ರಗಳಿಗೆ ಪ್ರವೇಶಿಸುವ ಅಧಿಕೃತ ವ್ಯಕ್ತಿಗಳ ಗುರುತು ಪತ್ತೆಗಾಗಿ ಚುನಾವಣಾ ಆಯೋಗವು ಕ್ಯೂಆರ್ ಕೋಡ್ ಆಧಾರಿತ ಭಾವಚಿತ್ರ ಗುರುತಿನ ಚೀಟಿ ವ್ಯವಸ್ಥೆ ಕೈಗೊಂಡಿದೆ. ಇದರಿಂದಾಗಿ ಅನಧಿಕೃತ ವ್ಯಕ್ತಿಗಳ ಪ್ರವೇಶಕ್ಕೆ ಬ್ರೇಕ್ ಬಿದ್ದಂತಾಗಿದೆ.

- ಅಸ್ಸಾಂನಲ್ಲಿ 126 ಕ್ಷೇತ್ರಗಳಿಗಾಗಿ 35 ಜಿಲ್ಲೆಗಳಲ್ಲಿ ಒಟ್ಟಾರೆ 40 ಎಣಿಕೆ ಕೇಂದ್ರಗಳ ಸ್ಥಾಪನೆ
- ಅಸ್ಸಾಂನಲ್ಲಿ ಮತ ಎಣಿಕೆಗೆ 6000 ಮಂದಿ ಸೇರಿದಂತೆ, 8500 ಅಧಿಕಾರಿಗಳನ್ನು ನಿಯೋಜಿಸಿದ ಆಯೋಗ
- ಪಶ್ಚಿಮ ಬಂಗಾಳದಲ್ಲಿ ಒಟ್ಟು 77 ಮತ ಎಣಿಕೆ ಕೇಂದ್ರಗಳ ಸ್ಥಾಪನೆ
- ತಮಿಳುನಾಡಿನಲ್ಲಿ ಒಟ್ಟು 62 ಮತ ಎಣಿಕೆ ಕೇಂದ್ರಗಳ ಸ್ಥಾಪನೆ
- 20 ವಿದೇಶಿ ವೀಕ್ಷಕರ ಆಗಮನ

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿ ಕೇಂದ್ರ ಪಡೆಗಳಿಂದ ಸ್ಟ್ರಾಂಗ್ ರೂಂ ಬಳಿ ಬಿಗಿ ಭದ್ರತೆ ಏರ್ಪಾಟಾಗಿದೆ

ಬಂಗಾಳ: 1 ಕ್ಷೇತ್ರದ ರಿಸಲ್ಟ್ ಇಂದಿಲ್ಲ

ಚುನಾವಣಾ ಅಕ್ರಮಗಳು ಇತ್ಯಾದಿ ವ್ಯಾಪಕವಾಗಿ ಬಂದ ದೂರುಗಳ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ತಾ ವಿಧಾನಸಭಾ ಕ್ಷೇತ್ರದ ಎಲ್ಲ 285 ಮತಗಟ್ಟೆಗಳಲ್ಲಿ ಮೇ 21ರಂದು ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶಿಸಿದೆ. ಅಂತೆಯೇ ಕ್ಷೇತ್ರದ ಮತ ಎಣಿಕೆ ಮೇ 24 ರಂದು ನಿಗದಿಯಾಗಿದೆ. ಆದರೆ ರಾಜ್ಯದ ಉಳಿದೆಲ್ಲ ಕ್ಷೇತ್ರಗಳ ಫಲಿತಾಂಶ ಸೋಮವಾರ ಪ್ರಕಟವಾಗುತ್ತಿದೆ. ಜೊತೆಗೆ ಆಡಳಿತಾರೂಢ ಟಿಎಂಸಿ ಕಾರ್ಯಕರ್ತರ ಗೂಂಡಾಗಿರಿ ಹಾಗೂ ಬೆದರಿಕೆ ವಿರುದ್ಧ ಫಾಲ್ತಾದಲ್ಲಿ ಸರ್ಕಾರದ ವಿರುದ್ಧ ಜನರೇ ಬೀದಿಗಿಳಿದಿದ್ದು, ಪ್ರತಿಭಟನೆ ಇನ್ನೂ ಮುಂದುವರೆದಿರುವುದರಿಂದ ಫಾಲ್ತಾ ಕ್ಷೇತ್ರಾದ್ಯಂತ ಅತ್ಯಂತ ವ್ಯಾಪಕ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ದಾವಣಗೆರೆ–ಬಾಗಲಕೋಟೆ ಜಿದ್ದಾಜಿದ್ದಿ ಉಪಚುನಾವಣೆ ಫಲಿತಾಂಶವೂ ಇಂದು ಪ್ರಕಟ

ಸಂ.ಕ.ಸಮಾಚಾರ, ಬೆಂಗಳೂರು

ಮತದಾನದ ಬಳಿಕ ಈವರೆಗೆ ಕೇವಲ ಗೆಲುವಿನ ಲೆಕ್ಕಾಚಾರಕ್ಕೆ ಸೀಮಿತವಾಗಿದ್ದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ಸೋಮವಾರ(ಮೇ4) ಹೊರಬೀಳಲಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಭಾರೀ ಪೈಪೋಟಿ ನಿರೀಕ್ಷಿಸಲಾಗಿದ್ದು ಫಲಿತಾಂಶ ಯಾರ ಪರವಾಗಿರಲಿದೆ ಎಂಬ ಕುತೂಹಲಕ್ಕೆ ಸೋಮವಾರ ಉತ್ತರ ಸಿಗಲಿದೆ. ಸುಮಾರು 20 ದಿನಗಳ ಕಾಲ ಆಡಳಿತಪಕ್ಷ ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳ ಕದನಕಣವಾಗಿ ಮಾರ್ಪಟ್ಟಿದ್ದ ಉಭಯ ಕ್ಷೇತ್ರಗಳಲ್ಲೂ ದಾಖಲೆಯ ಮತದಾನವಾಗಿರುವುದು ವಿಶೇಷವಾಗಿದೆ.

ದಾವಣಗೆರೆ ದಕ್ಷಿಣದಲ್ಲಿ ದಿ.ಶಾಮನೂರು ಮೊಮ್ಮಗ ಸಮರ್ಥ್ ಮತ್ತು ಬಿಜೆಪಿ ಶ್ರೀನಿವಾಸ ದಾಸಕರಿಯಪ್ಪ ನಡುವೆ ತೀವ್ರ ಪೈಪೋಟಿ ಏರ್ಪಡುವ ನಿರೀಕ್ಷೆ ಇದ್ದರೆ ಅತ್ತ ಬಾಗಲಕೋಟೆಯಲ್ಲಿ ದಿ.ಹೆಚ್.ವೈ.ಮೇಟಿ ಅವರ ಪುತ್ರ ಉಮೇಶ್ ಮೇಟಿ ಹಾಗೂ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಡುವೆ ಜಿದ್ದಾಜಿದ್ದಿನ ಫಲಿತಾಂಶದ ಸಾಧ್ಯತೆ ಇದೆ.ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ಮತಗಳು ಕಾಂಗ್ರೆಸ್‌ಗೆ ಅಷ್ಟಾಗಿ ಒಲಿದಿಲ್ಲ ಎನ್ನುವ ಅಭಿಪ್ರಾಯವಿರುವ ಹಿನ್ನೆಲೆಯಲ್ಲಿ ಫಲಿತಾಂಶದ ಬಗ್ಗೆ ಕೈ ಪಾಳೆಯದಲ್ಲೇ ಭಿನ್ನ ಲೆಕ್ಕಾಚಾರಗಳಿವೆ. ಬಾಗಲಕೋಟೆ ಕ್ಷೇತ್ರ ಗೆಲ್ಲುವ ಕುರಿತು ಬಿಜೆಪಿ ಭಾರೀ ನಿರೀಕ್ಷೆಯಲ್ಲಿದ್ದು ವಿಜಯಲಕ್ಷ್ಮೀ ಯಾರ ಪರವಾಗಿ ಒಲಿಯಲಿದ್ದಾಳೆ ಎಂಬುದು ಇಂದು ಮಧ್ಯಾಹ್ನದ ವೇಳೆಗೆ ಸ್ಪಷ್ಟವಾಗಲಿದೆ.

ಶೃಂಗೇರಿ ಮರುಮತ ಎಣಿಕೆ

ಗೆದ್ದವರು ಸೋತರು ಸೋತವರು ಗೆದ್ದರು?

ಬಿಜೆಪಿ ಜೀವರಾಜ್‌ಗೆ 52 ಮತಗಳ ಗೆಲುವು? ಚುನಾವಣಾ ಆಯೋಗದಿಂದ ಇಂದು ಪ್ರಕಟ

ಸಂ.ಕ.ಸಮಾಚಾರ, ಚಿಕ್ಕಮಗಳೂರು

ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ ಟ್ವಿಸ್ಟ್ ಸಿಕ್ಕಿದೆ. ಮರು ಮತ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್ 52 ಮತಗಳಿಂದ ಮುನ್ನಡೆ ಸಾಧಿಸಿದ್ದಾರೆ. ಚುನಾವಣಾ ಅಧಿಕಾರಿಗಳಿಂದ ಅಧಿಕೃತ ಘೋಷಣೆಯೊಂದೇ ಬಾಕಿ ಇದೆ.

258 ಮತ ತಿರಸ್ಕೃತ: ಶನಿವಾರ ಮತಎಣಿಕೆ ಪತ್ರದಲ್ಲಿ ರಾಜೇಗೌಡ ಮತ್ತು ಮತ್ತೊಬ್ಬ ಅಭ್ಯರ್ಥಿ ಇಬ್ಬರಿಗೂ 'ಡಬ್ಬಲ್ ಟಿಕ್' ಮಾಡಿರುವುದು ಕಂಡು ಬಂದ ಹಿನ್ನೆಲೆಯಲ್ಲಿ 258 ಮತಗಳು ತಿರಸ್ಕೃತಗೊಂಡವು. ಈ ಹಿಂದೆ 569 ಅಂಚೆ ಮತಗಳನ್ನು ಪಡೆದಿದ್ದ ರಾಜೇಗೌಡರ ಪಟ್ಟಿಯಿಂದ 255 ಮತಗಳು ಮರು ಎಣಿಕೆ ವೇಳೆ ಕಡಿತಗೊಂಡವು. ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರಿಗೆ ಬಂದಿದ್ದ 692 ಅಂಚೆ ಮತಗಳಲ್ಲಿ ಕೇವಲ 2 ಮತಗಳು ಮಾತ್ರ ತಿರಸ್ಕೃತಗೊಂಡಿವೆ.

ಮತ ಎಣಿಕೆ ನಂತರ ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ರವಾನೆ ಮಾಡಲಾಗಿದೆ. 2023ರ ಚುನಾವಣೆಯಲ್ಲಿ ಗೆದ್ದಿದ್ದ ಹಾಲಿ ಶಾಸಕ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡಗೆ ಹೈಕೋರ್ಟ್ ಆದೇಶದಂತೆ ನಡೆದ ಅಂಚೆ ಮತಗಳ ಮರು ಎಣಿಕೆಯಲ್ಲಿ ಭಾರಿ ಹಿನ್ನಡೆಯಾಗಿದೆ. ಪುಟ 10

- 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ 201 ಮತಗಳ ಅಂತರದಿಂದ ಜಯ ಗಳಿಸಿದ್ದರು
- 2026ರ ಪೋಸ್ಟಲ್ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯ ಜೀವರಾಜ್ 52 ಮತಗಳ ಮುನ್ನಡೆಯಲ್ಲಿದ್ದಾರೆ

ವೋಟ್ ಚೋರಿ ಆಗ್ತಿದೆ ಎನ್ನುವ ರಾಗಾ ಎಲ್ಲಿ?

ಶೃಂಗೇರಿ ಫಲಿತಾಂಶ ಬಿಜೆಪಿ ಪರವಾಗಿ ಬರಲಿದೆ ಎಂದು ತಿಳಿದಾಕ್ಷಣ ಅಧಿಕಾರಿಗಳು ಉಲ್ಟಾ ಹೊಡೆದಿದ್ದಾರೆ. ವೋಟ್ ಚೋರಿ ಎನ್ನುವ ರಾಹುಲ್ ಗಾಂಧಿ ಈಗ ಎಲ್ಲಿದ್ದಾರೆ?

- **ಆರ್.ಅಶೋಕ್,** ಪ್ರತಿಪಕ್ಷದ ನಾಯಕ

ಸಹಿಯಲ್ಲಿ ಗೊಂದಲ

ಮರು ಎಣಿಕೆಯ ಅಂತಿಮ ಹಂತದಲ್ಲಿ ಜೀವರಾಜ್ ಅವರ ಕಡೆಯ ಕೆಲವರು ಸಹಿ ಹಾಕಲು ನಿರಾಕರಿಸಿದ್ದಾರೆ. ಅದೇ ರೀತಿ ರಾಜೇಗೌಡ ಕಡೆಯವರಿಂದಲೂ ಸಹಿ ಮಾಡುವ ವಿಚಾರ ಗೊಂದಲ ಉಂಟಾಗಿದೆ.

- **ಜಿ.ಪರಮೇಶ್ವರ್,** ಗೃಹ ಸಚಿವ

ಮುಖ್ಯಮಂತ್ರಿ ಆಗಲು ಖರ್ಗೆಗೆ ಆಹ್ವಾನ ನೀಡಿದ್ದು ನಿಜ: ರಾಯರೆಡ್ಡಿ

ಸಿಎಂ ಬದಲಿಗೆ ಹೈ ನಿರ್ಧರಿಸಿದರೆ ಖರ್ಗೇನೇ ಸೂಕ್ತ

ಸಂ.ಕ.ಸಮಾಚಾರ, ಬೆಂಗಳೂರು/ಕೊಪ್ಪಳ

ಮುಖ್ಯಮಂತ್ರಿ ಕುರ್ಚಿ ಕದನಕ್ಕೆ ಸಂಬಂಧಿಸಿದಂತೆ ಮತ್ತೊಂದು ಸ್ಫೋಟಕ 'ಟ್ವಿಸ್ಟ್' ಸಿಕ್ಕಿದೆ. ಈಗಿನ ಪರಿಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವುದಿಲ್ಲ. ಒಂದು ವೇಳೆ ಹೈಕಮಾಂಡ್ ಬದಲಿಸಲು ನಿರ್ಧರಿಸಿದರೆ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರೇ ರಾಜ್ಯದ ಮುಖ್ಯಮಂತ್ರಿಯಾಗಬೇಕು ಎಂದು ಅವರಿಗೆ ಖುದ್ದು ಆಹ್ವಾನ ನೀಡಲಾಗಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ರಾಯರೆಡ್ಡಿ ಬಹಿರಂಗಪಡಿಸಿದ್ದಾರೆ. ಪುಟ 10

ಡಿಕೆಶಿ ಆಗಬಾರದು ಎಂದು ನಾನು ಹೇಳಿಲ್ಲ

ಸಿಎಂ ಬದಲಾವಣೆಯ ಅನಗತ್ಯ ಮಾತುಗಳು ಪಕ್ಷದ ಸಂಘಟನೆ ಮತ್ತು ಸರ್ಕಾರದ ಸ್ಥಿರತೆಗೆ ಧಕ್ಕೆ ತರಬಹುದು. ಡಿ.ಕೆ.ಶಿವಕುಮಾರ್ ಸಿಎಂ ಆಗಬಾರದು ಎಂದು ನಾನು ಎಲ್ಲೂ ಹೇಳಿಲ್ಲ. ನಾನು ಯಾರ ಬೆಂಬಲಿಗನೂ ಅಲ್ಲ ಬದಲಿಗೆ ಕಾಂಗ್ರೆಸ್ ಪಕ್ಷದ ಕಟ್ಟಾ ಬೆಂಬಲಿಗ.

- **ಬಸವರಾಜ ರಾಯರೆಡ್ಡಿ,** ಸಿಎಂ ಆರ್ಥಿಕ ಸಲಹೆಗಾರರು

ಬಿ.ಎಸ್.ಯಡಿಯೂರಪ್ಪ ಉತ್ಸವಕ್ಕೆ ಚಿತ್ರದುರ್ಗದಲ್ಲಿ ಭರ್ಜರಿ ಸಿದ್ಧತೆ

ಮಠಾಧೀಶರಿಗೆ ಖುದ್ದು ಆಹ್ವಾನ | ಸಾಲು-ಸಾಲು ಸಭೆ

ಸಂ.ಕ.ಸಮಾಚಾರ, ಚಿತ್ರದುರ್ಗ

ನಗರದ ಹೊರವಲಯದಲ್ಲಿನ ಮಾದಾರ ಚೆನ್ನಯ್ಯ ಮಠದ ಸಮೀಪ 60 ಎಕರೆ ವಿಶಾಲ ಜಾಗದಲ್ಲಿ ಮೇ 9ರ ಶನಿವಾರ ಹಮ್ಮಿಕೊಂಡಿರುವ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಸಮಾರಂಭದ ಸಿದ್ಧತೆಗಳು ಭರ ದಿಂದ ನಡೆಯುತ್ತಿವೆ. ಬಿಎಸ್‌ವೈ ರಾಜಕೀಯ ಪ್ರವೇಶಿಸಿ 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಅವರನ್ನು ಗೌರವಿಸುವ ಹಿನ್ನೆಲೆಯಲ್ಲಿ ಆಯೋಜಿಸಿರುವ ಸಮಾರಂಭ ಪಕ್ಷಾತೀತ, ಜಾತ್ಯತೀತ ಎಂಬುದನ್ನು ಬಿಜೆಪಿ ನಾಯಕರು ಪದೇ ಪದೆ ಹೇಳುತ್ತಿದ್ದಾರೆ. ಪುಟ 10

ಯಡಿಯೂರಪ್ಪ ಮಾಸ್ ಲೀಡರ್: ಬೊಮ್ಮಾಯಿ

ಮಾಸ್ ಲೀಡರ್ ಎಂದು ಸಿದ್ದರಾಮಯ್ಯ–ಯಡಿಯೂರಪ್ಪ ಅಂತಾ ಜನ ಹೇಳ್ತಾರೆ. ಆದರೆ, ಸಿದ್ದರಾಮಯ್ಯ ಪಕ್ಷ ಬಿಟ್ಟು ಬೇರೆ ಪಕ್ಷದಿಂದ ಸಿಎಂ ಆದರು. ಯಡಿಯೂರಪ್ಪ ಕೆಳಮಟ್ಟದಿಂದ ಪಕ್ಷ ಸಂಘಟಿಸಿ ಮುಖ್ಯಮಂತ್ರಿ ಆದರು. ರಾಜ್ಯದಲ್ಲಿ ಮಾಸ್‌ಲೀಡರ್ ಬಿಎಸ್‌ವೈ ಮಾತ್ರ.

- **ಬಸವರಾಜ ಬೊಮ್ಮಾಯಿ,** ಮಾಜಿ ಮುಖ್ಯಮಂತ್ರಿ

ಗುಜರಾತಲ್ಲಿ ಮಗಳ ಮೊಬೈಲ್ ವ್ಯಸನ ತಡೆಗೆ ಬೌನ್ಸರ್ ನೇಮಕ!

4 ಬೌನ್ಸರ್‌ಗಳ ನೇಮಕಕ್ಕೆ ತಿಂಗ್ಳಿಗೆ 65,000 ಖರ್ಚು

ಅಹಮದಾಬಾದ್: ಅಹಮದಾಬಾದ್‌ನಲ್ಲಿ 16 ವರ್ಷದ ಹುಡುಗಿ ಫೋನ್ ಹಾಗೂ ಸಾಮಾಜಿಕ ಮಾಧ್ಯಮದ ವ್ಯಸನದಿಂದ ತಡೆಯಲು ಬೌನ್ಸರ್‌ಗಳ ನೇಮಕ ಮಾಡಿರುವುದು ವರದಿಯಾಗಿದೆ.



ಮಗಳ ಕೈಯಿಂದ ಫೋನ್ ಕಿತ್ತಾಗ ಅವಳು ಹಿಂಸಾತ್ಮಕ ರೀತಿಯಲ್ಲಿ ವರ್ತಿಸುತ್ತಿದ್ದಳು. ಒಮ್ಮೆ ಆಕೆಯಿಂದ ಫೋನ್ ಕಸಿದುಕೊಳ್ಳಲು ತಾಯಿ ಪ್ರಯತ್ನಿಸಿದಾಗ ಟಿವಿ, ಮೈಕ್ರೋವೇವ್‌ನಂತಹ ಸಾಧನಗಳನ್ನು ಬಹುಮಹಡಿಯಿಂದ ಹೊರಗೆಸೆದು ತಾಯಿಯ ಮೇಲೂ ಹಲ್ಲೆ ಮಾಡಿದಳು. ಪುಟ 10

ಈಗ ವ್ಯಸನಮುಕ್ತಿ ಬೌನ್ಸರ್‌ಗಳಿಗೆ ಬೇಡಿಕೆ

ವ್ಯಸನದಿಂದ ಹದಿಹರೆಯದವರನ್ನು ರಕ್ಷಿಸುವುದು ಈಗ ಹೊಸ ರೀತಿಯ ಬೇಡಿಕೆಯಾಗಿದೆ ಎನ್ನುತ್ತಾರೆ ಭದ್ರತಾ ಸಂಸ್ಥೆಯೊಂದರ ಮಾಲೀಕ ಯಾಸಿನ್ ಮಲೀಕ್. ಎಂಟು ಗಂಟೆಯ ಎರಡು ಪಾಳಿಯಲ್ಲಿ ಕಾರ್ಯನಿರ್ವಹಿಸುವ ಬೌನ್ಸರ್‌ಗಳಿಗೆ ದಿನಕ್ಕೆ ತಲಾ 1500 ರೂ.ನಂತೆ ವೇತನ ನೀಡಲಾಗುತ್ತಿದೆ ಎಂದವರು ವಿವರಿಸಿದರು.

ಬೆಂಗ್ಳೂರು ಟ್ರಾಫಿಕ್‌ನಿಂದ ಪರೀಕ್ಷಾ ಕೇಂದ್ರಕ್ಕೆ ತಡ: ಪ್ರವೇಶ ನಿರಾಕರಣೆ

ರಾಜ್ಯದ 1.5 ಲಕ್ಷ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ

ಸಂ.ಕ.ಸಮಾಚಾರ, ಬೆಂಗಳೂರು

ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆಯಿಂದ ನೀಟ್ ಪರೀಕ್ಷೆಗೆ ತಡವಾಗಿ ಆಗಮಿಸಿದ ಇಬ್ಬರು ವಿದ್ಯಾರ್ಥಿನಿಯರಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನಿರಾಕರಣೆ. ಮೈಸೂರಿನಲ್ಲಿ ಐದಾರು ಕೇಂದ್ರಗಳಲ್ಲಿ ತಾತ್ಕಾಲಿಕವಾಗಿ ಸರ್ವರ್ ಸಮಸ್ಯೆ ಬಿಟ್ಟರೆ ರಾಜ್ಯದಲ್ಲಿ ನೀಟ್ ಪರೀಕ್ಷೆ ನಡೆಯಿತು.

ದೇಶದಾದ್ಯಂತ ಸುಮಾರು 22.19 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರೆ ರಾಜ್ಯದಲ್ಲಿ 1.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಪುಟ 10

ದೇಶದ 551 ನಗರಗಳಲ್ಲಿ ನೀಟ್ ಪರೀಕ್ಷೆ ಸುಗಮ

ದೇಶದಾದ್ಯಂತ ಏಕಕಾಲದಲ್ಲಿ ನೀಟ್ ಪರೀಕ್ಷೆ ನಡೆಯಿತು. ದೇಶದ 551 ನಗರಗಳು ಹಾಗೂ ವಿದೇಶದ 14 ನಗರಗಳಲ್ಲಿ ನೆರವೇರಿದ ನೀಟ್ ಪರೀಕ್ಷೆಗೆ 5,432 ಪರೀಕ್ಷಾ ಕೇಂದ್ರಗಳಲ್ಲಿ 22.79 ಲಕ್ಷ ಅಭ್ಯರ್ಥಿಗಳು ಹಾಜರಾದರು. ಬೆಂಗಳೂರು ನಗರದ 2712 ಪರೀಕ್ಷಾ ಕೇಂದ್ರಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ದಿಲ್ಲಿ ಅಪಾರ್ಟ್‌ಮೆಂಟಲ್ಲಿ ಎಸಿ ಸ್ಫೋಟ; 9 ಬಲಿ

ಬೆಳಗ್ಗೆ 3.47ರ ಸಿಹಿನಿದ್ದೆ ಸಮಯದಲ್ಲಿ ಅಗ್ನಿ ದುರಂತ: 17 ಅಗ್ನಿಶಾಮಕಗಳಿಂದ ಕಾರ್ಯಾಚರಣೆ

ನವದೆಹಲಿ: ದೆಹಲಿಯ ವಿವೇಕ್ ವಿಹಾರ ಪ್ರದೇಶದ ವಸತಿ ಕಟ್ಟಡದಲ್ಲಿ ಶನಿವಾರ ಮಧ್ಯರಾತ್ರಿ ನಂತರ ಭಾರೀ ಅಗ್ನಿಅನಾಹುತ ಸಂಭವಿಸಿದ ಪರಿಣಾಮ ಒಂದು ಮಗುವೂ ಸೇರಿ ಒಂಬತ್ತು ಜನರು ಸಾವಿಗೀಡಾಗಿದ್ದಾರೆ.

ಕಾರ್ಯಾಚರಣೆ ವೇಳೆ 20ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ. ತಡರಾತ್ರಿ ಕಟ್ಟಡಕ್ಕೆ ಆಹಾರ ಪೂರೈಸಲು ಬಂದ ವ್ಯಕ್ತಿಯೊಬ್ಬರು ಕಟ್ಟಡದಲ್ಲಿ ಬಹು ಬೇಗನೆ ಬೆಂಕಿ ಹರಡುವುದನ್ನು ಕಂಡು ಎಲ್ಲರನ್ನೂ ಜಾಗೃತಗೊಳಿಸಿದರು. ಇದರಿಂದ ಇನ್ನಷ್ಟು ಪ್ರಾಣ ಉಳಿದಿದೆ.

ಅಗ್ನಿಶಾಮಕ ದಳದ 14 ವಾಹನಗಳ ಸಿಬ್ಬಂದಿ ರಾತ್ರಿ 3.50ರ ವೇಳೆಗೆ ಬೆಂಕಿ ನಂದಿಸುವ ಕಾರ್ಯ ಕೈಗೊಂಡಿದ್ದು ಮುಂಜಾನೆ 8 ಗಂಟೆಯ ಸಮಯದಲ್ಲಿ ಕಟ್ಟಡದಲ್ಲಿ ಹಬ್ಬಿದ್ದ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಬೆಂಕಿ ನಂದಿಸಿದ ನಂತರ ಕಟ್ಟಡದಲ್ಲಿ ಶೋಧ ನಡೆಸಿದಾಗ ಮೊದಲ ಮಹಡಿಯಲ್ಲಿ ಒಂದು ಮೃತದೇಹ, ಎರಡನೇ ಮಹಡಿಯಲ್ಲಿ ಐವರು ಹಾಗೂ ಮೆಟ್ಟಿಲಲ್ಲಿದ್ದ ಮೂರು ಮೃತದೇಹಗಳನ್ನು ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಹಚ್ಚಲಾಗಿದೆ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದ್ದಾರೆ.

ಏರ್ ಕಂಡಿಷನರ್ ಸ್ಫೋಟಿಸಿದ್ದರಿಂದ ಈ ದುರಂತ ಸಂಭವಿಸಿರಬಹುದೆಂದು ಹೇಳಲಾಗುತ್ತಿದೆ. ಎಸಿಯಿಂದ ಬೆಂಕಿಯ ಕಿಡಿ ಹಾರಿದ್ದರಿಂದ ಸ್ಫೋಟ ಉಂಟಾಗಿರಬಹುದೆಂದು ಸ್ಥಳೀಯ ನಿವಾಸಿ ರೋಹಿತ್ ಹೇಳಿದ್ದಾರೆ.

ದೆಹಲಿಯ ವಿವೇಕ್ ವಿಹಾರ್ ಪ್ರದೇಶದಲ್ಲಿ ಅಗ್ನಿದುರಂತಕ್ಕೀಡಾದ ನಾಲ್ಕಂತಸ್ತಿನ ಕಟ್ಟಡ

- ಬೆಂಕಿ ಆರಿಸಲು ಧಾವಿಸಿದ 14 ಅಗ್ನಿಶಾಮಕ ವಾಹನಗಳು
- ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿಯಿಂದ ಹಲವು ಗಂಟೆ ಕಾಲ ಯತ್ನ
- ಒಂದೇ ಕುಟುಂಬದ 5 ಜನ ಅಗ್ನಿಯ ಕೆನ್ನಾಲಿಗೆಗೆ ಬಲಿ
- ಟೆರೇಸ್‌ಗೆ ಬೀಗ ಹಾಕಿದ್ದರಿಂದ ಅಲ್ಲಿಗೆ ಹೋಗಲಾಗದೆ ಸ್ಟೇರ್‌ಕೇಸ್ ಮೇಲೇ 3 ಜನ ಬಲಿ

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

ಚುಟುಕು ಸುದ್ದಿ

ವಾಯುಮಾಲಿನ್ಯ ತಗ್ಗಿಸಲು ಎನ್‌ಜಿಟಿ 6 ತಿಂಗಳ ಗಡುವು

ಬೆಂಗಳೂರು: ವಾಯುಮಾಲಿನ್ಯ ತಗ್ಗಿಸಲು 6 ತಿಂಗಳಲ್ಲಿ ಸಮಗ್ರ ಕಾರ್ಯಯೋಜನೆ ಸಿದ್ಧಪಡಿಸುವಂತೆ ರಾಷ್ಟ್ರೀಯ ಹಸಿರುವ ನ್ಯಾಯ ಮಂಡಳಿ(ಎನ್‌ಜಿಟಿ) ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಎನ್‌ಸಿಎಪಿ ಯೋಜನೆಯಲ್ಲಿ ದುರ್ಬಲ ಕ್ಷಮತೆ ತೋರಿದ ರಾಜ್ಯಗಳಲ್ಲಿ ಕರ್ನಾಟಕ ಒಂದಾಗಿದೆ. ವಿವರ: 5

ಇರಾನ್ ಪ್ರಸ್ತಾವ ಒಪ್ಪಿಗೆಯಿಲ್ಲದಿದ್ರೂ ಪರಿಶೀಲಿಸ್ತೀನಿ: ಟ್ರಂಪ್

ವಾಷಿಂಗ್ಟನ್: ಯುದ್ಧ ನಿಲುಗಡೆಗೆ ಇರಾನ್ ಈಗ ಹೊಸ ಪ್ರಸ್ತಾವವನ್ನು ಅಮೆರಿಕ ಮುಂದಿಟ್ಟಿದೆ. ಆದರೆ ಇರಾನ್ ಪ್ರಸ್ತಾವಕ್ಕೆ ತನಗೆ ಒಪ್ಪಿಗೆ ಇಲ್ಲವೆಂದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದರೂ, ಅದನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ. ವಿವರ: 7

ವಿಮಾನ ತುರ್ತು ಬಾಗಿಲು ತೆರೆದು ಹೊರಗೆ ಜಿಗಿದ!

ಚೆನ್ನೈ: ಶಾರ್ಜಾದಿಂದ ಚೆನ್ನೈಗೆ ಏರ್ ಅರೇಬಿಯಾ ವಿಮಾನವೊಂದು ಬಂದು ಇಳಿಯುತ್ತಿದ್ದಂತೆ ಪ್ರಯಾಣಿಕನೊಬ್ಬ ತುರ್ತು ಬಾಗಿಲು ತೆರೆದು ಹೊರಗೆ ಜಿಗಿದಿದ್ದಾನೆ. ವಿಮಾನ ನಿಧಾನವಾಗಿ ಚಲಿಸುತ್ತಿದ್ದುದರಿಂದ ಬಚಾವಾಗಿದ್ದಾನೆ. ವಿವರ: 7

ಟಿಬಿ ಡ್ಯಾಂನ 33 ಗೇಟ್ ಬದಲು: ಮೇ 15 ಉದ್ಘಾಟನೆ ಸಾಧ್ಯತೆ

ಹೊಸಪೇಟೆ: ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕಳಚಿದ್ದ ನಂತರ ನಡೆಸಿದ ದುರಸ್ತಿ ಕಾರ್ಯ ಈಗ ಅಂತಿಮ ಹಂತ ತಲುಪಿದೆ. 33 ಕ್ರಸ್ಟ್‌ಗೇಟ್‌ಗಳನ್ನು ಬದಲಾಯಿಸಿದ್ದು, ಮೇ 15ರ ಹೊತ್ತಿಗೆ ಲೋಕಾರ್ಪಣೆ ಮಾಡುವ ವಿಶ್ವಾಸವನ್ನು ಮಾಜಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಕ್ತಪಡಿಸಿದ್ದಾರೆ. ವಿವರ: 6

ಚಿಂದಿ ಉಡಾಯಿಸಿದ್ದೀರಾ ಪ್ರೇಮ್ ಬೆನ್ತಟ್ಟಿದ ಉಪ್ಪಿ
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ಜಬಲ್ಪುರ ದೋಣಿ ದುರಂತ: ಸತ್ತವರ ಸಂಖ್ಯೆ 13ಕ್ಕೇರಿಕೆ

ಜಬಲ್‌ಪುರ್ (ಮ.ಪ್ರ): ಮಧ್ಯಪ್ರದೇಶದ ಜಬಲ್‌ಪುರ ನದಿಯಲ್ಲಿ ಕ್ರೂಸ್ ಹಡಗು ಮುಗುಚಿದ ಪ್ರಕರಣದ ಸಾವಿನ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ಭಾನುವಾರ ಬೆಳಗ್ಗೆ 5 ವರ್ಷದ ಬಾಲಕ ಹಾಗೂ ಆತನ ಸಂಬಂಧಿಯ ಶವ ಪತ್ತೆಯಾಗಿದೆ.

ಹೊರ್ಮುಜ್ ದಾಟಿ ಎಲ್‌ಪಿಜಿ ಹೊತ್ತ ಹಡಗು ಭಾರತಕ್ಕೆ

ಟೆಹ್ರಾನ್: ಹೊರ್ಮುಜ್ ಜಲಸಂಧಿ ದಾಟಿ ಭಾರತದ ಧ್ವಜ ಹೊಂದಿರುವ ಸರ್ವಶಕ್ತಿ ಎನ್ನುವ ಹೆಸರಿನ ಹಡಗು ಭಾರತಕ್ಕೆ ಬರುತ್ತಿದೆ. ಇದು 45,000 ಟನ್ ಎಲ್‌ಪಿಜಿ ಹೊತ್ತು ತರುತ್ತಿದೆ. ವಿವರ: 7

ನಿತೀಶ್‌ಪುತ್ರನಿಂದ ಮೊದಲ ಯಾತ್ರೆ ಬಿಹಾರದಲ್ಲಿ ಶುರು

ಪಟನಾ: ಬಿಹಾರದ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ತಮ್ಮ ಮೊದಲ ರಾಜಕೀಯ ಯಾತ್ರೆ ಆರಂಭಿಸಿದ್ದಾರೆ. ಸದ್ಭಾವ್ ಹೆಸರಿನ ಈ ಯಾತ್ರೆ ಪಶ್ಚಿಮ ಚಂಪಾರಣ್‌ನಿಂದ ಶುರುವಾಗಿದೆ. ವಿವರ: 7

ಕೆಪಿಎಸ್‌ಸಿ ಅಕ್ರಮ ನಿಗ್ರಹಕ್ಕೆ ದೇಶಪಾಂಡೆ ಅಧ್ಯಕ್ಷತೇಲಿ ಸಮಿತಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಗಟ್ಟಲು ಮತ್ತು ವ್ಯವಸ್ಥೆಯಲ್ಲಿ ಸುಧಾರಣೆ ತರಲು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸನ್ನು ತರಲು ಮಾಜಿ ಸಚಿವ ಆರ್.ವಿ.ದೇಶಪಾಂಡೆ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ವಿವರ: 5

ಲೆಬನಾನ್ ಮೇಲೆ ದಾಳಿಗೆ 41 ಸಾವು

ಟೆಲ್ ಅವೀವ್: ಎರಡು ವಾರಗಳ ಹಿಂದೆ ಘೋಷಿಸಿದ್ದ ಕದನ ವಿರಾಮ ಉಲ್ಲಂಘಿಸಿರುವ ಇಸ್ರೇಲ್ ಮತ್ತೆ ಲೆಬನಾನ್ ಮೇಲಿನ ದಾಳಿ ಮುಂದುವರಿಸಿದೆ. ದಾಳಿಯಲ್ಲಿ ದಕ್ಷಿಣ ಲೆಬನಾನ್‌ನಲ್ಲಿ ಕಳೆದ 24 ಗಂಟೆಗಳಲ್ಲಿ ಒಟ್ಟು 41 ಮಂದಿ ಹತ್ಯೆಗೀಡಾಗಿದ್ದಾರೆ. ವಿವರ: 7

ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64 | ಚಿಕನ್ ದರ ಕೆಜಿಗೆ ₹220 | ಶುದ್ಧ ಬಂಗಾರ (99.90) ₹1,49,300 | ಸ್ಟ್ಯಾಂಡರ್ಡ್ ಬಂಗಾರ (22 ಕ್ಯಾ.) ₹1,38,050 | ಶುದ್ಧ ಬೆಳ್ಳಿ (.999 ಶುದ್ಧತೆ) ₹2,46,500 | ಪ್ರತಿ ಡಾಲರ್‌ಗೆ ₹94.93

ಸಂಯುಕ್ತ ಕರ್ನಾಟಕ

ಗಿರಿ ಜಿಲ್ಲೆಗೆ ಯೆಲ್ಲೊ ಅಲರ್ಟ್ ಘೋಷಣೆ

ರಣ ಬಿಸಿಲು, ಬಿಸಿ ಗಾಳಿ | ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳು ಅನುಸರಿಸಿ

ಸಂ.ಕ.ಸಮಾಚಾರ ಯಾದಗಿರಿ : ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಯಾದಗಿರಿ ಜಿಲ್ಲೆಯಲ್ಲಿ ಮೇ.3 ರಿಂದ 05ರವರೆಗೆ ಬಿಸಿಗಾಳಿ ಹೆಚ್ಚಾಗುವ ಸಾಧ್ಯತೆ ಇದ್ದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

> **ರೈತರು ತಮ್ಮ ಜಮೀನಿನಲ್ಲಿರುವ ಮೇವನ್ನು ಯಾವುದೇ ಕಾರಣಕ್ಕೂ ಸುಟ್ಟು ಹಾಕದೇ ಬಣವೇ ಹಾಕಿ ಅಥವಾ ಸುರುಳಿ ಸುತ್ತಿಟ್ಟುಕೊಂಡು (ಬೇಲಿಂಗ್) ಮೇವುನ್ನು ಸಂಗ್ರಹಿಸಬೇಕು. ಇದರಿಂದ ಭೂಮಿಯ ಫಲವತ್ತತೆ ಹಾಳಾಗದಂತೆ ತಡೆಯಬಹುದು ಜೊತೆಗೆ ವಾಯುಮಾಲಿನ್ಯ ನಿಯಂತ್ರಣ ಮತ್ತು ಜಾನುವಾರುಗಳಿಗೆ ಮೇವಿನ ಕೊರತೆಯನ್ನು ನೀಗಿಸಬಹುದಾಗಿದೆ.**
> **■ ಹರ್ಷಲ್ ಭೋಯರ್, ಜಿಲ್ಲಾಧಿಕಾರಿ**

ಈ ಹಿನ್ನಲೆಯಲ್ಲಿ ಹೀಟ್ ವೇವ್ ಹಾಗೂ ಹೀಟ್ ಸ್ಟ್ರೋಕ್ ನಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಕಾರಣ ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದ್ದಾರೆ.

ವಿಶೇಷವಾಗಿ ಮಧ್ಯಾಹ್ನ 12ರಿಂದ 4ರವರೆಗೆ ಬಿಸಿಲಿನಲ್ಲಿ ಹೋಗಬಾರದು. ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕು. ಹಗುರವಾದ, ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಛತ್ರಿ, ಟೋಪಿ, ಬಳಸಬೇಕು. ಮಧ್ಯಾಹ್ನ 12 ರಿಂದ 3 ಗಂಟೆಯ ವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಅಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳನ್ನು ಸೇವಿಸಬೇಡಿ. ಮೂರ್ಛೆ ಅಥವಾ ಅನಾರೋಗ್ಯ ಅನಿಸಿದರೆ ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು. ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ತೋರಣಿ (ಅಕ್ಕಿ ನೀರು), ನಿಂಬೆ ನೀರು, ಮಜ್ಜಿಗೆ ಸೇವಸಲು ತಿಳಿಸಿದ್ದಾರೆ.

ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ. ಮನೆಗಳನ್ನು ತಂಪಾಗಿ ಇರಿಸಿ, ಪರದೆಗಳು, ಶಟರ್‌ಗಳು ಅಥವಾ ಸನ್‌ಶೇಡ್‌ಗಳನ್ನು ಬಳಸಿ ರಾತ್ರಿಯಲ್ಲಿ ಕಿಟಕಿಗಳನ್ನು ತೆರೆಯಿರಿ. ಫ್ಯಾನ್, ಒದ್ದೆ ಬಟ್ಟೆಗಳನ್ನು ಬಳಸಿ ಮತ್ತು ತಣ್ಣೀರಿನಲ್ಲಿ ಸ್ನಾನ ಮಾಡುವುದು ಉತ್ತಮ ಎಂದಿದ್ದಾರೆ.

ರೈತರು ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿ ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಬೇಕು ಎಂದು ತಿಳಿಸಿದ್ದಾರೆ.

ಸಾಧಾರಣ ತಾಪಮಾನ ಮತ್ತು ಶಾಖವು ಸಾಮಾನ್ಯ ಜನರು ಸಹಿಸಿಕೊಳ್ಳಬಹುದು. ಆದರೆ ಶಿಶುಗಳು, ವೃದ್ಧರು, ದೀರ್ಘಕಾಲದ ಕಾಯಿಲೆ ಇರುವ ಜನರು ಸಹಿಸಿಕೊಳ್ಳಲಾಗದು. ಬಿಸಿಲಿನಲ್ಲಿ ತಲೆ ಹಾಗೂ ದೇಹವನ್ನು ಸೂರ್ಯನ ಕಿರಣಗಳಿಗೆ ಒಡ್ಡದಿರಿ.ಹೊರಗಡೆ ಬಿಸಿಲಿನಿಂದ ಮನೆಗೆ ಬಂದ ತಕ್ಷಣ ಅತಿ ತಂಪಾದ ನೀರು ಕುಡಿಯಬಾರದು ಅಥವಾ ಎಸಿ/ಕೂಲರ್‌ಗಳನ್ನು ಕೂಡಲೇ ಬಳಸುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ.

ಜಾನುವಾರುಗಳ ರಕ್ಷಣೆಗೆ ಸಲಹೆಗಳು

ಜಾನುವಾರುಗಳನ್ನು ಮುಂಜಾನೆ ಮತ್ತು ಸಾಯಂಕಾಲ ಸಮಯದಲ್ಲಿ ಮೇಯಿಸಲು ಬಿಡಬೇಕು. ದಿನಕ್ಕೆ 2 ರಿಂದ 3 ಸಾರಿ ಶುದ್ಧವಾದ ನೀರನ್ನು ಕುಡಿಸಬೇಕು. ಮಧ್ಯಾಹ್ನದ ಸಮಯ ದಲ್ಲಿ ಜಾನುವಾರುಗಳನ್ನು, ಕುರಿ ಮತ್ತು ಆಡುಗಳನ್ನು ಕೊಟ್ಟಿಗೆಯಲ್ಲಿ ಅಥವಾ ಗಿಡದ ನೆರಳಿನಲ್ಲಿ ಕಟ್ಟಬೇಕು. ಜಮೀನು ಉಳಿಮೆ ಮಾಡಲು ಎತ್ತುಗಳನ್ನು ಮುಂಜಾನೆ ಅಥವಾ ಸಾಯಂಕಾಲದ ಸಮಯದಲ್ಲಿ ಮಾತ್ರ ಕೆಲಸಕ್ಕೆ ಉಪಯೋಗಿಸಬೇಕು. ನಿರ್ಜಲೀಕರಣಗೊಂಡ ಜಾನುವಾರುಗಳಿಗೆ ಉಪ್ಪು, ಅಡುಗೆ ಸೋಡಾ, ಬೆಲ್ಲ ಹಾಗೂ ಲಿಂಬೆಹಣ್ಣಿನ ರಸವನ್ನು ನೀರಿನಲ್ಲಿ ಮಿಶ್ರಣ ಮಾಡಿ ದಿನದಲ್ಲಿ 3 ರಿಂದ 4 ಸಾರಿ ಕುಡಿಸಬೇಕು. ಜಾನುವಾರುಗಳಿಗೆ ಮುಂಜಾಗ್ರತೆಯಾಗಿ ಇಲಾಖೆಯಿಂದ ಉಚಿತವಾಗಿ ನೀಡುವ ಸಾಂಕ್ರಾಮಿಕ ರೋಗಗಳಿಗೆ ಲಸಿಕೆಗಳನ್ನು ಕಾಲಕಾಲಕ್ಕೆ ಹಾಕಿಸಬೇಕು ಎಂದು ತಿಳಿಸಿದ್ದಾರೆ.

ಸುದ್ದಿ ಮಿಂಚು

ಮೌಲಾನಾ ಆಜಾದ್ ಮಾದರಿ ಶಾಲೆಗೆ ಭೂಮಿ ಮಂಜೂರು

ಸಂ.ಕ.ಸಮಾಚಾರ ಹುಣಸಗಿ: ಪಟ್ಟಣದಲ್ಲಿ ಮೌಲಾನಾ ಆಜಾದ್ (ಆಂಗ್ಲ ಮಾಧ್ಯಮ) ಮಾದರಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಕೃಷ್ಣಾಭಾಗ್ಯ ಜಲ ನಿಗಮದ ಪಟ್ಟಣದ ಆಸ್ತಿ ಸ.ನಂ. 458 ರಲ್ಲಿ1-38 ಗುಂಟೆ ಜಮೀನನ್ನು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಆಧೀನದಲ್ಲಿನ ಶಾಲೆಗೆ ಉಚಿತವಾಗಿ ಹಸ್ತಾಂತರಿಸಲು ಸರ್ಕಾರ ಆದೇಶ ಮಾಡಿದೆ ಎಂದು ಪಟ್ಟಣದ ಮುಸ್ಲಿಂ ಸಮುದಾಯದ ಎಲ್ಲಾ ಬಂಧುಗಳ ಪರವಾಗಿ ಸುಭಾನ ಅಲಿ ಅವರು ಧನ್ಯವಾದ ತಿಳಿಸಿದ್ದಾರೆ.

ಶಾಲೆಯು 2017-18ರಲ್ಲಿ ಪ್ರಾರಂಭಗೊಂಡಿದ್ದು, ಸ್ವಂತ ಕಟ್ಟಡ ಹೊಂದಿದ್ದಿಲ್ಲ. ನೂತನ ಕಟ್ಟಡಕ್ಕಾಗಿ ಸರ್ಕಾರ 6 ಕೋಟಿ ರೂ. ಮಂಜೂರು ಮಾಡಿದೆ. ಇದರಿಂದಾಗಿ ಈ ಭಾಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮುಖ್ಯವಾಹಿನಿಗೆ ಬರಲು ಸಹಾಯಕವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಮತಕ್ಷೇತ್ರಕ್ಕೆ ಒಂದು ಶಾಲೆ ಮಾತ್ರ ನೀಡಲಾಗುತ್ತಿದ್ದು, ಇದನ್ನು ಮಾಜಿ ಶಾಸಕ ದಿ.ರಾಜ ವೆಂಕಟಪ್ಪನಾಯಕ ಅವರಿದ್ದ ಅವಧಿಯಲ್ಲಿ ಶಾಲೆ ಮಂಜೂರು ಮಾಡಿದ್ದರು ಎಂದು ಅವರು ಸ್ಮರಿಸಿದ್ದಾರೆ.

ಸಚಿವರಾದ ಜಮೀರ ಅಹ್ಮದ್‌ಖಾನ, ಶರಣಬಸಪ್ಪ ದರ್ಶನಾಪೂರ, ಶಾಸಕರಾದ ರಾಜಾ ವೇಣುಗೋಪಾಲನಾಯಕ ಅವರಿಗೆ ಪಟ್ಟಣದ ನಾಗರಿಕರ, ಶಾಲೆಯ ಪರವಾಗಿ ಅಭಿನಂದನೆಗಳನ್ನು ತಿಳಿಸಿದ್ದಾರೆ.

ವಾಣಿಜ್ಯ ಗ್ಯಾಸ್ ಬೆಲೆ ಏರಿಕೆಗೆ ಖಂಡನೆ

ವಡಗೇರಾ: ಕೇಂದ್ರ ಬಿಜೆಪಿ ಸರ್ಕಾರ ಪಂಚ ರಾಜ್ಯಗಳ ಚುನಾವಣೆ ಮುಗಿದ ಬಳಿಕ ವಾಣಿಜ್ಯ ಗ್ಯಾಸ್ ಬಳಕೆ ಬೆಲೆಯನ್ನು ಒಮ್ಮಿಂದೊಮ್ಮೆಲೆ 993 ರೂ. ಏರಿಕೆ ಮಾಡಿದ್ದನ್ನು ರಾಜ್ಯ ರೈತ ಸಂಘ ತಾಲೂಕು ಕಾರ್ಯದರ್ಶಿ ಫಕೀರ್ ಅಹ್ಮದ್ ಮರಡಿ ಖಂಡಿಸಿದ್ದಾರೆ.

ಕೇಂದ್ರ ಸಚಿವರು ಗ್ಯಾಸ್ ಕೊರತೆ ಇಲ್ಲ ಎಂದು ತಪ್ಪು ಮಾಹಿತಿ ನೀಡುತ್ತಿದ್ದಾರೆ. ಆದರೆ ದೇಶದಲ್ಲಿ ಕಳೆದ ಎರಡು ತಿಂಗಳಿನಿಂದ ಸಮರ್ಪಕ ಅಡುಗೆ ಗ್ಯಾಸ್ ಸಿಗದೆ ಜನ ಪರದಾಡುತ್ತಿದ್ದಾರೆ. ಹೋಟೆಲ್ ಹಾಗೂ ಇನ್ನಿತರ ಕಡೆ ಕಟ್ಟಿಗೆ ತಂದು ಅಡುಗೆ ಮಾಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಏಕಾಏಕಿ ವಾಣಿಜ್ಯ 19 ಕೆ.ಜಿ ಗ್ಯಾಸ್ ಸಿಲೆಂಡರ್ 993ಗೆ ಏರಿಸಿ ಮತ್ತು 5 ಕೆಜಿ ಗ್ಯಾಸ್ ಸಿಲಿಂಡರ್ ಬೆಲೆ 260 ರೂಪಾಯಿ ಹೆಚ್ಚಿಸಿ ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕಲು ಮುಂದಾಗಿದೆ ಎಂದು ಆರೋಪಿಸಿದ್ದಾರೆ.

ಇದೇ ರೀತಿ ದರ ಹೆಚ್ಚಳ ಮಾಡುತ್ತಾ ಹೋದಲ್ಲಿ ನಗರ ಪ್ರದೇಶದ ಜನರಿಗೆ ಹೋಟೆಲ್‌ಗಳಲ್ಲಿ ತುತ್ತು ಅನ್ನವು ಸಿಗದಂತಹ ಪರಿಸ್ಥಿತಿ ಬರಲಿದೆ. ಪಟ್ಟಣ ಪ್ರದೇಶದಲ್ಲಿ ವಾಸಿಸುವ ಸಾಮಾನ್ಯ ಜನರ ಬದುಕಿಗೆ ಇದು ಕಂಟಕವಾಗಿದೆ. ಕೇಂದ್ರ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದಲೂ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆ ಮಾಡುತ್ತಾ ಬಂದಿದೆ ವಿನಃ ಇಳಿಕೆ ಮಾಡಿಲ್ಲ. ಇವುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರು ಜೀವನ ಮಾಡಲು ಪರದಾಡುವಂತಾಗಿದೆ ಎಂದು ತಿಳಿಸಿದ್ದಾರೆ.

ಕೂಡಲೆ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಗೃಹಬಳಕೆ ಮತ್ತು ವಾಣಿಜ್ಯ ಸಿಲಿಂಡರ್ ಬೆಲೆ ಇಳಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಮಹಿಳೆ ಮೇಲೆ ಹಲ್ಲೆ, ಕೊಲೆಗೆ ಯತ್ನ

ಹುಣಸಗಿ: ತಾಲೂಕಿನ ಹುಲಿಕೇರಿ ಗ್ರಾಮದಲ್ಲಿ ಗಂಡನ ಮನೆಯವರು ಹಲ್ಲೆ ಮಾಡಿ, ಬಲವಂತವಾಗಿ ಕ್ರಿಮಿನಾಶಕ ಕುಡಿಸಿ, ಮಹಿಳೆಯೊಬ್ಬಳಿಗೆ ವರದಕ್ಷಿಣೆಗಾಗಿ ಕಿರುಕುಳ ನೀಡಿದ ಕುರಿತು ಕೊಡೇಕಲ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹುಲಿಕೇರಿ ಗ್ರಾಮದ ಅಮೃತ ಶರಣಬಸಪ್ಪ ಗೌಡ್ರ (25) ಕಿರುಕುಳಕ್ಕೊಳಗಾದ ಮಹಿಳೆ.

ಮಹಿಳೆಗೆ 6 ವರ್ಷಗಳ ಹಿಂದೆಯೆ ಮದುವೆಯಾಗಿತ್ತು. ಗಂಡ ಶರಣಬಸಪ್ಪ ಹುಲಿಕೇರಿಯೊಂದಿಗೆ ಹಲವು ವರ್ಷಗಳ ಕಾಲ ಇಬ್ಬರೂ ಮಕ್ಕಳೊಂದಿಗೆ ಸುಖವಾಗಿದ್ದರು.

ಕೆಲ ದಿನಗಳ ನಂತರ ಗಂಡ ಹಾಗೂ ಮಾವ ಮಾನಪ್ಪ ಇತರರು ತವರು ಮನೆಯಿಂದ ಇನ್ನಷ್ಟು ಹಣ ಹಾಗೂ ಬಂಗಾರ ತರುವಂತೆ ಒತ್ತಾಯಿಸಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡತೊಡಗಿದ್ದರು ಎನ್ನಲಾಗಿದೆ.

ಮೇ 1ರ ಶುಕ್ರವಾರ ಅಮೃತ ಅವರು ಗ್ರಾಮದ ತವರುಮನೆಯಲ್ಲಿದ್ದಾಗ ಅವರ ತಂದೆ, ತಾಯಿ ಇಲ್ಲದ ಸಮಯದಲ್ಲಿ ಗಂಡ ಶರಣಬಸಪ್ಪ, ಮಾವ ಮಾನಪ್ಪ ಹಾಗೂ ಅತ್ತೆ ದ್ಯಾಮವ್ವ ಮತ್ತು ನಾದಿನಿಯರಾದ ರೇಣಮ್ಮ, ಹನುಮವ್ವ ಎಂಬುವರು ಹೋಗಿ ಹಣ, ಬಂಗಾರ ತರುವಂತೆ ಅವಾಚ್ಯ, ಅಶ್ಲೀಲವಾಗಿ ಬೈಯುತ್ತ, ದೈಹಿಕವಾಗಿ ಹಲ್ಲೆ ಮಾಡಿದ್ದಲ್ಲದೆ, ಬಲವಂತವಾಗಿ ಕ್ರಿಮಿನಾಶಕವೊಂದನ್ನು ಕುಡಿಸಿದ್ದಾರೆ ಜೊತೆಗೆ ಅವರ ಮಕ್ಕಳಿಗೂ ಸಹ ಕುಡಿಸಲು ಪ್ರಯತ್ನಿಸುತ್ತಿದ್ದಾಗ ಜೋರಾದ ಕಿರುಚಾಟ ಕೇಳಿ ಪಕ್ಕದ ಮನೆಯ ಕೆಲವರು ಬಂದು ಬಿಡಿಸಿದರೆಂದು ದೂರಿನಲ್ಲಿ ತಿಳಿಸಲಾಗಿದೆ. ಬಳಿಕ ಕೊಡೇಕಲ್ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಸುರಪುರದ ಆಸ್ಪತ್ರೆಗೆ ಸೇರಿಸಲಾಗಿದೆ.

ಅಮೃತ ಅವರ ದೂರಿನ ಮೇರೆಗೆ ಅವರ ಗಂಡ ಶರಣಬಸಪ್ಪ ಗೌಡ್ರ, ಮಾವ ಮಾನಪ್ಪ ಗೌಡ್ರ ಹಾಗೂ ಅತ್ತೆ ದ್ಯಾಮವ್ವ, ನಾದಿನಿಯರಾದ ರೇಣಮ್ಮ, ಹನುಮವ್ವ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸಣ್ಣ ಪರಶುರಾಮ ಸೇವೆ ಶ್ಲಾಘನೀಯ: ಪಾಟೀಲ್

ಸಂ.ಕ.ಸಮಾಚಾರ ಯಾದಗಿರಿ: ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾಗಿ ಬಿ.ಸಣ್ಣ ಪರಶುರಾಮ ಅವರು ಸರ್ಕಾರದ ಆದೇಶ, ನಿಯಮಗಳ ಪ್ರಕಾರವೇ ಕೆಲಸ ಮಾಡುವ ಮೂಲಕ ಜನಮೆಚ್ಚುಗೆ ಗಳಿಸಿದ್ದಾರೆಂದು ಲೋಕೋಪಯೋಗಿ ಇಲಾಖೆ ಸುರಪುರ ವಿಭಾಗದ ಎಇಇ ಎಸ್.ಜಿ.ಪಾಟೀಲ್ ಹೇಳಿದರು.

ನಗರದಲ್ಲಿ ಹಮ್ಮಿಕೊಂಡಿದ್ದ ಸಣ್ಣ ಪರಶುರಾಮ್ ಅವರ ಸೇವಾ ನಿವೃತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿಯಂತರರು ಎಂದರೆ ನಾಡು ಕಟ್ಟುವ ಶಿಲ್ಪಿಗಳು. ನಾವೆಲ್ಲರೂ ಜನ ಕಲ್ಯಾಣದ ಕೆಲಸಗಳು ಮಾಡುವ ಮೂಲಕ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ತಮ್ಮದೇ ಆದ ಸೇವಾ ಕಾಣಿಕೆ ನೀಡುತ್ತೇವೆ ಎಂದು ಮಾರ್ಮಿಕವಾಗಿ ಹೇಳಿದರು.

ಸಣ್ಣ ಪರಶುರಾಮ ಅವರು ಎಲ್ಲರೊಂದಿಗೆ ಉತ್ತಮ ಗೆಳೆತನ ಹೊಂದಿ, ಇಲಾಖೆ ಕೆಲಸಗಳು ನಿಗದಿತ ಅವಧಿಯಲ್ಲಿ ಮುಗಿಯುವಂತೆ ಮಾಡುತ್ತಿದ್ದರು. ಅವರು ಕೆಲಸದಲ್ಲಿ ಇತರರಿಗೆ ಮಾದರಿಯಾಗಿದ್ದು, ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಣ್ಣ ಪರಶುರಾಮ ಅವರು, ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಇಂಜಿನಿಯರ್‌ಗಳಾದ ಸೂಗುರೆಡ್ಡಿ, ಕೈಲಾಸ್, ಚಂದ್ರಶೇಖರ, ಸುನೀಲಕುಮಾರ, ಗುತ್ತಿಗೆದಾರ ಚಿದಾನಂದಪ್ಪ ಕಾಳೆಬೆಳಗುಂದಿ, ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಸುದರ್ಶನ ನಾಯಕ, ಚಂದ್ರಯ್ಯ, ಸಿದ್ದಪ್ಪಗೌಡ ಪಾಟೀಲ್, ಹಣಮಂತ ಕನ್ನಳ್ಳಿ, ಶ್ರೀಕಾಂತ ಬದೆಪಳ್ಳಿ ಇತರರಿದ್ದರು.

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ-ಬೆಂಗಳೂರು-ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1-94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ
ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ - 585 102
ಮೊ: 9449985695-9481000249

ಶಿಕ್ಷಕರಿಂದಲ್ಲೇ ದೇಶದ ಪ್ರಗತಿ ಸಾಧ್ಯ : ತುನ್ನೂರ

ಸಂ.ಕ.ಸಮಾಚಾರ ಯಾದಗಿರಿ : ಎಲ್ಲ ವೃತ್ತಿಗಳಲ್ಲಿ ಶಿಕ್ಷಕ ವೃತ್ತಿ ಅಮೂಲ್ಯವಾದುದ್ದು. ಶಿಕ್ಷಕರಿಂದಲ್ಲೇ ದೇಶದ ಪ್ರಗತಿ ಸಾಧ್ಯ. ಶಿಲ್ಪಿ ಕಲ್ಲು ಕಡಿದು ಮೂರ್ತಿ ಮಾಡುವಂತೆ ಮಕ್ಕಳನ್ನು ತಿದ್ದಿ, ತಿಡಿ ಅಕ್ಷರ ಕಲಿಸಿ ಅವರನ್ನು ಸಾಧಕರನ್ನಾಗಿ ಮಾಡುವ ಶ್ರೇಷ್ಠ ಕೆಲಸ ಶಿಕ್ಷಕರದ್ದಾಗಿದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಶ್ಲಾಘಿಸಿದರು.

ಯಾದಗಿರಿಯ ಸರ್ಕಾರಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ.ದೇವಿಂದ್ರಪ್ಪ ಹಳ್ಳಿಮನಿ ಸೇವಾ ನಿವೃತ್ತಿ ಕಾರ್ಯಕ್ರಮವನ್ನು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಉದ್ಘಾಟಿಸಿದರು.

ನಗರದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ದೇವೀಂದ್ರಪ್ಪ ಹಳ್ಳಿಮನಿ ಅವರ ಸೇವಾ ನಿವೃತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಏನೇ ಸಾಧನೆ ಮಾಡಿದರೂ ಅದರಲ್ಲಿ ಪಾಲಕರ ಜತೆ ಶಿಕ್ಷಕರ ಪಾತ್ರ ಹೆಚ್ಚಿನದಾಗಿದೆ ಎಂದರು.

ಸೇವಾ ನಿವೃತ್ತಿ ಹೊಂದಿರುವ ದೇವೀಂದ್ರಪ್ಪ ಹಳಮನಿ ಅವರು ಸಾವಿರಾರು ಮಕ್ಕಳಿಗೆ ಉತ್ತಮ ವಿದ್ಯೆ ನೀಡಿದ್ದಾರೆ. ಇವರಿಂದ ಶಿಕ್ಷಣ ಪಡೆದ ಅನೇಕರು ವಿವಿಧ ಉನ್ನತ ಹುದ್ದೆಗಳಲ್ಲಿ ಇರುವುದು ಕೇಳಿ ಸಂತಸವಾಯಿತು. ಎಲ್ಲ ಶಿಕ್ಷಕರು ಇದೇ ತರಹ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಗಿರಿಜಿಲ್ಲೆ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಕ್ರಾಂತಿ ಮಾಡಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪದವಿ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಸುಭಾಷಚಂದ್ರ ಕೌಲಗಿ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಗುರು, ಹಿರಿಯರಿಗೆ ಮತ್ತು ಪಾಲಕರಿಗೆ ಗೌರವಿಸುವ ಮಕ್ಕಳು ಜೀವನದಲ್ಲಿ ಸಾಧನೆ ಮಾಡುತ್ತಾರೆ. ಈ ನಿಟ್ಟಿನಲ್ಲಿ ಹಳಮನಿ ಅವರು ತಮ್ಮ ಉತ್ತಮ ಶಿಷ್ಯರ ಬಳಗವೇ ಹೊಂದಿದ್ದಾರೆ. ಸೇವಾ ಅವಧಿಯಲ್ಲಿ ಮೌಲ್ಯಯುತ ಶಿಕ್ಷಣ ನೀಡಿದ್ದಾರೆ ಎಂದರು.

ಸನ್ಮಾನಗೊಂಡು ಮಾತನಾಡಿದ ಡಾ.ದೇವೀಂದ್ರಪ್ಪ ಹಳ್ಳಿಮನಿ, ತಮ್ಮ ಸುಧೀರ್ಘ ಸೇವಾ ಅವಧಿಯಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಡಾ.ಸಂಗಪ್ಪ ರಾಂಪುರ, ಡಾ.ಪದ್ಮರಾಜ ರಾಸಣಗಿ, ಇಂಜಿನಿಯರ ಭೀಮರೆಡ್ಡಿ ಪಾಟೀಲ್, ಚನ್ನಾರೆಡ್ಡಿ ತಂಗಡಗಿ, ಮಲ್ಲಣ್ಣಗೌಡ ಸೇರಿ ಇತರರಿದ್ದರು. ಡಾ. ದೇವೀಂದ್ರಪ್ಪ ಹಳಮನಿ ದಂಪತಿಗೆ ಸನ್ಮಾನಿಸಲಾಯಿತು.

ಶಹಾಪುರ ನಗರದ ಡಿಡಿಯು ಪದವಿ ಪೂರ್ವ ಕಾಲೇಜಿನಲ್ಲಿ ಕನಕದರ್ಶನ-02 ವಿಶೇಷ ಉಪನ್ಯಾಸ ಜರುಗಿತು.

ಕನಕದಾಸರು ಶ್ರೇಷ್ಠ ಸಮಾಜ ಸುಧಾರಕರು

ಸಂ.ಕ.ಸಮಾಚಾರ ಶಹಾಪುರ : ಕನಕದಾಸರು ಕೀರ್ತನೆಗಳ ಮೂಲಕ ಸಮಾಜವನ್ನು ಸುಧಾರಣೆ ಮಾಡಿದ್ದಲ್ಲದೆ ಸಂಗೀತಕ್ಕೂ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂದು ಸುರಪುರದ ಶ್ರೀ ಪ್ರಭು ಮಹಾವಿದ್ಯಾಲಯದ ಸಾಯಿಬಣ್ಣ ಮೂಡಬೂಳ ತಿಳಿಸಿದರು.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಗರದ ಕಲಾನಿಕೇತನ ಟ್ರಸ್ಟ್ ವತಿಯಿಂದ ನಗರದ ಡಿ.ಡಿ.ಯು ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿರುವ ಕನಕದರ್ಶನ-02 ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಧರ್ಮದರ್ಶಿ ಡಾ.ಭೀಮಣ್ಣ ಮೇಟಿ ಮಾತನಾಡಿ, ಕನ್ನಡದ ದಾಸ ಸಾಹಿತ್ಯ ಪರಂಪರೆಗೆ ಕೊಡುಗೆ ನೀಡಿದ ಅತ್ಯಂತ ಶ್ರೇಷ್ಠ ಕವಿ ಕನಕದಾಸರು ಎಂದರು.

ಪ್ರಾಂಶುಪಾಲ ಕಿರಣ್ ಪತ್ತಾರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕಾವೇರಿ ಪಾಟೀಲ, ಯುವ ಮುಖಂಡ ಶರಣಗೌಡ ಪೊಲೀಸ್ ಬಿರಾದಾರ ಸೇರಿ ಇತರರಿದ್ದರು.

ಕಲಾನಿಕೇತನ ಟ್ರಸ್ಟ್ ಅಧ್ಯಕ್ಷ ಬಸವರಾಜ ಶಿಣ್ಣೂರ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಮಡಿವಾಳಪ್ಪ ಪಾಟೀಲ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ವಿದ್ಯಾರ್ಥಿ ಜೀವನ ಅತ್ಯಮೂಲ್ಯ : ಮಾಜಿ ಸಚಿವ ರಾಜೂಗೌಡ

ಸಂ.ಕ.ಸಮಾಚಾರ ವಡಗೇರಾ : ವಿದ್ಯಾರ್ಥಿಗಳು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡುವ ಮೂಲಕ ಉನ್ನತ ಶಿಕ್ಷಣ ಪಡೆದು ವಿದ್ಯಾವಂತರಾಗಿ ಉನ್ನತ ಶ್ರೇಣಿಯ ಅಧಿಕಾರಿಯಾಗಬೇಕು ಎಂದು ಮಾಜಿ ಸಚಿವ ರಾಜೂಗೌಡ ಹೇಳಿದರು.



ವಡಗೇರಾ ತಾಲೂಕಿನ ಕುರುಕುಂದಾ ಗ್ರಾಮದ ತಾಪಂ ಮಾಜಿ ಸದಸ್ಯ ಪರಶುರಾಮ ಕುರುಕುಂದ ಅವರ ಪುತ್ರ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಪಡೆದ ಹಿನ್ನಲೆ ಮಾಜಿ ಸಚಿವ ರಾಜೂಗೌಡ ಅವರು ವಿದ್ಯಾರ್ಥಿನಿಯನ್ನು ಕೊಡೇಕಲ್‌ನಲ್ಲಿ ಸನ್ಮಾನಿಸಿದರು.

ಬಿಜೆಪಿ ಮುಖಂಡ ಹಾಗೂ ತಾಪಂ ಮಾಜಿ ಸದಸ್ಯ ಪರಶುರಾಮ ಕುರುಕುಂದ ಅವರ ಪುತ್ರ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹಿನ್ನೆಲೆಯಲ್ಲಿ ವಿದ್ಯಾರ್ಥಿಯನ್ನು ಕೊಡೇಕಲ್‌ನಲ್ಲಿರುವ ತಮ್ಮ ಮನೆಯಲ್ಲಿ ಸನ್ಮಾನಿಸಿ ಮಾತನಾಡಿದರು.

ವಿದ್ಯಾರ್ಥಿ ಶಹಾಪುರದ ಸರ್ಕಾರಿ ಆದರ್ಶ ಶಾಲೆಯಲ್ಲಿ ಓದಿ, ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 605 ಶೇ 96.8% ಅಂಕಗಳು ಪಡೆದ ಹಿನ್ನಲೆ ವಿದ್ಯಾರ್ಥಿ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಅತಿ ಹೆಚ್ಚು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಸಂತೋಷ ಹೆಮ್ಮೆಯ ಸಂಗತಿ ಹರ್ಷ ವ್ಯಕ್ತಪಡಿಸಿದರು.

ವಿದ್ಯಾರ್ಥಿ ಉತ್ತಮ ವಿದ್ಯಾಭ್ಯಾಸ ಮಾಡಿ ಉನ್ನತ ವಿದ್ಯಾಭ್ಯಾಸ ಕೈಗೊಳ್ಳಬೇಕು ಎಂದು ವಿದ್ಯಾರ್ಥಿಗೆ ದೈರ್ಯ ಹೇಳಿ ಆರ್ಶಿವದಿಸಿದರು.

ಜಿಲ್ಲಾಧ್ಯಕ್ಷ ಬಸವರಾಜಪ್ಪಗೌಡ ವಿಭೂತಿಹಳ್ಳಿ, ಜಿಪಂ ಮಾಜಿ ಅಧ್ಯಕ್ಷ ಯಲ್ಲಪ್ಪ ಕುರುಕುಂದಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೆಲ್ಲಪ್ಪ ಗುಳಗಿ ಇತರರಿದ್ದರು.

ಸಿಲಿಂಡರ್ ದರ ಏರಿಕೆ: ಕೇಂದ್ರದ ಜನವಿರೋಧಿ ಧೋರಣೆ

ಯಾದಗಿರಿ : ಹಲವು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಮುಗಿದ ಬೆನ್ನಲ್ಲಿಯೇ ಕೇಂದ್ರ ಸರ್ಕಾರ ವಾಣಿಜ್ಯ ಸಿಲಿಂಡರ್ ದರ ಏರಿಕೆ ಮಾಡುವ ಮೂಲಕ ತಾನು ಜನವಿರೋಧಿ ಸರ್ಕಾರ ಎಂಬುದು ಮತ್ತೊಮ್ಮೆ ಸಾಬೀತು ಮಾಡಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ. ಭೀಮಣ್ಣ ಮೇಟಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಚುನಾವಣೆಗೆ ಮುನ್ನ ಸಿಲಿಂಡರ್ ದರ ಏರಿಕೆ ಮಾಡಿದರೆ ಸೋಲುತ್ತೇವೆ ಅಂದುಕೊಂಡು ಚುನಾವಣೆ ಮುಗಿದ ಬಳಿಕ ಬೆಲೆ ಹೆಚ್ಚಳ ಮಾಡಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರ ಸಂಪೂರ್ಣವಾಗಿ ಬಡವರ ವಿರೋಧಿಯಾಗಿದೆ. ಏನಿದ್ದರೂ ಬಿಜೆಪಿ ಉದ್ಯಮಗಳ ಪರವಾಗಿ ಆಡಳಿತ ಮಾಡುತ್ತಿದೆ. ಇವರಿಗೆ ಶ್ರೀಮಂತರನ್ನು ಉದ್ದಾರ ಮಾಡುವುದೇ ಮೊದಲ ಗುರಿಯಾಗಿದೆ ಎಂದಿದ್ದಾರೆ.

ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಬೀಳುತ್ತದೆ. ಆದರೆ ಕೇಂದ್ರ ಮಾತ್ರ ಇದಕ್ಕೂ ತನಗೂ ಯಾವುದೇ ರೀತಿಯಿಂದ ಸಂಬಂಧವೇ ಇಲ್ಲ ಎಂಬಂತೆ ಆಡಳಿತ ಮಾಡುತ್ತಿದೆ. ಬರೀ ಸುಳ್ಳು ಹೇಳಿಕೊಂಡು ಆಡಳಿತ ನಡೆಸಿರುವುದೇ ಬಿಜೆಪಿಗರ ದೊಡ್ಡ ಸಾಧನೆಯಾಗಿದೆ ಎಂದು ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷರಿಗೆ ಭೇಟಿಯಾದ ಮಾನೇಗಾರ

ಯಾದಗಿರಿ: ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಪಿಸಿಸಿ ಸದಸ್ಯ ಹಾಗೂ ಗುರುಮಠಕಲ್ ಮುಖಂಡ ಶರಣಪ್ಪ ಮಾನೇಗಾರ ಅವರು ಭೇಟಿ ಮಾಡಿದರು.

ಡಾ.ಖರ್ಗೆ ಅವರ ನಿವಾಸದಲ್ಲಿ ಭೇಟಿ ಮಾಡಿ ಪ್ರಚಲಿತ ರಾಜಕೀಯ ವಿದ್ಯಾಮಾನಗಳ ಬಗ್ಗೆ ಚರ್ಚೆ ನಡೆಸಿದರು. ಈ ವೇಳೆ ಸೈದಾಪುರ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ವಿಶ್ವನಾಥ ನೀಲಹಳ್ಳಿ ಜತೆಗಿದ್ದರು.

ಕಳೆದೊಂದು ವರ್ಷದಿಂದ ಗುರುಮಠಕಲ್ ಮತಕ್ಷೇತ್ರದಲ್ಲಿ ಪ್ರತಿ ಹಳ್ಳಿ-ತಾಂಡಾಗಳಿಗೆ ಭೇಟಿ ನೀಡುತ್ತಿರುವ ಮಾನೇಗಾರ ಅವರು, ಸ್ಥಳೀಯ ಜನರ ಮದುವೆ, ಗೃಹಪ್ರವೇಶ ಮತ್ತಿತರ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಮೂಲಕ ಅವರ ನೋವು ನಲಿವುಗಳಲ್ಲಿ ಭಾಗವಹಿಸುತ್ತಿದ್ದಾರೆ. ಯುವಕರಿಗೆ ಬಲ ತುಂಬಲು ಕ್ರೀಡಾಕೂಟಗಳನ್ನು ಆಯೋಜನೆ ಮಾಡುವ ಸಂಘಟಕರಿಗೆ ತನು ಮನ-ಧನದಿಂದ ಸಹಾಯ ಸಹಕಾರ ನೀಡುವ ಮುಖಾಂತರ ಜನ ಮನ್ನಣೆ ಪಡೆದಿದ್ದಾರೆಂದು ಅವರ ಬೆಂಬಲಿಗರ ಖರ್ಗೆ ಗಮನ ಸೆಳೆದರು.



ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಾಂಗ್ರೆಸ್ ನಾಯಕ ಶರಣಪ್ಪ ಮಾನೇಗಾರ ಭೇಟಿಯಾದರು.



ಚಪೆಟ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯದ ಅರಿವು ಕೇಂದ್ರದ ವತಿಯಿಂದ ವಿದ್ಯಾರ್ಥಿನಿ ದೀಕ್ಷಾಗೆ ಸನ್ಮಾನಿಸಲಾಯಿತು.

ಭಾಷೆ ಅಡೆತಡೆ ಮೀರಿ ಸಾಧನೆ ಶಿಖರಕ್ಕೇರಿದ ದೀಕ್ಷಾ

ಸಂ.ಕ.ಸಮಾಚಾರ ಗುರುಮಠಕಲ್: ಛಲವೊಂದಿದ್ದರೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ತಾಲೂಕಿನ ಚಪೆಟ್ಲಾ ಗ್ರಾಮದ ಪ್ರತಿಭಾವಂತ ವಿದ್ಯಾರ್ಥಿನಿ ದೀಕ್ಷಾ ಸಾಬೀತುಪಡಿಸಿದ್ದಾರೆ ಎಂದು ಗ್ರಂಥಪಾಲಕಿ ನಾಜಮಿನ್ ಬೇಗಂ ಹೇಳಿದರು.

> **ಕನ್ನಡ ಮಾಧ್ಯಮದಲ್ಲಿ ಕಲಿತದ್ದು ನನಗೆ ಎಂದಿಗೂ ಮೈನಸ್ ಪಾಯಿಂಟ್ ಅನಿಸಲಿಲ್ಲ. ಬದಲಾಗಿ, ವಿಷಯವನ್ನು ಆಳವಾಗಿ ಅರ್ಥ ಮಾಡಿಕೊಳ್ಳಲು ಅದು ನನಗೆ ಸಹಾಯ ಮಾಡಿತು. ನನ್ನ ಈ ಸಾಧನೆಯನ್ನು ತಾಯ್ನಾಡಿಗೆ ಅರ್ಪಿಸುತ್ತೇನೆ.**
> **■ ದೀಕ್ಷಾ, ವಿದ್ಯಾರ್ಥಿನಿ**

2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 93.6 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದ ದೀಕ್ಷಾ ಅವರನ್ನು ಚಪೆಟ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯದ 'ಅರಿವು ಕೇಂದ್ರ'ದ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ

ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಭಾಷಾ ಬದಲಾವಣೆ ಸಾಧನೆಗೆ ಅಡ್ಡಿಯಾಗಲಿಲ್ಲ. ದೀಕ್ಷಾ ಅವರ ಸಾಧನೆ ಕೇವಲ ಅಂಕಗಳಿಗೆ ಸೀಮಿತವಾಗಿಲ್ಲ. ಇದು ಅವರ ಅಪ್ರತಿಮ ಪರಿಶ್ರಮದ ಸಂಕೇತವಾಗಿದೆ ಎಂದರು.

ದೀಕ್ಷಾ 1 ರಿಂದ 5ನೇ ತರಗತಿಯವರೆಗೆ ಮರಾಠಿ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರು. ಕುಟುಂಬದ ವಲಸೆ ಅಥವಾ ಅನಿವಾರ್ಯ ಕಾರಣಗಳಿಂದಾಗಿ ಅವರ ಶೈಕ್ಷಣಿಕ ಅಡಿಪಾಯ ಮರಾಠಿ ಭಾಷೆಯಲ್ಲಿತ್ತು. ಸ್ವಗ್ರಾಮಕ್ಕೆ ಮರಳಿ ನಂತರ, 6ನೇ ತರಗತಿಯಿಂದಲೇ ಕನ್ನಡ ಮಾಧ್ಯಮಕ್ಕೆ ಬದಲಾದರು. ಕೇವಲ ನಾಲ್ಕೈದು ವರ್ಷಗಳಲ್ಲಿ ಹೊಸ ಭಾಷೆಯನ್ನು ಕಲಿತು, ಅದೇ ಭಾಷೆಯಲ್ಲಿ ಪರೀಕ್ಷೆ ಬರೆದು ಇಂದು ಉನ್ನತ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ರಮೇಶ್, ಲಕ್ಷ್ಮಿ, ಮಾಶಪ್ಪ ನಾಯ್ಕೋಡಿ, ಮಾರುತಿ, ನವೀನ್ ಕುಮಾರ್, ಹುಸೇನಪ್ಪ ಸೇರಿ ಹಲವು ಗ್ರಾಮಸ್ಥರು ಉಪಸ್ಥಿತರಿದ್ದರು.

ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಾಕ್ ಹುಡುಕಿದಂತಾಗಿದೆ ಸಮಸ್ಯೆ

ವಡಗೇರಾ : ಕುಡಿಯುವ ನೀರಿಗೆ ಬರ

■ ನಾಗಪ್ಪ ಕುಂಬಾರ

ಸಂ.ಕ.ಸಮಾಚಾರ ವಡಗೇರಾ : "ಅಂಗೈಯಲ್ಲಿ ಬೆಣ್ಣೆಯಿಟ್ಟುಕೊಂಡು............ ತುಪ್ಪಾಕ್ ಹುಡುಕಿದಂತಾಗಿದೆ" ತಾಲೂಕಿನ ನಾನಾ ಗ್ರಾಮಗಳ ಪರಿಸ್ಥಿತಿ.

ತಾಲೂಕಿನಲ್ಲಿ ಭೀಮೆ-ಕೃಷ್ಣೆ ಎರಡು ಜೀವ ನದಿಗಳು ಮಳೆಗಾಲದಲ್ಲಿ ಸಮೃದ್ಧಿವಾಗಿ ಮೈದುಂಬಿ ಹರಿಯುತ್ತಿವೆ. ಒಂದೊಂದು ಸಲ ಪ್ರವಾಹ ಉಕ್ಕಿ ಗ್ರಾಮದೊಳಗೆ ನೀರು ಬರುತ್ತವೆ. ಈ ಎರಡು ನದಿಗಳ ನೀರು ಮಳೆಗಾಲದಲ್ಲಿ ಪೋಲಾಗಿ ನೆರೆಯ ತೆಲಂಗಾಣ ರಾಜ್ಯಕ್ಕೆ ಯಥೇಚ್ಛವಾಗಿ ಹರಿಯುತ್ತೇವೆ. ಪೋಲಾಗಿ ಹರಿಯುವ ನದಿಗಳ ನೀರನ್ನು ಹಿಡಿದಿಟ್ಟುಕೊಳ್ಳಲು ಹೊಸ ಹೊಸ ಬ್ಯಾರೇಜ್‌ಗಳು ನಿರ್ಮಾಣವಾಗಬೇಕು ಅಂದಾಗ ಮಾತ್ರ ನದಿ ತೀರದ ಗ್ರಾಮಗಳಿಗೆ ಕುಡಿವ ನೀರಿನ ಸಮಸ್ಯೆ ಕಡಿಮೆಯಾಗಬಹುದು. ಅಲ್ಲದೆ ಅನ್ನದಾತರಿಗೆ ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗುತ್ತದೆ. ಸರ್ಕಾರಗಳು ಬರುತ್ತೇವೆ, ಹೋಗುತ್ತೇವೆ. ಆದರೆ ತಾಲೂಕಿನ ನದಿ ತಟದ ನಾನಾ ಗ್ರಾಮಗಳಲ್ಲಿ ಶಾಶ್ವತ ಕುಡಿವ ನೀರಿನ ಸಮಸ್ಯೆಗೆ ಮುಕ್ತಿ ಕಾಣುತ್ತಿಲ್ಲ ಎಂದು ತಾಲೂಕಿನ ನಾನಾ ಗ್ರಾಮಗಳ ಗ್ರಾಮಸ್ಥರು ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಮಳೆಗಾಲದಲ್ಲಿ ಪ್ರವಾಹ, ಬೇಸಿಗೆಯಲ್ಲಿ ಕುಡಿವ ನೀರಿನ ಸಮಸ್ಯೆ ಉಲ್ಬಣ. ಇದು ಯಾವಾಗ ಕೊನೆಗಾಣುತ್ತದೆ ಎಂಬುದು ಗ್ರಾಮಸ್ಥರ ಅಭಿಪ್ರಾಯ.

ವಡಗೇರಾ ತಾಲೂಕಿನ ಗುರುಸುಣಗಿ ಬಳಿಯ ಭೀಮಾ ಬ್ರಿಜ್ ಕಮ್ ಬ್ಯಾರೇಜ್‌ನಲ್ಲಿ ನೀರು. (ಸಂಗ್ರಹದ ಚಿತ್ರ)

ದೀಪದ ಬುಡದಲ್ಲಿ ಕತ್ತಲು ಎಂಬಂತೆ ನದಿ ತೀರದ ಹಾಗೂ ಬ್ಯಾರೇಜ್‌ಗಳ ಸುತ್ತಮುತ್ತಲಿನ 50 ಕಿ.ಮೀ ಪ್ರದೇಶಗಳ ಗ್ರಾಮೀಣ ಪ್ರದೇಶಗಳಲ್ಲಿ ನೀರು ಸಿಗುತ್ತಿಲ್ಲ. ಭೀಮಾ ನದಿಯಿಂದ ಸುಮಾರು 50 ಕಿ.ಮೀ ದೂರದ ಗುರಮಿಠಕಲ್ ಪಟ್ಟಣಕ್ಕೆ ನೀರು ಪೂರೈಕೆ ಮಾಡಲಾಗುತ್ತದೆ. ತಾಲೂಕಿನ 5 ರಿಂದ 50 ಕಿ.ಮೀ ಒಳಗಡೆ ಇರುವ ಗ್ರಾಮಗಳಿಗೆ ನದಿ ಪೂರೈಸಲು ಸರ್ಕಾರ, ಜನಪ್ರತಿನಿಧಿಗಳ, ಅಧಿಕಾರಿಗಳ ಇಚ್ಛಾ ಶಕ್ತಿ ಎದ್ದು ಕಾಣುತ್ತದೆ.

ಸರ್ಕಾರ ಈಗಾಗಲೇ ಕೋಟ್ಯಾಂತರ ಹಣ ಖರ್ಚು ಮಾಡಿದರೂ ಶುದ್ಧವಾದ ನೀರು ಗ್ರಾಮಸ್ಥರಿಗೆ ಸಿಗುತ್ತಿಲ್ಲ. ಬಹು ಗ್ರಾಮಗಳ ಕುಡಿವ ನೀರು ಯೋಜನೆ, ಜೆಜೆಎಂ ಹೀಗೆ ಅನೇಕ ಯೋಜನೆಗಳು ಕೆಲ ಬಹುತೇಕ ಗ್ರಾಮಗಳಲ್ಲಿ ಹಳ್ಳ ಹಿಡಿದಿದೆ. ಸರ್ಕಾರ ಮನಸ್ಸು ಮಾಡಿ ಭೀಮಾ ಹಾಗೂ ಕೃಷ್ಣಾ ನದಿ ತೀರಗಳಲ್ಲಿ ಹೊಸ ಹೊಸ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಬೇಕು. ಪೋಲಾಗಿ ಹರಿಯುವ ನೀರು ಸಂಗ್ರಹ ಮಾಡಿಕೊಂಡು ಬೇಸಿಗೆ ಕಾಲದಲ್ಲಿ ಗ್ರಾಮಗಳಿಗೆ ಅನುಕೂಲ ಮಾಡಿಕೊಡಬೇಕು ಅಂದಾಗ ಮಾತ್ರ ನೀರಿನ ಸಮಸ್ಯೆ ಕಡಿಮೆಯಾಗಬಹುದು ಎಂಬುದು ಭೀಮಾ-ಕೃಷ್ಣ ನದಿ ತೀರದ ಗ್ರಾಮಗಳ ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಜಿಲ್ಲೆಯಲ್ಲಿ ಸರ್ಕಾರ ಪ್ರಭಾವಿ ಸಚಿವರು ಹಾಗೂ ಶಾಸಕರು ಸರ್ಕಾರದ ಗಮನಕ್ಕೆ ತರುವ ಮೂಲಕ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕಿದೆ.

ತುಂಬಿದ ಮನೆಗೊಂದು
ಚಂದದ ಸಾಪ್ತಾಹಿಕ
ಕರ್ಮವೀರ

ಸುದ್ದಿ ಮಿಂಚು

ನೇರ ಸಂದರ್ಶನ ಇಂದು

ರಾಯಚೂರು: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಮೇ.04ರ ಬೆಳಿಗ್ಗೆ 10ಗಂಟೆಯಿಂದ ಮಧ್ಯಾಹ್ನ 1ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ. ನೇರ ಸಂದರ್ಶನದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅರ್ಹತೆಗಳು: ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 28 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗಳನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532-231684, 9916931616, 9008211750ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಪ್ರಮಾಣ ಪತ್ರಗಳ ವಿತರಣೆ

ಮಾನ್ವಿ: ಮಾನ್ವಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಜೂನ್ 2026 ನೇ ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ಅಗತ್ಯವಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರ, ವಾಸಸ್ಥಳ ಪ್ರಮಾಣಪತ್ರ, 371 ಜೆ ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕೆ ವಿದ್ಯಾರ್ಥಿಗಳು ಕಂದಾಯ ಇಲಾಖೆಯ ಕಾರ್ಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಿದಲ್ಲಿ ಅಥವಾ ಶಾಲಾವಾರು ಅರ್ಜಿಗಳನ್ನು ಅಗತ್ಯ ದಾಖಲೆಗಳನ್ನು ಕ್ರೂಢೀಕರಿಸಿ ಅರ್ಜಿ ಸಲ್ಲಿಸಿದಲ್ಲಿ ತ್ವರಿತಗತಿಯಲ್ಲಿ 2 ದಿನಗಳಲ್ಲಿ ವಿದ್ಯಾರ್ಥಿಗಳು ಕೋರಿದ ಪ್ರಮಾಣ ಪತ್ರಗಳನ್ನು ಒದಗಿಸುವುದಕ್ಕೆ ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಕೋರಿದ್ದಾರೆ.

ಉದ್ಯಾನವನ ಉದ್ಘಾಟನೆ

ರಾಯಚೂರು: ನಗರದ ವಾರ್ಡ್ ನಂ. 5ರ ಕಾಕತೀಯ ಕಾಲೋನಿಯಲ್ಲಿ ಅಭಿವೃದ್ಧಿಪಡಿಸಲಾದ ಉದ್ಯಾನವನವನ್ನು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಉದ್ಘಾಟಿಸಿದರು.

2024-25ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ, ವಾರ್ಡ್ ನಂ. 5ರ ಕಾಕತೀಯ ಕಾಲೋನಿಯ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕೆ.ಆರ್.ಐ.ಡಿಎಲ್ ವತಿಯಿಂದ ನಿರ್ಮಾಣ ಕಾರ್ಯ ನೆರವೇರಿಸಲಾಗಿದೆ. ಕಾಂಗ್ರೆಸ್ ಮುಖಂಡರಾದ ಕೆ. ಶಾಂತಪ್ಪ, ಜಯಣ್ಣ, ಶಿವಮೂರ್ತಿ, ಅಮರೇಗೌಡ ಹಂಚಿನಾಳ, ವೆಂಕಟೇಶ್, ಚಂದ್ರಶೇಖರ್ ಮಿರ್ಜಾಪುರ, ಸಿ.ಎಚ್. ಕೇಶವಮೂರ್ತಿ, ಕೆ.ಆದಿನಾರಾಯಣ, ವೈ. ಹರಿಪ್ರಸಾದ್, ಜಯವಂತೆ ಪತಂಗೆ, ಬಸವರಾಜ್ ಪಾಟೀಲ್ ಅತ್ತನೂರು, ಶರಣಪ್ಪ ಬಲ್ಲಟಗಿ, ಡಾ.ಬಸನಗೌಡ ಹಾಗೂ ಮತ್ತಿತರರಿದ್ದರು.

ಗರ್ಭಕಂಠದ ಕ್ಯಾನ್ಸರ್ : ಸದುಪಯೋಗ ಪಡೆದುಕೊಳ್ಳಿ

ಸಿಂಧನೂರು : ಮಹಿಳೆಯರಲ್ಲಿ ಹೆಚ್ಚುತ್ತಿರುವ ಗರ್ಭಕಂಠದ ಕ್ಯಾನ್ಸರ್ ಯಂತ್ರಣದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಉಚಿತ ಲಸಿಕಾ ಅಭಿಯಾನ ಕೈಗೊಂಡಿದ್ದು. ಇದರ ಸದುಪಯೋಗವನ್ನು 14 ರಿಂದ 15 ವರ್ಷದ ಬಾಲಕಿಯರು ಪಡೆದುಕೊಳ್ಳಬೇಕು ಎಂದು ಸ್ತ್ರೀರೋಗ ತಜ್ಞ ಡಾ॥ ನಾಗರಾಜ ಕಾಟ್ವ ತಿಳಿಸಿದ್ದಾರೆ. ತಾಲೂಕಿನ ತುರ್ವಿಹಾಳ ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು ದೇಶದಲ್ಲಿ ಪ್ರತಿ ವರ್ಷ ಸುಮಾರು 1.27 ಲಕ್ಷ ಮಹಿಳೆಯರು ಗರ್ಭ ಕಂಠದ ಕ್ಯಾನ್ಸರ್ ಗೆ 79,900 ಮಹಿಳೆಯರು ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ. ಆದಕಾರಣ ಬಾಲಕಿಯರನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ರಕ್ಷಿಸುವ ಉದ್ದೇಶದಿಂದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಎಚ್.ಪಿ.ವಿ. ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಲಸಿಕೆ ಗರ್ಭಕಂಠದ ಜೊತೆಗೆ ಓಜೈನಲ್ ಹಾಗೂ ವಲ್ವರ್ ಕ್ಯಾನ್ಸರ್‌ಗಳನ್ನು ತಡೆಯುವಲ್ಲಿ ಸಹಾಯಕವಾಗುತ್ತದೆ. ತಪ್ಪದೆ 14 ರಿಂದ 15 ವರ್ಷದ ಬಾಲಕಿಯರು ಈ ಲಸಿಕೆಯನ್ನು ಹಾಕಿಸಿಕೊಂಡು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದ್ದಾರೆ.

ಮಾಜಿ ಯೋಧರ ಸೌಕರ್ಯಗಳಿಗೆ ಸ್ಪಂದಿಸಲಿ

ಶಕ್ತಿಪೀಠದ ಸ್ವಾಮೀಜಿ | ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ

ರಾಯಚೂರು: ದೇಶದ ರಕ್ಷಣೆ ಮಾಡಿದಂಥ ಸೈನಿಕರಿಗೆ ಹಾಗೂ ಮಾಜಿ ಯೋಧರಿಗೆ ಸರ್ಕಾರ ನೀಡಬೇಕಾದ ಸೌಕರ್ಯಗಳನ್ನು ಒತ್ತಾಯಿಸಿ ಪಡೆಯುವಂಥ ಪರಿಸ್ಥಿತಿ ಬಂದಿರುವುದು ಬೇಸರದ ಸಂಗತಿಯಾಗಿದೆ ಎಂದು ಇರಕಲ್‌ನ ಜಗದ್ಗುರು ಶಕ್ತಿಪೀಠದ ಬಸವಪ್ರಸಾದ ಸ್ವಾಮೀಜಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಾಯಚೂರಿನ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಭಾನುವಾರ ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಸಮಾರಂಭ ನಡೆಯಿತು.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮಾಜಿ ಯೋಧರಿಂದ ಹಮ್ಮಿಕೊಂಡಿದ್ದ ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಮಾಡಿ ಮಾತನಾಡಿದರು.

ಸೈನಿಕರನ್ನು ಸಮಸ್ಯೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಿಗಣಿಸುತ್ತಿಲ್ಲ. ಸರ್ಕಾರದಲ್ಲಿರುವ ರಾಜಕಾರಣಿಗಳು, ವಿಚಾರವಂತರು ಈ ಬಗ್ಗೆ ಚಿಂತನೆ ನಡೆಸಬೇಕು. ನಿರುದ್ಯೋಗಿಗಳಿಗೆ ಸಹಾಯಧನ, ಮಹಿಳೆಯರಿಗೆ ಬಸ್ ಉಚಿತ ಮಾಡಿರುವ ಸರ್ಕಾರ ರೈತರಿಗೆ, ಸೈನಿಕರಿಗೆ ಏಕೆ ಪ್ರಾತಿನಿಧ್ಯತೆ ನೀಡುತ್ತಿಲ್ಲ ಎಂದು ಪ್ರಶ್ನಿಸಿದರು.

ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರು ಸೇರಿಕೊಂಡು ಕ್ಷೇಮಾಭಿವೃದ್ಧಿಗಾಗಿ ಸಂಘಟನೆ ಮಾಡಿರುವುದು ಮತ್ತು ಈ ಸಂಘಟನೆಯ ಉದ್ಘಾಟನಾ ಕಾರ್ಯಕ್ರಮ ಐತಿಹಾಸಿಕ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ಪ್ರತಿಯೊಬ್ಬ ಮನುಷ್ಯ ಸ್ವಾರ್ಥಿಯಾಗಿ ಜೀವನ ಸಾಗಿಸುತ್ತಿದ್ದಾರೆ. ತನ್ನ ಸುಖ, ತನ್ನ ಕುಟುಂಬದ ಸುಖ, ತನ್ನ ಪೀಳಿಗೆಯಲ್ಲ ಸುಖವಾಗಿರಬೇಕೆಂಬ ಸ್ವಾರ್ಥವನ್ನು ಹೊಂದಿದ್ದಾನೆ. ಸ್ವಾರ್ಥ ಮತ್ತು ನಿಸ್ವಾರ್ಥದ ಮದ್ಯದಲ್ಲಿ, ತನ್ನವರಿಗೋಸ್ಕರ ತನ್ನ ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡುವನು ಸೈನಿಕರೊಬ್ಬರಾಗಿದ್ದಾರೆ. ಸಂಪಾದನೆ ಮಾಡಬೇಕೆಂಬ ಆಸೆಗಳು ಸೈನಿಕರಗಿಲ್ಲ ಎಂದು ಹೇಳಿದರು.

ದೇಶದ ರಕ್ಷಣೆಗೆ ಶ್ರೀಮಂತರು, ರಾಜಕರಣಿಗಳ ಮನೆಯಿಂದ ಮಕ್ಕಳು ಬರುವುದಿಲ್ಲ. ಅತ್ಯಂತ ಕಟ್ಟಕಡೆಯ ಬಡವನ, ಕಾರ್ಮಿಕನ, ರೈತನ ಹಾಗೂ ಶೋಷಿತರ ಮನೆಯಿಂದ ಸೈನಿಕರು ಸೇವೆಗಾಗಿ ಬರುತ್ತಾರೆ. ಅತ್ಯಂತ ತ್ಯಾಗಮಯವಾದ, ಘೋರವಾದ ಬದುಕನ್ನು ಬದುಕುವವರು ಸೈನಿಕರು. ರಾಜ್ಯಮಟ್ಟದಲ್ಲಿ ದೊಡ್ಡ ಸಂಘಟನೆಯಾಗಬೇಕು. ತಾಲೂಕು ಮಟ್ಟಗಳಲ್ಲಿಯೂ ಸಂಘಟನೆ ಬೆಳೆಯಬೇಕು ಎಂದು ಕರೆ ನೀಡಿದರು.

ಮೊದಲು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಮಾತನಾಡಿ, ದೇಶ ಸುಭದ್ರವಾಗಿರಲು ಸೈನಿಕರ ಸೇವೆಯಿಂದ ಮಾತ್ರ ಸಾಧ್ಯ. ಬಹಳ ಮಹತ್ವವಾದ ಪಾತ್ರವನ್ನು ಸೈನಿಕರು ವಹಿಸುತ್ತಾರೆ. ಅವರನ್ನು ಪೂಜ್ಯ ಭಾವನೆಯಿಂದ ಕಾಣುವುದೇ ದೇಶದ ಸಂಸ್ಕೃತಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ದೇಶವನ್ನು ಕಾಯುವಂತಹ ಯುವಕರಿಗೆ ಅವಕಾಶಗಳನ್ನು ಬಹಳಷ್ಟು ಸಿಗಬೇಕಾಗುತ್ತದೆ. ಅವರಿಗೆ ಸಿಗುವಂತಹ ಸೌಲಭ್ಯಗಳನ್ನು ಹೆಚ್ಚಿನ ರೀತಿಯಿಂದ ನೀಡಬೇಕಿದೆ. ಸುಭದ್ರವಾದ ದೇಶವನ್ನು ಕಾಯುವಂತಹ ವೀರ ಯೋಧರಿಗೆ ಬೇಕಾದಂತಹ ಹಾಗೂ ಅವರ ಕುಟುಂಬಕ್ಕೆ ಬೇಕಾದಂತಹ ಸೌಲಭ್ಯಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಬೇಕಾಗಿದೆ ಎಂದು ಹೇಳಿದರು.

ಪಿಂಚಣಿ ಸೇರಿ ಸೈನಿಕರಿಗೆ ಸಿಗುವಂತಹ ಸೌಲಭ್ಯಗಳು ನೀಡುವುದು ಸರ್ಕಾರಗಳ ಜವಾಬ್ದಾರಿಯಾಗಿದೆ. ಕೇಂದ್ರೀಯ ಶಸ್ತ್ರಾಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘ ಕಾರ್ಯಾಲಯಕ್ಕೆ ಖಾಲಿ ಇರುವ ಯಾವುದಾದರೂ ಒಂದು ಸರ್ಕಾರಿ ಹಳೆ ಕಟ್ಟಡ ಅಥವಾ ಸರ್ಕಾರಿ ಜಾಗವನ್ನು ಮಂಜೂರು ಮಾಡಬೇಕೆಂಬ ಒತ್ತಾಯವಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗುವುದು ಎಂದು ಭರವಸೆ ನೀಡಿದರು.

ಕಲ್ಲೂರು ಶಂಕರಾಚಾರ್ಯ ಮಠದ ಶಿವರಾಮಾನಂದ ಭಾರತಿ ಸ್ವಾಮೀಜಿ, ಪ್ರಮುಖರಾದ ವೆಂಕನಗೌಡ,ಧರ್ಮಣ್ಣ, ಕೃಷ್ಣಮೂರ್ತಿ,ಎನ್.ಪಿ.ಎನ್ ರೆಡ್ಡಿ, ರಂಗಸ್ವಾಮಿ, ವಿಶ್ವನಾಥ, ರಂಗನಗೌಡ,ವೀರಭದ್ರಯ್ಯ, ಪಂಪಣ್ಣ, ಶಬ್ಬೀರ್, ಭೀಮಣ್ಣ, ಲಕ್ಷ್ಮೀ ನಾರಾಯಣ, ಲಿಂಗನಗೌಡ, ಶರಣಬಸವ, ಮೋನುಮಿತ್ರ, ಸಾಜೀದ್ ಹುಸೇನ್, ಹಂಪನಗೌಡ ಪಾಟೀಲ್, ಹನುಮಂತ, ಬಸವರಾಜ, ಸಣ್ಣೆಪ್ಪ, ಮಲ್ಲೇಶ ಹಾಗೂ ಮತ್ತಿತರರಿದ್ದರು.

9 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ

ಸಂ.ಕ. ಸಮಾಚಾರ, ಮುದಗಲ್ಲ : ತಾಲೂಕಿನ ಪ್ರತಿ ಹಳ್ಳಿಗಳ ಅಭಿವೃದ್ಧಿಗೆ ಈಗಾಗಲೇ ಕೆಕೆಆರ್‌ಡಿಬಿ ಅನುದಾನವೇ ಶ್ರೀರಕ್ಷೆಯಾಗಿದೆ. ವಿಶೇಷವಾಗಿ ಈ ಅನುದಾನ ವಿರೋಧ ಪಕ್ಷದ ಶಾಸಕರಿಗಂತೂ ಹೆಚ್ಚಿನ ಶ್ರೀರಕ್ಷೆಯಾಗಿದೆ. ಇಂದು ಮೀಸಲು ಕ್ಷೇತ್ರದಾದ್ಯಂತ ಕೆಕೆಆರ್‌ಡಿಬಿ ಮತ್ತು ಪಿಎಂಜಿಎಸ್‌ವೈ ಅನುದಾನದಡಿಯ ಅಂದಾಜು 9ಕೋಟಿ ಮೊತ್ತದಲ್ಲಿ ಸಿಸಿ ರಸ್ತೆ, ಡಾಂಬರೀಕರಣ ರಸ್ತೆಗಳ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ಲಿಂಗಸುಗೂರು ಮೀಸಲು ವಿಧಾನಸಭೆ ಕ್ಷೇತ್ರದ ಶಾಸಕ ಮಾನಪ್ಪ ವಜ್ಜಲ್ ಹೇಳಿದರು.



ಮುದಗಲ್ಲ ಸಮೀಪದ ಛತ್ತರ ಗ್ರಾಮದಲ್ಲಿ ಕೆಕೆಆರ್‌ಡಿಬಿ ಅನುದಾದಡಿಯಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಮಾನಪ್ಪ ವಜ್ಜಲ್ ರವಿವಾರ ಭೂಮಿಪೂಜೆ ನೆರವೇರಿಸಿದರು.

ಅವರು ಛತ್ತರ, ನಾಗಲಾಪೂರ, ವ್ಯಾಕರನಾಳ ಮತ್ತು ಬೆಳ್ಳಿಹಾಳ ಗ್ರಾಮಗಳಲ್ಲಿ ಕೆಕೆಆರ್‌ಡಿಬಿ 50ಲಕ್ಷ ಮೊತ್ತದ ಪ್ರತ್ಯೇಕ ಸಿಸಿ ರಸ್ತೆ ಕಾಮಗಾರಿ ಭೂಮಿ ಪೂಜೆ ನೆರವೇರಿಸದ ಬಳಿಕ ವ್ಯಾಕರನಾಳ ಗ್ರಾಮದಲ್ಲಿ ಮಾಹಿತಿ ನೀಡಿದ ಅವರು ಛತ್ತರ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ನಾಗಲಾಪೂರ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿ, ವ್ಯಾಕರನಾಳ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿ, ಬೆಳ್ಳಿಹಾಳ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಬಂಡೆಬಾವಿ, ಗೌಡೂರು ಸೇರಿದಮತೆ ಮುಂತಾದೆಡೆ ಡಾಂಬರೀಕರಣ ರಸ್ತೆಗೆ ಬೂಮಿ ಪೂಜೆ ನೆರವೇರಿಸಲಾಗುವದು. ಹಲವಾರು ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿಕೊಂಡು ಹಂತ ಹಂತವಾಗಿ ಪ್ರತಿ ಹಳ್ಳಿಗಳಿಗೆ ಅನುದಾನ ಹಂಚಿಕೆ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರಕ್ಕೆ ಹಲವಾರು ಬಾರಿ ಅನುದಾನ ನೀಡುವಂತೆ ಮನವಿ ಮಾಡಿದರೂ ಕೂಡ ಹಣ ನೀಡದೇ ನಿರ್ಲಕ್ಷಿಸುತ್ತಿದ್ದು, ರಾಜ್ಯ ಸರ್ಕಾರದ ಖಜಾನೆ ಬರಿದಾಗಿದೆ ಎಂದು ಆರೋಪಿಸಿದರು. ಕೆಕೆಆರ್‌ಡಿಬಿ ಅನುದಾನದಲ್ಲಿಯೇ ಕ್ಷೇತ್ರದ ಬಹುತೇಕ ಹಳ್ಳಿಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಂಚಿಕೆ ಮಾಡಲಾಗಿದೆ ಎಂದರು. ಜನಸಾಮಾನ್ಯರ ಸಮಸ್ಯೆಗೆ ಸ್ಪಂದಿಸದೇ ಅಧಿಕಾರದ ಹಂಚಿಕೆ ವಿಚಾರವಾಗಿ ಸರ್ಕಾರ ಕಾಲಹರಣ ಮಾಡುತ್ತಿದ್ದಾರೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ವಿರೋಧ ಪಕ್ಷದ ಶಾಸಕರಾಗಿರುವದರಿಂದ ಸರಕಾರದ ವಿಶೇಷ ಅನುದಾನ ಬರದೇ ಕೆಕೆಆರ್‌ಡಿಬಿಯ ಅನುದಾನದ ಶ್ರೀರಕ್ಷೆಯಿಂದಲೇ ಕ್ಷೇತ್ರದ ಅಭಿವೃದ್ಧಿಗೆ ಸೀಮಿತರಾಗಿದ್ದೇವೆ ಎಂದರು.

ಕೆಕೆಆರ್‌ಡಿಬಿ ಅನುದಾನವೇ ಶ್ರೀರಕ್ಷೆ

ಬಿಜೆಪಿ ತಾಲೂಕಾಧ್ಯಕ್ಷ ಕೆ. ನಾಗಭೂಷಣ, ಪ್ರಮುಖರಾದ ಗಿರಿಮಲ್ಲನಗೌಡರು, ಲಿಂಗಣ್ಣ ದೇವಿಕೇರಿ, ವಿಜಯ್ ಇಳಕಲ್, ಭೀಮನಗೌಡರು, ಮೇಘಪ್ಪ ರಾಠೋಡ, ಮಂಜುನಾಥಗೌಡ, ಪ್ರಮುಖರಾದ ಕರಿಯಪ್ಪ ಯಾದವ್, ಚಂದಾವಲಿಸಾಬ್ ಮುದಗಲ್, ನಾಗರಾಜ ತಳವಾರ, ಫಕೀರಪ್ಪ ಕುರಿ ಸೇರಿದಂತೆ ಮುಂತಾದವರಿದ್ದರು.

ಅಧಿಕಾರಿಗಳ ಅನುಪಸ್ಥಿತಿಗೆ ಶಾಸಕ ಕೆಂಡಾಮಂಡಲ: ಕಾಮಗಾರಿಯ ಭೂಮಿ ಪೂಜೆಗೆ ಶಾಸಕರು ಆಗಮಿಸಿದಾಗ್ಯೂ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಬಿಸಿಲು, ರಜೆ ಇದೆಯೇ ಶಾಸಕರಿಗೆ ರಜೆ ಇಲ್ಲವೇ ಎಂದು ಭೂಸೇನಾ ನಿಗಮದ ಹೊರಗುತ್ತಿಗೆ ಅಧಿಕಾರಿಗಳನ್ನು ಶಾಸಕರು ತರಾಟೆಗೆ ತೆಗೆದುಕೊಂಡ ಪ್ರಸಂಗ ಕಂಡು ಬಂದಿತು. ನಾಗಲಾಪೂರ ಗ್ರಾಮದಲ್ಲಿ ಎರಡನೇ ಭೂಮಿ ಪೂಜೆಗೆ ಆಗಮಿಸಿದ್ದರೂ ಇಲಾಖೆಯ ಹಿರಿಯ ಅಧಿಕಾರಿಗಳು ಕಾಣದೇ ಇರುವದಕ್ಕೆ ಸ್ಥಳದಲ್ಲಿದ್ದ ಗುತ್ತಿಗೆ ಆಧಾರದ ಜೆಇಯನ್ನು ತರಾಟೆಗೆ ತೆಗೆದುಕೊಂಡು ಇನ್ನು ಮುಂದಿನ ಪೂಜಾ ಕಾರ್ಯಕ್ರಮಕ್ಕೆ ಬರದೇ ಇದ್ದರೇ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ಯಾಸ್ ಸಿಲೆಂಡರ್ ಕೊರತೆಯಿಂದ ದೇಶದ ಜನರ ಪರದಾಟ

ರಾಯಚೂರು: ಕೇಂದ್ರದ ಬಿಜೆಪಿ ಸರಕಾರ ಪಂಚ ರಾಜ್ಯಗಳ ಚುನಾವಣೆ ಮುಗಿದ ತಕ್ಷಣ ವಾಣಿಜ್ಯ ಗ್ಯಾಸ್ ಸಿಲೆಂಡರ್‌ಗಳ ಬೆಲೆ ಒಮ್ಮೆಲೆ 993ರೂ ಹೆಚ್ಚಳ ಮಾಡಿದ್ದು, ಜನರ ಲೂಟಿಗೆ ಸಮವಾಗಿದೆ, ಕೇಂದ್ರದ ಸಚಿವರು ಒಂದು ಕಡೆ ಗ್ಯಾಸ್ ಸಿಲೆಂಡರ್ ಗಳ ಕೊರತೆಯಿಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕಳೆದ ಎರಡು ತಿಂಗಳಿಂದ ಜನರಿಗೆ ಗ್ಯಾಸ್ ಸಿಲೆಂಡರ್ ಸಿಗದೇ ಪರದಾಡುವಂತಹ ಸ್ಥಿತಿ ದೇಶದಲ್ಲಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ವಕ್ತಾರ ಡಾ.ರಜಾಕ್ ಉಸ್ತಾದ್ ಅವರು ಟೀಕಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಇಂತಹ ಸಂದರ್ಭದಲ್ಲಿ 19ಕೆಜಿ ವಾಣಿಜ್ಯ ಗ್ಯಾಸ್ ಸಿಲೆಂಡರ್ ಬೆಲೆ 993ರೂವರೆಗೆ ಹೆಚ್ಚಿಸಿರುವದು ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಲ್ಲದೇ 5ಕೆಜಿ ಯ ಸಣ್ಣ ಸಿಲೆಂಡರ್ ಬೆಲೆ ಕೂಡ 261 ರೂ ಹೆಚ್ಚಿಸಲಾಗಿದೆ, ಇದು ನಗರ ಪ್ರದೇಶದಲ್ಲಿ ವಾಸಿಸುವ ಸಣ್ಣ ಕುಟುಂಬಗಳ ಬದುಕಿಗೆ ಬೆಂಕಿ ಹಾಕಿದಂತಾಗಿದೆ ಎಂದು ದೂರಿದ್ದಾರೆ.

2026ರ ಫೆಬ್ರವರಿ ಮೊದಲ ವಾರದಲ್ಲಿ ಮನೆ ಬಳಕೆ ಗ್ಯಾಸ್ ಸಿಲೆಂಡರ್ 60ರೂ ಹೆಚ್ಚಿಸಲಾಗಿತ್ತು. ವಾಣಿಜ್ಯ ಗ್ಯಾಸ್ ಸಿಲೆಂಡರ್ ಬೆಲೆ 49 ರೂ, ಮಾರ್ಚ 2026ಕ್ಕೆ 114.5 ರೂ, ಎಪ್ರಿಲ್ 2026ಕ್ಕೆ 195.5 ರೂ ಹಾಗೂ ಈಗ 993 ರೂ ಹೆಚ್ಚಳ ಮಾಡಲಾಗಿದೆ. ಕಳೆದ ನಾಲ್ಕು ತಿಂಗಳಲ್ಲಿ ವಾಣಿಜ್ಯ ಗ್ಯಾಸ್ ಸಿಲೆಂಡರ್ ಬೆಲೆ 1352 ರೂ ಹೆಚ್ಚಳ ಮಾಡಲಾಗಿದೆ/ ಈಗ ಅದರ ಬೆಲೆ 3071.50 ರೂ ಆಗಿದೆ, ಇದರಿಂದ ಹೊಟೆಲ್ ಮಾಲಿಕರಿಗೆ ಸಾಕಷ್ಟು ತೊಂದರೆಯಾಗುತ್ತದೆ. ಕಳೆದ ಮೂರು ತಿಂಗಳಿಂದ ಗ್ಯಾಸ್ ಸಿಗದೇ ಪರದಾಡುತ್ತಿದ್ದ ಹೋಟೆಲ್ ಮಾಲಿಕರು ಈಗ ಬೆಲೆ ಹೆಚ್ಚಳದಿಂದ ಜೀವನ ದುಸ್ತರವಾಗಿದೆ ಎಂದು ಆರೋಪಿಸಿದ್ದಾರೆ.

ಪಂಚ ರಾಜ್ಯಗಳ ಚುನಾವಣೆ ಮುಗಿಯುವವರೆಗೂ ಕಾದು, ಮತದಾನ ಮುಗಿದ ತಕ್ಷಣ ಜನರಿಗೆ ಕೇಂದ್ರದ ಬಿಜೆಪಿ ಸರಕಾರ ಬೆಲೆಯೇರಿಕೆಗೆ ಮುಂದಾಗಿದೆ ಎಂದರೆ ಇವರಿಗೆ ಚುನಾವಣೆ ಮಾತ್ರ ಮುಖ್ಯ, ಜನರ ಬದುಕಲ್ಲ. ವಾಣಿಜ್ಯ ಗ್ಯಾಸ್ ದರ ಏರಿಕೆಯಿಂದ ಕೇವಲ ವ್ಯಾಪಾರಸ್ಥರು ಮಾತ್ರ ಸಂಕಷ್ಟಕ್ಕೊಳಗಾಗುವದಿಲ್ಲ. ದೇಶದ ಪ್ರತಿಯೊಂದು ಮನೆಯ ಮೇಲೂ ದರ ಏರಿಕೆಯ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ. ಕೇಂದ್ರ ಬಿಜೆಪಿ ಸರಕಾರದ ಟೊಳ್ಳು ವಿದೇಶಾಂಗ ನೀತಿಯಿಂದಾಗಿ ಜನಸಾಮಾನ್ಯರು ಸಂಕಷ್ಟ ಅನುಭವಿಸುವಂತಾಗಿದೆ.ಜಾಗತಿಕ ಪರಸ್ಥಿತಿಗಳು ಬದಲಾಗುತ್ತಿರುತ್ತವೆ, ಭಾರತದ ನಾಗರೀಕರನ್ನು ಕಾಪಾಡುವದು ಕೇಂದ್ರ ಸರಕಾರದ ಕರ್ತವ್ಯವಾಗಿದೆ ಎಂದು ಆಗ್ರಹಿಸಿದ್ದಾರೆ.

ತೆಲಂಗಾಣ: ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಶೇ. 100ರಷ್ಟು ಫಲಿತಾಂಶ

ರಾಯಚೂರು : ತೆಲಂಗಾಣ ರಾಜ್ಯದ ನಾರಾಯಣಪೇಟೆ ಜಿಲ್ಲೆಯ ಕೃಷ್ಣಾ ಗ್ರಾಮದ ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಪ್ರೌಢಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಪಡೆಯುವ ಮೂಲಕ ಸಾಧನೆಗೈದಿದೆ. 2025-26ನೇ ಸಾಲಿನ ಎಸ್.ಎಸ್.ಎಲ್.ಸಿ (10ನೇ ತರಗತಿ) ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿ ಮತ್ತೊಮ್ಮೆ ತನ್ನ ಸಾಧನೆಯನ್ನು ಮೆರೆದಿದೆ. ಕಳೆದ ಐದು ವರ್ಷಗಳಿಂದ ನಿರಂತರವಾಗಿ ಶೇ.100 ಫಲಿತಾಂಶ ಪಡೆಯುತ್ತಿದ್ದು, ಈ ವರ್ಷವೂ ಅದೇ ಸಾಧನೆಯನ್ನು ಮುಂದುವರಿಸಿದೆ.

ರಾಯಚೂರು ಜಿಲ್ಲೆಯ ಗಡಿನಾಡು ತೆಲಂಗಾಣದ ನಾರಾಯಪೇಟೆ ಜಿಲ್ಲೆಯ ಕೃಷ್ಣ ಗ್ರಾಮದ ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಪ್ರೌಢಶಾಲೆಯು ಶೇ 100ರಷ್ಟು ಫಲಿತಾಂಶ ಬಂದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಈ ವರ್ಷ ಪರೀಕ್ಷೆಗೆ ಹಾಜರಾದ 67 ವಿದ್ಯಾರ್ಥಿಗಳಲ್ಲಿ ಎಲ್ಲ 67 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಯ ಶೈಕ್ಷಣಿಕ ಮಟ್ಟವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಅತ್ಯುತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು: ಗಾಯತ್ರಿ ವಿಶ್ವಕರ್ಮ-600ಕ್ಕೆ 548 ಅಂಕ, ಕುಲಸುಂಬೀ-600ಕ್ಕೆ 547, ಉಪ್ಪಾರ್ ಲಕ್ಷ್ಮೀ-600ಕ್ಕೆ 541, ಜಮುನಾ-600ಕ್ಕೆ 540 ಅಂಕಗಳನ್ನು ಪಡೆಯುವ ಮೂಲಕ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿಶೇಷ ಸಾಧನೆ:

ಕನ್ನಡ ವಿಷಯದಲ್ಲಿ 100ಕ್ಕೆ 90ಕ್ಕಿಂತ ಹೆಚ್ಚು ಅಂಕಗಳನ್ನು 19 ವಿದ್ಯಾರ್ಥಿಗಳು ಪಡೆದಿದ್ದಾರೆ. ಜಮುನಾ-98, ಗಾಯತ್ರಿ ವಿಶ್ವಕರ್ಮ, ಉಪ್ಪಾರ ಲಕ್ಷ್ಮೀ-97, ನಂದಿತಾ-96,

ಶಾಲಿನಿ, ನಂದಿತಾ, ಪುಟ್ಟ ಭಾಗಶ್ರೀ, ಕುಲಸುಂಬೀ, ಮಲ್ಲಿಕಾರ್ಜುನ ಮೋನಪ್ಪ-96 ಅಂಕಗಳನ್ನು ಪಡೆಯುವ ಮೂಲಕ ಕನ್ನಡ ವಿಷಯದ ಬಗ್ಗೆ ಗಡಿನಾಡ ಗ್ರಾಮದ ವಿದ್ಯಾರ್ಥಿಗಳು ಆಸಕ್ತಿ ಹೊಂದಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಮನವಿ: ಈ ಎಲ್ಲ 67 ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ರಾಯಚೂರು ಮತ್ತು ಯಾದಗಿರಿ ಕಡೆಗೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿನ ಸರ್ಕಾರವು ವಿದ್ಯಾರ್ಥಿಗಳಿಗೆ ವಸತಿ, ಸಾರಿಗೆ, ವಿದ್ಯಾರ್ಥಿವೇತನ ಹಾಗೂ ಪ್ರವೇಶಾತಿ ಸಂಬಂಧಿತ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕೆಂದು ಮಂಡಲ ಶಿಕ್ಷಣಾಧಿಕಾರಿ ಶ್ರೀ ನಿಜಾಮುದ್ದೀನ್, ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕಿಶೋರ್ ಕುಮಾರ್, ಶ್ರೀ ನಾಗರಾಜ್ ಹಾಗೂ ಎಲ್ಲಾ ಶಿಕ್ಷಕವೃಂದ ಮನವಿ ಮಾಡಿಕೊಂಡಿದ್ದಾರೆ. ಇದೇ ರೀತಿಯಲ್ಲಿ ಗಡಿನಾಡು ಸಂಘದ ನಾಯಕರಾದ ಅಮರ್ ದೀಕ್ಷಿತ್, ರಾಮಲಿಂಗಪ್ಪ, ನಾಗಭೂಷಣ್ ಹಾಗೂ ವಿದ್ಯಾರ್ಥಿಗಳ ಪೋಷಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ನೀರಿನ ಸಂಗ್ರಹ ಪರಿಕರಗಳನ್ನ ವಾರಕ್ಕೊಮ್ಮೆ ಸ್ವಚ್ಛಗೊಳಿಸಿ

ಸಂ.ಕ.ಸಮಾಚಾರ ಲಿಂಗಸುಗೂರ : ಸೋಂಕಿಗೆ ಒಳಪಡುವ ಅನಾಫಿಲಿಸ್ ಹೆಣ್ಣು ಸೊಳ್ಳೆಯಿಂದ ಮಲೇರಿಯಾ ರೋಗ ಹರಡುತ್ತದೆ. ಮಲಗುವಾಗ ಸೊಳ್ಳೆ ಪರದೆಗಳನ್ನು ಕಡ್ಡಾಯವಾಗಿ ಬಳಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಶ ಬಾಬು ಹೇಳಿದರು.

ಲಿಂಗಸುಗೂರು ತಾಲೂಕಿನ ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಜಿಲ್ಲಾ ಮಟ್ಟದ ವಿಶ್ವ ಮಲೇರಿಯಾ ದಿನಾಚರಣೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಶ ಬಾಬು ಮಾತನಾಡಿದರು.

ಅವರು ತಾಲೂಕಿನ ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಲಿಂಗಸುಗೂರು ಇವರ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಮಲೇರಿಯಾ ದಿನಾಚರಣೆ ಚಾಲನೆ ನೀಡಿ ಮಾತನಾಡುತ್ತ ಮಲೇರಿಯಾ ರೋಗಕ್ಕೆ ತುತ್ತಾದ ವ್ಯಕ್ತಿಗೆ ಕಚ್ಚುವ ಸೊಳ್ಳೆಗಳು, ಆರೋಗ್ಯವಂತ ಮನುಷ್ಯನಿಗೆ ಕಚ್ಚಿದಾಗ ಮಲೇರಿಯಾ ರೋಗ ಹರಡುತ್ತದೆ. ಹಾಗಾಗಿ ಜ್ವರ ಬಂದಾಗ ತಕ್ಷಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ನೀರು ಸಂಗ್ರಹ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಬೇಕು.

ತಾಲೂಕಿನ ಕೃಷ್ಣಾ ನದಿಯ ಪ್ರದೇಶದ ಕೆಲವು ಹಳ್ಳಿಗಳಲ್ಲಿ ನಿರಂತರವಾಗಿ ನಿಗಾವಹಿಸಿ ನಿಯಂತ್ರಣ ಮಾಡಲಾಗಿದೆ. ವಲಸೆ ಜನವಸತಿ, ದೊಡ್ಡಿ, ಹಟ್ಟಿಗಳ ಜನರ ನಿಗಾವಹಿಸಿ ಜ್ವರ ಬಂದ ತಕ್ಷಣ ರಕ್ತಲೇಪನ ಹಾಗೂ ಖಚಿತ ಪಟ್ಟಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಕುಟುಂಬದ ಸದಸ್ಯರಲ್ಲಿ ಯಾರಿಗಾದರೂ ಜ್ವರ ಕಂಡುಬಂದಲ್ಲಿ ನಿರ್ಲಕ್ಷ್ಯ ಮಾಡದೆ ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಸಹಕಾರವಾಗುವುದು ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಅಮರೇಶ ಪಾಟೀಲ್, ಆಡಳಿತ ವೈದ್ಯಾಧಿಕಾರಿ ಡಾ.ಹನಮಂತರಾಯ ತಳ್ಳಳ್ಳಿ, ವೈದ್ಯಾಧಿಕಾರಿ ಡಾ.ರಾಜೇಶ್ವರಿ ಮುಖಂಡರಾದ ಆದೇಶ್ ಪೀರಸಾಬ್, ಬಸವರಾಜ್, ಹನುಮಂತ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್ ಜೋಶಿ, ಆರೋಗ್ಯ, ನಿರೀಕ್ಷಣಾಧಿಕಾರಿ ಶಿವಕುಮಾರ, ಅಮರೇಶ, ಜಗದೀಶ್ ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದರು.

ಕೋಲಿ ಸಮಾಜಕ್ಕಿಲ್ಲ ರಾಜಕೀಯ ಪ್ರಾತಿನಿಧ್ಯ

ಸಂ.ಕ.ಸಮಾಚಾರ ಹುಮನಾಬಾದ್ : ಜನಸಂಖ್ಯೆ ಆಧರಿಸಿ, ಕೋಲಿ ಸಮಾಜಕ್ಕೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಯಾವ ರಾಜಕೀಯ ಪಕ್ಷಗಳು ಪ್ರಾತಿನಿಧ್ಯ ಕೊಟ್ಟಿಲ್ಲ ಎಂದು ಅಖಿಲ ಭಾರತ ಕೋಲಿ ಸಮಾಜದ ಕರ್ನಾಟಕ ರಾಜ್ಯಾಧ್ಯಕ್ಷ ದತ್ತಾತ್ರೇಯ್ ರೆಡ್ಡಿ ಅವರು ತಿಳಿಸಿದರು.

ನವದೆಹಲಿಯಲ್ಲಿ ಜೂನ್ 21ರಂದು ನಡೆಯಲಿರುವ ಕೋಲಿ ಸಮಾಜದ ರಾಷ್ಟ್ರ ಮಟ್ಟದ ಸಮಾವೇಶ ಪ್ರಯುಕ್ತ ಭಾನುವಾರದಂದು ನಗರದ ವಿವಿಐಪಿ ಗೆಸ್ಟ್ ಹೌಸ್‌ನಲ್ಲಿ ಸಂಯುಕ್ತ ಕರ್ನಾಟಕ ಪ್ರತಿನಿಧಿ ಜತೆ ಮಾತನಾಡಿ, ರಾಷ್ಟ್ರೀಯ ಸಮಾವೇಶದಲ್ಲಿ ಕನಿಷ್ಠ 50ಸಾವಿರಕ್ಕೂ ಅಧಿಕ ಜನ ಸೇರಿವ ನಿರೀಕ್ಷೆ ಇದೆ.

CITATION

IN THE COURT OF THE HON'BLE PRL DISTRICT AND SESSION JUDGE AT RAICHUR

I.P. NO. 1/2026

Between:
Velagala Adinarayana Reddy
Petitioiner
Represented by his SPA Holder V Veera Reddy And
Versus

1.Donthireddy Satyanarayan Reddy S/o Shivareddy Male, age: 65 years, Business, Ward No.5, Canal Road, Manvi, Taluq: Raichur, Dist karnataka state cell no 872221106

2. Smt. Bhagyamma W/o Hanumantha, Female, 29 years, Agriculure, R/o Mustur Village, Manvi Taluk, Raichur District: Cell.no. 8277591517.

3. Shri. Hanumantha S/o Sanna Peteppa, Male 35 years, Cultivation R/o mustur Village, Manvi Taluk, Raichur District, Cell no. 8197002800.
Respondent

Summons/ Notice to the Defendants No.1 to 3

Whereas, the Petitioner has instituted the above petition filed U/Sec.6(1 (b) and 9 of Provincial insolvency act against Respondent No. 1 to 3.

Therefore, you all are hereby summoned to appear in this court of the Prl. District and Session Judge at Raichur, either in person or by Pleader on 12th June 2026. At 11:00 A.M. to answer the same failing which suit will be disposed of ex-parte.

Given under my hand and seal of the court on this 22/05/2026

Advocate for the petitioner
MALLIKARJUN METI RAICHUR

BY ORDER OF THE COURT
CHIEF ADMINISTRATIVE OFFICER
PRL DISTRICT AND SESSION JUDGE
AT RAICHUR


ಮುದಗಲ್ಲ ಸಮೀಪದ ವ್ಯಾಕರನಾಳ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಲಿಂಗಸಗೂರು ಶಾಸಕ ಮಾನಪ್ಪ ವಜ್ಜಲಗೆ ರವಿವಾರ ಗ್ರಾಮಸ್ಥರು ಮನವಿ ಸಲ್ಲಿಸಿ ಒತ್ತಾಯಿಸಿದರು.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಸಂ.ಕ. ಸಮಾಚಾರ, ಮುದಗಲ್ಲ : ಸಮೀಪದ ನಾಗಲಾಪೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವ್ಯಾಕರನಾಳ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಕೂಡಲೇ ಬಗೆಹರಿಸುವಂತೆ ಒತ್ತಾಯಿಸಿ ರವಿವಾರ ಲಿಂಗಸಗೂರು ಕ್ಷೇತ್ರದ ಶಾಸಕ ಮಾನಪ್ಪ ಡಿ.ವಜ್ಜಲ್‌ಗೆ ಮನವಿ ಮಾಡಿ ಗ್ರಾಮಸ್ಥರು ಒತ್ತಾಯಿಸಿದರು. ಕಳೆದ ವರ್ಷ ಗ್ರಾಮದ ಅಂಕಲಿಮಠಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗೆ ಹೊಂದಿಕೊಂಡು ಕೊರೆಸಲಾದ ಬೋರ್ ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ನೀರಿನ ತೊಂದರೆ ಅನುಭವಿಸುವಂತಾಗಿದ್ದು, ಕೂಡಲೇ ಸಮಸ್ಯೆ ಬಗೆಹರಿಸುವಂತೆ ಗ್ರಾಮಸ್ಥರು ಶಾಸಕರ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. ಕೂಡಲೇ ಅಧಿಕಾರಿಗಳಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಭರವಸೆಯನ್ನು ಶಾಸಕರು ನೀಡಿದರು. ಗ್ರಾಮದಲ್ಲಿ ಕುಡಿಯುವ ನೀರಿನಸಮಸ್ಯೆ ಬಿಗಡಾಯಿಸಿದ್ದು, ಅಧಿಕಾರಿಗಳಿಗೆ ಸೂಚಿಸಿ ಸಮಸ್ಯೆ ಬಗೆಹರಿಸಲು ಗ್ರಾಮಸ್ಥರು ಮನವಿ ಮಾಡಿದರು.

ಮುಖಂಡರಾದ ಗಿರಿಮಲ್ಲನಗೌಡರು, ಬಿಜೆಪಿ ತಾಲೂಕಾಧ್ಯಕ್ಷ ನಾಗಭೂಷಣ ಕೆ, ಕರಿಯಪ್ಪ ಯಾದವ್, ನಾಗರಾಜ ತಳವಾರ, ಚಂದಾವಲಿ ಸಾಬ್ ಮುದಗಲ್, ಲಿಂಗಣ್ಣ ದೇವಿಕೇರಿ, ಫಕೀರಪ್ಪ ಕುರಿ, ಗ್ರಾಮಸ್ಥರಾದ ಬಾಲಚಂದ್ರ ಕಂದಗಲ್, ನಬೀಸಾಬ್, ಶಂಕ್ರಪ್ಪ ತುರುವಿಹಾಳ, ಬಸವರಾಜ ಮಡಿವಾಳರ ಸೇರಿದಂತೆ ಇತರರಿದ್ದರು.

ಶ್ರದ್ಧಾಂಜಲಿ ನುಡಿ ನಮನ ಕಾರ್ಯಕ್ರಮ

ಹಿರಿಯ ರೈತ ಹೋರಾಟಗಾರರು
ರಾಜ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ
ದಿವಂಗತ ಶ್ರೀ ಅಮರಣ್ಣ ವೀರಭದ್ರಪ್ಪ ಗುಡಿಹಾಳ
ನಾಲ್ಕು ದಶಕಗಳ ಕಾಲ ರೈತ ಯೋಗಿಯ ಹೋರಾಟದ ಬದುಕು
ರೈತ ಸಂಘದ ಧೀಮಂತ ಅಮರ ನಾಯಕನಿಗೆ
ಶ್ರದ್ಧಾಂಜಲಿ ನುಡಿ ನಮನ ಕಾರ್ಯಕ್ರಮ.
ದಿನಾಂಕ 4. 5.2026 ಸೋಮವಾರ ಬೆಳಗ್ಗೆ 10 ಗಂಟೆಗೆ
ಸ್ಥಳ ಗುಡಿಹಾಳ ತಾಲೂಕು ಮಸ್ಕಿ ಜಿಲ್ಲಾ ರಾಯಚೂರು.
ಲಿಂಗಸುಗೂರು ಮತ್ತು ಮಸ್ಕಿ ತಾಲೂಕಿನ ಸಮಸ್ತ ರೈತ ಬಾಂಧವರು ಮುಖಂಡರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗುಡಿಹಾಳ ಗ್ರಾಮದ ಗುರು ಹಿರಿಯರು ಬಂದು ಮಿತ್ರರು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಮಕ್ಕಳಾದ ರುದ್ರೇಶ ಅಂಕಸದಡ್ಡಿ, ಪಂಪಾಪತಿ ಅಂಕಸದಡ್ಡಿ, ಈರಣ್ಣ ಅಂಕಸದಡ್ಡಿ, ಅಮರ ಗುಂಡಪ್ಪ ಅಂಕಸದಡ್ಡಿ

ಸಿಂಧೂರ

ನಿಮ್ಮ ಮನೆ ಮಗಳು

ಸಾಧನೆ | ಸಂಸ್ಕೃತಿ | ಸಂಸ್ಕಾರ | ಅಧ್ಯಾತ್ಮ | ಆರೋಗ್ಯ | ವಿಕಸನದ ಅನಾವರಣ

ರೈತ ಮಹಿಳೆಯರ ಕನಸಿನಕೂಸು ರೋಣ ಎಂಕೆಪಿಸಿ

ಒಂದು ಕಾಲದಲ್ಲಿ ಮನೆಯ ಅಂಗಳಕ್ಕೆ ಸೀಮಿತರಾಗಿದ್ದ ಗ್ರಾಮೀಣ ಮಹಿಳೆಯರು ಇಂದು ತಮ್ಮದೇ ಆದ ಆರ್ಥಿಕ ಗುರುತನ್ನು ಕಟ್ಟಿಕೊಳ್ಳುತ್ತಿರುವುದು ರೋಣ ತಾಲ್ಲೂಕಿನ ಯಶೋಗಾಥೆಯಾಗಿದೆ. ಮಹಿಳಾ ರೈತ ಉತ್ಪಾದಕ ಕಂಪನಿ ರೂಪದಲ್ಲಿ ಆರಂಭವಾದ ಈ ಪ್ರಯತ್ನ, ಈಗ ಸಾವಿರಾರು ಮಹಿಳೆಯರ ಬದುಕಿನಲ್ಲಿ ಹೊಸ ಬೆಳಕು ತುಂಬುತ್ತಿದೆ.

ಗ್ರಾಮೀಣ ಭಾಗದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿ ಜೀವನ ಕಟ್ಟಿಕೊಳ್ಳುವ ದಿಸೆಯಲ್ಲಿ ರೋಣ ತಾಲ್ಲೂಕಿನಲ್ಲಿ ಆರಂಭಗೊಂಡಿರುವ ಮಹಿಳಾ ರೈತ ಉತ್ಪಾದಕ ಕಂಪನಿಗಳು ಮಹತ್ವದ ಸಾಧನೆ ಮಾಡುತ್ತಿವೆ. ಮಹಿಳೆಯರನ್ನು ಸಂಘಟಿಸಿ ಉದ್ಯಮಶೀಲತೆಯ ಕಡೆಗೆ ಕರೆತರುವ ಉದ್ದೇಶದಿಂದ ಸ್ಥಾಪಿಸಲಾದ ಈ ಕಂಪನಿಗಳು ಗ್ರಾಮೀಣ ಆರ್ಥಿಕತೆಗೆ ಹೊಸ ಚೈತನ್ಯ ತುಂಬುತ್ತಿವೆ.

ಸಾಮಾನ್ಯವಾಗಿ ಕೃಷಿಯಲ್ಲಿ ಶ್ರಮಿಸುತ್ತಿದ್ದರೂ, ಆರ್ಥಿಕ ನಿರ್ಧಾರಗಳಲ್ಲಿ ಹಿಂದೆ ಉಳಿದಿದ್ದ ಮಹಿಳೆಯರು ಈಗ ತಮ್ಮದೇ ಸಂಸ್ಥೆಗಳನ್ನು ಸ್ಥಾಪಿಸಿ ವ್ಯವಹಾರ ನಡೆಸುತ್ತಿದ್ದಾರೆ. ಇದು ಕೇವಲ ಆದಾಯದ ಮೂಲವಲ್ಲ, ಆತ್ಮವಿಶ್ವಾಸ ಮತ್ತು ಗೌರವದ ಹೊಸ ಗುರುತಾಗಿದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಅಡಿಯಲ್ಲಿ ಆರಂಭವಾದ ಈ ಯೋಜನೆ, ರೋಣ ತಾಲ್ಲೂಕಿನಲ್ಲಿ ದೊಡ್ಡ ಚಳವಳಿಯ ರೂಪ ಪಡೆದಿದೆ. ಸುಮಾರು 1000 ಮಹಿಳೆಯರು ಸೇರಿ, ತಮ್ಮದೇ ಕಂಪನಿಯನ್ನು ನಿರ್ಮಿಸಿರುವುದು ಅವರ ಏಕತೆ ಮತ್ತು ಧೈರ್ಯದ ಸಂಕೇತವಾಗಿದೆ. ಪ್ರತಿ ಮಹಿಳೆಯೂ ಹೂಡಿಕೆದಾರಳಾಗಿದ್ದು, ತಮ್ಮ ಶ್ರಮ ಮತ್ತು ನಂಬಿಕೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡಿದ್ದಾರೆ.

ಈ ಹಿಂದೆ ಕೃಷಿ ಇಲಾಖೆಯ ಮೂಲಕ ಪುರುಷ ರೈತ ಉತ್ಪಾದಕ ಕಂಪನಿಗಳನ್ನು ಸ್ಥಾಪಿಸಲಾಗಿತ್ತು. ಅದೇ ಮಾದರಿಯನ್ನು ಇದೀಗ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಅಧೀನದಲ್ಲಿನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮೂಲಕ ಮಹಿಳಾ ವಲಯಕ್ಕೂ ವಿಸ್ತರಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಅಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಎರಡು ಮಹಿಳಾ ಉತ್ಪಾದಕ ಕಂಪನಿಗಳನ್ನು ಸ್ಥಾಪಿಸುವ ಯೋಜನೆ ಜಾರಿಯಲ್ಲಿದ್ದು, ಗದಗ ಜಿಲ್ಲೆಯಲ್ಲಿ ರೋಣ ಮತ್ತು ಗದಗ ತಾಲ್ಲೂಕುಗಳಲ್ಲಿ ಈ ಯೋಜನೆ ಯಶಸ್ವಿಯಾಗಿ ರೂಪುಗೊಂಡಿದೆ.

ರೋಣ ತಾಲ್ಲೂಕಿನಲ್ಲಿ 13 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಅಡಿಯಲ್ಲಿ ಸುಮಾರು 1000 ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರನ್ನು ಒಗ್ಗೂಡಿಸಿ ಕಂಪನಿ ಸ್ಥಾಪಿಸಲಾಗಿದೆ. ಪ್ರತಿ ಸದಸ್ಯರಿಂದ 1500 ರೂ. ಶೇರು ಮೊತ್ತ ಸಂಗ್ರಹಿಸಿ, ಒಟ್ಟು 15 ಲಕ್ಷ ರೂ. ಶೇರು ಬಂಡವಾಳದೊಂದಿಗೆ ಕಂಪನಿ ಕಾಯ್ದೆಯಡಿ ನೋಂದಾಯಿಸಲಾಗಿದೆ.

ಕಂಪನಿಯ ಸುಸೂತ್ರ ಕಾರ್ಯಾಚರಣೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ), ಅಕೌಂಟೆಂಟ್ ಮತ್ತು ಲೆಕ್ಕಿಗರನ್ನು ನೇಮಕ ಮಾಡಲಾಗಿದೆ. ಇವರಿಗೆ ಮೂರು ವರ್ಷಗಳ ವೇತನ ಸೇರಿದಂತೆ 39 ಲಕ್ಷ ರೂ. ಕಾರ್ಯನಿಧಿಯನ್ನು ಎನ್‌ಆರ್‌ಎಲ್‌ಎಂ ವತಿಯಿಂದ ಒದಗಿಸಲಾಗಿದೆ. ಕಂಪನಿಯ ಮೂಲಕ ರಸಗೊಬ್ಬರ, ಕೀಟನಾಶಕ ಮತ್ತು ಬಿತ್ತನೆ ಬೀಜಗಳ ಮಾರಾಟ ನಡೆಯುತ್ತಿದ್ದು, ರೈತರಿಗೆ ಅಗತ್ಯವಾದ ತಾಂತ್ರಿಕ ತರಬೇತಿಗಳನ್ನೂ ನೀಡಲಾಗುತ್ತಿದೆ.

ಕಂಪನಿಯ ನಿರ್ವಹಣೆಗೆ ಶೇರು ಬಂಡವಾಳ ಹೂಡಿದ ಮಹಿಳೆಯರಲ್ಲಿಂದ 11 ನಿರ್ದೇಶಕರನ್ನು ಆಯ್ಕೆ ಮಾಡಲಾಗಿದ್ದು, ಸಿಇಒ ಅವರ ಮಾರ್ಗದರ್ಶನದಲ್ಲಿ ವ್ಯವಹಾರ ನಡೆಸಲಾಗುತ್ತಿದೆ. ಲಾಭವನ್ನು ಕಂಪನಿಯಲ್ಲೇ ಉಳಿಸಿ ಮುಂದಿನ ವಿಸ್ತರಣೆಗೆ ಬಳಸಲಾಗುತ್ತಿದೆ.

ಈ ಕುರಿತು ರೋಣ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಅವರು ಮಾಹಿತಿ ನೀಡಿ, "ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯೋಗ ಸೃಷ್ಟಿ ದೃಷ್ಟಿಯಿಂದ ಮಹಿಳಾ ಉತ್ಪಾದಕ ಕಂಪನಿಯನ್ನು ಇನ್ನಷ್ಟು ಬಲಪಡಿಸಲು ಕಾರ್ಯಯೋಜನೆ ರೂಪಿಸಲಾಗಿದೆ" ಎಂದು ತಿಳಿಸಿದ್ದಾರೆ.

ರೋಣ ಸಂಜೀವಿನಿ ಮಹಿಳಾ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್‌ನ ನಿರ್ದೇಶಕಿ ಪುಷ್ಪಾವತಿ ವಜ್ಜಲಬಂಡಿ ಅವರು, "ಪ್ರಾರಂಭದಲ್ಲಿ ಮಹಿಳೆಯರನ್ನು ಸೇರಿಸಿ ಕಂಪನಿ ಆರಂಭಿಸುವಾಗ ಭಯವಿತ್ತು. ಆದರೆ ಇಲಾಖೆಯ ಬೆಂಬಲದಿಂದ ಇಂದು ನಾವು ಸ್ವತಂತ್ರವಾಗಿ ವ್ಯವಹಾರ ನಡೆಸುವ ಮಟ್ಟಕ್ಕೆ ಬೆಳೆದಿದ್ದೇವೆ. ಇದು ನಮಗೆ ಹೆಮ್ಮೆ" ಎಂದು ತಿಳಿಸಿದರು.

ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣದ ದಿಕ್ಕಿನಲ್ಲಿ ರೋಣ ಮಾದರಿ ಒಂದು ಪ್ರೇರಣಾದಾಯಕ ಉದಾಹರಣೆಯಾಗಿ ಹೊರಹೊಮ್ಮಿದೆ.

▪ ಗುರುಬಸಪ್ಪ ವೀರಾಪುರ, ರೋಣ

ಹಳ್ಳಿ ರುಚಿ

ಪ್ರಸ್ತುತ ಕಂಪನಿ 'ಹಳ್ಳಿ ರುಚಿ' ಶುದ್ಧಗಾಣದ ಎಣ್ಣೆ, ಗದಗಿನ ಖಾರದ ಪುಡಿ ಪ್ಯಾಕೆಟ್‌ಗಳ ಮಾರಾಟದ ಜೊತೆಗೆ, ಸ್ವಸಹಾಯ ಸಂಘದ ಮಹಿಳೆಯರು ಬೆಳೆಸುವ ಗುಲಾಬಿ ಹೂಗಳಿಂದ ಬುಕೆ ತಯಾರಿಸಿ ವ್ಯಾಪಾರ ಮಾಡುತ್ತಿದೆ. ವಾರ್ಷಿಕವಾಗಿ ಸುಮಾರು 12 ಲಕ್ಷ ರೂ. ವ್ಯವಹಾರ ನಡೆಸಿರುವುದು ಗಮನಾರ್ಹವಾಗಿದೆ. ಇದಲ್ಲದೆ, ಆರ್‌ಸೆಟಿ ತರಬೇತಿ ಕೇಂದ್ರದ ಮೂಲಕ ಶೇರುದಾರ ಮಹಿಳೆಯರಿಗೆ ತಾಂತ್ರಿಕ ತರಬೇತಿ ಗಳನ್ನು ನೀಡಲಾಗುತ್ತಿದ್ದು, ರೋಣ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ಸಾರ್ವಜನಿಕರು ಕಂಪನಿಯೊಂದಿಗೆ ವ್ಯವಹಾರ ನಡೆಸಬಹುದಾಗಿದೆ.

ಹಿರಿಯ ಕಲಾವಿದೆಯ ಬಹುಮುಖ ಪ್ರತಿಭೆ

ಭಾರತ ದೇಶ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ತವರು. ಇಲ್ಲಿನ ಗ್ರಾಮೀಣ ಸೊಗಡನ್ನು ಜೀವಂತವಾಗಿರಿಸಿರುವ ಅಸಂಖ್ಯಾತ ರತ್ನಗಳಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಯಲವಧಾಳ (ತಾವರಗೇರಿ) ಗ್ರಾಮದ ನೀಲವ್ವ ಮಹಾದೇವಪ್ಪ ಮುತ್ತಿಗಿ ಒಬ್ಬರು. 90 ವರ್ಷದ ಈ ಹಿರಿಯ ಜೀವ ಜಾನಪದ ಕಲೆಯ ದೀವಿಗೆಯನ್ನು ಇಂದಿಗೂ ಬೆಳಗುತ್ತಾ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದಾರೆ.

ನೀಲವ್ವನವರು ಕೇವಲ ಒಬ್ಬ ಗಾಯಕಿಯಲ್ಲ; ಅವರು ಬಹುಮುಖ ಪ್ರತಿಭೆಯುಳ್ಳ ಕಲಾಕಾರ್ತಿ. ನಮ್ಮ ಗ್ರಾಮೀಣ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ದೊಡ್ಡಾಟ, ಯಕ್ಷಗಾನ, ಕರಡಿ ಮೇಳ, ಕೋಲಾಟಗಳಂತಹ ಕಲೆಗಳ ನಡುವೆ ಬೆಳೆದ ಇವರು, ಹಗ್ಗ, ಕಣ್ಣಿ, ಮುಖವಾಡ, ಕವಣಿ, ಹಣೆಪಟ್ಟು ಹಾಗೂ ಎತ್ತಿನ ಸುಂದರ ಜೂಲಗಳನ್ನು ತಯಾರಿಸುವ ಕಲೆಗಾರಿಕೆಯಲ್ಲಿ ಸಿದ್ಧಹಸ್ತರು.

ಕಸದಲ್ಲಿ ರಸ ತೆಗೆಯುವ 'ಕೌದಿ'

ನೀಲವ್ವನವರ ಕೈಚಳಕದ ಮತ್ತೊಂದು ಅದ್ಭುತವೆಂದರೆ ಕೌದಿ ಹೊಲಿಯುವ ಕಲೆ. ಹಳೆಯ ಹರಿದ ಬಟ್ಟೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಅವುಗಳಿಗೆ ಹೊಸ ರೂಪ ನೀಡಿ ಸುಂದರವಾದ ಕೌದಿಗಳನ್ನು ಇವರು ತಯಾರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ದೃಷ್ಟಿ ಮಂದವಾಗಿದ್ದರೂ, ಮೊಮ್ಮಗಳು ಗಾಯತ್ರಿಯ ಸಹಾಯದಿಂದ ಸೂಜಿಗೆ ದಾರ ಪೋಣಿಸಿಕೊಂಡು 4 ಮೊಳ ಹಾಗೂ 6 ಮೊಳದ ಕೌದಿಗಳನ್ನು ಸಿದ್ಧಪಡಿಸುತ್ತಾರೆ.

ತಾವು ಹೊಲಿದ ಕೌದಿಗಳನ್ನು ಆಸೆ ಪಟ್ಟು ಬಂದವರಿಗೆ ಪ್ರೀತಿಯಿಂದ ಉಡುಗೊರೆಯಾಗಿ ನೀಡುವ ಇವರ ಔದಾರ್ಯ ದೊಡ್ಡದು. ಒಮ್ಮೆ ಇವರ ಅಭಿಮಾನಿಯೊಬ್ಬರು ಹಣ ನೀಡಲು ಮುಂದಾದಾಗ, ಅದನ್ನು ಪ್ರೀತಿಯಿಂದ ನಿರಾಕರಿಸಿದ ಇವರ ಸಾತ್ವಿಕ ಗುಣ ಎಲ್ಲರಿಗೂ ಸ್ಫೂರ್ತಿ.

ಸಾವಿರ ಹಾಡುಗಳ ಸರದಾರಿಣಿ

ಸಂಪ್ರದಾಯದ ಪದಗಳು, ಸೋಬಾನೆ ಪದ, ಲಗ್ನದ ಪದ, ಬೀಸುಕಲ್ಲಿನ ಪದ ಹಾಗೂ ಜೋಗುಳ ಪದಗಳ ಭಂಡಾರವೇ ಇವರಲ್ಲಿದೆ. ಇವರು ಬೀರವಳ್ಳಿ ಹಾಗೂ ಕಲ್ಮೇಶ್ವರ ದೇವರ ಹಾಡುಗಳನ್ನು ರಾಗಬದ್ಧವಾಗಿ ಹಾಡತೊಡಗಿದರೆ ಎಂತಹ ಜನದಟ್ಟಣೆ ಇದ್ದರೂ ಮೌನವಾಗಿ ಆಲಿಸುತ್ತದೆ.

75ನೇ ವಯಸ್ಸಿನಲ್ಲಿ ಕಾಶಿ, ರಾಮೇಶ್ವರ, ದಿಲ್ಲಿ, ಕನ್ಯಾಕುಮಾರಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದ ಇವರು, ಆ ಸ್ಥಳಗಳ ಮಹಿಮೆಯ ಕುರಿತು ತಾವೇ ಹೊಸ ಹಾಡುಗಳನ್ನು ಕಟ್ಟಿ ಹಾಡಿದ್ದಾರೆ. ಈ ಕಲೆ ಅಳಿಯಬಾರದೆಂಬ ಉದ್ದೇಶದಿಂದ ಯುವತಿಯರಿಗೆ ತರಬೇತಿ ನೀಡುತ್ತಾ, ತಪ್ಪಿದಾಗ ತಿದ್ದಿ ತೀಡಿ ನೈಜ ಕಲಾವಿದರನ್ನಾಗಿ ರೂಪಿಸುತ್ತಿದ್ದಾರೆ.

ಸಂಸ್ಕೃತಿಯ ರಾಯಭಾರಿ

ಹಸಿರು ಸೀರೆ, ಕೈಯಲ್ಲಿ ಹಸಿರು ಬಳೆ ಹಾಗೂ ಹಣೆ ಮೇಲೆ ಶುಭ್ರವಾದ ವಿಭೂತಿಯನ್ನು ಧರಿಸುವ ನೀಲವ್ವನವರು ಸಾಕ್ಷಾತ್ ಭಾರತೀಯ ಸಂಸ್ಕೃತಿಯ ಪ್ರತಿರೂಪದಂತೆ ಕಾಣುತ್ತಾರೆ. ಅವರ ಇಬ್ಬರು ಗಂಡು ಮಕ್ಕಳು, ನಾಲ್ವರು ಹೆಣ್ಣು ಮಕ್ಕಳು ಹಾಗೂ 12 ಜನ ಮೊಮ್ಮಕ್ಕಳ ತುಂಬು ಕುಟುಂಬದೊಂದಿಗೆ ಸುಖವಾಗಿದ್ದಾರೆ. ವಿಶೇಷವೆಂದರೆ, ಅವರ ಹಿರಿಯ ಸೊಸೆ ಪಾರ್ವತೆವ್ವ ಕೂಡ ಆಕಾಶವಾಣಿ ಕಲಾವಿದೆಯಾಗಿದ್ದು, ಅತ್ತೆಯ ಹಾದಿಯಲ್ಲೇ ಸಾಗುತ್ತಿರುವುದು ಹೆಮ್ಮೆಯ ವಿಷಯ.

ಸರಕಾರವು ನೀಲವ್ವನವರ ಸುದೀರ್ಘ ಕಲಾ ಸೇವೆಯನ್ನು ಗುರುತಿಸಿ ಕಲಾವಿದರ ಮಾಸಾಶನ ನೀಡುತ್ತಿರುವುದು ಶ್ಲಾಘನೀಯ. ತೆರೆಮರೆಯಲ್ಲಿರುವ ಇಂತಹ ಅಪ್ಪಟ ಜಾನಪದ ಕಲಾವಿದರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. 90ರ ಹರೆಯದ ಈ "ಚಿಗವ್ವ" ಇನ್ನೂ ನೂರಾರು ವರ್ಷ ಬಾಳಿ, ಸಾವಿರಾರು ಕಲಾವಿದರನ್ನು ಸೃಷ್ಟಿಸಲಿ ಎಂದು ಹಾರೈಸೋಣ.

▪ ಪ್ರೊ. ಕೆ. ಸಿ. ಮಲ್ಲಿಗವಾಡ
| (ಇತಿಹಾಸ ಸಂಶೋಧಕರು)

ಈಶಾನ್ಯ ಸಹೋದರಿಯ ಬಡಾ ಸಾಧನೆ

ಮೇಘಾಲಯದ ಪೂರ್ವ ಜೈಂತಿಯಾ ಹಿಲ್ಸ್ ಜಿಲ್ಲೆಯ ಒಂದು ಪುಟ್ಟ ಹಳ್ಳಿ ಟ್ಲುಹ್. ಈ ಹಳ್ಳಿಯ ಸಾಮಾನ್ಯ ಮಹಿಳೆ ಬಡಾಶಿಶಾ ದಖರ್. ಅವರ ಜೀವನ ಇಂದು ಅನೇಕ ಗ್ರಾಮೀಣ ಮಹಿಳೆಯರಿಗೆ ಮಾದರಿ. 2019 ರವರೆಗೆ ಸಾಮಾನ್ಯ ಗೃಹಿಣಿಯಂತೆ ಜೀವನ ನಡೆಸುತ್ತಿದ್ದ ಅವರು, ಸ್ವಸಹಾಯ ಗುಂಪಿಗೆ ಸೇರಿ ಬದುಕನ್ನೇ ಬದಲಿಸಿಕೊಂಡಿದ್ದು ಇಂದು ಇತಿಹಾಸ.

ಆರಂಭದಲ್ಲಿ ಅವರು ಸ್ವಸಹಾಯ ಗುಂಪಿಗೆ ಸೇರಿದ್ದು ಆರ್ಥಿಕ ಲಾಭಕ್ಕಾಗಿ ಅಲ್ಲ, ಬದಲಾಗಿ ಸಾಮಾಜಿಕವಾಗಿ ಇತರ ಮಹಿಳೆಯರೊಂದಿಗೆ ಬೆರೆತು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು. ಆದರೆ ಈ ವೇದಿಕೆಯೇ ಅವರ ಜೀವನದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಯಿತು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಮೂಲಕ ಅವರಿಗೆ ತರಬೇತಿ ಮತ್ತು ಸರ್ಕಾರಿ ಸೌಲಭ್ಯಗಳ ಅರಿವು ದೊರಕಿತು. 2020 ರಲ್ಲಿ ಆಹಾರ ಸಂಸ್ಕರಣೆಯ ಕುರಿತು ಪಡೆದ ತರಬೇತಿಯು ಅವರಲ್ಲಿ ಉದ್ಯಮಶೀಲತೆಯ ಚಿಂತನೆಗೆ ಕಾರಣವಾಯಿತು. ತಮ್ಮ ಪ್ರದೇಶದಲ್ಲಿ ಲಭ್ಯವಿರುವ ಅನಾನಸ್, ಕಿತ್ತಳೆ ಮುಂತಾದ ಹಣ್ಣುಗಳನ್ನು ಸಂಸ್ಕರಿಸಿ ಮೌಲ್ಯವರ್ಧನೆ ಮಾಡಿದರೆ ಹೆಚ್ಚಿನ ಆದಾಯ ಗಳಿಸಬಹುದು ಎಂಬುದನ್ನು ಅವರು ಅರಿತುಕೊಂಡರು.

ತಮ್ಮ ಕೌಶಲ್ಯವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಅವರು ಶಿಲ್ಲಾಂಗ್‌ನ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಹೆಚ್ಚಿನ ತರಬೇತಿ ಪಡೆದರು. ಇಲ್ಲಿ ಅವರು ಉತ್ಪಾದನೆ, ಪ್ಯಾಕೇಜಿಂಗ್, ಸ್ವಚ್ಛತೆ ಮತ್ತು ಮಾರುಕಟ್ಟೆ ಮಾನದಂಡಗಳ ಕುರಿತು ಆಳವಾದ ಜ್ಞಾನವನ್ನು ಗಳಿಸಿದರು. ಈ ಅನುಭವ ಅವರನ್ನು ಆತ್ಮವಿಶ್ವಾಸಿ ಉದ್ಯಮಿಯಾಗಿ ರೂಪಿಸಿತು.

2024 ರಲ್ಲಿ ಬ್ಯಾಂಕ್ ಲಿಂಕೇಜ್ ಯೋಜನೆಯ ಮೂಲಕ 5 ಲಕ್ಷ ರೂ. ಸಾಲ ಪಡೆದು, ತಮ್ಮ ಉಳಿತಾಯದೊಂದಿಗೆ ಉಂಪ್ಲೆಂಗ್‌ನಲ್ಲಿ ಜ್ಯೂಸ್ ಸಂಸ್ಕರಣಾ ಘಟಕವನ್ನು ಆರಂಭಿಸಿದರು. ಸ್ಥಳೀಯ ಹಣ್ಣುಗಳಿಂದ ಶುದ್ಧ ಹಣ್ಣಿನ ರಸವನ್ನು ತಯಾರಿಸಿ ಮಾರಾಟ ಮಾಡಲು ಆರಂಭಿಸಿದರು. ಅವರ ಉತ್ಪನ್ನಗಳ ಗುಣಮಟ್ಟವು ಬೇಗನೆ ಜನಪ್ರಿಯತೆಯನ್ನು ಗಳಿಸಿತು.

ಅವರ ಯಶಸ್ಸಿನ ಪ್ರಮುಖ ಘಟ್ಟವೆಂದರೆ 2024 ರಲ್ಲಿ ದೆಹಲಿಯ ದೆಹಲಿ ಹಾಟ್‌ನಲ್ಲಿ ನಡೆದ ಪೈನಾಪಲ್ ಫೆಸ್ಟಿವಲ್‌ನಲ್ಲಿ ಭಾಗವಹಿಸಿದ್ದು. ಈ ರಾಷ್ಟ್ರೀ ಮಟ್ಟದ ವೇದಿಕೆಯಲ್ಲಿ ಅವರ ಉತ್ಪನ್ನಗಳಿಗೆ ಉತ್ತಮ ಪ್ರತಿಕ್ರಿಯೆ ದೊರಕಿತು ಮತ್ತು ವ್ಯಾಪಕ ಪ್ರಚಾರವೂ ಸಿಕ್ಕಿತು.

ಇಂದು ಬಡಾಶಿಶಾ ದಖರ್ ಕೇವಲ ಉದ್ಯಮಿಯಲ್ಲ, ಉದ್ಯೋಗದಾತೆಯೂ ಆಗಿದ್ದಾರೆ. ಅವರ ಘಟಕದಲ್ಲಿ ಸುಮಾರು 20 ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರ ಉದ್ಯಮವು ವರ್ಷಕ್ಕೆ ಸುಮಾರು 15 ಲಕ್ಷ ರೂ. ಲಾಭ ಗಳಿಸುತ್ತಿದ್ದು, ಇದು ಒಂದು ದೊಡ್ಡ ಸಾಧನೆ. ಇದು ಅವರ ಆರ್ಥಿಕ ಸ್ವಾತಂತ್ರ್ಯವನ್ನು ಹೆಚ್ಚಿಸಿದ್ದು, ಸಮಾಜದಲ್ಲಿ ಗೌರವವನ್ನು ತಂದುಕೊಟ್ಟಿದೆ.

ಒಟ್ಟಾರೆ, ಬಡಾಶಿಶಾ ದಖರ್ ಅವರ ಪಯಣವು ಕನಸು, ಪರಿಶ್ರಮ ಮತ್ತು ಅವಕಾಶಗಳ ಸಮನ್ವಯದಿಂದ ಸಾಧನೆಯ ಶಿಖರವನ್ನು ಹೇಗೆ ತಲುಪಬಹುದು ಎಂಬುದಕ್ಕೆ ಜೀವಂತ ಉದಾಹರಣೆ. ಅವರ ಯಶಸ್ಸು ಭಾರತದ ಕೋಟ್ಯಂತರ ಗ್ರಾಮೀಣ ಮಹಿಳೆಯರಿಗೆ ಸ್ಫೂರ್ತಿಯಾಗಿದೆ.

▪ ಡಾ.ವಿಜಯಕುಮಾರ್ ಎಚ್. ಕೆ. | ರಾಯಚೂರು

ಎಚ್ಚರ! ಸನ್‌ಸ್ಟ್ರೋಕ್‌ಗೆ ಬಲಿಯಾದೀರಿ...?

ಹೆಲ್ತ್ ಕಾರ್ನರ್

ಈ ವರ್ಷದ ಬಿಸಿಲು ಬೆಂಕಿಯಾಗಿದೆ. ತಾಪದ ಬಿಸಿ ಎಲ್ಲರಿಗೂ ತಟ್ಟುತ್ತಿದೆ. ಈ ವಿಪರೀತ ಬಿಸಿಲಿನ ಕಾರಣದಿಂದ ದೇಹಕ್ಕೆ ಉಂಟಾಗುವ ಆಘಾತವನ್ನು 'ಸನ್ ಸ್ಟ್ರೋಕ್' ಎನ್ನುತ್ತಾರೆ. ಬಿಸಿಲಿನ ತಾಪಕ್ಕೆ ಬಳಲಿ ಬೆಂಡಾಗಿ, ಬಸವಳಿದು ಬಿದ್ದವರ ಸುದ್ದಿಗಳನ್ನು ಕೇಳಿರುತ್ತವೆ. ಅಪರೂಪಕ್ಕೆ ಬಿಸಿಲಿನ ಆಘಾತಕ್ಕೆ ಸತ್ತವರ ಸುದ್ದಿಗಳೂ ವರದಿಯಾಗುತ್ತವೆ.

ತಲೆಯಲ್ಲಿರುವ ಉಷ್ಣಾಂಶವನ್ನು ಹೈಪೋಥಲಮಸ್‌ದ ಮುಂಭಾಗದಲ್ಲಿರುವ ಕೇಂದ್ರ ಉಷ್ಣಾಂಶ ಹೆಚ್ಚಾದಾಗ ಪ್ರಚೋದನೆಗೊಂಡು, ಉಷ್ಣಾಂಶ ನಿಯಂತ್ರಣಕ್ಕೆ ಅವಶ್ಯವಿರುವ ಕಾರ್ಯಕಲಾಪಗಳನ್ನು ಚಲಾವಣೆಗೆ ತರುತ್ತದೆ. ಚರ್ಮಕ್ಕೆ ಮೊದಲು ಬಿಸಿ ತಟ್ಟುತ್ತದೆ. ಅದರಲ್ಲಿಯ ಉಷ್ಣ ಗ್ರಹಿಕೆಗಳು ಚುರುಕಾಗುತ್ತವೆ. ನರಗಳ ಮೂಲಕ ಸಂದೇಶವನ್ನು ಉಷ್ಣಾಂಶ ನಿಯಂತ್ರಣ ಕೇಂದ್ರಕ್ಕೆ ರವಾನಿಸುತ್ತವೆ. ಪ್ರತಿಫಲವಾಗಿ ಅದು ರಕ್ತ ಸಂಚಾರ ಹೆಚ್ಚಿಸಿ, ಶರೀರಾದ್ಯಂತ ಬೆವರು ಗ್ರಂಥಿಗಳಿಂದ ಜಾಸ್ತಿ ಬೆವರು ಹೊರ ಸೂಸುವಂತೆ ಮಾಡುತ್ತದೆ. ಒಮ್ಮೆ ಶರೀರ ಬೆವರಿದರೆ ಉಷ್ಣಾಂಶ ಕಡಿಮೆಯಾಗುತ್ತದೆ.



ಬೇಸಿಗೆಯಲ್ಲಿ ನಾವು ಬಿಸಿಲಿನ ಬಳಲಿಕೆ, ಸೂರ್ಯಾಘಾತ, ಉಷ್ಣಾಘಾತಗಳಿಂದ ರಕ್ಷಿಸಿಕೊಳ್ಳಬೇಕು. ಅಲಕ್ಷ್ಯ ಅನಾಹುತಗಳಿಗೆ ಆಹ್ವಾನ ನೀಡುವುದು. ಸಾವು – ನೋವುಗಳನ್ನು ಸ್ವಾಗತಿಸುವುದು.

ಸೂರ್ಯಾಘಾತ ಮತ್ತು ಉಷ್ಣಾಘಾತ

ಸೂರ್ಯನ ಪ್ರಖರ ಕಿರಣಗಳಿಗೆ ದೀರ್ಘ ಕಾಲದವರೆಗೆ ಮೈಯೊಡ್ಡುವುದರಿಂದ ಸೂರ್ಯಾಘಾತ ಸಂಭವಿಸುವುದು.ಸುತ್ತುವರಿದ ಅತ್ಯಂತ ಉಷ್ಣ ವಾತಾವರಣದ ಕೋಣೆಯಲ್ಲಿ ಕೆಲಸ ಮಾಡುವವರಿಗೆ ಉಷ್ಣಾಘಾತ ಹೆಡಮುರಿಗೆ ಹಾಕುವುದು.

ಸೂರ್ಯಾಘಾತದ ಲಕ್ಷಣಗಳು....

ಸಿಡಿಯುವಂಥ ತಲೆನೋವಿನೊಂದಿಗೆ ವಿಪರೀತ ಜ್ವರ ಸೂರ್ಯಾಘಾತದ ಮುಖ್ಯ ಲಕ್ಷಣ. ತಲೆ ಸುತ್ತಬಹುದು. ಸುಸ್ತು, ವಾಕರಿಕೆ, ವಾಂತಿ ಆಗಬಹುದು. ದೌರ್ಬಲ್ಯ, ಸ್ನಾಯು ಸೆಳೆತ ಮತ್ತು ಸ್ನಾಯುಗಳಲ್ಲಿ ನೋವು ಕಂಡುಬರುವುದು. ರಕ್ತದ ಒತ್ತಡ ಕಡಿಮೆಯಾಗುವುದು. ಭ್ರಮೆ, ಗೊಂದಲ, ಗಡಿಬಿಡಿ, ತಳಮಳ, ದಿಗ್ಭ್ರಮೆ, ಚಿತ್ರ ವಿಚಿತ್ರ ನಡವಳಿಕೆಗಳು ಕಂಡು ಬರಬಹುದು.

ಚರ್ಮವು ಬಿಸಿಯಾಗಿದ್ದು, ಒಣಗುವುದು. ಮುಖ ಕೆಂಪಗಾಗಬಹುದು. ಇಷ್ಟಾದರೂ ಮೈ ಬೆವರುವುದಿಲ್ಲ. ಹೊಟ್ಟೆಯಲ್ಲಿ ಕಿಚ್ಚು ತುಂಬಿದಷ್ಟು ಸಂಕಟ ಸುರಿಯುವುದು. ಚಡಪಡಿಸಿ ಒಮ್ಮಿಂದೊಮ್ಮೆಲೆ ಪ್ರಜ್ಞಾಹೀನರಾಗಬಹುದು. ನಾಡಿ ಬಡಿತ ತ್ವರಿತಗೊಳ್ಳುವುದು. ಜ್ವರ 108 ಡಿಗ್ರಿ ಫೆರನ್‌ಹೀಟ್ ಅಥವಾ ಅದಕ್ಕಿಂತ ಅಧಿಕವಾಗಬಹುದು. ಜ್ವರದ ಹೆಚ್ಚಳದಿಂದ ತುಂಬಲಾರದ ಹಾನಿಯಾಗಬಹುದು. ಚಿಕಿತ್ಸೆಯಿಂದ ವಂಚಿತರಾದಲ್ಲಿ ಮೃತ್ಯುವಿನ ಬಾಹುಬಂಧನದಲ್ಲಿ ತತ್ತರಿಸಿ ಕೆಲ ನಿಮಿಷಗಳಲ್ಲಿ ಅಸುನೀಗಬಹುದು.

ಪ್ರಥಮೋಪಚಾರ

ಜ್ವರ ಒಂದೇ ಸವನೆ ಹೆಚ್ಚಾಗುವಾಗ ವೈದ್ಯರನ್ನು ಕರೆ ತರಲು ಆತುರ ಪಡದೆ ಪ್ರಥಮೋಪಚಾರ ನೀಡುವುದು ಅತ್ಯಂತ ಪ್ರಮುಖವಾದದ್ದು. ರೋಗಿಯನ್ನು ಮಲಗಿಸಿ ಹಣೆಯ ಮೇಲೆ ತಣ್ಣೀರು ಪಟ್ಟಿ ಹಾಕಬೇಕು. ಮೈಯನ್ನು ಒದ್ದೆ ಅರಿವೆಯಿಂದ ಒರೆಸಬೇಕು. ಒದ್ದೆ ಬಟ್ಟೆಗಳನ್ನು ತೊಡಿಸಬೇಕು. ಬರ್ಫದ ತುಂಡುಗಳನ್ನು ಬಟ್ಟೆಯಲ್ಲಿ ಸುತ್ತಿ ತಲೆ, ಕುತ್ತಿಗೆ ಮತ್ತು ಶರೀರದ ಸುತ್ತ ಇಡಬೇಕು. ರೋಗಿಯ ಸುತ್ತಮುತ್ತ ಜನರು ಮುತ್ತುವುದನ್ನು ತಪ್ಪಿಸಿ, ಸಾಕಷ್ಟು ಗಾಳಿ ಆಡುವಂತೆ ಮಾಡಬೇಕು. ಫ್ಯಾನು (ಇದ್ದರೆ) ಹಾಕಬೇಕು. ರೋಗಿಯ ಕೈಕಾಲುಗಳನ್ನು ಉಜ್ಜಿ ರಕ್ತ ಸಂಚಾರವಾಗುವಂತೆ ಮಾಡಬೇಕು. ರೋಗಿಗೆ ಪ್ರಜ್ಞೆ ಬಂದ ಮೇಲೆ ತಂಪಾದ ಪಾನೀಯವನ್ನು ಕುಡಿಸಬೇಕು.

ಮುಂಜಾಗ್ರತಾ ಕ್ರಮಗಳು

- ಬೇಸಿಗೆಯ ಬಿಸಿಲಿನಲ್ಲಿ ಅನಾವಶ್ಯಕ ಅಡ್ಡಾಡದಿರುವುದು ಕ್ಷೇಮಕರ.
- ತಲೆಗೆ ಟೋಪಿ ಇಲ್ಲವೆ ಹ್ಯಾಟನ್ನು ಹಾಕಿ ಬಿಸಿಲಿನ ರಕ್ಷಣೆ ಪಡೆಯಬೇಕು. ಛತ್ರಿಯನ್ನು ಬಳಸಬಹುದು.
- ಬಿಸಿಲಲ್ಲಿ ಎಂದೂ ದಣಿವಾಗುವಂತಹ ವ್ಯಾಯಾಮ ಮಾಡಬಾರದು. ಯಥೇಚ್ಛ ಭೋಜನ, ಮದ್ಯಪಾನ ಮಾಡುವುದು ಒಳ್ಳೆಯದಲ್ಲ.
- ಬೇಸಿಗೆಯ ಬಿಸಿಲಲ್ಲಿ ಮನೆ ಬಿಟ್ಟು ಹೊರಗೆ ಹೋಗುವ ಪೂರ್ವದಲ್ಲಿ ಮತ್ತು ಹೋಗಬೇಕಾದ ಸ್ಥಳಕ್ಕೆ ಹೋಗಿ ಮುಟ್ಟಿದ ನಂತರ ಸಾಕಷ್ಟು ನೀರು ಕುಡಿಯಬೇಕು. ನೈಸರ್ಗಿಕ ಪೇಯಗಳನ್ನು, ಎಳನೀರು, ಲಸ್ಸಿ, ಮಜ್ಜಿಗೆ ಸೇವಿಸಬೇಕು. ಲಿಂಬೆಹಣ್ಣಿನ ಪಾನಕ, ಹಣ್ಣಿನರಸ ಸೇವಿಸಬೇಕು.
- ಬೇಸಿಗೆಯ ಕಾಲದಲ್ಲಿ ಸಡಿಲಾದ, ಬಿಳಿ ಬಣ್ಣದ ಹತ್ತಿ ಬಟ್ಟೆ ಧರಿಸುವುದು ಒಳ್ಳೆಯದು. ಗಾಢ ಬಣ್ಣದ ಮತ್ತು ಕಪ್ಪು ಬಟ್ಟೆಗಳನ್ನು ಬಳಸದಿರುವುದು ಸೂಕ್ತ.
- ವಿಪರೀತ ಬಿಸಿಲು ಇರುವ ಸಮಯದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರ ವರೆಗೆ ಬಿಸಿಲಲ್ಲಿ ಕೆಲಸ ಮಾಡಬಾರದು.
- ಕ್ಷಣಾ ಸಾಧನಗಳನ್ನು ಬಳಸದೇ ಬಿಸಿಲಲ್ಲಿ ತಿರುಗಾಡುವುದೆಂದರೆ ಬಿಸಿಲಿನಿಂದಾಗುವ ದುಷ್ಪರಿಣಾಮ ಗಳನ್ನು ಆದರದಿಂದ ಸ್ವಾಗತಿಸಿದಂತೆ.

▪ ಡಾ.ಕರವೀರಪ್ರಭು ಕ್ಯಾಲಕೊಂಡ
| ಬಾದಾಮಿ

ಜಾಗತಿಕ ರನ್‌ವೇನಲ್ಲಿ ಭಾರತೀಯ ಬಾಂಧಿನಿ - ಕೊಲ್ಹಾಪುರಿ ಚಪ್ಪಲಿ

ಕಲೆಯೋ.. ಸಾಂಸ್ಕೃತಿಕ ಅತಿಕ್ರಮಣವೋ?

ಫ್ಯಾಷನ್ ದುನಿಯಾ

ಫ್ಯಾಷನ್ ಲೋಕದ ದಿಗ್ಗಜ ಬ್ರ್ಯಾಂಡ್ ರಾಲ್ಫ್ ಲಾರೆನ್ ಇತ್ತೀಚೆಗೆ ತನ್ನ ಹೊಸ ಕಲೆಕ್ಷನ್ ಮೂಲಕ ಸುದ್ದಿಯಲ್ಲಿದೆ. ಆದರೆ ಈ ಬಾರಿ ಅದು ತನ್ನ ವಿನ್ಯಾಸದ ಸೊಬಗಿಗಿಂತ ಹೆಚ್ಚಾಗಿ, ಸೃಷ್ಟಿಸಿರುವ ವಿವಾದದಿಂದಾಗಿ ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಭಾರತದ ಪುರಾತನ ಕಲೆಯಾದ 'ಬಾಂಧಿನಿ' ಶೈಲಿಯನ್ನು ಬಳಸಿಕೊಂಡು ವಿನ್ಯಾಸಗೊಳಿಸಿದ ಒಂದು ಸ್ಕರ್ಟ್ ಈಗ 'ಸಾಂಸ್ಕೃತಿಕ ಅತಿಕ್ರಮಣ'ದ ದೊಡ್ಡ ಚರ್ಚೆಯನ್ನು ಹುಟ್ಟುಹಾಕಿದೆ.

ಏನಿದು ವಿವಾದ?

ಇತ್ತೀಚೆಗೆ ರಾಲ್ಫ್ ಲಾರೆನ್ ತನ್ನ ವೆಬ್‌ಸೈಟ್‌ನಲ್ಲಿ 'ಪ್ರಿಂಟೆಡ್ ಕಾಟನ್ ರ್‍ಯಾಪ್ ಸ್ಕರ್ಟ್' ಎಂಬ ಉಡುಪನ್ನು ಬಿಡುಗಡೆ ಮಾಡಿತು.

ಕೆಂಪು ಬಣ್ಣದ ಈ ಸ್ಕರ್ಟ್ ಮೇಲೆ ಬಿಳಿ ಬಣ್ಣದ ಚುಕ್ಕೆಗಳಿರುವ ಬಾಂಧಿನಿ ವಿನ್ಯಾಸವಿತ್ತು. ಹುಬ್ಬಳ್ಳಿಯ ಮಾರುಕಟ್ಟೆಯಲ್ಲೋ ಅಥವಾ ರಾಜಸ್ಥಾನದ ಬೀದಿಗಳಲ್ಲೋ ಸಿಗುವ ಸಾಮಾನ್ಯ ಲಂಗದಂತೆ ಕಂಡ ಈ ಉಡುಪಿನ ಬೆಲೆ ಕೇಳಿ ಜನ ಬೆಚ್ಚಿಬಿದ್ದಿದ್ದಾರೆ. ಇದರ ಬೆಲೆ ಬರೋಬ್ಬರಿ 44,000 ರೂ...!!

ಕೇವಲ ಬೆಲೆ ಮಾತ್ರವಲ್ಲದೆ, ಈ ಉಡುಪನ್ನು ತಯಾರಿಸಲು ಬಳಸಿದ ತಂತ್ರಜ್ಞಾನ ಮತ್ತು ಅದಕ್ಕೆ ನೀಡಿದ ವಿವರಣೆ ಕೂಡ ವಿವಾದಕ್ಕೆ ಕಾರಣವಾಗಿದೆ.

ಕುಶಲಕರ್ಮಿಗಳ ಶ್ರಮ ವರ್ಸಸ್ ಬ್ರ್ಯಾಂಡ್ ಪವರ್

ನಿಜವಾದ ಬಾಂಧಿನಿ ಎಂಬುದು ಒಂದು ತಪಸ್ಸು. ಬಟ್ಟೆಯನ್ನು ನೂರಾರು ಸಣ್ಣ ಸಣ್ಣ ಗಂಟುಗಳಾಗಿ ಕಟ್ಟಿ, ಬಣ್ಣ ಹಾಕಿ, ನಂತರ ಬಿಡಿಸಿದಾಗ ಮೂಡುವ ವಿನ್ಯಾಸವದು. ಆದರೆ ರಾಲ್ಫ್ ಲಾರೆನ್ ಮಾರಾಟ ಮಾಡುತ್ತಿರುವ ಸ್ಕರ್ಟ್‌ನಲ್ಲಿ ಈ ನೈಜ ಶ್ರಮವಿಲ್ಲ; ಅದು ಕೇವಲ ಕಂಪ್ಯೂಟರ್ ಜನಿತ 'ಮಷಿನ್ ಪ್ರಿಂಟ್'.

ವಿಷಾದದ ಸಂಗತಿಯೆಂದರೆ, ಬ್ರ್ಯಾಂಡ್ ಈ ವಿನ್ಯಾಸವನ್ನು ಮಾರಾಟ ಮಾಡುವಾಗ ಎಲ್ಲಿಯೂ 'ಭಾರತ' ಅಥವಾ ಈ ಕಲೆಯ ಮೂಲವಾದ ಕುಶಲಕರ್ಮಿಗಳ ಬಗ್ಗೆ ಉಲ್ಲೇಖಿಸಿಲ್ಲ. ಇದನ್ನು ನೆಟ್ಟಿಗರು ಕಲೆಯ ಕಳ್ಳತನ ಅಥವಾ ಸಾಂಸ್ಕೃತಿಕ ಅತಿಕ್ರಮಣ ಎಂದು ಕರೆಯುತ್ತಿದ್ದಾರೆ. 'ನಮ್ಮಲ್ಲಿ 500 ರೂಪಾಯಿಗೆ ಸಿಗುವ ಸಾಮಾನ್ಯ ವಿನ್ಯಾಸವನ್ನು ಲಕ್ಷಾಂತರ ರೂಪಾಯಿಗೆ ಮಾರಿ ಲಾಭ ಗಳಿಸುವ ಜಾಗತಿಕ ಬ್ರ್ಯಾಂಡ್‌ಗಳು, ಮೂಲ ಕಲಾವಿದರಿಗೆ ಸಲ್ಲಬೇಕಾದ ಕ್ರೆಡಿಟ್ ನೀಡಲು ಏಕೆ ಮರೆಯುತ್ತಿವೆ?" ಎಂಬುದು ಈಗ ಸಾರ್ವಜನಿಕರ ಪ್ರಶ್ನೆ.

ಬದಲಾಗಬೇಕಾದ ದೃಷ್ಟಿಕೋನ

ಇದು ಮೊದಲ ಬಾರಿಯಲ್ಲ. ಈ ಹಿಂದೆ ಕೂಡ ರಾಲ್ಫ್ ಲಾರೆನ್ ಭಾರತೀಯ 'ಜುಮಿಕಿ'ಗಳನ್ನು ತನ್ನದೆಂಬಂತೆ ಪ್ರದರ್ಶಿಸಿ ಟೀಕೆಗೆ ಗುರಿಯಾಗಿತ್ತು. ಫ್ಯಾಷನ್ ಜಗತ್ತಿನ ದೈತ್ಯ 'ಪ್ರಾಡಾ' ಕೊಲ್ಲಾಪುರಿ ಚಪ್ಪಲಿಯನ್ನು ತನ್ನದೆಂದು ಪ್ರದರ್ಶಿಸಿ ಭಾರೀ ಟೀಕೆಗೆ ಕಾರಣವಾಗಿತ್ತು. ಕಡೆಗೆ ಭಾರತದಿಂದ ಸ್ಫೂರ್ತಿ ಎಂದು ಕ್ರೆಡಿಟ್ ಕೊಟ್ಟಿತಾದರೂ, 83 ಸಾವಿರ ರೂಪಾಯಿ ಬೆಲೆ ಇಟ್ಟಿರುವುದು ಇಂದಿಗೂ ವಿವಾದಾಸ್ಪದವಾಗಿಯೇ ಇದೆ. ಜಾಗತಿಕ ಬ್ರ್ಯಾಂಡ್‌ಗಳು ಬೇರೆ ದೇಶಗಳ ಸಾಂಪ್ರದಾಯಿಕ ಕಲೆಗಳನ್ನು ಬಳಸಿಕೊಂಡಾಗ ಆಯಾ ಸಂಸ್ಕೃತಿಗೆ ಗೌರವ ನೀಡುವುದು ಅತ್ಯಗತ್ಯ.

ಭಾರತೀಯ ಕಲೆ ಮತ್ತು ಸಂಸ್ಕೃತಿ ಇಂದು ಇಡೀ ಜಗತ್ತಿಗೆ ಸ್ಫೂರ್ತಿಯಾಗಿರುವುದು ಹೆಮ್ಮೆಯ ವಿಷಯ. ಆದರೆ ಆ ಸ್ಫೂರ್ತಿಯು ಕೇವಲ ಲಾಭದ ಮೂಲವಾಗಬಾರದು. ಬದಲಾಗಿ, ಅದು ಮೂಲ ಕಲಾವಿದರ ಶ್ರಮಕ್ಕೆ ಸಿಗುವ ಗೌರವವಾಗಬೇಕು. ಬಾಂಧಿನಿ ಎನ್ನುವುದು ಬಟ್ಟೆಯ ಮೇಲಿನ ಕೇವಲ ಚುಕ್ಕೆಗಳಲ್ಲ; ಅದು ಭಾರತೀಯ ಪರಂಪರೆಯ ಒಂದು ಅವಿಭಾಜ್ಯ ಅಂಗ. ಅದನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಜಾಗತಿಕ ಫ್ಯಾಷನ್ ಹೌಸ್‌ಗಳ ಮೇಲೂ ಇದೆ.

▪ ವಿದ್ಯಾ ಕೊಡ್ಲೆಕೆರೆ

ಮೊಸರು ಬದನೆಕಾಯಿ

ಅಡುಗೆ ಈ ಬಗೆ

ಬೇಕಾಗುವ ಸಾಮಗ್ರಿಗಳು: ಬದನೆಕಾಯಿ 250 ಗ್ರಾಂ (ಉದ್ದ ಅಥವಾ ಗುಂಡು ಬದನೆಕಾಯಿ), ಗಟ್ಟಿ ಮೊಸರು 1 ಕಪ್, ಕಡಲೆ ಹಿಟ್ಟು 1 ಚಮಚ (ರುಚಿ ಮತ್ತು ದಪ್ಪಗಾಗಲು), ಶುಂಠಿ–ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಹಸಿಮೆಣಸಿನಕಾಯಿ 2 (ಸೀಳಿದ್ದು), ಖಾರದ ಪುಡಿ 1 ಚಮಚ, ಅರಿಶಿನ 2 ಚಮಚ, ಧನಿಯಾ ಪುಡಿ 1 ಚಮಚ, ಗರಂ ಮಸಾಲ 2 ಚಮಚ, ಒಗ್ಗರಣೆಗೆ– ಸಾಸಿವೆ, ಜೀರಿಗೆ, ಕರಿಬೇವು ಮತ್ತು ಇಂಗು. ಎಣ್ಣೆ– ಹುರಿಯಲು ಮತ್ತು ಒಗ್ಗರಣೆಗೆ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಸ್ವಲ್ಪ ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ: ಮೊದಲು ಬದನೆಕಾಯಿಯನ್ನು ತೆಳುವಾದ ಚೂರುಗಳಾಗಿ ಅಥವಾ ಉದ್ದವಾಗಿ ಹೆಚ್ಚಿಕೊಳ್ಳಿ. ಇದಕ್ಕೆ ಸ್ವಲ್ಪ ಉಪ್ಪು ಮತ್ತು ಅರಿಶಿನ ಸವರಿ 10 ನಿಮಿಷ ಬಿಡಿ. ನಂತರ ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಬದನೆಕಾಯಿ ಚೂರುಗಳು ಮೆತ್ತಗಾಗಿ, ಬಣ್ಣ ಬದಲಾಗುವವರೆಗೆ ಹುರಿದು ಪಕ್ಕಕ್ಕೆ ಇಟ್ಟುಕೊಳ್ಳಿ. ಒಂದು ಬೌಲ್‌ನಲ್ಲಿ ಮೊಸರನ್ನು ಚೆನ್ನಾಗಿ ಗೊಟಾಯಿಸಿ ಇಟ್ಟುಕೊಳ್ಳಿ (ಗಂಟು ಇರಬಾರದು). ಇದಕ್ಕೆ ಕಡಲೆ ಹಿಟ್ಟು, ಧನಿಯಾ ಪುಡಿ, ಖಾರದ ಪುಡಿ ಮತ್ತು ಸ್ವಲ್ಪ ನೀರು ಸೇರಿಸಿ ಮಿಶ್ರಣ ಮಾಡಿ. (ಕಡಲೆ ಹಿಟ್ಟು ಹಾಕುವುದರಿಂದ ಮೊಸರು ಒಡೆಯುವುದಿಲ್ಲ).

ಬಾಣಲೆಗೆ 2 ಚಮಚ ಎಣ್ಣೆ ಹಾಕಿ, ಸಾಸಿವೆ, ಜೀರಿಗೆ, ಕರಿಬೇವು ಮತ್ತು ಇಂಗು ಹಾಕಿ ಒಗ್ಗರಣೆ ಮಾಡಿ. ನಂತರ ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಮತ್ತು ಹಸಿಮೆಣಸಿನಕಾಯಿ ಹಾಕಿ ಹಸಿ ವಾಸನೆ ಹೋಗುವವರೆಗೆ ಹುರಿಯಿರಿ. ಈಗ ಉರಿಯನ್ನು ಪೂರ್ತಿ ಕಡಿಮೆ ಮಾಡಿ (ಸಿಮ್‌ನಲ್ಲಿಡಿ), ಸಿದ್ಧಪಡಿಸಿದ ಮೊಸರಿನ ಮಿಶ್ರಣವನ್ನು ಹಾಕಿ ಕೈಯಾಡಿಸುತ್ತಿರಿ. ಮೊಸರು ಕುದಿಯಲು ಆರಂಭಿಸಿದಾಗ, ಮೊದಲೇ ಹುರಿದಿಟ್ಟುಕೊಂಡ ಬದನೆಕಾಯಿ ಚೂರುಗಳನ್ನು ಸೇರಿಸಿ. ಇದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಮತ್ತು ಗರಂ ಮಸಾಲ ಸೇರಿಸಿ. ಮಸಾಲೆ ಬದನೆಕಾಯಿಗೆ ಚೆನ್ನಾಗಿ ಹಿಡಿಯುವಂತೆ 2–3 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಿ. ಕೊನೆಯಲ್ಲಿ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿದರೆ ರುಚಿಕರವಾದ ಮೊಸರು ಬದನೆಕಾಯಿ ಸಿದ್ಧ.

ಸೂಚನೆ: ಮೊಸರು ಹಾಕುವಾಗ ಉರಿ ಕಡಿಮೆ ಇರಲಿ ಅಥವಾ ಒಲೆಯನ್ನು ಆಫ್ ಮಾಡಿ ಮೊಸರು ಹಾಕಿದ ನಂತರ ಮತ್ತೆ ಆನ್ ಮಾಡಿ. ಇದರಿಂದ ಮೊಸರು ಒಡೆಯುವುದು ತಪ್ಪುತ್ತದೆ.

ರಾಜ್ಯದ ಮಕ್ಕಳಿಗೆ ಹೊರರಾಜ್ಯಗಳಲ್ಲಿ ಪರೀಕ್ಷೆ!

ಕಾಮೆಡ್-ಕೆ ಅವಾಂತರಕ್ಕೆ ರಾಜ್ಯದ ಎರಡೂವರೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಂಕಷ್ಟ

ಸಂ.ಕ.ಸಮಾಚಾರ, ಬೆಂಗಳೂರು

ಪ್ರಸಕ್ತ ವರ್ಷ ಕರ್ನಾಟಕದ ಖಾಸಗಿ ವಲಯದ ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ಪರೀಕ್ಷೆ ಬರೆಯಲಿರುವ 2600 ವಿದ್ಯಾರ್ಥಿಗಳಿಗೆ ಹೈದರಾಬಾದ್ ಮತ್ತು ಚೆನ್ನೈಗೆ ಹೋಗುವ ಅನಿವಾರ್ಯತೆ ಎದುರಾಗಿದೆ.

ಕಾಮೆಡ್– ಕೆ ನಡೆಸುವ ಇಂಜಿನಿಯರಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳಿಗೆ ಮೇ 9ರಂದು ಪ್ರವೇಶ ಪರೀಕ್ಷೆ ನಡೆಯಲ್ಲಿದ್ದು, ಕರ್ನಾಟಕದ 1.30 ಲಕ್ಷ ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ. ಆದರೆ ಕರ್ನಾಟಕದ 2600ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರವನ್ನು ಚೆನ್ನೈ ಮತ್ತು ಹೈದರಾಬಾದ್ ಸೇರಿದಂತೆ ಆಂಧ್ರ ಮತ್ತು ತಮಿಳುನಾಡಿನ ಕೆಲವು ಪರೀಕ್ಷಾ ಕೇಂದ್ರಗಳಿಗೆ ಹಂಚಿಕೆ ಮಾಡಲಾಗಿದೆ. ಇದರಿಂದ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಕರ್ನಾಟಕದ ವಿದ್ಯಾರ್ಥಿಗಳು ಬೆಂಗಳೂರು ಮೈಸೂರು ಸೇರಿದಂತೆ ರಾಜ್ಯದ ಇತರ ಜಿಲ್ಲೆಗಳನ್ನು ಪರೀಕ್ಷಾ ಕೇಂದ್ರಗಳಾಗಿ ಆಯ್ಕೆ ಮಾಡಿಕೊಂಡಿದ್ದರೂ, ಸಹಿತ ಕಾಮೆಡ್– ಕೆ ಪರೀಕ್ಷಾ ಕೇಂದ್ರವನ್ನು ಹೊರ ರಾಜ್ಯದಲ್ಲಿ ಹಂಚಿಕೆ ಮಾಡಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ನೂರಾರು ವಿದ್ಯಾರ್ಥಿಗಳು ಸರಿಸುಮಾರು 400 ಕಿಲೋಮೀಟರ್ ದೂರದ ನಗರಗಳಿಗೆ ಪರೀಕ್ಷೆ ಬರೆಯಲು ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಪರೀಕ್ಷೆಗೆ ಮೇ 2ರಂದು ಪ್ರವೇಶ ಪತ್ರಗಳನ್ನು ಆನ್ಲೈನ್ ಮೂಲಕ ಕಾಮೆಡ್– ಕೆ ಬಿಡುಗಡೆಗೊಳಿಸಿದ್ದು, ತಮ್ಮ ಪ್ರವೇಶ ಪತ್ರಗಳನ್ನು ಕಂಡು ವಿದ್ಯಾರ್ಥಿಗಳು ತೀವ್ರ ಗೊಂದಲಕ್ಕೆ ಒಳಗಾಗಿದ್ದಾರೆ. ಕರ್ನಾಟಕದ 150ಕ್ಕೂ ಹೆಚ್ಚು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪದವಿಪೂರ್ವ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಕಾಮೆಡ್– ಕೆ ರಾಷ್ಟ್ರಮಟ್ಟದ, ಕಂಪ್ಯೂಟರ್ ಆಧಾರಿತ ಪ್ರವೇಶ ಪರೀಕ್ಷೆಯಾಗಿದೆ.

ಅನೇಕ ಅಭ್ಯರ್ಥಿಗಳು ತಾವು ಆಯ್ಕೆ ಮಾಡಿದ ಸ್ಥಳಗಳಿಂದ ದೂರದಲ್ಲಿ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ. ಸಂಯುಕ್ತ ಕರ್ನಾಟಕ ಜೊತೆ ಮಾತನಾಡಿದ ವಿದ್ಯಾರ್ಥಿಯೊಬ್ಬರು ನನ್ನ ಪರೀಕ್ಷಾ ಆದ್ಯತೆ ಬೆಂಗಳೂರಿನಲ್ಲಿದೆ. ಆದರೆ ನನ್ನ ಕೇಂದ್ರ ತಮಿಳುನಾಡಿನಲ್ಲಿದೆ. ನಾನು ಈ ಕೇಂದ್ರವನ್ನು ಆಯ್ಕೆ ಮಾಡಿರಲಿಲ್ಲ. ಆದರೂ ನನಗೆ ತಮಿಳುನಾಡಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ನಿಯೋಜಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಲು ಎರಡು ಆಯ್ಕೆಗಳನ್ನು ನೀಡಲಾಗಿತ್ತು. ಬೆಂಗಳೂರು ಅಥವಾ ಹತ್ತಿರದ ನಗರಗಳನ್ನು ತಮ್ಮ ಆದ್ಯತೆಯ ಆಯ್ಕೆಗಳಾಗಿ ಆಯ್ಕೆ ಮಾಡಿಕೊಂಡಿದ್ದರೂ, ಚೆನ್ನೈ, ಆಂಧ್ರಪ್ರದೇಶ ಮತ್ತು ಮಂಗಳೂರಿನಲ್ಲಿ ಕೇಂದ್ರಗಳನ್ನು ಪಡೆದ ವಿದ್ಯಾರ್ಥಿಗಳು ಸಹ ಇದೇ ರೀತಿಯ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ರಾಜ್ಯದ 33 ಕೇಂದ್ರಗಳಲ್ಲಿ ಪರೀಕ್ಷೆ

ಈ ವರ್ಷ ಸುಮಾರು 1.4 ಲಕ್ಷ ವಿದ್ಯಾರ್ಥಿಗಳು ಕಾಮೆಡ್–ಕೆ ಪರೀಕ್ಷೆ ಬರೆಯುವ ನಿರೀಕ್ಷೆಯಿದೆ. ಆಂಧ್ರಪ್ರದೇಶ 15 ಕೇಂದ್ರಗಳು, ಕರ್ನಾಟಕ 33 ಕೇಂದ್ರಗಳು – ಬೆಳಗಾವಿ, ಬೆಂಗಳೂರು ನಗರ ಮತ್ತು ಗ್ರಾಮೀಣ, ದಾವಣಗೆರೆ, ಧಾರವಾಡ ಮತ್ತು ಮೈಸೂರು ಸೇರಿದಂತೆ ಮತ್ತು ತಮಿಳುನಾಡು 11 ಕೇಂದ್ರಗಳನ್ನು ಒಳಗೊಂಡಂತೆ ವಿವಿಧ ರಾಜ್ಯಗಳಲ್ಲಿ ಈ ಪರೀಕ್ಷೆ ನಡೆಯಲಿದೆ.

ಜೂನ್ ಮಧ್ಯದಲ್ಲಿ ಕೌನ್ಸೆಲಿಂಗ್

ಕಾಮೆಡ್‌ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಎಸ್ ಕುಮಾರ್ ಮಾತನಾಡಿ, ಕರ್ನಾಟಕದ ಸುಮಾರು 2600 ವಿದ್ಯಾರ್ಥಿಗಳು ತಮ್ಮ ಆಯ್ಕೆಯಲ್ಲದ ಪರೀಕ್ಷಾ ಕೇಂದ್ರಗಳನ್ನು ಪಡೆದಿದ್ದಾರೆ. ಈ ವರ್ಷ, ಬೆಂಗಳೂರು ಅಥವಾ ಮೈಸೂರಿನಲ್ಲಿ ಪರೀಕ್ಷೆಗೆ ಹಾಜರಾಗಲು ನಾವು 6000 ಹೆಚ್ಚುವರಿ ಸೀಟುಗಳನ್ನು ವ್ಯವಸ್ಥೆ ಮಾಡಿದ್ದೇವೆ. ಆದರೆ ಕೊನೆಯ ನಿಮಿಷದಲ್ಲಿ ಅರ್ಜಿ ಸಲ್ಲಿಸಿದವರನ್ನು ಚೆನ್ನೈ ಅಥವಾ ಹೈದರಾಬಾದ್‌ನ ಪರೀಕ್ಷಾ ಕೇಂದ್ರಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.

ಪರೀಕ್ಷಾ ದಿನಾಂಕ ಸಮೀಪಿಸುತ್ತಿರುವುದರಿಂದ, ಅಭ್ಯರ್ಥಿಗಳು ಈಗ ಕೊನೆಯ ಕ್ಷಣದ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ದೂರದ ಪರೀಕ್ಷಾ ಕೇಂದ್ರಗಳಿಗೆ ಪ್ರಯಾಣ ಮಾಡಲು ಬಸ್, ರೈಲು ಟಿಕೆಟ್ ಬುಕಿಂಗ್ ಮಾಡಿಕೊಳ್ಳುತ್ತಿದ್ದಾರೆ. ಫಲಿತಾಂಶ ಘೋಷಣೆಯ ನಂತರ ಜೂನ್ ಮಧ್ಯದಲ್ಲಿ ಕೌನ್ಸೆಲಿಂಗ್ ನೋಂದಣಿ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದರು.

ಸುದ್ದಿ ಸಮಾಚಾರ

ವಾಯುಮಾಲಿನ್ಯ ಕಡಿತಕ್ಕೆ 6 ತಿಂಗಳ ಗಡುವು: ಎನ್‌ಜಿಟಿ

ಬೆಂಗಳೂರು: ವಾಯು ಮಾಲಿನ್ಯ ಕಡಿತಗೊಳಿಸುವ ಸಲುವಾಗಿ ಆರು ತಿಂಗಳೊಳಗೆ ಸಮಗ್ರ ಕಾರ್ಯಯೋಜನೆ ಸಲ್ಲಿಸಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ರಾಜ್ಯಕ್ಕೆ ಗಡುವು ನೀಡಿದೆ.

ಎನ್‌ಜಿಟಿ ನ್ಯಾಯಮೂರ್ತಿ ಪುಷ್ಪ ಸತ್ಯನಾರಾಯಣ ಮತ್ತು ತಜ್ಞ ಸದಸ್ಯ ಪ್ರಶಾಂತ್ ಗರ್ಗವ ಅವರ ಪೀಠವು ಈ ಆದೇಶ ನೀಡಿದೆ. ಕರ್ನಾಟಕವು ಎನ್‌ಸಿಎಪಿ ಯೋಜನೆಯಲ್ಲಿ ದುರ್ಬಲ ಕಾರ್ಯಕ್ಷಮತೆ ತೋರಿದ ರಾಜ್ಯಗಳಲ್ಲಿ ಒಂದಾಗಿದೆ. ಪೀಠವು ರಾಜ್ಯ ಮಟ್ಟದ ಕಾರ್ಯಯೋಜನೆಗಳನ್ನು ಪರಿಶೀಲಿಸಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮಾರ್ಗಸೂಚಿಗಳ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ಪುದುಚೇರಿ ರಾಜ್ಯಗಳಿಗೆ 6 ತಿಂಗಳಲ್ಲಿ ವಿಶೇಷ ಕಾರ್ಯಯೋಜನೆ ಸಲ್ಲಿಸಲು ಹೇಳಲಾಗಿದೆ. ಈ ಯೋಜನೆಯಲ್ಲಿ ಸಮಯ, ಜವಾಬ್ದಾರಿ ಸಂಸ್ಥೆಗಳು, ಬಜೆಟ್ ಹಂಚಿಕೆ ಹಾಗೂ ಪಿಎಂ10 ಮತ್ತು ಪಿಎಂ2.5 ಕಡಿತ ಗುರಿಗಳನ್ನು ಸ್ಪಷ್ಟವಾಗಿ ಸೂಚಿಸಬೇಕು. ಅನುಷ್ಠಾನಕ್ಕೆ ಉತ್ತೇಜನ ನೀಡಬೇಕು ಮತ್ತು ನಿಯಮ ಉಲ್ಲಂಘನೆಗೆ ದಂಡ ವಿಧಿಸಬೇಕು ಎಂದು ಎನ್‌ಜಿಟಿ ಹೇಳಿದೆ.

ದರ್ಶನ್ ಜಾಮೀನು ಅರ್ಜಿ ಸುಪ್ರೀಂನಲ್ಲಿಂದು ವಿಚಾರಣೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಜಾಮೀನು ಅರ್ಜಿಯಲ್ಲಿ ಜೈಲಿನ ಒಳಗಿನ ಸ್ಥಿತಿಗತಿ ಮತ್ತು ತಮ್ಮ ವೃತ್ತಿಜೀವನದ ಸಂಕಷ್ಟಗಳ ಬಗ್ಗೆ ಸುದೀರ್ಘ ಅಳಲು ತೋಡಿಕೊಂಡಿದ್ದಾರೆ. ಮೇ 4(ಇಂದು) ಅವರ ಅರ್ಜಿ ವಿಚಾರಣೆ ನಡೆಯಲಿದೆ.

ಅರ್ಜಿಯಲ್ಲಿ ಏನಿದೆ?: ನಿಯಮಗಳನ್ನು ಮೀರಿ ನನ್ನನ್ನು ಕ್ವಾರಂಟೈನ್ ಸೆಲ್‌ನಲ್ಲಿ ಇರಿಸಲಾಗಿದೆ. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ತೀವ್ರ ಹಾನಿಯಾಗುತ್ತಿದೆ. ಸಹಕೈದಿಗಳಿಂದ ನಿರಂತರ ಬೆದರಿಕೆ, ನಿಂದನೆ ಮತ್ತು ಮೂದಲಿಕೆಯಂತಹ ಪ್ರಚೋದನೆಗಳು ಎದುರಾಗುತ್ತಿವೆ. ಮಾಧ್ಯಮಗಳಲ್ಲಿ ನನ್ನ ವಿರುದ್ಧ ನಡೆಯುತ್ತಿರುವ ನೆಗೆಟಿವ್ ಪ್ರಚಾರದಿಂದ ಜೈಲಿನ ಒಳಗಿನ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ ಎಂದು ನೋವು ತೋಡಿಕೊಂಡಿದ್ದಾರೆ.

ಇತರ ಕೈದಿಗಳಿಗೆ ಹೋಲಿಸಿದರೆ ತಮಗೆ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿರುವ ಅವರು, ಕುಟುಂಬಸ್ಥರ ಭೇಟಿಗೆ ಸಮಾನ ಸಮಯ ನೀಡುತ್ತಿಲ್ಲ ಹಾಗೂ ಹೊರಗಿನಿಂದ ಆಹಾರ, ಬಟ್ಟೆ ಮತ್ತು ಹಾಸಿಗೆ ಪಡೆಯಲು ಅವಕಾಶ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತೀವ್ರ ಬೆನ್ನು ನೋವಿನಿಂದ ಬಳಲುತ್ತಿದ್ದರೂ ಕೇವಲ 2–3 ಬಾರಿ ಮಾತ್ರ ಫಿಸಿಯೋಥೆರಪಿ ಮಾಡಲಾಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ.

ಕೆಪಿಎಸ್ಸಿ ಸುಧಾರಣೆಗೆ ಆರ್‌ವಿಡಿ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ದಲ್ಲಿ ನಡೆಯುತ್ತಿರುವ ನೇಮಕಾತಿ ಹಾಗೂ ಪರೀಕ್ಷಾ ಅಕ್ರಮಗಳ ನಿಗ್ರಹ ಮತ್ತು ಆಯೋಗದ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸೂಕ್ತ ಶಿಫಾರಸು ನೀಡಲು ಹಿರಿಯ ಶಾಸಕ ಹಾಗೂ ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಮೂರೂ ಪಕ್ಷಗಳ ಶಾಸಕರನ್ನೊಳಗೊಂಡ ಸದನ ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ಶಾಸಕರಾದ ಎಸ್.ಸುರೇಶ್‌ಕುಮಾರ್, ಹಂಪನಗೌಡ ಬಾದರ್ಲಿ, ಎಚ್.ಸಿ.ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಎ.ಎಸ್.ಪೊನ್ನಣ್ಣ, ರಾಘವೇಂದ್ರ ಹಿಟ್ನಾಳ್, ಅರಗ ಜ್ಞಾನೇಂದ್ರ, ಮಹೇಶ್ ಟೆಂಗಿನಕಾಯಿ, ಎಂ.ರೂಪಕಲಾ ಶಶಿಧರ್ ಹಾಗೂ ಎಂ.ಟಿ,.ಕೃಷ್ಣಪ್ಪ ಸದಸ್ಯರಾಗಿದ್ದಾರೆ. ಮುಂದಿನ ಮೂರು ತಿಂಗಳಲ್ಲಿ ಅಧ್ಯಯನ ನಡೆಸಿ ಸೂಕ್ತ ಶಿಫಾರಸುಗಳನ್ನೊಳಗೊಂಡ ವರದಿ ನೀಡಲು ಕಾಲಾವಕಾಶ ಕೊಡಲಾಗಿದೆ.ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಮಂಡಲ ಅಧಿವೇಶನಲ್ಲಿ ಕೆಪಿಎಸ್‌ಸಿ ಅವ್ಯವಹಾರ ಮತ್ತು ಅಕ್ರಮಗಳ ಬಗ್ಗೆ ಸರ್ಕಾರ ಮತ್ತು ವಿಪಕ್ಷಗಳ ಸದಸ್ಯರಿಂದ ಪಕ್ಷಾತೀತವಾಗಿ ಗಂಭೀರ ಸ್ವರೂಪದ ಚರ್ಚೆಯಾಗಿತ್ತು. ಬಳಿಕ ಸಮಿತಿ ರಚನೆಗೆ ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಅಧಿಕಾರ ಕೊಡಲಾಗಿತ್ತು.



ಮೇ. 6ರಂದು ಹುತಾತ್ಮ ಆನೆ ಅರ್ಜುನ ಸ್ಮಾರಕ ಉದ್ಘಾಟನೆ

ಸಂ.ಕ.ಸಮಾಚಾರ ಬೆಂಗಳೂರು

ಹಾಸನ ಜಿಲ್ಲೆಯ ಯಸಳೂರು ವಲಯದಲ್ಲಿ ಕಳೆದ 2023 ಡಿಸೆಂಬರ್ 4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ, ಪಶುವೈದ್ಯರು, ಸಿಬ್ಬಂದಿ ಜೀವ ಉಳಿಸಿ ಹುತಾತ್ಮನಾದ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕ ಮೇ. 6ರ ಬುಧವಾರ ಉದ್ಘಾಟನೆಯಾಗಲಿದೆ.

ಈ ಕುರಿತು ಮಾಹಿತಿ ನೀಡಿರುವ ಅರಣ್ಯ ಮತ್ತು ಪರಿಸರ ಸಚಿವ ಈಶ್ವರಖಂಡ್ರೆ, ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಗಾಂಭೀರ್ಯದಿಂದ ಹೆಜ್ಜೆಹಾಕಿ, ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನ ಆನೆಯ ಸಾವು ಇಲಾಖೆಗೆ ದೊಡ್ಡ ನಷ್ಟವಾಗಿದ್ದು, ಸಮಾಧಿ ಸ್ಥಳದಲ್ಲಿ ಮತ್ತು ನಾಗರಹೊಳೆಯ ಬಳ್ಳೆಯಲ್ಲಿ ಸ್ಮಾರಕ ನಿರ್ಮಿಸುವುದಾಗಿ ಸರ್ಕಾರ ತಿಳಿಸಿತ್ತು. ಅದರಂತೆ ಈಗಾಗಲೇ ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿರಿಮೆ, ಸಾಹಸಗಾಥೆಗಳನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೂ ತಿಳಿಸುವ ರೀತಿಯಲ್ಲಿ ಸ್ಮಾರಕ ಅನಾವರಣ ಮಾಡಲಾಗಿದೆ ಎಂದು ವಿವರಿಸಿದ್ದಾರೆ.



ಈ ಎರಡೂ ಸ್ಥಳದಲ್ಲಿ ಅರ್ಜುನ ಆನೆಯ ಪ್ರತಿರೂಪದಂತಿರುವ ಪ್ರತಿಮೆಗಳನ್ನು ನಿರ್ಮಿಸಲಾಗಿದ್ದು, ಅರ್ಜುನ ವಿವಿಧ ಆನೆ ಕಾರ್ಯಾಚರಣೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಮತ್ತು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಚಿತ್ರಗಳನ್ನು ಹಾಕುವಂತೆ ಸೂಚಿಸಲಾಗಿದೆ. ಯಸಳೂರಿನಲ್ಲಿ ಸ್ಮಾರಕ ಸಿದ್ಧವಾಗಿ ಹಲವು ತಿಂಗಳುಗಳೇ ಕಳೆದಿದೆ. ಈಗ ಉದ್ಘಾಟನಾ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ ಎಂದು ತಿಳಿಸಿದ್ದಾರೆ.

ಬನ್ನೇರುಘಟ್ಟದಲ್ಲಿ ಪಶುವೈದ್ಯೆ ಸ್ಮಾರಕ

ಶಿವಮೊಗ್ಗ ಜಿಲ್ಲೆಯ ತಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ ನೀರಾನೆ ದಾಳಿಯಿಂದ ಮೃತಪಟ್ಟ ಯುವ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಹೆಸರಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಅಥವಾ ಬೇರೆ ಕಡೆ ಸ್ಮಾರಕ ನಿರ್ಮಿಸಬೇಕು ಎಂಬ ಸಲಹೆಯನ್ನು ಕುಟುಂಬದವರು ನೀಡಿದ್ದು, ಅದನ್ನು ಸ್ವೀಕರಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಇತ್ತೀಚಿಗೆ ವಿಧಾನಸಭೆಗೆ ತಿಳಿಸಿದ್ದರು. ಶಿವಮೊಗ್ಗ ಶಾಸಕ ಚನ್ನಬಸಪ್ಪ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ್ದ ಅವರು, ಕರ್ತವ್ಯಕ್ಕೆ ಸೇರಿ ಕೆಲವೇ ದಿನಗಳಲ್ಲಿ ಈ ದುರ್ಘಟನೆ ನಡೆದಿದೆ. ಮೃತರ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದೇನೆ. ಆ ವೇಳೆ 30 ಲಕ್ಷ ರೂಪಾಯಿ ಪರಿಹಾರ ಕೊಡಲು ಸರ್ಕಾರ ಮುಂದಾಗಿತ್ತು. ಆದರೆ ಕುಟುಂಬಸ್ಥರು ಪರಿಹಾರ ಬೇಡ, ಬನ್ನೇರುಘಟ್ಟ ಅಥವಾ ಬೇರೆ ಮೃಗಾಲಯದಲ್ಲಿ ಸ್ಮಾರಕ ಮಾಡಿ ಎಂದು ಮನವಿ ಮಾಡಿದರು. ಮುಂದಿನ ದಿನಗಳಲ್ಲಿ ಸ್ಮಾರಕ ರೂಪಿಸಲು ಸರ್ಕಾರ ಚಿಂತಿಸಲಿದೆ ಎಂದಿದ್ದರು.

ವಿಧಾನಸಭೆಗೆ 3 ವರ್ಷದಲ್ಲಿ 7 ಉಪಸಮರ

ದಾವಣಗೆರೆ ದಕ್ಷಿಣ-ಬಾಗಲಕೋಟೆ ಬಳಿಕ ಧಾರವಾಡ ಗ್ರಾಮೀಣ ಕ್ಷೇತ್ರವೂ ಸಜ್ಜು

■ ಕೆ.ವಿ.ಪರಮೇಶ್

ಸಂ.ಕ.ಸಮಾಚಾರ ಬೆಂಗಳೂರು

ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯುವುದು ಸಹಜ ಸಾಮಾನ್ಯ. ಆದರೆ ನಿರ್ದಿಷ್ಟ ಕಾರಣಗಳಿಗೆ ಕೆಲವು ಕ್ಷೇತ್ರಗಳು ಉಪಚುನಾವಣೆ ಎದುರಿಸಬೇಕಾದ ಅನಿವಾರ್ಯತೆಗೆ ಸಿಲುಕುತ್ತವೆ. 16ನೇ ವಿಧಾನಸಭೆಯ ಈ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕ ಆರು ಉಪಸಮರಗಳನ್ನು ಎದುರಿಸಿದೆ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಿಗೆ ನಡೆದಿದ್ದ ಚುನಾವಣಾ ಫಲಿತಾಂಶ ಮೇ.4(ಇಂದು) ಹೊರಬೀಳಲಿದೆ. ಅತ್ತ ಶಾಸಕತ್ವ ರದ್ದಾದ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ಪ್ರತಿನಿಧಿಸುತ್ತಿದ್ದ ಧಾರವಾಡ ಗ್ರಾಮೀಣ ವಿಧಾನಸಭೆ ಕ್ಷೇತ್ರಕ್ಕೂ ಶೀಘ್ರವೇ ಉಪಚುನಾವಣೆ ಘೋಷಣೆಯಾಗಲಿದೆ.

ವಿಜಯಮಾಲೆ ಯಾರ ಕೊರಳಿಗೆ?

16ನೇ ವಿಧಾನಸಭೆಯ ಮೂರು ಕ್ಷೇತ್ರಗಳ ಶಾಸಕರು ಮೃತಪಟ್ಟ ಹಿನ್ನೆಲೆಯಲ್ಲಿ ಉಪಚುನಾವಣೆ ನಡೆಯಬೇಕಾಯಿತು. ಅದರಲ್ಲಿ ಯಾದಗಿರಿ ಜಿಲ್ಲೆಯ ಶೋರಪುರ ಕ್ಷೇತ್ರದ ರಾಜಾ ವೆಂಕಟಪ್ಪನಾಯಕ ಅವರು ಇದೇ ವರ್ಷದ ಫೆ.24ರಂದು ನಿಧನರಾಗಿದ್ದರಿಂದ ಮೇ7ಕ್ಕೆ ಚುನಾವಣೆ ನಡೆದು ಅವರ ಪುತ್ರ ರಾಜಾ ವೇಣುಗೋಪಾಲ ನಾಯಕ ಆರಿಸಿಬಂದರು. ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಶಾಮನೂರು ಶಿವಶಂಕರಪ್ಪ ಅವರ ಅಕಾಲಿಕ ನಿಧನದಿಂದ ಉಪಸಮರ ಎದುರಾಗಿದೆ. ಇಲ್ಲಿ ಅವರ ಮೊಮ್ಮಗ ಸಮರ್ಥ್ ಹಾಗೂ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ನಡುವೆ ಹಣಾಹಣಿ ಎದುರಾಗಿದೆ. ಬಾಗಲಕೋಟೆ ಕ್ಷೇತ್ರದಲ್ಲಿ ಹೆಚ್.ವೈ.ಮೇಟಿ ಅವರು ಮೃತಪಟ್ಟ ಕಾರಣಕ್ಕೆ ಚುನಾವಣೆ ನಡೆದಿದ್ದ ಅವರ ಪುತ್ರ ಉಮೇಶ್‌ಮೇಟಿ ಕಾಂಗ್ರೆಸ್‌ನಿಂದ ಹಾಗೂ ವೀರಣ್ಣ ಚರಂತಿಮಠ ಬಿಜೆಪಿ ಅಭ್ಯರ್ಥಿಯಾಗಿದ್ದು ಯಾರಿಗೆ ವಿಜಯಲಕ್ಷ್ಮೀ ಒಲಿಯಲಿದ್ದಾಳೆಂಬುದು ಸೋಮವಾರವೇ ಬಹಿರಂಗವಾಗಲಿದೆ.



ಶೀಘ್ರವೇ ಮತ್ತೊಂದು ಉಪಸಮರ

ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್‌ಗೌಡ ಅವರ ಹತ್ಯೆ ಆರೋಪದ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾದ ಹಿನ್ನೆಲೆಯಲ್ಲಿ ಧಾರವಾಡ ಗ್ರಾಮೀಣ ಕ್ಷೇತ್ರದ ವಿನಯ್ ಕುಲಕರ್ಣಿ ಶಾಸಕತ್ವ ಅಧಿಕೃತವಾಗಿ ರದ್ದಾಗಿರುವ ಹಿನ್ನೆಲೆಯಲ್ಲಿ ಮುಂದಿನ 6 ತಿಂಗಳ ಒಳಗಾಗಿ ಉಪಚುನಾವಣೆ ನಡೆಯಬೇಕಾಗಿದೆ. ಈಗಾಗಲೇ ವಿಧಾನಸಭೆ ಸಚಿವಾಲಯ ಚುನಾವಣಾ ಆಯೋಗಕ್ಕೆ ಸ್ಥಾನ ಖಾಲಿ ಆಗಿರುವ ಬಗ್ಗೆ ವರದಿ ರೂಪದಲ್ಲಿ ಮಾಹಿತಿ ರವಾನಿಸಿರುವ ಕಾರಣಕ್ಕೆ ಯಾವುದೇ ಸಂದರ್ಭದಲ್ಲಾದರೂ ಮತ್ತೊಂದು ಉಪಸಮರಕ್ಕೆ ರಾಜಕೀಯ ಪಕ್ಷಗಳಿಗೆ ಅಗ್ನಿಪರೀಕ್ಷೆ ಎದುರಾಗಲಿದೆ.

ಸಂಸತ್‌ಗೆ ಆಯ್ಕೆಗೆ ಮರುಚುನಾವಣೆ

ಇದಕ್ಕೂ ಮೊದಲು ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ 2024ರ ಜೂನ್ 4ರಂದು ಆಯ್ಕೆಯಾಗಿದ್ದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರು ಪ್ರತಿನಿಧಿಸಿದ್ದ ಹಾವೇರಿ ಜಿಲ್ಲೆಯ ಶಿಗ್ಗಾಂವಿ, ಈ.ತುಕಾರಾಂ ಅವರು ಶಾಸಕರಾಗಿದ್ದ ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಗೆದ್ದಿದ್ದ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ಕ್ಷೇತ್ರಗಳಿಗೆ 2024ರ ನವೆಂಬರ್ 13ರಂದು ಉಪಚುನಾವಣೆ ನಡೆದಿತ್ತು. ಸಂಡೂರಿನಿಂದ ತುಕಾರಾಂ ಪತ್ನಿ ಅನ್ನಪೂರ್ಣ ಅವರು ಗೆಲ್ಲುವ ಮೂಲಕ ಕಾಂಗ್ರೆಸ್ ಮರಳಿ ಕ್ಷೇತ್ರ ಪಡೆದುಕೊಂಡಿದ್ದಲ್ಲದೆ, ಬಿಜೆಪಿಯಿಂದ ಶಿಗ್ಗಾಂವಿ ಹಾಗೂ ಜೆಡಿಎಸ್‌ನಿಂದ ಚನ್ನಪಟ್ಟಣವನ್ನು ಯಾಸೀರ್ ಪಠಾಣ್ ಹಾಗೂ ಸಿ.ಪಿ.ಯೋಗೇಶ್ವರ್ ಅವರುಗಳ ಮೂಲಕ ಕಿತ್ತುಕೊಂಡಿತ್ತು.

ಯಾವ್ಯಾವಾಗ ಎಲ್ಲೆಲ್ಲಿ ಉಪಚುನಾವಣೆ

- 2021- ಬಸವಕಲ್ಯಾಣ-ಮಸ್ಕಿ-ಸಿಂಧಗಿ-ಹಾನಗಲ್
- 2020-ಶಿರಾ-ರಾಜರಾಜೇಶ್ವರಿ ನಗರ
- 2019-ಕುಂದಗೋಳ-ಚಿಂಚೋಳಿ-ಅಥಣಿ-ಗೋಕಾಕ್-ಕಾಗವಾಡ-ಯಲ್ಲಾಪುರ-ವಿಜಯನಗರ-ಹಿರೇಕೇರೂರು-ಚಿಕ್ಕಬಳ್ಳಾಪುರ
- ಮಹಾಲಕ್ಷ್ಮೀ ಲೇಔಟ್-ಶಿವಾಜಿನಗರ-ಕೆ.ಆರ್.ಪೇಟೆ-ಕೆ.ಆರ್.ಪುರಂ-ಹುಣಸೂರು-ರಾಣೆಬೆನ್ನೂರು-ಹೊಸಕೋಟೆ-ಯಶವಂತಪುರ
- 2018-ರಾಮನಗರ-ಜಮಖಂಡಿ
- 2017-ನಂಜನಗೂಡು-ಗುಂಡ್ಲುಪೇಟೆ
- 2016-ಬೀದರ್-ದೇವದುರ್ಗ-ಹೆಬ್ಬಾಳ
- 2014-ಶಿಕಾರಿಪುರ-ಚಿಕ್ಕೋಡಿ ಸದಲಗಾ-ಬಳ್ಳಾರಿ ಗ್ರಾಮೀಣ

ಅಕಾಲಿಕ ಸಾವಿನಿಂದ 12 ಬೈಎಲೆಕ್ಷನ್

14ನೇ ವಿಧಾನಸಭೆಯಿಂದ 16ನೇ ವಿಧಾನಸಭೆ ಯವರೆಗೆ ಒಟ್ಟಾರೆ 32 ಕ್ಷೇತ್ರಗಳು ಉಪಚುನಾವಣೆ ಎದುರಿಸಿವೆ. ಈ ಪೈಕಿ 12 ಮಂದಿ ಶಾಸಕರ ಅಕಾಲಿಕ ಮರಣದಿಂದ ಉಪಸಮರ ನಡೆದಿದ್ದರೆ, ಉಳಿದಂತೆ ಶಾಸಕರು ಪಕ್ಷಾಂತರ ಮಾಡಿದ ಕಾರಣಕ್ಕೆ 17 ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆದಿದೆ. ಉಳಿದಂತೆ 3 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದ ಶಾಸಕರು ಸಂಸತ್‌ಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ವರ್ಷದೊಳಗೆ ಉಪಸಮರಕ್ಕೆ ವೇದಿಕೆ ಸೃಷ್ಟಿಯಾಗಿತ್ತು.

ಒಳಮೀಸಲು ಲೋಪ ಸರಿಪಡಿಸಲು ಸಿಎಂ ಬಳಿ ಶೀಘ್ರ ನಿಯೋಗ

ಮಾದಿಗರ ಒಳಮೀಸಲಾತಿ ಸಂರಕ್ಷಣಾ ಸಮಿತಿ ಅಧ್ಯಕ್ಷರಾಗಿ ಎಚ್.ಆಂಜನೇಯ ಆಯ್ಕೆ

ಸಂ.ಕ.ಸಮಾಚಾರ ಬೆಂಗಳೂರು

ಮಾದಿಗ ಸಮುದಾಯದ 30 ವರ್ಷಗಳ ನಿರಂತರ ಹೋರಾಟದ ಫಲ, ಸುಪ್ರೀಂಕೋರ್ಟ್ ತೀರ್ಪು ನೀಡಿದ ಪರಿಣಾಮ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಳಮೀಸಲಾತಿ ಜಾರಿಗೊಳಿಸಿರುವುದನ್ನು ಸ್ವಾಗತಿಸುವ ಜೊತೆಗೆ ಸಣ್ಣಪುಟ್ಟ ಲೋಪಗಳನ್ನು ಸರಿಪಡಿಸುವಂತೆ ಮಾದಿಗರ ಚಿಂತಕರ ದುಂಡು ಮೇಜಿನ ಸಭೆ ಒತ್ತಾಯಿಸಿತು.

ಬೆಂಗಳೂರಿನ ಶಾಸಕರ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಾದಿಗರ ಚಿಂತಕರ ದುಂಡುಮೇಜಿನ ಸಭೆಯಲ್ಲಿ ಮಾಜಿ ಸಚಿವರು, ಮಾಜಿ ಸಂಸದರು, ನಿವೃತ್ತ ಅಧಿಕಾರಿಗಳು, ಚಿಂತಕರು, ಸಾಹಿತಿಗಳು ಸೇರಿ ಅನೇಕರು ಸುದೀರ್ಘ ಚರ್ಚೆ ನಡೆಸಿದರು. ಇದೇ ಸಂದರ್ಭದಲ್ಲಿ ಮಾದಿಗರ ಒಳಮೀಸಲಾತಿ ಸಂರಕ್ಷಣಾ ಸಮಿತಿ ರಚಿಸಲಾಯಿತು. ಸಮಿತಿ ಅಧ್ಯಕ್ಷರಾಗಿ ಎಚ್.ಆಂಜನೇಯ, ಗೌರವಾಧ್ಯಕ್ಷರಾಗಿ ಡಾ.ಎಲ್.ಹನುಮಂತಯ್ಯರನ್ನು ಆಯ್ಕೆ ಮಾಡಲಾಯಿತು.

ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಬರುವ ಹುದ್ದೆಗಳ ಸಂಖ್ಯೆ 3ಕ್ಕಿಂತ ಕಡಿಮೆ ಇದ್ದರೇ ಎಸ್ಸಿ ಸಾಮಾನ್ಯ ಎಂದು ಪರಿಗಣಿಸುವ ಆದೇಶ ಹಿಂಪಡೆಯಬೇಕು. ರೋಸ್ಟರ್ ಬಿಂದುವಿನಲ್ಲಿ ಇರುವ ದೋಷಗಳನ್ನು ಸರಿಪಡಿಸಲು ಸಮಾಜ ಕಲ್ಯಾಣ ಇಲಾಖೆಗೆವಹಿಸಿರುವ ಜವಾಬ್ದಾರಿಯನ್ನು ಹಿಂಪಡೆದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ವಹಿಸಬೇಕು. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಆದ್ದರಿಂದ ಎರಡು ಕಡೆ ಒಳಮೀಸಲಾತಿ ನೀತಿ ಒಂದೇ ರೀತಿ ಇರಬೇಕು. ತೆಲಂಗಾಣ ಮಾದರಿ ಒಳಮೀಸಲಾತಿ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು. ರಾಜ್ಯದಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಜಾತಿ ಸೂಚಕದಡಿ ಮಾದಿಗರು, ಛಲವಾದಿಗರು ಇಬ್ಬರು ಪ್ರಮಾಣ ಪತ್ರ ಪಡೆಯುತ್ತಿದ್ದು, ಪ್ರಸ್ತುತ ಎ, ಬಿ, ಸಿ ಎಂದು ಒಳಮೀಸಲಾತಿ ವರ್ಗೀಕರಣ ಮಾಡಲಾಗಿದೆ. ವರ್ಗ 1 ಗುಂಪಿನಲ್ಲಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿದ್ದು, ಈ ಗುಂಪಿಗೆ ಕಳ್ಳದಾರಿಯಲ್ಲಿ ಅನೇಕರು ನುಸುಳುವ ಸಾಧ್ಯತೆ ಇದೆ.

ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಕ್ರಮಕೈಗೊಳ್ಳಬೇಕೆಂದು ಸಭೆ ನಿರ್ಣಯ ಕೈಗೊಂಡಿತು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಯಾರೊಂದಿಗೂ ಸ್ಪರ್ಧೆ ಮಾಡಲು ಶಕ್ತರಲ್ಲವೆಂದೇ ಒಳಮೀಸಲಾತಿ ಜಾರಿಗೆ ಮಾದಿಗರು ಹೋರಾಟ ನಡೆಸಿರುವುದು. ಚಪ್ಪಲಿ ಹೊಲಿಯುವುದು, ಕಸ ಗುಡಿಸುವುದು, ಕೃಷಿ–ಕಟ್ಟಡ ಕಾರ್ಮಿಕರಾಗಿರುವ ಮಾದಿಗರ ಬದುಕು ನಿಕೃಷ್ಟವಾಗಿದೆ ಎಂದರು. ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ, ಮಾಜಿ ಸದಸ್ಯ ಎಚ್.ದುಗ್ಗಪ್ಪ, ರಾಜ್ಯಸಭೆ ಮಾಜಿ ಸದಸ್ಯ ಡಾ.ಎಲ್.ಹನುಮಂತಯ್ಯ, ಬಾಬುರಾವ್ ಮುಡಬಿ, ಎಚ್.ಆರ್.ತೇಗನೂರು ಮುಂತಾದವರು ಉಪಸ್ಥಿತರಿದ್ದರು.

ಇ–ವೇಲ್:kolardccb@karnatakaapex.bank.in
ದೂರವಾಣಿ:222 042

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ

(ಅಂಚೆಪೆಟ್ಟಿಗೆ ಸಂಖ್ಯೆ 11 ಡಿ.ಸಿ.ಸಿ ಬ್ಯಾಂಕ್ ರಸ್ತೆ, ಕೋಲಾರ–563101)

ಸಂಖ್ಯೆ:ಕೆಸಿಡಿಸಿಸಿಬಿ/ಸಿಬಿಎಸ್/382/2026–27 ದಿನಾಂಕ : 02.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ 13 ಶಾಖೆಗಳು ಮತ್ತು ಕೇಂದ್ರ ಕಛೇರಿಯ 2025–2026ನೇ ಹಣಕಾಸು ವರ್ಷದ INFORMATION SYSTEM ಆಡಿಟ್ ಹಾಗೂ NFS OSG ಆಡಿಟ್ ಕೈಗೊಳ್ಳಲು ಅರ್ಹ ಮತ್ತು ಅನುಭವ ಹೊಂದಿದ ಲೆಕ್ಕಪರಿಶೋಧರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರವಾದ Request For Propsal (RFP) ದಸ್ತಾವೇಜು, ಅರ್ಹತಾ ಮಾನದಂಡಗಳು, ನಿಯಮಗಳು ಮತ್ತು ಷರತ್ತುಗಳು ಹಾಗೂ ಮಾರ್ಗಸೂಚಿಗಳು ವೆಬ್ ಸೈಟ್ www.kcdccb.bank.in ನಲ್ಲಿ ಲಭ್ಯವಿದೆ.

1) ಟೆಂಡರ್ ಪ್ರಾರಂಭ ದಿನಾಂಕ:04.05.2026 ಬೆಳ್ಳಿಗೆ 11.00 ಘಂಟೆ.
2) ಟೆಂಡರ್ ಕೊನೆಯ ದಿನಾಂಕ:18.05.2026 ಸಂಜೆ 4.00 ಘಂಟೆ.

ಆಸಕ್ತಿ ಉಳ್ಳ ಸಂಸ್ಥೆಯವರು ಪ್ರಸ್ತಾವನೆಯನ್ನು ಈ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಗಡುವಿನ ನಂತರ ಬಂದ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ

ದಣಿವರಿಯದ ಧೀಮಂತ ನಾಯಕ ಬಿಎಸ್‌ವೈ

ಹಳ್ಳಿ ಹಳ್ಳಿ ತಿರುಗಿರುವ ನಾಯಕ ಎಂದಿದ್ದ ಮಾಜಿ ಸಿಎಂ ರಾಮಕೃಷ್ಣ ಹೆಗಡೆ

ರಾಜ್ಯ ರಾಜಕಾರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಹೆಸರು ಪ್ರಮುಖವಾದುದು. ಅನೇಕ ಬಿರುದು ಬಾವಲಿಗಳಲ್ಲಿ ಅವರು ದಣಿವರಿಯದ ಧೀಮಂತ ನಾಯಕ ಎಂಬ ಬಿರುದೂ ಸಹ ಇತ್ತು.

1999ರ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭ ದೆಹಲಿಯಲ್ಲಿ ಬಿಜೆಪಿ ಹಾಗೂ ಶ್ರೀರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಕ್ಷದ ಆಯ್ದ ಪ್ರಮುಖರ ಸಭೆ ಜೋರಾಗಿ ನಡೆದಿತ್ತು. ಸಭೆಯಲ್ಲಿದ್ದ ಜೀವರಾಜ್ ಆಳ್ವರವರು ಕರ್ನಾಟಕದಲ್ಲಿ ನಾವು ಬಹುಮತ ಪಡೆದರೆ ಯಾರು ಮುಖ್ಯಮಂತ್ರಿ ಸ್ಥಾನ ಪಡೆಯಬಹುದು ಎಂದಾಗ, ಸಭೆಯಲ್ಲಿದ್ದ ರಾಮಕೃಷ್ಣ ಹೆಗಡೆಯವರು ಕೂಡಲೇ "ಕರ್ನಾಟಕದಲ್ಲಿ ಹಳ್ಳಿ ಹಳ್ಳಿಗಳನ್ನು ಸುತ್ತಿ ಪಕ್ಷ ಕಟ್ಟಿ ಜನಪ್ರಿಯರಾಗಿರುವ ನಾಯಕರು ಈಗ ಇರುವವರು ಇಬ್ಬರೇ... ಒಬ್ಬರು, ದೇವೇಗೌಡರು ಹಾಗೂ ಮತ್ತೊಬ್ಬರು ಯಡಿಯೂರಪ್ಪ" ಎಂದರಂತೆ. ಇದನ್ನು ಆ ಸಭೆಯಲ್ಲಿದ್ದ ಹಿರಿಯರೊಬ್ಬರು ತಿಳಿಸಿದರು.

ಭಾರತೀಯ ಜನಸಂಘ, ಬಿಜೆಪಿ ಎಂದರೆ ಕೇವಲ ಉತ್ತರ ಭಾರತದ ಪಾರ್ಟಿ, ಮೇಲ್ವರ್ಗದವರ ಪಾರ್ಟಿ, ನಗರವಾಸಿಗಳ ಪಾರ್ಟಿ, ಎಂಬ 'ಹಣೆ ಪಟ್ಟಿ'ಯನ್ನು ತೆಗೆದುಹಾಕಿ, ಬಿಜೆಪಿ ರೈತರ, ಕೃಷಿ ಕಾರ್ಮಿಕರ, ಹಿಂದುಳಿದವರ, ಸಮಾಜದ ಎಲ್ಲ ವರ್ಗಗಳ ಸಮಸ್ಯೆಗಳಿಗೆ ಸ್ಪಂದಿಸುವ ಪಾರ್ಟಿ ಎಂದು ಮಾಡುವಲ್ಲಿ ಕರ್ನಾಟಕದಲ್ಲಿ ಯಡಿಯೂರಪ್ಪನವರ ಹೆಸರು ಅಗ್ರಪಂಕ್ತಿಯಲ್ಲಿ ಬರುತ್ತದೆ.

ವಿಧಾನಸಭೆಯಲ್ಲಿ ನಡೆದ ಘಟನೆ

ಅಂದು ಸದನದಲ್ಲಿ ವೀಕ್ಷಿಸಿದ ನಮ್ಮ ಪಕ್ಷದ ಹಿರಿಯ ಕಾರ್ಯಕರ್ತರು ಒಬ್ಬರು ಹೇಳಿದ್ದು ಹಂಚಿಕೊಳ್ಳುತ್ತಿದ್ದೇನೆ. ಬಗರ್ ಹುಕುಂ ಸಾಗುವಳಿದಾರರಿಗೆ 'ಒಕ್ಕಲೆಬ್ಬಿಸುವ' ಕುರಿತಂತೆ ವಿಧಾನ ಸಭೆಯಲ್ಲಿ ಅಂದಿನ ಸಚಿವರಾಗಿದ್ದ ಬಿ. ರಾಚಯ್ಯನವರು ಮಸೂದೆ ಮಂಡಿಸಿದಾಗ, ಅದನ್ನು ಯಡಿಯೂರಪ್ಪನವರು ಕಟುವಾಗಿ ವಿರೋಧಿಸಿ, "ಯಾವುದೇ ಕಾರಣಕ್ಕೂ ಈ ಬಿಲ್ ಅನ್ನು ಪಾಸ್ ಮಾಡಬೇಡಿ. ಇದು ಬಡಜನರ ವಿರೋಧಿ ಕೃತ್ಯ ಆಗುತ್ತದೆ." ಎಂದು ತುಂಬಾ ಹಟ ಹಿಡಿದರಂತೆ. ಆದರೆ ಸಚಿವರು ಪ್ರಸ್ತಾಪಿತ ಮಸೂದೆಯ ಮಂಡನೆ ಮುಂದುವರೆಸಿದಾಗ, ಯಡಿಯೂರಪ್ಪನವರು ತಮ್ಮ ಸ್ಥಳದಿಂದ ಸದನದ ಬಾವಿಗೆ ನುಗ್ಗಿ ಸಚಿವರ ಎದುರು ನಿಂತು "ಯಾವುದೇ ಕಾರಣಕ್ಕೂ ಇದನ್ನು ಮಂಡಿಸಬೇಡಿ ವಾಪಸ್ ಪಡೆಯಿರಿ, ಇದರಿಂದ ನಿಮ್ಮ ಜನಕ್ಕೇ ತೊಂದರೆಯಾಗುತ್ತದೆ" ಎಂದು ಹತಾಶರಾಗಿ, ಅಳಲು ಆರಂಭಿಸಿದರಂತೆ.

ಡಾ.ಎ.ಹೆಚ್.ಶಿವಯೋಗಿ ಸ್ವಾಮಿ
ಮಾಜಿ ಮುಖ್ಯ ಸಚೇತಕರು

ಆಗ ಸಭಾಧ್ಯಕ್ಷರು ಸಚಿವರಿಗೆ ಸೂಚನೆ ನೀಡಿ "ಯಡಿಯೂರಪ್ಪನವರು ತುಂಬಾ ನೊಂದುಕೊಂಡಿದ್ದಾರೆ, ನೀವು ಅವರಿಗೆ ಮನವರಿಕೆ ಮಾಡಿಕೊಟ್ಟು, ನಾಳೆ 'ಬಿಲ್' ಮಂಡನೆ ಮಾಡಬಹುದೇ" ಎಂದಾಗ, ಸಚಿವರು ಒಪ್ಪಿ, ಬಿಲ್ಲನ್ನು ಮಾರನೇ ದಿನ ಮಂಡಿಸುವುದಾಗಿ ಹೇಳಿದರಂತೆ.

ಪಕ್ಷಕ್ಕೆ ಸ್ಪಂದಿಸಿದ ನಾಯಕ

1991ರ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗದಿಂದ ಯಡಿಯೂರಪ್ಪನವರು ಹಾಗೂ ದಾವಣಗೆರೆಯಿಂದ ಎಸ್. ಎ. ರವೀಂದ್ರನಾಥ್ ಅವರು ಸ್ಪರ್ಧೆ ಮಾಡಿದ್ದರು. ಆಗ ದಾವಣಗೆರೆಯಲ್ಲಿ ಮತ ಎಣಿಕೆಯ ಕೇಂದ್ರದಲ್ಲಿ ಗೊಂದಲ ಉಂಟಾಗಿತ್ತು. ಪಕ್ಷದ ವರಿಷ್ಠರಾದ ವಿಧಾನ ಪರಿಷತ್ ಸದಸ್ಯರಾಗಿದ್ದ ಕರಂಬಳ್ಳಿ ಸಂಜೀವ ಶೆಟ್ಟರವರನ್ನು ನನ್ನ ಮೋಟಾರ್ ಬೈಕ್ ಮೇಲೆ ಟೆಲಿಫೋನ್ ಕಛೇರಿಗೆ ಕರೆದುಕೊಂಡು ಹೋದೆ. ಅವರು ರಾತ್ರಿ 11:30 ವೇಳೆಗೆ ಯಡಿಯೂರಪ್ಪನವರಿಗೆ ಫೋನ್ ಮೂಲಕ ವಿಷಯ ತಿಳಿಸಿದಾಗ, ತಾವೇ ಬಹುದೊಡ್ಡ ಅಂತರದಲ್ಲಿ ಸೋತಿದ್ದರೂ, "ಸಂಜೀವಣ್ಣ ನಾನು ಬರ್ತಾ ಇದ್ದೇನೆ" ಎಂದು ಹೇಳಿ ರಾತ್ರಿ ಎರಡು ಗಂಟೆಯ ವೇಳೆಗೆ ದಾವಣಗೆರೆಗೆ ಮತ ಎಣಿಕೆ ಕೇಂದ್ರಕ್ಕೆ ಬಂದರು. ನಂತರ ಅವರು ರಾಷ್ಟ್ರೀಯ ನಾಯಕರನ್ನು ಸಂಪರ್ಕಿಸಿ ವಸ್ತು ಸ್ಥಿತಿ ತಿಳಿಸಿ 'ಮರು ಮತ' ಎಣಿಕೆಗೆ ಒತ್ತಾಯ ಮಾಡಿದ ಪರಿಣಾಮವಾಗಿ "ದಾವಣಗೆರೆ ಲೋಕಸಭೆ ಮತದಾನದ ಮರು ಎಣಿಕೆ" ಮತ್ತೊಮ್ಮೆ ಚಿತ್ರದುರ್ಗದಲ್ಲಿ ನಡೆಯಿತು.

ಸ್ವತಃ ತಾವೇ ಸೋತು ಹೋಗಿದ್ದರೂ, ಪಕ್ಷದ ಅವಶ್ಯಕತೆಗೆ ಸ್ಪಂದಿಸಿದ ಅವರ ಗುಣ ಪ್ರೇರಣಾದಾಯಿಯಾಗಿತ್ತು.

ಬಮೂಲ್

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಬೆಂಗಳೂರು ಡೇರಿ ಪ್ರಾಂಗಣ: ಡಾ|| ಎಂ.ಹೆಚ್.ಮರೀಗೌಡ ರಸ್ತೆ, ಡಿ.ಆರ್. ಕಾಲೇಜ್ ಅಂಚೆ, ಬೆಂಗಳೂರು–560029.

ಕಾಮಗಾರಿ ಕೆಲಸಗಳ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಭಾಗ–1 ಟೆಂಡರ್‌ಗೆ ಆಹ್ವಾನ (ಐ ಎಫ್ ಟಿ)

ಐ.ಎಫ್.ಟಿಸಂಖ್ಯೆ:ಬಮೂಲ್/ಪ್ರವ್ಯ(ಅಭಿ)/ಇ–ಟೆಂಡರ್/ಸಿವಿಲ್–3/01/2026–27 ದಿನಾಂಕ: 30.04.2026

ಇ–ಟೆಂಡರ್ ಪ್ರಕಟಣೆ

ಬೆಂಗಳೂರು ಸಹಕಾರ ಹಾಲು ಒಕ್ಕೂಟದಲ್ಲಿನ ಕಾಮಗಾರಿ ಕೆಲಸಗಳನ್ನು ಮಾಡಿಸುವ ಸಲುವಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆ/ ಕೇಂದ್ರಿಯ ಲೋಕೋಪಯೋಗಿ ಇಲಾಖೆ/ಎಂ.ಇ.ಎಸ್ ಇಲಾಖೆಗಳಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇ–ಟೆಂಡರ್ ಪೋರ್ಟಾಲ್ ಆಹ್ವಾನಿಸಲಾಗಿದೆ. ವಿವರ ಮತ್ತು ವೇಳಾ ಪಟ್ಟಿ ಈ ಕೆಳಕಂಡಂತೆ ಇರುತ್ತದೆ. ಇ.ಎಂ.ಡಿ. ಬಾಬ್ತಿನ ಮೊತ್ತವು ಟೆಂಡರ್‌ನ ಸಿಂಧುತ್ವದ ಅವಧಿಯ ನಂತರದ 45 ದಿನಗಳ ವರೆಗೆ ಸಿಂಧುವಾಗಿರಬೇಕು ಹಾಗೂ ಇಎಂಡಿ ಮೊತ್ತವನ್ನು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಯಾವುದೇ ಒಂದು ಮಾದರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ.

ಪ್ಯಾಕೇಜ್ ಸಂಖ್ಯೆ	ಕೆಲಸದ ವಿವರ	ಕೆಲಸದ ಅಂದಾಜು ಮೌಲ್ಯ ರೂ ಗಳಲ್ಲಿ	ಇಎಂಡಿ ಮೊತ್ತ ರೂ ಗಳಲ್ಲಿ	ಪೂರ್ಣಗೊಳಿಸುವ ಕಾಲಾವಧಿ	ಗುತ್ತಿಗೆದಾರರ ದರ್ಜೆ
KW-2	ನಂದಿನಿ ಹಾಲು ಉತ್ಪನ್ನ ಸಂಕೀರ್ಣ ಕನಕಪುರ ಘಟಕದಲ್ಲಿ ಹೆಲಿಪ್ಯಾಡ್ ನಿರ್ಮಾಣ ಮಾಡುವ ಕಾಮಗಾರಿ.	ರೂ 31,92,158 + 18% ಜಿ.ಎಸ್.ಟಿ = ರೂ 37,66,747	50000	60 ದಿನಗಳು	ದರ್ಜೆ–3 ಮತ್ತು ಮೇಲ್ಪಟ್ಟು
KW-2	ನಾಡಪ್ರಭು ಕೆಂಪೇಗೌಡ ಬಡಾವಣೆ, ಬ್ಲಾಕ್ ಸಂಖ್ಯೆ–09 ರ ಕನ್ನಲ್ಲಿ ಗ್ರಾಮದ ಸರ್ವೆ ನಂ. 93 ರಲ್ಲಿ 06 ಎಕರೆ ಜಾಗಕ್ಕೆ ಪ್ರೀ–ಕ್ಯಾಸ್ಟ್ ಆರ್.ಸಿ.ಸಿ ಕಾಂಪೌಂಡ್ ನಿರ್ಮಿಸುವ ಕಾಮಗಾರಿ	ರೂ 21,35,635+ 18% ಜಿ.ಎಸ್.ಟಿ = ರೂ 25,20,049	31500	60 ದಿನಗಳು	ದರ್ಜೆ–3 ಮತ್ತು ಮೇಲ್ಪಟ್ಟು
KW-3	ನಂದಿನಿ ಹಾಲು ಉತ್ಪನ್ನ ಸಂಕೀರ್ಣ ಕನಕಪುರ ಘಟಕದಲ್ಲಿ ಯು.ಹೆಚ್.ಟಿ ಹಾಲು ರವಾನೆ ಮಾಡುವ ಡಾಕ್‌ಗೆ ಎಂ.ಎಸ್. ಟ್ರಸ್ ಮತ್ತು ಶೀಟ್ ಅಳವಡಿಸುವ ಕಾಮಗಾರಿ	ರೂ 1028792+ 18% ಜಿ.ಎಸ್.ಟಿ = ರೂ 12,13,975	18500	90 ದಿನಗಳು	ದರ್ಜೆ–3 ಮತ್ತು ಮೇಲ್ಪಟ್ಟು

1	ತಾಂತ್ರಿಕ ಟೆಂಡರ್ ದಸ್ತಾವೇಜನ್ನು ಸ್ವಿಕರಿಸಲು (Access to E- Tender Portal only) ಲಭ್ಯತೆ.	04.05.2026 ರಿಂದ 18.05.2026 ರಂದು ಮಧ್ಯಾಹ್ನ 3.0 ಗಂಟೆ ಯವರೆಗೆ
2	ಟೆಂಡರ್‌ನ ಸ್ಪಷ್ಟೀಕರಣ ಕೋರಲು ಕೊನೆಯ ದಿನಾಂಕ	14.05.2026 ರಂದು ಮಧ್ಯಾಹ್ನ 2.30ಗಂಟೆಯ ವರೆಗೆ
3	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	18.05.2026 ರಂದು ಮಧ್ಯಾಹ್ನ 3.00 ಗಂಟೆಯ ವರೆಗೆ
4	ತಾಂತ್ರಿಕ ಟೆಂಡರ್ (ಭಾಗ–1) ತೆರೆಯುವ ದಿನಾಂಕ/ಸಮಯ	20.05.2026 ರಂದು ಬೆಳಿಗ್ಗೆ 10.30 ಗಂಟೆಗೆ
5	ವಾಣಿಜ್ಯ ಟೆಂಡರ್ (ಭಾಗ–2) ತೆರೆಯುವ ದಿನಾಂಕ/ಸಮಯ	ಉತ್ತೀರ್ಣರಾದ ಟೆಂಡರ್‌ದಾರರಿಗೆ ತಿಳಿಸಲಾಗುವುದು.
6	ತಾಂತ್ರಿಕ/ ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ	ಮಂಡಳಿ ಸಭಾಂಗಣ, ಬೆಂಗಳೂರು ಸಹಕಾರ ಹಾಲು ಒಕ್ಕೂಟ, ಡಾ"ಎಂ. ಹೆಚ್. ಮರೀಗೌಡರಸ್ತೆ, ಬೆಂಗಳೂರು–560029.

ಟೆಂಡರ್ ಸಂಬಂಧ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಬೆಂಗಳೂರು ಸಹಕಾರ ಹಾಲು ಒಕ್ಕೂಟ

ವೋಟ್ ಚೋರಿ ಎನ್ನುವ ರಾಹುಲ್ ಎಲ್ಲಿದ್ದಾರೆ?

ಶೃಂಗೇರಿ ಕ್ಷೇತ್ರದ ಫಲಿತಾಂಶ ಪ್ರಕಟಿಸಿ ಹೈಕೋರ್ಟ್ ಆದೇಶ ಪಾಲಿಸಿ: ವಿಪಕ್ಷ ನಾಯಕ ಅಶೋಕ ಆಗ್ರಹ

ಸಂ.ಕ.ಸಮಾಚಾರ, ಬೆಂಗಳೂರು
ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಬಿಜೆಪಿ ಪರವಾಗಿ ಬರಲಿದೆ ಎಂದು ತಿಳಿದಾಕ್ಷಣ ಅಧಿಕಾರಿಗಳು ಉಲ್ಟಾ ಹೊಡೆದಿದ್ದಾರೆ. ವೋಟ್ ಚೋರಿ ಎನ್ನುವ ರಾಹುಲ್ ಗಾಂಧಿ ಈಗ ಎಲ್ಲಿದ್ದಾರೆ? ಎಂದು ವಿಪಕ್ಷ ನಾಯಕ ಆರ್. ಅಶೋಕ ಅವರು ಕಿಡಿಕಾರಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ಬಾರಿ ಅಂಚೆ ಮತಗಳನ್ನು ಮೊದಲು ಎಣಿಸುತ್ತಾರೆ. ಬಳಿಕ ಮತಯಂತ್ರದಲ್ಲಿ ಮತಗಳನ್ನು ಎಣಿಸಲಾಗುತ್ತದೆ. ಆದರೆ ಶೃಂಗೇರಿಯಲ್ಲಿ ಎಲ್ಲವನ್ನೂ ಉಲ್ಟಾ ಪಲ್ಟಾ ಮಾಡಲಾಗಿದೆ. ಈ ಬಗ್ಗೆ ಕೋರ್ಟ್ ಮೊರೆ ಹೋಗಲಾಗಿತ್ತು. ರಾಜ್ಯ ಸರ್ಕಾರ ಫಲಿತಾಂಶವನ್ನು ತಡೆಹಿಡಿದಿರುವುದು ಅಧಿಕಾರದ ದುರುಪಯೋಗವಾಗಿದೆ. ಚುನಾವಣಾಧಿಕಾರಿ ಕೂಡಲೇ ಫಲಿತಾಂಶ ಪ್ರಕಟಿಸಬೇಕು ಎಂದು ಆಗ್ರಹಿಸಿದರು. ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಚುನಾವಣಾಧಿಕಾರಿ ಪ್ರಕಟಿಸದಂತೆ ಕಾಂಗ್ರೆಸ್ ಸರ್ಕಾರ ಒತ್ತಡ ಹೇರಿದೆ. 52 ಅಂಚೆ ಮತಗಳು ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರಿಗೆ ದೊರೆತಿದೆ. ಮತ ಎಣಿಕೆಯಲ್ಲಿ ಯಾರಿಗೆ ಹೆಚ್ಚು ಮತ ಬರುತ್ತದೋ ಅದನ್ನು ಘೋಷಿಸಬೇಕೆಂದು ಕೋರ್ಟ್ ಆದೇಶದಲ್ಲಿ ಹೇಳಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಕೇಳಿದಾಗ, ಹೈಕೋರ್ಟ್‌ಗೆ ಮಾಹಿತಿ ನೀಡುತ್ತೇವೆ ಎಂದು ಸಬೂಬು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿಯ ಮೇಲೆ ಒತ್ತಡ ಹೇರಿ ಫಲಿತಾಂಶವನ್ನು ತಡೆಹಿಡಿದಿದೆ. ಈ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ. ಇದು ರಾಜ್ಯದ ಜನತೆಗೆ ಬಗೆದ ದ್ರೋಹ ಎಂದರು.

ಮುಖ್ಯಮಂತ್ರಿ ಯಾರು?: ಮೇ 15ಕ್ಕೆ ಸಿದ್ದರಾಮಯ್ಯನವರ ಕಥೆ ಮುಗಿಯಿತು ಎಂದು ಡಿ.ಕೆ.ಶಿವಕುಮಾರ್ ತಂಡ ಹೇಳುತ್ತಿದೆ. ಆದರೆ ಮೂರು ವರ್ಷಗಳ ಸಂಭ್ರಮಾಚರಣೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳುತ್ತಿದ್ದಾರೆ. ಇದು ಮುಕ್ತಾಯದ ಸಮಾರಂಭವೂ ಆಗಿರಬಹುದು. ಇನ್ನೂ ಯಾರು ಸಿಎಂ ಎಂದು ಯಾರಿಗೂ ಗೊತ್ತಿಲ್ಲ. ಕಾಂಗ್ರೆಸ್ ಪಕ್ಷ ಒಡೆದು ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ. ಮಲ್ಲಿಕಾರ್ಜುನ ಖರ್ಗೆ ಹೊಸ ಬಾಗಿಲು ತೆರೆದಿದ್ದಾರೆ. ಸಮಾವೇಶ ಮಾಡುವ ಮುನ್ನ ಯಾರ ನೇತೃತ್ವದಲ್ಲಿ ಮಾಡುತ್ತೇವೆಂದು ತಿಳಿಸಬೇಕಾಗುತ್ತದೆ ಎಂದರು.

ಕಾಂಗ್ರೆಸ್ಸಿಗರು 'ವೋಟ್ ಚೋರರು: ವಿಜಯೇಂದ್ರ

ಚಿತ್ರದುರ್ಗ: ಬಿಜೆಪಿ ವಿರುದ್ಧ ವೋಟ್ ಚೋರಿ ಆಂದೋಲನ ನಡೆಸಿ ಜನರ ಕಿವಿಗೆ ಹೂವು ಮುಡಿಸಿದ್ದ ಕಾಂಗ್ರೆಸ್ಸಿಗರ ನಿಜಬಣ್ಣ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆಮತಗಳ ಮರು ಎಣಿಕೆ ವೇಳೆ ಬಹಿರಂಗಗೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಅಭ್ಯರ್ಥಿ ಜೀವರಾಜ್ ಗೆಲುವಿ ನಿಂದ ಮುಚ್ಚಿಟ್ಟಿದ್ದ ಸತ್ಯ ಹೊರಬಂದಿದೆ. ಕಾಂಗ್ರೆಸ್ ನಾಯಕರು ಇಷ್ಟು ನಾಲಾಯಕರಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ಸೂಚನೆ ಯಿಂದ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅಕ್ರಮ ಎಸಗಿದ್ದಾರೆ. ಫಲಿತಾಂಶ ಕುರಿತು ಕಾಂಗ್ರೆಸ್ಸಿಗರು ಉತ್ತರ ನೀಡಬೇಕು, ಜನರ ಕ್ಷಮೆ ಕೇಳಬೇಕು. ವೋಟ್ ಚೋರಿ ಹೇಳಿಕೊಂಡಿದ್ದವರ ಬಂಡವಾಳ ಬಯಲು ಆಗಿದೆ ಎಂದು ದೂರಿದರು. ಡಿಕೆಶಿ ಮೊದಲು ಶೃಂಗೇರಿ ಕ್ಷೇತ್ರದ ಬಗ್ಗೆ ಮಾತಾಡಲಿ. 52 ಮತಗಳಿಂದ ಜೀವರಾಜ್ ಗೆಲುವಿನ ಬಗ್ಗೆ ಉತ್ತರಿಸಲಿ. ಪ್ರಜಾಪ್ರಭುತ್ವ ಬಗ್ಗೆ ಗೌರವವಿದ್ದರೆ ಈ ರೀತಿ ಮಾತನಾಡು ತ್ತಿರಲಿಲ್ಲ. ಪುಗ್ಸಟ್ಟೆ ಮಾತು ನಿಲ್ಲಿಸಿ, ಜನರ ತೀರ್ಪನ್ನು ಗೌರವದಿಂದ ಸ್ವೀಕರಿಸಲಿ ಎಂದರು.

ಸುದೀರ್ಘ ಹೋರಾಟಕ್ಕೆಜಯ: ಜೀವರಾಜ್

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆಯಲ್ಲಿ ಕಳೆದ ಮೂರು ವರ್ಷಗಳಿಂದ ನಡೆಸಿದ ಸುದೀರ್ಘ ಕಾನೂನು ಹೋರಾಟಕ್ಕೆ ನ್ಯಾಯ ಸಿಕ್ಕಿದೆ ಎಂದು ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, 2023ರ ಮೇ 13ರಂದು ಆರಂಭವಾದ ಈ ಹೋರಾಟವು ಹೈಕೋರ್ಟ್, ಸುಪ್ರೀಂ ಕೋರ್ಟ್ ಮಟ್ಟದವರೆಗೂ ಸಾಗಿದ್ದು, ನಿರಂತರವಾಗಿ ನ್ಯಾಯಕ್ಕಾಗಿ ಪ್ರಯತ್ನಿಸಲಾಗಿದೆ ಎಂದು ಹೇಳಿದರು.

ಮತಪತ್ರಗಳ ತಿರುಚುವಿಕೆ: ರಾಜೇಗೌಡ

ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆಯಲ್ಲಿ ಅಂಚೆ ಮತ ಪತ್ರಗಳನ್ನು ತಿರುಚಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಕಾಂಗ್ರೆಸ್ ಶಾಸಕ ಟಿ.ಡಿ.ರಾಜೇಗೌಡ ಆರೋಪಿಸಿದರು.

ಅಂಚೆ ಮತಪತ್ರಗಳ ಮರು ಎಣಿಕೆ ಮುಗಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಟ್ರಾಂಗ್ ರೂಮ್‌ನಲ್ಲಿ ಸಂರಕ್ಷಿಸಲಾದ ಬಾಕ್ಸ್‌ಗಳನ್ನು ಪರಿಶೀಲಿಸಿದ ವೇಳೆ ಬೀಗ ಒಡೆದಿರುವುದು, ಟ್ರಂಕ್‌ಗಳನ್ನೇ ಮುರಿದಿರುವುದು ಕಂಡು ಬರುತ್ತದೆ. ನನಗೆ ಇದ್ದ ಅಂಚೆ ಮತಗಳಲ್ಲಿ ಮತ್ತೊಂದು ಗೆರೆ ಎಳೆಯುವ ಮೂಲಕ ಅದನ್ನು ಅಮಾನ್ಯಗೊಳಿಸಲು ಸಂಚು ನಡೆದಿದೆ. ಮತಪತ್ರದಲ್ಲಿ ಮತದಾರರು ಬಳಸಿದ ಪೆನ್ನಿಗಿಂತಲೂ ಭಿನ್ನವಾದ ಒಂದೇ ಇಂಕಿನ ಪೆನ್ನನ್ನು ಬಳಸಿ ಗೆರೆ ಎಳೆಯಲಾಗಿದೆ. ನನಗೆ ಬಂದಿದ್ದ ಮತಗಳಲ್ಲಿ 158 ಅಮಾನ್ಯವಾಗಿವೆ. ಈ ಕೃತ್ಯವನ್ನು 3 ವರ್ಷಗಳ ಹಿಂದೆಯೇ ಮಾಡಲಾಗಿದೆ ಎಂದು ಆರೋಪಿಸಿದರು.

ರಾಜಕಾರಣಿಗಳು ಸ್ವಾರ್ಥ ಬಿಟ್ಟರೆ ರಾಜ್ಯಕ್ಕೆ ಒಳ್ಳೆಯದು

ಪರಿಷತ್‌ನ ಗೌರವ ಹೆಚ್ಚಿಸುವೆ: ಹೊರಟ್ಟಿ

ಸಂ.ಕ.ಸಮಾಚಾರ, ಕೊಪ್ಪಳ
ರಾಜಕಾರಣಿಗಳು ಸಾರ್ವಜನಿಕರ ಬದುಕಿಗೆ ಸ್ಪಂದಿಸುವುದು ಕಡಿಮೆ ಆಗಿದೆ. ಸ್ವಾರ್ಥ ಹೆಚ್ಚಾಗಿದೆ. ಎಲ್ಲಿಯವರೆಗೂ ಸ್ವಾರ್ಥ ಕಡಿಮೆ ಆಗುವುದಿಲ್ಲವೋ, ಅಲ್ಲಿಯವರೆಗೂ ರಾಜ್ಯದ ಜನತೆಗೆ ಒಳ್ಳೆಯದಾಗಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಗವಿಮಠದ ಮುಂಭಾಗದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಉತ್ತಮವಾದ ವಿಷಯಗಳ ಚರ್ಚೆ ಮಾಡುವುದನ್ನು ಬಿಟ್ಟು, ಹನಿಟ್ರ್ಯಾಪ್ ಸೇರಿ ವಿವಿಧ ವಿಷಯ ಚರ್ಚೆ ಮಾಡುತ್ತಾರೆ. ಎಲ್ಲ ಪಕ್ಷದ, ವಿರೋಧ ಪಕ್ಷದ ನಾಯಕರು, ಸಭಾ ನಾಯಕರು, ಮುಖ್ಯಸಚೇತಕರನ್ನು ಕರೆದು, ವಿಷಯ ಬಿಟ್ಟು ಬೇರೆ ಮಾತನಾಡಿದರೆ ಸದನದಿಂದ ನಿರ್ದಾಕ್ಷಿಣ್ಯವಾಗಿ ಹೊರ ಹಾಕುತ್ತೇವೆ ಎಂದು ಎಚ್ಚರಿಕೆ ನೀಡಿದ್ದೇನೆ. ಕಳೆದ ಅಧಿವೇಶನ ಚೆನ್ನಾಗಿ ನಡೆಸಿದ್ದು, ಈ ಬಾರಿ ಸದನದಲ್ಲಿ 23 ಜನ ಬಜೆಟ್ ಮತ್ತು 23 ಜನ ಮಸೂದೆ ಮೇಲೆ ಮಾತನಾಡಿದರು.

ಶಾಸಕರಿಗೆ ಎಷ್ಟೇ ತರಬೇತಿ ನೀಡಿದರೂ ನಾಯಿಯ ಬಾಲ ಡೊಂಕೆ. ಈಗಾಗಲೇ ಎರಡು ದಿನ ತರಬೇತಿ ನೀಡಿದ್ದೇನೆ. ಇಡೀ ಭಾರತದಲ್ಲಿ ಕರ್ನಾಟಕದ್ದು ಶ್ರೇಷ್ಠವಾದ ವಿಧಾನ ಪರಿಷತ್ತು. ಅದರ ಘನತೆ, ಗೌರವ ಹೆಚ್ಚಿಸಲು ಪ್ರಯತ್ನ ಮಾಡುತ್ತೇವೆ. ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಮಂಗಳವಾರ ಮತ್ತು ಬುಧವಾರ ಎರಡು ದಿನ ಉತ್ತರಕರ್ನಾಟಕದ ಬಗ್ಗೆಯೇ ಚರ್ಚೆ ಮಾಡುತ್ತೇವೆ ಎಂದರು.

ವಿನಯ್ ಕುಲಕರ್ಣಿ ಕುರಿತಾಗಿ ಮಾತನಾಡುತ್ತ, ನ್ಯಾಯಾಲಯದ ತೀರ್ಪಿಗೆ ಗೌರವ ಕೊಡಬೇಕು. ನ್ಯಾಯಾಲಯದ ತೀರ್ಮಾನವನ್ನು ಗೌರವದಿಂದ ಪಾಲಿಸಬೇಕು ಎಂದರು. ಮಹಿಳಾ ಮೀಸಲಾತಿ ಆಗುವುದಿಲ್ಲ. ದೇಶದಲ್ಲಿ ಶೇ.52ರಷ್ಟು ಮಹಿಳೆಯರಿದ್ದಾರೆ. ಮಹಿಳೆಯರೇ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದರೆ, ದೇಶವನ್ನು ಆಳಬಹುದು. ಇವರು ಮಾಡುವುದಿಲ್ಲ. ಮಹಿಳಾ ಮೀಸಲಾತಿ ಮಾಡುವುದು ಇಂದಿನ ಕಾಲಕ್ಕೆ ಅವಶ್ಯಕತೆ ಇಲ್ಲ. ಹೆಣ್ಣುಮಕ್ಕಳು ಒಟ್ಟಾದರೆ ಒಳ್ಳೆಯ ಭವಿಷ್ಯ ಇದೆ ಎಂದರು.

ಡಿಕೆಶಿ ಒಂದು ಗೆರೆದಾಡಿದರೆ ಸಿಎಂ ಆಗ್ತಾರೆ: ಶ್ರೀರಾಮುಲು

ಬದಾಮಿ ಕ್ಷೇತ್ರದಲ್ಲಿ ನನಗೆ ಮೋಸವಾಗಿದೆ

ಸಂ.ಕ.ಸಮಾಚಾರ, ಚಿತ್ರದುರ್ಗ
ರಾಜ್ಯದಲ್ಲಿ ಕ್ಷಿಪ್ರ ರಾಜಕೀಯ ಕ್ರಾಂತಿ ಆಗಲಿದೆ, ಸಿದ್ದರಾಮಯ್ಯ ಕುರ್ಚಿ ಬಿಡುವ ಸಮಯ ಹತ್ತಿರದಲ್ಲಿದೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿ.ಕೆ.ಶಿವಕುಮಾರ್ ಒಂದು ಗೆರೆ ದಾಟಿದರೆ ಸಿಎಂ ಆಗಲಿದ್ದಾರೆ. ಯಾವ ಗೆರೆ ಎಂದು ನಾನು ಹೇಳಲು ಹೋಗೋದಿಲ್ಲ. ಡಿಕೆಶಿ ಅರ್ಥ ಮಾಡಿಕೊಳ್ಳುತ್ತಾರೆಂದು ಹೇಳಿದರು.

ಶಿವಕುಮಾರ್ ತಾತ ಆಗಿರುವ ಸಂಭ್ರಮದಲ್ಲಿದ್ದು, ಮುಖ್ಯಮಂತ್ರಿ ಆಗುವ ಮತ್ತೊಂದು ಸಂತೋಷದ ನಿರೀಕ್ಷೆ ಯಲ್ಲಿದ್ದಾರೆ ಎಂದರು. ಸಿದ್ದರಾಮಯ್ಯ ಅವರನ್ನೂ ಎಲ್ಲರೂ ಕೈಬಿಡಲಿದ್ದು, ಕೇವಲ ಪುತ್ರ ಯತೀಂದ್ರ ಮಾತ್ರ ಉಳಿಯುತ್ತಾರೆ. ಶೃಂಗೇರಿ ರೀತಿಯಲ್ಲೇ 2008ರಲ್ಲಿ ನನಗೆ ಬದಾಮಿ ಕ್ಷೇತ್ರದಲ್ಲಿ ಮೋಸ ಆಗಿತ್ತು. ನಾನು ತಡವಾಗಿ ಹೋದೆ, ಅಷ್ಟರಲ್ಲಿ ಘೋಷಿಸಿದ್ದರು. ನಾನು ಕೋರ್ಟ್‌ಗೆ ಹೋಗಲು ಆಗಲಿಲ್ಲ ಎಂದು ಹೇಳಿದರು.

ಉಪ ಚುನಾವಣೆಯ ಮತ ಎಣಿಕೆ ಇಂದು

ಬಾಗಲಕೋಟೆಯ ವಿಜಯ ಯಾರಿಗೆ?

ಸಂ.ಕ.ಸಮಾಚಾರ, ಬಾಗಲಕೋಟೆ
ನವನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಉಪಚುನಾವಣೆಯ ಮತ ಎಣಿಕೆ ಸೋಮವಾರ ಬೆಳಗ್ಗೆಯಿಂದಲೇ ನಡೆಯಲಿದೆ. ಒಟ್ಟು 14 ಕೌಂಟರ್‌ಗಳಲ್ಲಿ 23 ಸುತ್ತಿನಲ್ಲಿ ಮತ ಎಣಿಕೆ ಕಾರ್ಯ ಜರುಗಲಿದೆ.

ತೋಟಗಾರಿಕೆ ವಿಜ್ಞಾನಗಳ ವಿವಿಗೆ ಸಿಎಪಿಎಫ್, ಕೆಎಸ್‌ಆರ್‌ಪಿ ಹಾಗೂ ಸ್ಥಳೀಯ ಪೊಲೀಸರು ಹೀಗೆ ಮೂರು ಸುತ್ತಿನ ಭದ್ರತೆಯನ್ನು ನಿಯೋಜಿಸಲಾಗಿದೆ. ಬೆಳಗ್ಗೆ 7 ಗಂಟೆಗೆ ಸ್ಟ್ರಾಂಗ್ ರೂಮ್ ತೆರೆದು 8 ಗಂಟೆಯಿಂದ 4ನೇ ಕೊಠಡಿಯಲ್ಲಿ 14 ಟೇಬಲ್‌ಗಳಲ್ಲಿ ಮತ ಎಣಿಕೆ ಕಾರ್ಯ ಶುರುವಾಗಲಿದೆ. ಮಧ್ಯಾಹ್ನ 12ರ ಹೊತ್ತಿಗೆ ಹಂತ ಹಂತವಾಗಿ ಫಲಿತಾಂಶ ಹೊರಬೀಳುವ ನಿರೀಕ್ಷೆಯಿದೆ. ಪ್ರತಿ ಟೇಬಲ್‌ಗೆ ತಲಾ ಒಬ್ಬರು ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ಅಬ್ಸರವರ ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಓರ್ವ ಸಹಾಯಕ ಚುನಾವಣಾಧಿಕಾರಿಗಳು ಇರುತ್ತಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಸೇರಿ 9 ಜನ ಕಣದಲ್ಲಿದ್ದಾರೆ.

ದಾವಣಗೆರೆ ದ. ಅಧಿಪತಿ ಯಾರು?

ಸಂ.ಕ.ಸಮಾಚಾರ, ದಾವಣಗೆರೆ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಮತ ಎಣಿಕೆ ನಗರದ ಹಳೆಯ ಪಿ.ಬಿ.ರಸ್ತೆಯಲ್ಲಿರುವ ಡಿಆರ್‌ಆರ್ ಶಾಲೆಯಲ್ಲಿ ಬೆಳಗ್ಗೆ 8ರಿಂದ ಆರಂಭವಾಗಲಿದ್ದು, ಮತ ಎಣಿಕೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಎಣಿಕೆ ಬೆಳಗ್ಗೆ 8ಕ್ಕೆ ಆರಂಭವಾಗಲಿದ್ದು, ಅಭ್ಯರ್ಥಿಗಳು, ಚುನಾವಣಾ ಏಜೆಂಟರು ಹಾಗೂ ಮತ ಎಣಿಕೆ ಸಿಬ್ಬಂದಿ ಬೆಳಗ್ಗೆ 7ಕ್ಕೆ ಹಾಜರಿರಲು ತಿಳಿಸಲಾಗಿದೆ. ಭದ್ರತಾ ಕೊಠಡಿಯನ್ನು ಬೆಳಗ್ಗೆ 7.30ರಿಂದ 7.35ರೊಳಗೆ ಚುನಾವಣಾ ವೀಕ್ಷಕರ, ಅಭ್ಯರ್ಥಿಗಳ, ಏಜೆಂಟರ ಸಮ್ಮುಖದಲ್ಲಿ ತೆರೆಯಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಸಂತೋಷ್‌ಕುಮಾರ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಚಿವ ಎಸ್. ಎಸ್‌ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ ಶಾಮನೂರು, ಬಿಜೆಪಿಯಿಂದ ಶ್ರೀನಿವಾಸ ದಾಸ್ ಕರಿಯಪ್ಪ ಅವರು ಸ್ಪರ್ಧಿಸಿದ್ದಾರೆ. ಇವಿಎಂ ಮತ ಎಣಿಕೆ ಕಾರ್ಯಕ್ಕಾಗಿ 14 ಟೇಬಲ್ ವ್ಯವಸ್ಥೆ ಮಾಡಿದ್ದು, 21 ಸುತ್ತುಗಳ ಮತ ಎಣಿಕೆ ನಡೆಯಲಿದೆ. ಅಂಚೆ ಮತ ಪತ್ರಗಳ ಎಣಿಕೆಗೆ ಒಂದು ಟೇಬಲ್ ಹಾಗೂ ಇಟಿಪಿಬಿಎಸ್ ಸ್ಕ್ಯಾನಿಂಗ್‌ಗಾಗಿ ಒಂದು ಟೇಬಲ್ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬರು ಎಣಿಕೆ ಮೇಲ್ವಿ ಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ವೀಕ್ಷ ಕರನ್ನು ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬ ಸಹಾಯಕ ಚುನಾವಣಾಧಿಕಾರಿ ನಿಯೋಜಿಸಲಾಗಿದೆ ಎಂದು ತಿಳಿಸಿದರು.

ತುಂಗಭದ್ರಾ 33 ಗೇಟ್‌ಗಳ ದುರಸ್ತಿ ಯಶಸ್ವಿ

ಮಳೆಗಾಲ ಮುನ್ನೆಚ್ಚರಿಕೆಯಿಂದ ಮೇ 15ಕ್ಕೆ ಲೋಕಾರ್ಪಣೆ ಗುರಿ : ಡಿಕೆಶಿ

ಸಂ.ಕ.ಸಮಾಚಾರ, ಹೊಸಪೇಟೆ
2024 ಆಗಸ್ಟ್ 10 ರಂದು ರಾತ್ರಿ ತುಂಗಭದ್ರಾ ಅಣೆಕಟ್ಟಿನ 19ನೇ ಕ್ರೆಸ್ಟ್ ಗೇಟ್ ಕಳಚಿದ ಅನಾಹುತದ ನಂತರ ತಾಂತ್ರಿಕ ತಂಡ ಕೈಗೊಂಡ ತುರ್ತು ದುರಸ್ತಿ ಕಾರ್ಯಗಳು ಈಗ ಅಂತಿಮ ಹಂತಕ್ಕೆ ತಲುಪಿವೆ. ಮೇ 15ರೊಳಗೆ ಸಂಪೂರ್ಣ ಕಾಮಗಾರಿ ಮುಗಿಸಿ ಲೋಕಾರ್ಪಣೆ ಮಾಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ವಿಶ್ವಾಸ ವ್ಯಕ್ತಪಡಿಸಿದರು.

ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ಕಾರ್ಯ ಪರಿಶೀಲನೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಅಣೆಕಟ್ಟಿನ ಒಟ್ಟು 33 ಗೇಟ್‌ಗಳ ಪೈಕಿ 22 ಗೇಟ್‌ಗಳಿಗೆ ಸ್ಲೈಸ್ ಪ್ಲೇಟ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ. ತಜ್ಞರ ವರದಿಯಂತೆ ಹಳೆಯ ಚೈನ್‌ಗಳು ಸದೃಢವಾಗಿದ್ದರೂ, ಮುನ್ನೆಚ್ಚರಿಕಾ ಕ್ರಮವಾಗಿ ಹೊಸ ಚೈನ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ.

ಮೊದಲ ಸೆಟ್ ಹೊಸ ಚೈನ್‌ಗಳು ಮೇ 7 ರಂದು ಆಗಮಿಸಲಿದ್ದು, ಮೇ ಅಂತ್ಯದೊಳಗೆ ಚೈನ್ ಅಳವಡಿಕೆ ಕಾರ್ಯ ಸಂಪೂರ್ಣ ಪ್ರಕ್ರಿಯೆ ಮುಗಿಯಲಿದೆ. ಮುಂಬರುವ ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು ಮೇ 15 ರಂದು ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ದಾಖಲೆ ಸಮಯದಲ್ಲಿ 33 ಗೇಟ್‌ಗಳನ್ನು ದುರಸ್ತಿಗೊಳಿಸಿದ್ದು ಇಡೀ ದೇಶಕ್ಕೆ ಮಾದರಿಯಾಗಿದೆ. ಗೇಟ್‌ಗಳ ದುರಸ್ತಿಗೆ ಸುಮಾರು 54 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದಲ್ಲದೆ, ಕಾಲುವೆಗಳ ದುರಸ್ತಿ ಮತ್ತು ಇತರೆ ಕೆಳಹಂತದ ಕಾಮಗಾರಿಗಳಿಗೆ ಒಟ್ಟು 315 ಕೋಟಿ ರೂ. ವ್ಯಯಿಸಲಾಗಿದೆ. ತಜ್ಞರ ವರದಿಯಂತೆ ಈ ದುರಸ್ತಿ ಕಾರ್ಯದಿಂದಾಗಿ ಅಣೆಕಟ್ಟಿನ ಆಯಸ್ಸು ಮುಂದಿನ 50 ವರ್ಷಗಳವರೆಗೆ ವೃದ್ಧಿಸಲಿದೆ ಎಂದರು

ನವಲಿ ಸಮಾನಾಂತರ ಜಲಾಶಯ ಚರ್ಚೆ: ನವಲಿ ಜಲಾಶಯದ ಯೋಜನೆಗೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ. ಹೂಳು ತುಂಬಿರುವ ಕಾರಣ ಅಣೆಕಟ್ಟಿನ ಸಾಮರ್ಥ್ಯ 105 ಟಿಎಂಸಿಯಿಂದ 100 ಟಿಎಂಸಿಗೆ ಇಳಿಕೆಯಾಗಿದೆ. ಆದ್ದರಿಂದ ಹೂಳು ತೆಗೆಯಲು ಚೀನಾ ತಂತ್ರಜ್ಞಾನ ಬಳಕೆಯ ಬಗ್ಗೆ ಚರ್ಚೆ ನಡೆಯುತ್ತಿದ್ದು, ಈ ಕುರಿತು ಗ್ಲೋಬಲ್ ಟೆಂಡರ್ ಕರೆಯುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಹೂಳು ತೆಗೆಯುವಾಗ ರೈತರ ಭೂಮಿ ಮತ್ತು ಪರಿಸರಕ್ಕೆ ಹಾನಿಯಾಗದಂತೆ ಜಾಗರೂಕತೆ ವಹಿಸಲಾಗುವುದು. ತುಂಗಭದ್ರಾ ಅಣೆಕಟ್ಟಿನ ಸುತ್ತಮುತ್ತಲ ಕೈಗಾರಿಕೆಗಳಿಂದ ರಾಸಾಯನಿಕಯುಕ್ತ ನೀರು ಅಣೆಕಟ್ಟನ್ನು ಸೇರುತ್ತಿರುವ ಬಗ್ಗೆ ವರದಿಗಳು ಬಂದಿದ್ದು, ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಸಂಸದ ಈ.ತುಕಾರಾಂ, ಸಚಿವರಾದ ಕೆ ಹೆಚ್.ಮುನಿಯಪ್ಪ, ಈಶ್ವರ್ ಖಂಡ್ರೆ, ಎನ್. ಎಸ್.ಬೋಸರಾಜು, ಶಿವರಾಜ್ ತಂಗಡಗಿ ಇದ್ದರು.

86 ಸಾವಿರ ಕಡತ ಬಾಕಿ ಸಂಪುಟದಲ್ಲಿ ಚರ್ಚೆ

ಸರ್ಕಾರದ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ 86 ಸಾವಿರಕ್ಕೂ ಅಧಿಕ ಕಡತಗಳು ಬಾಕಿ ಉಳಿದಿವೆ ಅನ್ನೋದು ಗೊತ್ತಿಲ್ಲ. ಯಾವ್ಯಾವ ಡಿಪಾರ್ಟ್‌ಮೆಂಟ್‌ನಲ್ಲಿವೆ ಅಂತ ಕೇಳಿದಿನಿ. ಇನ್ನೂ ಮಾಹಿತಿ ಸಿಕ್ಕಿಲ್ಲ. ಅವನ್ನೆಲ್ಲ ವಿಲೇವಾರಿ ಮಾಡೋಕೆ ಹೇಳ್ತೀನೆ. ಇಲಾಖೆಯಲ್ಲಿ 86 ಸಾವಿರ ಕಡಿತಗಳ ಬಾಕಿ ಇರೋದನ್ನು ಸಚಿವ ಸಂಪುಟದಲ್ಲಿ ಇಟ್ಟು ಚರ್ಚೆ ಮಾಡಿ, ನಂತರ ಕಡತ ವಿಲೇವಾರಿ ಮಾಡಲಾಗುವುದು.

-ಡಿ.ಕೆ ಶಿವಕುಮಾರ್ ಉಪಮುಖ್ಯಮಂತ್ರಿ

ಸುದ್ದಿ ಸಮಾಚಾರ

ಸುಳ್ಯಯಕ್ಕೆ ಸಂಸದೆ ಸುಧಾಮೂರ್ತಿ, ಜಗ್ಗೇಶ್ ನೇತೃತ್ವದ ತಂಡ ಭೇಟಿ

ಸಂ.ಕ.ಸಮಾಚಾರ, ಸುಳ್ಯ
ರಾಜ್ಯ ಸಭಾ ಸದಸ್ಯರಾದ ಸುಧಾಮೂರ್ತಿ, ಜಗ್ಗೇಶ್ ಸೇರಿದಂತೆ ರಾಜ್ಯ ಸಭಾ ಸದಸ್ಯರ ತಂಡ ಭಾನುವಾರ ಸುಳ್ಯಕ್ಕೆ ಆಗಮಿಸಿದ್ದರು. ಮಡಿಕೇರಿಯಲ್ಲಿ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ನೇತೃತ್ವದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಕುರಿತು ಸೋಮವಾರ ನಡೆಯುವ ಸಭೆಯಲ್ಲಿ ರಾಜ್ಯ ಸಭೆಯ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸ್ಥಾಯಿ ಸಮಿತಿ ಸದಸ್ಯರು ಮತ್ತಿತರರು ಭಾಗವಹಿಸಲಿದ್ದಾರೆ. ಸಭೆಗೆ ತೆರಳುವ ವೇಳೆ ಸುಧಾಮೂರ್ತಿ ಹಾಗೂ ರಾಜ್ಯ ಸಭಾ ಸದಸ್ಯರ ತಂಡ ಸುಳ್ಯ ಭೇಟಿ ನೀಡಿದೆ. ಅರಂಬೂರಿನ ಶ್ರೀಕೃಷ್ಣ ರಸಪಾಕ ಗ್ರಾಂಡ್ ಹೋಟೆಲ್, ಅಡ್ಕಾರಿನ ಗೇರು ಬೀಜ ಫ್ಯಾಕ್ಟರಿ ಮತ್ತಿತರ ಕಡೆಗಳಿಗೆ ಭೇಟಿ ನೀಡಿದರು. ರಸಪಾಕ ಗ್ರಾಂಡ್ ಹೋಟೆಲ್‌ನಲ್ಲಿ ಉಪಾಹಾರ ಸೇವಿಸಿ, ಕೆಲ ಹೊತ್ತು ವಿಶ್ರಾಂತಿ ಪಡೆದು ತೆರಳಿದರು. ರಸಪಾಕ ಗ್ರಾಂಡ್‌ನ ಮಾಲಕರಾದ ನಾರಾಯಣ ಕೇಕಡ್ಕ, ಸುಪ್ರೀತ ಕೇಕಡ್ಕ, ಅನುಶ್ರೀ ಕೇಕಡ್ಕ ಮತ್ತಿತರರು ಸೇರಿ ರಾಜ್ಯಸಭಾ ಸದಸ್ಯರನ್ನು ಸ್ವಾಗತಿಸಿದರು. ಸುಧಾಮೂರ್ತಿಯವರು ಅಡ್ಕಾರಿನ ಸುಧಾಕರ ಕಾಮತ್ ಅವರ ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್ ಗೇರು ಬೀಜ ಫ್ಯಾಕ್ಟರಿಗೆ ಭೇಟಿ ನೀಡಿದರು. ಫ್ಯಾಕ್ಟರಿಯ ಕೆಲಸ ಕಾರ್ಯಗಳ ಬಗ್ಗೆ ಸುಧಾಕರ ಕಾಮತ್, ಪದ್ಮಾವತಿ ಕಾಮತ್, ಶುಭ ಕಾಮತ್ ಅವರು ಸುಧಾಮೂರ್ತಿ ಅವರಿಗೆ ವಿವರಿಸಿದರು.

ಅಕ್ರಮ ಸಂಬಂಧದ ಹಿನ್ನಲೆ: ಮನೆಗೆ ನುಗ್ಗಿ ವ್ಯಕ್ತಿಯ ಹತ್ಯೆ

ಚಿತ್ರದುರ್ಗ: ನಗರದ ರಾಮದಾಸ್ ಕಾಂಪೌಂಡ್ ಬಡಾವಣೆಯಲ್ಲಿ ಶನಿವಾರ ರಾತ್ರಿ ಭೀಕರ ಹತ್ಯೆ ಆಗಿದೆ. ಸಿಟಿ ಕ್ಲಬ್ ನೌಕರ ಪ್ರಮೋದ್ (42) ಕೊಲೆಯಾಗಿರುವ ವ್ಯಕ್ತಿ. ಅಕ್ರಮ ಸಂಬಂಧ ಹಿನ್ನೆಲೆ ಹತ್ಯೆ ಆಗಿದೆ ಎನ್ನಲಾಗಿದೆ.

ಮಹಿಳೆ ಸಂಬಂಧಿಕ ಶನಿವಾರ ಫೋನ್ ಕರೆ ಮಾಡಿ, ಅಕ್ರಮ ಸಂಬಂಧ ಪ್ರಶ್ನಿಸಿದ್ದು, ಈ ವೇಳೆ ಮಾತಿನ ಚಕಮಕಿ ನಡೆದಿದ್ದು, ಬಳಿಕ ರಾತ್ರಿ ಮನೆಗೆ ನುಗ್ಗಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡ ಲಾಗಿದೆ ಎಂದು ಶಂಕಿಸಲಾಗಿದೆ. ಭಾನುವಾರ ಬೆಳಗ್ಗೆ ಮನೆ ಬಾಗಿಲು ತೆರೆದಾಗ ಕೃತ್ಯ ಬಯಲಾಗಿದೆ.

ಡಿಕೆಶಿ, ಖಂಡ್ರೆ ಕಾರ್ಯಕ್ರಮದಲ್ಲಿ ಶಾರ್ಟ್ ಸರ್ಕ್ಯೂಟ್: ಬೆಂಕಿ

ಸಿಂಧನೂರು (ರಾಯಚೂರು): ನಗರದ ತಾಲೂಕಾ ಕ್ರೀಡಾಂಗಣದಲ್ಲಿ ಬಸನಗೌಡ ಬಾದರ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರವಿವಾರ ಆಯೋಜಿಸಿದ್ದ ಜನಪರ ಕಾರ್ಯಕ್ರಮಗಳ ಕೈಪಿಡಿ, 151 ಸಾಮೂಹಿಕ ವಿವಾಹ ಹಾಗೂ 5001 ಮಾತೆಯರಿಗೆ ಉಡಿ ತುಂಬವ ಕಾರ್ಯಕ್ರಮದ ವೇದಿಕೆಯ ಮೆಟ್ಟಿಲುಗಳ ಪಕ್ಕದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯುಟ್ ಸಂಭವಿಸಿದೆ. ಕೆಲ ಅಂತರದಲ್ಲಿಯೇ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಸಚಿವ ಈಶ್ವರ ಖಂಡ್ರೆ ಅವರು ಭಾಗಹಿಸಿದೆ. ವೇದಿಕೆ ಕಾರ್ಯಕ್ರಮ ಮುಗಿಸಿಕೊಂಡು ವೇದಿಕೆಯಿಂದ ನಿರ್ಗಮಿಸುವ ವೇಳೆ ವಿದ್ಯುತ್ ಅವಘಡ ಸಂಭವಿಸಿತು. ತಕ್ಷಣ ಅಲ್ಲಿದ್ದ ಅವರ ಬೆಂಬಲಿಗರು ಅವರನ್ನು ಬಚಾವ್ ಮಾಡಿದರು.

3 ವರ್ಷದ ಬಾಲಕ ಸೇರಿ 3 ಸಾವು

ಸಂ.ಕ.ಸಮಾಚಾರ, ಗುಂಡ್ಲುಪೇಟೆ (ಚಾಮರಾಜನಗರ)
ಕಾರು ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂರು ವರ್ಷದ ಬಾಲಕ ಸೇರಿ ಮೂವರು ಸಾವನ್ನಪ್ಪಿರುವ ಘಟನೆ ತಾಲೂಕಿನ ಮದ್ದಯ್ಯನಹುಂಡಿ ಗ್ರಾಮದ ಸಮೀಪ ನಡೆದಿದೆ.

ಗರ್ಭಿಣಿಗೆ ಗಾಯ, 7 ತಿಂಗಳ ಭ್ರೂಣ ಸಾವು

ಕೇರಳ ಕಣ್ಣೂರಿನ ಮೂಲದ ಮುನೀರ್ (30), ಮುನಿರಾ (53), ಮೈಜಾದೀನ್ (3) ಮೃತಪಟ್ಟವರು. 7 ತಿಂಗಳ ಗರ್ಭಿಣಿ ಪರ್ವಿನ್ (26) ಗಾಯಗೊಂಡಿದ್ದು, ಇವರ ಹೊಟ್ಟೆಯಲ್ಲಿದ್ದ ಮಗುವೂ ಸಾವನ್ನಪ್ಪಿದೆ. ಗಾಯಗೊಂಡವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗುಂಡ್ಲುಪೇಟೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗದಗ: ಏಕಾಏಕಿ ತೊಟ್ಟಿಲು ಮುರಿದು 12 ಜನರಿಗೆ ಗಾಯ

ಗದಗ: ಇಲ್ಲಿನ ಜ. ತೋಂಟದಾರ್ಯ ಮಠದ ಜಾತ್ರೆಯಲ್ಲಿ ಡ್ಯಾನ್ಸಿಂಗ್ ಪ್ಲೈ ತೊಟ್ಟಿಲು ತಾಂತ್ರಿಕ ಕಾರಣದಿಂದ ತುಂಡಾಗಿದ್ದು, ತೊಟ್ಟಿನಲ್ಲಿ ಆಟವಾಡುತ್ತಿದ್ದ 12ಕ್ಕೂ ಹೆಚ್ಚು ಜನರಿಗೆ ತೀವ್ರ ಗಾಯಗಳಾದ ಘಟನೆ ಭಾನುವಾರ ರಾತ್ರಿ 9–15 ಸುಮಾರಿಗೆ ನಡೆಸಿದೆ.

ತೋಂಟದಾರ್ಯಮಠದ ಅಂಗಳದಲ್ಲಿ ಅವಘಡ

ಗಾಯಗೊಂಡವರಲ್ಲಿ ಏಳೆಂಟು ಜನರ ಪರಿಸ್ಥಿತಿ ಗಂಭೀರವಾಗಿದೆ. ನಾಲ್ಕು ಜನರನ್ನು ಹುಬ್ಬಳ್ಳಿಯ ಕೆಎಂಸಿಗೆ ಕರೆದೊಯ್ಯಲಾಗಿದೆ. ಉಳಿದ ಗಾಯಾಳುಗಳನ್ನು ಚಿಕಿತ್ಸೆಗಾಗಿ ಗದಗ ಕೆ.ಎಚ್.ಪಾಟೀಲ ವೈದ್ಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೃದಯಾಘಾತಕ್ಕೆ ಬಾಲಕಿ ಸಾವು

ಜೋಯಿಡಾ(ಉತ್ತರ ಕನ್ನಡ): ತಾಲೂಕಿನ ಅಸು ಗ್ರಾಮ ಪಂಚಾಯತ್ ವ್ಯಾಪ್ತಿಯ ಚಾಪಾಲಿ ಗೌಳಿವಾಡಾದಲ್ಲಿ 13 ವರ್ಷದ ಬಾಲಕಿ ಗಂಗು ನವಲು ಗೌಳಿ ಎಂಬಾಕೆ ಹೃದಯಾಘಾತದಿಂದ ಮೃತಪಟ್ಟಿದ್ದಾಳೆ.

ರಾಮನಗರದ ಬಾಲಕಿಯರ ವಸತಿ ನಿಲಯದಲ್ಲಿ ವಾಸವಿದ್ದು, ಅಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದಳು. ರಾತ್ರಿ ಊಟ ಮಾಡಿ ತಂದೆ ತಾಯಿಯರೊಂದಿಗೆ ಮಲಗಿದ್ದ ಗಂಗು, ಬೆಳಿಗ್ಗೆ ಎದ್ದಾಕ್ಷಣ ವಾಂತಿ ಮಾಡಿಕೊಂಡು ಅಸ್ವಸ್ಥಳಾದಳು. ಆಸ್ಪತ್ರೆಗೆ ಕರೆದೊಯ್ಯುವ ಮುನ್ನವೇ ಆಕೆಯ ಸಾವನ್ನಪ್ಪಿದ್ದಳು.

ಅಕ್ರಮ ತಡೆಗೆ ಶಿವಮೊಗ್ಗದ ಮೇಲೆ ಡ್ರೋನ್ ಕಣ್ಗಾವಲು!

ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಖಾಕಿ ಕಟ್ಟೆಚ್ಚರ | ಜಿಲ್ಲೆಯಲ್ಲಿ 30,104 ಕ್ಯಾಮರಾ ಅಳವಡಿಕೆ

▪ ಯೋಗೇಶ್ ಶ್ಯಾನುಭೋಗನಹಳ್ಳಿ

ಸಂ.ಕ.ಸಮಚಾರ, ಶಿವಮೊಗ್ಗ
ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗ ಮೊದಲೇ ಸೂಕ್ಷ್ಮ ಜಿಲ್ಲೆ. ಗಾಂಜಾ ಹಾವಳಿ, ಸರಗಳ್ಳರ ಕಾಟ, ದರೋಡೆ, ಸುಲಿಗೆ, ಸಾರ್ವಜನಿಕ ಸ್ಥಳ ಗಳಲ್ಲಿ ಕುಡುಕರ ಗಲಾಟೆ, ಜೂಜು, ಹೀಗೆ ಅಪರಾಧ ಕೃತ್ಯಗಳ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ಆ ಹಿನ್ನೆಲೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿ ವಾಣ ಹಾಕಲು ಪೊಲೀಸ್ ಇಲಾಖೆ ಡ್ರೋನ್ ಕ್ಯಾಮರಾ ಬಳಕೆಗೆ ಮುಂದಾಗಿದೆ.

ಇತ್ತೀಚೆಗೆ ಭದ್ರಾವತಿಯ ಕೂಡ್ಲಿಗೆರೆ ಅರಣ್ಯ ಪ್ರದೇಶದ ನಡುವೆ ಚಾನಲ್ ಏರಿಯಾ ಹತ್ತಿರ ಗುಂಪು ಕಟ್ಟಿಕೊಂಡು ಜೂಜು ಆಡುತ್ತಿದ್ದರು. ಈ ಕುರಿತು ಪೊಲೀಸರಿಗೆ ಮಾಹಿತಿ ಸಿಕ್ಕ ಕೂಡಲೇ ಡ್ರೋನ್ ಕ್ಯಾಮರಾ ಹಾರಿಸಿ ಪತ್ತೆ ಹಚ್ಚಿ ಬರೋಬ್ಬರಿ 19 ಜನರ ವಿರುದ್ಧ ಭದ್ರಾವತಿ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಂಡಿದ್ದಾರೆ.

ಶಿವಮೊಗ್ಗ ನಗರದ ಕೋಟೆಗಂಗೂರಿನಲ್ಲೂ ಸಾರ್ವಜನಿಕ ಸ್ಥಳದಲ್ಲಿ ಕುಡುಕರ ಹಾವಳಿ ಹೆಚ್ಚಾಗಿತ್ತು. ಈ ಬಗ್ಗೆ 112ಗೆ ಸ್ಥಳೀಯರು



ಕರೆ ಮಾಡಿ ಮಾಹಿತಿ ನೀಡಿದ್ದರು. ಇಲ್ಲೂ ಡ್ರೋನ್ ಕ್ಯಾಮರಾ ಹಾರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು. ಶಿವಮೊಗ್ಗ ಗ್ರಾಮಾಂತರ ಠಾಣೆಯ ಪೊಲೀಸರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದೇ ರೀತಿ ಶಿವಮೊಗ್ಗ ನಗರದಾದ್ಯಂತ ಖಾಕಿ ತೀವ್ರ ಕಟ್ಟೆಚ್ಚರ ವಹಿಸಿದೆ.

112 ಕರೆ ಮಾಡಿ ಮಾಹಿತಿ ನೀಡಿ

'ಶಿವಮೊಗ್ಗ ಜಿಲ್ಲೆಯಲ್ಲಿ ಅಳವಡಿಸಿರುವ ಎಲ್ಲಾ ಕ್ಯಾಮರಾಗಳು ವರ್ಕಿಂಗ್ ಕಂಡಿಷನ್‌ನಲ್ಲಿ ಇವೆ. ಸಾರ್ವಜನಿಕರು ತಮ್ಮ ಪ್ರದೇಶದಲ್ಲಿ ಕಾನೂನು ಬಾಹಿರ ಕೃತ್ಯಗಳು ಕಂಡು ಬಂದರೆ ಅವರು ಕೂಡಲೇ 112ಗೆ ಮಾಹಿತಿ ನೀಡಿದರೆ, ಅಂತಹ ಪ್ರದೇಶದಲ್ಲಿ ಡ್ರೋನ್ ಕ್ಯಾಮರಾ ಹಾರಿಸಿ, ಆರೋಪಿಗಳನ್ನು ಪತ್ತೆ ಮಾಡಲಾಗುತ್ತದೆ. ಈ ಮೂಲಕ ಜಿಲ್ಲೆಯಲ್ಲಿ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಬಹುದು.'

▪ ನಿಖಿಲ್ ಬಿ., ಜಿಲ್ಲಾ ರಕ್ಷಣಾಧಿಕಾರಿ

ಜಿಲ್ಲೆಯ ಮೇಲೆ ಮೂರನೇ ಕಣ್ಣು..!

ಶಿವಮೊಗ್ಗ ಜಿಲ್ಲೆಯಾದ್ಯಂತ ಮೂರನೇ ಕಣ್ಣು ಕಾರ್ಯಪ್ರವೃತ್ತವಾಗಿದೆ. ಜಿಲ್ಲೆಯಲ್ಲಿ ಬರೋಬ್ಬರಿ 30,104 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಶಿವಮೊಗ್ಗ ನಗರದಲ್ಲಿಯೇ 20,356 ಜಿಯೋ ಟ್ಯಾಗ್ ಇರುವ ಕ್ಯಾಮರಾಗಳು ಕಾರ್ಯ ನಿರ್ವಹಿಸುತ್ತಿವೆ. ಯಾವುದೇ ಅಪರಾಧ ಕೃತ್ಯ ನಡೆದರೂ ಕ್ಷಣಾರ್ಧದಲ್ಲಿಯೇ ಪತ್ತೆ ಹಚ್ಚಿ, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಈ ಕ್ಯಾಮರಾಗಳು ನೆರವಾಗಲಿವೆ.

ಸಾರ್ವಜನಿಕರು ಏನು ಮಾಡಬೇಕು..?

ಸಾರ್ವಜನಿಕರು ದೂರು ನೀಡಿದರೆ ಮಾತ್ರ ಪೊಲೀಸರು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯ. ಹಾಗಾಗಿ ತಮ್ಮ ಏರಿಯಾ ಅಥವಾ ಪ್ರದೇಶದಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ಕಂಡು ಬಂದರೆ, 112ಗೆ ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡಿದರೆ, ಡ್ರೋನ್ ಕ್ಯಾಮರಾ ಮೂಲಕ ಪರಿಶೀಲಿಸಿ, ದುಷ್ಕರ್ಮಿಗಳ ವಿರುದ್ಧ ಪೊಲೀಸರು ಕಾನೂನು ಕ್ರಮ ಕೈಗೊಳ್ಳಲಿದ್ದಾರೆ ಎಂದು ಜಿಲ್ಲಾ ರಕ್ಷಣಾಧಿಕಾರಿ ನಿಖಿಲ್ ಬಿ. ತಿಳಿಸಿದ್ದಾರೆ.

ಪೋಷಕರ ಕಣ್ಮುಂದೆಯೇ ಹೊಂಡದಲ್ಲಿ ಮುಳುಗಿ ಬಾಲಕರಿಬ್ಬರ ದುರ್ಮರಣ

ಬೆಳಗಾವಿ: ಇಲ್ಲಿನ ಪ್ರಸಿದ್ಧ ಕಪಿಲೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ ಹೊಂಡದಲ್ಲಿ ಈಜಲು ಹೋದ ಬಾಲಕರಿಬ್ಬರು

ಪೋಷಕರ ಕಣ್ಮುಂದೆಯೇ ಮುಳುಗಿ ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ. ಮೃತರನ್ನು ಶಹಾಪುರ ಜೇಡಗಲ್ಲಿಯ ಶಿವಂ ಪರಶುರಾಮ ಸುಂಡಿಕರ(7) ಹಾಗೂ ಛತ್ರಪತಿ ಶಿವಾಜಿನಗರದ ನಿವಾಸಿ ಪರಶುರಾಮ ರಾಜು ನಿಲಜಕರ(11) ಎಂದು ಗುರುತಿಸಲಾಗಿದೆ. ಕಪಿಲೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಹೊಂಡದಲ್ಲಿ ಈಜಿ ಮೇಲಕ್ಕೆ ಬಂದ ಮಕ್ಕಳ ಮೇಲೆ ಗೋಡೆ ಕುಸಿದು ಅನಾಹುತ ಸಂಭವಿಸಿದೆ. ನಾಲ್ಕೈದು ಮಕ್ಕಳು ಮತ್ತೆ ಗೋಡೆಯ ಕಲ್ಲಿನೊಂದಿಗೆ ಹೊಂಡಕ್ಕೆ ಬಿದ್ದಿದ್ದಾರೆ. ಆದರೆ ಅದರಲ್ಲಿ ಉಳಿದವರು ಈಜಿ ಮೇಲೆ ಬಂದರಾದರೂ ಶಿವಂ ಮತ್ತು ಪರಶುರಾಮ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಮೃತ ಬಾಲಕನ ತಂದೆ ಪರಶುರಾಮ ಸುಂಡೀಕರ ತಿಳಿಸಿದ್ದಾರೆ.

ಬ್ರಿಜ್ ವಿರುದ್ಧ ನಾನೂ ದೂರು ಕೊಟ್ಟಿದ್ದೆ: ವಿನೇಶ್ ಪೊಗಟ್

ವಿಡಿಯೋ ಮಾಡಿ ಆರೋಪಿಸಿದ ಕ್ರೀಡಾಳು

ನವದೆಹಲಿ: ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಮುಖ್ಯಸ್ಥ ಬ್ರಿಜ್ ಭೂಷಣ್ ಸಿಂಗ್ ಅವರಿಂದ ಲೈಂಗಿಕ ಕಿರುಕುಳಕ್ಕೊಳಗಾದ ಆರು ಮಹಿಳಾ ಕುಸ್ತಿಪಟುಗಳಲ್ಲಿ ತಾವೂ ಒಬ್ಬರು ಎಂದು ಒಲಿಂಪಿಯನ್ ವಿನೇಶ್ ಪೊಗಟ್ ಬಹಿರಂಗವಾಗಿ ಹೇಳಿಕೊಂಡಿದ್ದಾರೆ.

ವಿಡಿಯೋ ಒಂದರ ಮೂಲಕ ಆಕೆ ಈ ಮಾತನ್ನು ಹೇಳಿಕೊಂಡಿದ್ದಾರೆ. ನ್ಯಾಯಾಲಯದಲ್ಲಿ ಬಾಕಿ ಇರುವ ಕ್ರಿಮಿನಲ್ ಪ್ರಕರಣದಲ್ಲಿ ಈ ಪ್ರತಿಭಾವಂತ ಕುಸ್ತಿಪಟು ತನ್ನನ್ನು ತಾನು ಬಲಿಪಶು ಎಂದು ಗುರುತಿಸಿಕೊಂಡಿರುವುದು ಇದೇ ಮೊದಲು. ಕೆಲವು ಸಂದರ್ಭಗಳಲ್ಲಿ ತಮ್ಮ ಅನಾಮಧೇಯತೆಯಿಂದ ಹೊರಬರುವಂತಹ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿತ್ತು ಎಂದಾಕೆ ಹೇಳಿಕೊಂಡಿದ್ದಾರೆ. ಯಾರೇ ಬಲಿಪಶುವಿನ ಹೆಸರು ಬಹಿರಂಗಪಡಿಸಬಾರದೆಂದು ಸುಪ್ರೀಂಮಾರ್ಗಸೂಚಿಗಳು ಹೇಳುತ್ತವೆ. ಆದರೆ ಈ ಪ್ರಕರಣದಲ್ಲಿ ದೂರು ದಾಖಲಿಸಿದ ಆರು ಬಲಿಪಶುಗಳಲ್ಲಿ ತಾವೂ ಒಬ್ಬರು ಎಂದು ಹೇಳಬಯಸುತ್ತೇನೆ. ವಿಚಾರಣೆ ಇನ್ನೂ ಮುಂದುವರಿದಿದೆ ಎಂದೂ ಹೇಳಿಕೊಂಡಿದ್ದಾರೆ. 2023ರಲ್ಲಿ ಜಂತರ್‌ಮಂತರ್‌ನಲ್ಲಿ ಬ್ರಿಜ್ ಭೂಷಣ್ ವಿರುದ್ಧ ಪ್ರತಿಭಟನೆ ನಡೆಸಿದವರಲ್ಲಿ ವಿನೇಶ್ ಕೂಡಾ ಸೇರಿದ್ದಾರೆ.

ಬಿಜೆಪಿ ಭೀಷ್ಮ ಅಡ್ವಾಣಿ ಭೇಟಿ ಆದ ಬಿಹಾರ ಸಿಎಂ ಸಾಮ್ರಾಟ್

ಬಿಹಾರದ ಮೊದಲ ಬಿಜೆಪಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ಸಾಮ್ರಾಟ್ ಚೌಧರಿ ಅವರು ಭಾನುವಾರ ನವದೆಹಲಿಯಲ್ಲಿ ಪಕ್ಷದ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ಭೇಟಿಯಾದರು. ನಿತೀಶ್ ಕುಮಾರ್ ಅವರ ರಾಜೀನಾಮೆ ಹಿನ್ನೆಲೆ ಸಾಮ್ರಾಟ್ ಅವರು ಕಳೆದ ತಿಂಗಳು ಬಿಹಾರದ ಮುಖ್ಯಮಂತ್ರಿ ಆಗಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದರು.

ಬಂಗಾಳ ಕೈ ನಾಯಕ ಅಧೀರ್ ಕೇರಂ ಆಟ: ಇಂದು ರಿಸಲ್ಟ್

ಪಶ್ಚಿಮ ಬಂಗಾಳ ಕಾಂಗ್ರೆಸ್ ನಾಯಕ ಹಾಗೂ ಬೆಹರಾಮ್‌ಪುರ ವಿಧಾನಸಭೆ ಕ್ಷೇತ್ರದ ಅಭ್ಯರ್ಥಿ ಅಧೀರ್ ರಂಜನ್ ಚೌಧರಿ ಅವರು ಫಲಿತಾಂಶದ ಮುನ್ನಾ ದಿನ ಕೇರಂ ಆಡಿದರು. ಆ ಮೂಲಕ ರಿಲ್ಯಾಕ್ಸ್ ಮೂಡ್‌ನಲ್ಲಿ ಕಂಡುಬಂದರು. ಬೆಹರಾಮ್‌ಪುರ ಕ್ಷೇತ್ರದಿಂದ ಇವರು ಹಲವಾರು ಬಾರಿ ಗೆದ್ದು ಲೋಕಸಭೆಯನ್ನು ಪ್ರವೇಶ ಮಾಡಿದ್ದಾರೆ. ಈ ಸಲವೂ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಬಂಗಾಳ ಫಲಿತಾಂಶ ಕಾತುರ: ಎಲ್ಲೆಡೆ ಪೊಲೀಸರ ಕಣ್ಗಾವಲು

ಸೋಮವಾರ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಹೊರಬೀಳಲಿರುವ ಕಾರಣ ಪಶ್ಚಿಮ ಬಂಗಾಳದಲ್ಲಿ ಗೆಲ್ಲುವುದು ಟಿಎಂಸಿಯೋ ಬಿಜೆಪಿಯೋ ಎಂಬ ಕುತೂಹಲ ಜನರಲ್ಲಿ ಕಂಡುಬಂದಿದೆ. ಈ ನಡುವೆ ಪಶ್ಚಿಮ ಬಂಗಾಳದ ಕಾಲಿಘಾಟ್ ಪ್ರದೇಶದಲ್ಲಿ ಪೊಲೀಸರು ಹಾಗೂ ಅಧಿಕಾರಿಗಳು ಭದ್ರತಾ ಕಾರ್ಯ ಪರಿಶೀಲಿಸಿದ ನಂತರ ಕೆಲಹೊತ್ತು ವಿಶ್ರಾಂತಿ ಪಡೆಯುತ್ತಿರುವ ಫೋಟೋ.

ವಿದೇಶ ಸಮಾಚಾರ

ಸೋಮಾಲಿಯಾ ಕಡಲ್ಗಳ್ಳರಿಂದ ಮತ್ತೊಂದು ಟ್ಯಾಂಕರ್ ಹೈಜಾಕ್

ಸನಾ: ಸೋಮಾಲಿಯಾ ಕಡಲ್ಗಳ್ಳರು ಯೆಮನ್ ಕರಾವಳಿ ಪ್ರದೇಶದಲ್ಲಿ ತೈಲ ಟ್ಯಾಂಕರ್ ಒಂದನ್ನು ಅಪಹರಿಸಿದ್ದಾರೆ.

ಯುರೇಕಾ ಎನ್ನುವ ಈ ಟ್ಯಾಂಕರ್‌ಗೆ ಖಾನಾ ಬಂದರಿನ ಬಳಿ ಕಡಲ್ಗಳ್ಳರು ಮುತ್ತಿಗೆ ಹಾಕಿದ ನಂತರ ಅದನ್ನು ಅಪಹರಿಸಿ ಸೋಮಾಲಿಯಾ ಕಡೆಗೆ ಒಯ್ದಿದ್ದಾರೆ. ಕಳೆದ ಏಪ್ರಿಲ್ 22ರಿಂದ ಸೋಮಾಲಿಯಾ ಕಡಲ್ಗಳ್ಳರು ಅಪಹರಿಸಿರುವ ಎರಡನೇ ತೈಲ ಟ್ಯಾಂಕರ್ ಇದಾಗಿದೆ. ಹತ್ತು ದಿನಗಳ ಹಿಂದೆ ಹಾನರ್ 25 ಎನ್ನುವ ತೈಲ ಟ್ಯಾಂಕರನ್ನು ಇದೇ ಕಡಲ್ಗಳ್ಳರು ಅಪಹರಿಸಿದ್ದರು. ಶನಿವಾರ ಮುಂಜಾನೆ 5 ಗಂಟೆ ಸಮಯದಲ್ಲಿ ಕಡಲ್ಗಳ್ಳರು ಯುರೇಕಾವನ್ನು ಅಪಹರಿಸಿದ್ದು ಸೋಮಾಲಿಯಾ ಕಡೆಗೆ ಸಾಗಿದೆ. ಅಪಹರಣಕ್ಕೆ ಮುನ್ನ ಈ ಹಡಗು ಪಶ್ಚಿಮ ಆಫ್ರಿಕಾ ಭಾಗದ ಟೋಗೋ ದೇಶ ಕಡೆಗೆ ತೈಲ ಸಾಗಿಸುತ್ತಿತ್ತು

ನೈಜೀರಿಯಾ: ಹಬ್ಬದ ನೆಪದಲ್ಲಿ ಸ್ತ್ರೀಯರಿಗೆ ಸಾಮೂಹಿಕ ಕಿರುಕುಳ

ಅಬುಜಾ: ನೈಜೀರಿಯಾದಲ್ಲಿ ಕಳೆದ ಮಾರ್ಚ್‌ನಲ್ಲಿ ಫಲವತ್ತತೆ (ಫರ್ಟಿಲಿಟಿ) ಹಬ್ಬದ ಸಮಯದಲ್ಲಿ ಪುರುಷರ ಗುಂಪುಗಳು ಮಹಿಳೆಯರನ್ನು ರಸ್ತೆಯಲ್ಲಿಯೇ ಅಟ್ಟಾಡಿಸಿ ಲೈಂಗಿಕ ದೌರ್ಜನ್ಯ ನಡೆಸಿದರೆನ್ನಲಾದ ವರದಿಗಳು ಹೊರಬಿದ್ದ ನಂತರ ಅದೊಂದು ರೀತಿಯ ಅತ್ಯಾಚಾರ ಹಬ್ಬ ಎಂದು ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ. ನೈಜೀರಿಯಾದ ಡೆಲ್ಟಾ ರಾಜ್ಯದಲ್ಲಿ ಒರಾಮುಡು ಸಮುದಾಯ ಆಚರಿಸುವ ಫಲವತ್ತತೆಗೆ ಸಂಬಂಧಿಸಿದ ಅಲುಯೆದೋ ಹಬ್ಬದ ಸಂದರ್ಭದಲ್ಲಿ ಈ ಅಚಾತುರ್ಯ ನಡೆದಿದೆ. ಕೆಲವರು ಸಾರ್ವಜನಿಕ ಸ್ಥಳದಲ್ಲಿ ಮಹಿಳೆಯರನ್ನು ಅಟ್ಟಾಡಿಸಿಕೊಂಡು ಹೋಗುವಾಗ ಅವರ ಉಡುಪುಗಳನ್ನು ಹರಿದುಹಾಕಿದರು. ದುಷ್ಕರ್ಮಿಗಳು ಭಾರೀ ದೊಡ್ಡ ಪ್ರಮಾಣದಲ್ಲಿ ಬೊಬ್ಬೆ ಹೊಡೆಯುತ್ತಾ ಹಿಂಸಾಚಾರದಲ್ಲಿ ತೊಡಗಿದ್ದರು.

ಅಮೆರಿಕದಿಂದ 2 ಫೈಟರ್ ಜೆಟ್ ಖರೀದಿಗೆ ಇಸ್ರೇಲ್ ಒಪ್ಪಂದ

ಜೆರುಸಲೇಂ: ಅಮೆರಿಕದಿಂದ 2 ಫೈಟರ್ ಜೆಟ್‌ಗಳನ್ನು ಖರೀದಿರುವ ಬಹುಕೋಟಿ ಒಪ್ಪಂದಕ್ಕೆ ಅನುಮತಿ ನೀಡಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಎಫ್ 35 ಯುದ್ಧ ವಿಮಾನ ಹಾಗೂ ಬೋಯಿಂಗ್‌ನ ಎಫ್ 15ಐಎ ಯುದ್ಧ ವಿಮಾನಗಳು ಈ ಖರೀದಿ ಒಪ್ಪಂದದ ಭಾಗವಾಗಿವೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಸ್ ತಿಳಿಸಿದ್ದಾರೆ. ತನ್ನ ವಾಯುಪಡೆಯ ಬಲ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಈ ಖರೀದಿ ಮಾಡಲು ಇಸ್ರೇಲ್ ಮುಂದಾಗಿದೆ. ಇದು ಶೀಲ್ಡ್ ಆಫ್ ಇಸ್ರೇಲ್ ಯೋಜನೆಯ ಭಾಗವಾಗಿದೆ ಎಂದು ಅಲ್ಲಿನ ಸರ್ಕಾರ ತಿಳಿಸಿದೆ.

ಭಾರತದಲ್ಲಿ ವಂಚಿಸಿದ್ದ ಇಬ್ಬರು ಯುಎಇಯಿಂದ ಗಡೀಪಾರು

ಅಬುಧಾಬಿ: ಆರ್ಥಿಕ ವಂಚನೆ ಸೇರಿದಂತೆ ಹಲವಾರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿದ್ದ ಇಬ್ಬರು ಶಂಕಿತರನ್ನು ಅರಬ್ ಸಂಯುಕ್ತ ಸಂಸ್ಥಾನ(ಯುಎಇ)ದ ಅಧಿಕಾರಿಗಳು ಭಾರತಕ್ಕೆ ಹಸ್ತಾಂತರಿಸಿದ್ದಾರೆ. ಬಂಗಾಳ ಮೂಲದ ಕಮಲೇಶ್ ಪರೇಖ್ ಹಾಗೂ ಹರಿಯಾಣ ಮೂಲದ ಅಲೋಕ್ ಕುಮಾರ್ ಯಶ್ಪಾಲ್ ಸಿಂಗ್ ಇವರಿಬ್ಬರನ್ನು ಉಭಯದೇಶಗಳ ನಡುವಣ ಹಸ್ತಾಂತರ ಒಪ್ಪಂದದಡಿ ಯುಎಇಯಿಂದ ಗಡಿಪಾರು ಮಾಡಲಾಗಿದೆ. ಕೋಲ್ಕತಾದ ಶ್ರೀ ಗಣೇಶ್ ಜ್ಯೂವೆಲರಿ ಹೌಸ್‌ಗೆ ಸಂಬಂಧಿಸಿದ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಕಮಲೇಶ್ ಆರೋಪಿಯಾಗಿದ್ದಾರೆ.

ಒಟ್ಟು 25 ಬ್ಯಾಂಕುಗಳಿಗೆ ಆತ 22,672 ಕೋಟಿ ರೂ.ಗೂ ಹೆಚ್ಚು ವಂಚಿಸಿದ ಆರೋಪ ಕಮಲೇಶ್ ಮೇಲಿದೆ.

ಇರಾನ್ ಪ್ರಸ್ತಾವನೆ ಒಪ್ಪಿಗೆಯಿಲ್ಲ, ಆದರೂ ಪರಿಶೀಲಿಸ್ತೇನೆ: ಟ್ರಂಪ್

ಒಪ್ಪಿಕೊಳ್ಳಬೇಕು ಅಥ್ವಾ ಅಸಾಧ್ಯ ಯುದ್ಧ ಮಾಡ್ಬೇಕು: ಇರಾನ್

ವಾಷಿಂಗ್ಟನ್: ಕೊಲ್ಲಿ ಯುದ್ಧ ನಿಲುಗಡೆಗಾಗಿ ಇರಾನ್ ಕಳುಹಿಸಿಕೊಟ್ಟಿರುವ 14 ಅಂಶಗಳನ್ನು ಒಳಗೊಂಡ ಹೊಸ ಸಂಧಾನ ಪ್ರಸ್ತಾವನೆಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಪ್ರತಿಕ್ರಿಯಿಸಿದ್ದು, 'ಪ್ರಸ್ತಾವನೆಯಲ್ಲಿನ ಅಂಶಗಳು ಬಹುತೇಕ ನಮಗೆ ಒಪ್ಪಿಗೆಯಿಲ್ಲವಾದರೂ ಅದನ್ನು ಪರಿಶೀಲಿಸುತ್ತಿದ್ದೇವೆ. ಆದರೆ ಇರಾನ್ ಏನಾದರೂ ಅನುಚಿತ ನಡವಳಿಕೆ ತೋರಿದರೆ ಮತ್ತೆ ದಾಳಿ ಮಾಡುವುದಾಗಿ' ಎಚ್ಚರಿಸಿದ್ದಾರೆ.

ಆದರೆ ಇತ್ತ ಇರಾನಿನ ಐ.ಆರ್.ಜಿ.ಸಿ. ಟ್ರಂಪ್‌ಗೆ ತೀಕ್ಷ್ಣವಾಗಿ ತಿರುಗೇಟು ನೀಡಿದ್ದು, 'ಸಂಧಾನದ ಚೆಂಡು ಈಗ ಅಮೆರಿಕ ಅಂಗಳದಲ್ಲಿದೆ. 'ಅಸಾಧ್ಯ'ವಾದ ಯುದ್ಧವನ್ನು ಪುನರಾರಂಭಿಸುವುದು ಅಥವಾ ಇರಾನ್ ಸಲ್ಲಿಸಿರುವ 'ಕೆಟ್ಟ ಪ್ರಸ್ತಾವನೆ'ಯನ್ನು ಒಪ್ಪಿಕೊಳ್ಳುವುದು ಇವರಡೇ ಟ್ರಂಪ್ ಮುಂದಿರುವ ಆಯ್ಕೆಗಳು' ಎಂದು ಅಣಕವಾಡಿದೆ.

ಯುದ್ಧ ಸಂಧಾನಕಾರ ಪಾಕಿಸ್ತಾನದ ಮೂಲಕ ಇರಾನ್ ಶುಕ್ರವಾರವೇ ತನ್ನ 14 ಅಂಶಗಳ ಹೊಸ ಸಂಧಾನ ಪ್ರಸ್ತಾವನೆಯನ್ನು ಅಮೆರಿಕಕ್ಕೆ ಕಳುಹಿಸಿದ ಬೆನ್ನಲ್ಲೇ ಟ್ರಂಪ್ ಪ್ರತಿಕ್ರಿಯಿಸಿ, 'ಇರಾನ್ ಅಣ್ವಸ್ತ್ರ ಹೊಂದುವುದಿಲ್ಲ' ಎಂಬ ಏಕೈಕ ಹಾಗೂ ಪ್ರಮುಖ ಅಂಶವೇ ಇಲ್ಲದಿರುವ ಈ ಪ್ರಸ್ತಾವನೆ ನಮಗೆ ಒಪ್ಪಿಗೆಯಿಲ್ಲ ಎಂದು ಹೇಳಿಕೆ ನೀಡಿದ್ದರು.



ಇರಾನ್‌ನ ಪ್ರಸ್ತಾವನೆಯಲ್ಲಿ ಏನೇನಿದೆ?

ಪಾಕ್ ಮೂಲಕ ಅಮೆರಿಕಕ್ಕೆ ಸಲ್ಲಿಸಿರುವ ಹೊಸ 14 ಅಂಶಗಳ ಪ್ರಸ್ತಾವನೆಯಲ್ಲಿ ಏನೇನಿದೆ ಎಂಬುದರ ಕುರಿತು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್ ಸುತ್ತಮುತ್ತ ಇರುವ ಸೇನಾ ಪಡೆಗಳನ್ನು ಅಮೆರಿಕ ವಾಪಸ್ ಕರೆಸಿಕೊಳ್ಳಬೇಕು. ಹೊರ್ಮುಜ್ ಜಲಸಂಧಿಯಲ್ಲಿ ವಿಧಿಸಿರುವ ನಿರ್ಬಂಧಗಳನ್ನು ತೆರವು ಮಾಡಿ ಜನ ಮಾರ್ಗವನ್ನು ಮುಕ್ತಗೊಳಿಸಬೇಕು. ಮುಟ್ಟುಗೋಲು ಹಾಕಿಕೊಂಡಿರುವ ಇರಾನಿನ ಆಸ್ತಿಪಾಸಿಗಳನ್ನು ವಾಪಸ್ ಕೊಡಬೇಕು. ಯುದ್ಧದಿಂದಾಗಿ ಆಗಿರುವ ನಷ್ಟಕ್ಕೆ ಪರಿಹಾರ ಕೊಡಬೇಕು. ವಿಧಿಸಿರುವ ವಾಣಿಜ್ಯ ನಿರ್ಬಂಧಗಳನ್ನು ತೆರವುಗೊಳಿಸಬೇಕು. ಲೆಬನಾನ್ ಸೇರಿದಂತೆ ಎಲ್ಲ ಕಡೆಗಳಲ್ಲೂ ಯುದ್ಧವನ್ನು ಕೂಡಲೇ ನಿಲ್ಲಿಸಬೇಕು. ಅಂತೆಯೇ ಹೊರ್ಮುಜ್ ಜಲಸಂಧಿ ನಿಯಂತ್ರಣಕ್ಕೆ ಹೊಸ ಮಾರ್ಗಸೂಚಿ ರೂಪಿಸಬೇಕು ಇತ್ಯಾದಿ 14 ಅಂಶಗಳು ಇರಾನಿನ ಪ್ರಸ್ತಾವನೆಯಲ್ಲಿವೆ. ಯುದ್ಧ ಸಂಧಾನ ಪ್ರಕ್ರಿಯೆಗೆ ಮಾತ್ರ ಎರಡೂ ಕಡೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ. ಹಾಗಾಗಿ ತೈಲ ಹಾಗೂ ಅನಿಲ ಬೆಲೆಗಳ ಏರಿಕೆ ಗ್ಯಾರಂಟಿ ಎನ್ನಲಾಗಿದೆ.

ನಿತೀಶ್ ಪುತ್ರನ ಮೊದಲ ರಾಜಕೀಯ ಯಾತ್ರೆ ಆರಂಭ

ಸದ್ಭಾವ್ ಯಾತ್ರೆ ಶುರು ಮಾಡಿದ ನಿಶಾಂತ್

ಪಟ್ನಾ: ಬಿಹಾರದಲ್ಲಿ ಪ್ರಭಾವಿ ನಾಯಕ ನಿತೀಶ್ ಕುಮಾರ್ ಅವರು ಸಿಎಂ ಗಾದಿಯಿಂದ ಹಠಾತ್ ನಿರ್ಗಮಿಸಿರುವುದರಿಂದ ಕಂಗೆಟ್ಟಿರುವ ಜೆಡಿಯು ಪಕ್ಷ ಈಗ ಅವರ ಪುತ್ರ ನಿಶಾಂತ್ ಕುಮಾರ್ ಮೇಲೆ ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದೆ. ಹೀಗಾಗಿ ಪಕ್ಷ ಸೇರಿದ ಒಂದೇ ತಿಂಗಳೊಳಗೆ ನಿಶಾಂತ್ ಮೊದಲ ಯಾತ್ರೆಯನ್ನು ಆರಂಭಿಸಿದ್ದಾರೆ. ಪಶ್ಚಿಮ ಚಂಪಾರಣ್ ಜಿಲ್ಲೆಯ ವಾಲ್ಮೀಕಿ ನಗರದಲ್ಲಿ ನಿಶಾಂತ್ ಕುಮಾರ್ ಸದ್ಭಾವ ಯಾತ್ರೆಯನ್ನು ಭಾನುವಾರ ಆರಂಭಿಸಿದ್ದಾರೆ. ಇದೇ ನಗರದಲ್ಲಿ ನಿತೀಶ್ ಕುಮಾರ್ ಹಲವಾರು ಯಾತ್ರೆ ಆರಂಭಿಸಿದ್ದರು.ಎರಡು ದಶಕಗಳಿಗೂ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದ ನಿತೀಶ್ ಈಗ ರಾಜ್ಯಸಭೆ ಪ್ರವೇಶಕ್ಕಾಗಿ ಸಿಎಂ ಪಟ್ಟ ತೊರೆದಿರುವುದು ಜೆಡಿಯು ನಾಯಕರಲ್ಲಿ ತಲ್ಲಣ ಉಂಟು ಮಾಡಿದೆ. ನಿತೀಶ್ ಮುಂದಾಳುತ್ವ ಇಲ್ಲದ ಜೆಡಿಯುನಲ್ಲಿ ರಾಜಕೀಯ ನಡೆಸುವುದು ಈ ನಾಯಕರಿಗೆ ಚಿಂತೆಗೀಡುವ ಮಾಡುವ ವಿಷಯವಾಗಿದ್ದು ಇದೀಗ ನಿತೀಶ್ ಅವರ ಪುತ್ರ ನಿಶಾಂತ್ ಪಕ್ಷವನ್ನು ಮುನ್ನಡೆಸುವ ಪ್ರಯತ್ನಿಸುತ್ತಿರುವುದರಿಂದ ತುಸು ಸಮಾಧಾನಿತರಾಗಿದ್ದಾರೆ. ಮುಂದೆ ನಿಶಾಂತ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡಬಹುದು ಎಂದು ಹೇಳಲಾಗುತ್ತಿದೆ.

ಹೊರ್ಮುಜ್ ದಾಟಿ ಈಗ ಇನ್ನೊಂದು ಶಿಪ್ ಭಾರತಕ್ಕೆ

45000 ಎಲ್ಪಿಜಿ ಹೊತ್ತು ಬಂದ ಸರ್ವಶಕ್ತಿ



ಟೆಹರಾನ್: ಇರಾನ್ ಹಾಗೂ ಅಮೆರಿಕ ಪೈಪೋಟಿ ಬಿಕ್ಕಟ್ಟಿನ ನಡುವೆಯೂ ಸರ್ವಶಕ್ತಿ ಪ್ರಯೋಗಿಸಿ ಕೊನೆಗೂ 45 ಸಾವಿರ ಟನ್ ಎಲ್‌ಪಿಜಿ ಹೊತ್ತ ಭಾರತದ 'ಸರ್ವಶಕ್ತಿ' ಹಡಗು ಶನಿವಾರ ರಾತ್ರಿ ಹೊರ್ಮುಜ್ ಜಲಸಂಧಿ ದಾಟಿ ಬರುವಲ್ಲಿ ಯಶಸ್ವಿಯಾಗಿದೆ. ಶನಿವಾರ ರಾತ್ರಿ ಭಾರತದ ಸರ್ವಶಕ್ತಿ ಹಡಗು ಜಲಸಂಧಿ ದಾಟಿ ಒಮನ್ ಕೊಲ್ಲಿಗೆ ಪ್ರವೇಶಿಸಿರುವುದು 'ಶಿಪ್ ಟ್ರಾಕಿಂಗ್ ಡಾಟಾ'ದಿಂದ ಗೊತ್ತಾಗಿದೆ. ಭಾರತದ ಸಿಬ್ಬಂದಿ ಹಾಗೂ ಸೂಕ್ತ ಸಂರಕ್ಷಣಾ ವಿಧಿವಿಧಾನಗಳೊಂದಿಗೆ ಹಡಗು ಭಾರತದತ್ತ ಸಾಗಿ ಬರುತ್ತಿದೆ.

ಈ ಅತಿದೊಡ್ಡ ಅನಿಲ ಸಾಗಣೆ ಹಡಗು ಈ ಹಿಂದೆಯೂ ಪರ್ಷಿಯನ್ ಕೊಲ್ಲಿ ಮತ್ತು ಭಾರತದ ಬಂದರುಗಳ ನಡುವೆ ಓಡಾಟ ನಡೆಸಿದೆ. ಈಗ ಬರುತ್ತಿರುವ 45 ಸಾವಿರ ಟನ್ ಎಲ್‌ಪಿಜಿ ತುಂಬಿದ ಹಡಗನ್ನು ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಖರೀದಿಸಿರುವುದು ಬ್ಲೂಮ್‌ಬರ್ಗ್ ಅಂಕಿಅಂಶಗಳ ಪಟ್ಟಿಯಲ್ಲಿ ಕಂಡುಬಂದಿದೆ. ಇರಾನ್ ಹಡಗುಗಳ ಓಡಾಟಕ್ಕೆ ಅಮೆರಿಕ ನಿರ್ಬಂಧ ವಿಧಿಸಿ ಹಲವು ವಾರಗಳವರೆಗೂ ಯಾವುದೇ ಹಡಗು ಹೊರ್ಮುಜ್ ದಾಟಲು ಸಾಧ್ಯವಾಗಿರಲಿಲ್ಲ. ಭಾರತದ 'ಸರ್ವಶಕ್ತಿ'ಗೆ ಮಾತ್ರ ಇದು ಸಾಧ್ಯವಾಗಿದೆ.

ಮ.ಪ್ರದೇಶ ಹಡಗು ಮುಗುಚಿದ ಕೇಸ್: ಸತ್ತವರ ಸಂಖ್ಯೆ 13ಕ್ಕೇರಿಕೆ

ಜಬಲ್‌ಪುರ್ (ಎಂಪಿ): ಮಧ್ಯಪ್ರದೇಶದ ಜಬಲ್‌ಪುರ ನದಿಯಲ್ಲಿ ಕ್ರೂಸ್ ಹಡಗು ಮುಗುಚಿದ ಪ್ರಕರಣದ ಸಾವಿನ ಸಂಖ್ಯೆ ಈಗ 13ಕ್ಕೆ ಏರಿಕೆಯಾಗಿದೆ.

ಭಾನುವಾರ ಬೆಳಗ್ಗೆ 5 ವರ್ಷದ ಬಾಲಕ ಹಾಗೂ ಆತನ ಸಂಬಂಧಿಯ ಶವ ಬಾರ್ಗಿ ಡ್ಯಾಂ ಬಳಿ ಪತ್ತೆಯಾಗಿದ್ದು, ಮೃತರನ್ನು ಮಯುರಾಂ ಮತ್ತು ಆತನ ಚಿಕ್ಕಪ್ಪ ಕಾಮರಾಜ್ ಎಂದು ಗುರುತಿಸಲಾಗಿದೆ. ಮೃತಪಟ್ಟ ಎಲ್ಲರ ಗುರುತನ್ನೂ ಪತ್ತೆ ಹಚ್ಚಲಾಗಿದ್ದು, ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗುರುವಾರ ಘಟನೆ ನಡೆದ ತಕ್ಷಣ ಆಗ್ರಾದಿಂದ ಸುಮಾರು 20 ಸೇನಾ ಸಿಬ್ಬಂದಿಯನ್ನು (ಆರ್ಮಿ ಡೈವರ್ಸ್) ಏರ್‌ಲಿಫ್ಟ್ ಮಾಡಿ ರಕ್ಷಣಾ ಕಾರ್ಯಾಚರಣೆಗೆಂದು ಕರೆಸಲಾಗಿತ್ತು.

ಚೆನ್ನೈನಲ್ಲಿ ವಿಮಾನದ ತುರ್ತು ಬಾಗಿಲು ತೆರೆದು ಹೊರ ಹಾರಿದ!

ಚೆನ್ನೈ: ಶಾರ್ಜಾದಿಂದ ಬಂದ ಏರ್ ಅರೇಬಿಯಾದ ವಿಮಾನ ಚೆನ್ನೈ ವಿಮಾನನಿಲ್ದಾಣದಲ್ಲಿ ಇಳಿದ ನಂತರ ಟ್ಯಾಕ್ಸಿ ವೇಯಲ್ಲಿ ನಿಧಾನವಾಗಿ ಸಾಗುತ್ತಿದ್ದಾಗ ಅದರಲ್ಲಿದ್ದ ಪ್ರಯಾಣಿಕನೊಬ್ಬ ತುರ್ತು ಬಾಗಿಲು ತೆರೆದು ಕೆಳಕ್ಕೆ ಹಾರಿ ಓಡಿದ ಘಟನೆ ಭಾನುವಾರ ಮುಂಜಾನೆ ಸಂಭವಿಸಿದೆ. ಈ ಪ್ರಯಾಣಿಕ ಪುದುಕೋಟ್ಟೈಯವಾಗಿರಬಹುದೆಂದು ಅಂದಾಜಿಸಲಾಗಿದೆ. ಪ್ರಯಾಣ ವೇಳೆ ಅಸ್ವಸ್ಥನಾಗಿದ್ದ ಆತ ಎರಡು ಬಾರಿ ವಾಂತಿ ಮಾಡಿಕೊಂಡಿದ್ದ. ಪೈಲಟ್ ಮಾಹಿತಿ ಮೇರೆಗೆ ಕೈಗಾರಿಕಾ ಭದ್ರತಾ ಸಿಬ್ಬಂದಿ ಆತನನ್ನು ಬೆನ್ನಟ್ಟಿ ಹಿಡಿದು ವಿಚಾರಣೆ ನಡೆಸಲಾಗುತ್ತಿದೆ. ಘಟನೆಯಲ್ಲಿ ಆತ ಯಾವುದೇ ರೀತಿಯ ಗಾಯಗೊಂಡಿಲ್ಲ ಎಂದು ಏರ್ ಅರೇಬಿಯಾ ಹೇಳಿಕೊಂಡಿದೆ.

ತ.ನಾಡಿನಲ್ಲಿ ನಮ್ಮ ಮೈತ್ರಿ ಕೂಟ ಸರ್ಕಾರವನ್ನು ರಚಿಸುತ್ತದೆ: ಬಿಜೆಪಿ

ಚೆನ್ನೈ: ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಈ ಸಲದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅತಿದೊಡ್ಡ ಜಯ ಸಾಧಿಸಲಿದೆ ಎಂದು ಎಂದು ಬಿಜೆಪಿ ನಾಯಕ ನಾರಾಯಣ ತಿರುಪತಿ ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಅತಂತ್ರ ಫಲಿತಾಂಶ ಬರುವುದಿಲ್ಲ ಎಂದ ಅವರು, ಡಿಎಂಕೆ ಅಧಿಕಾರವಂಚಿತವಾಗುವುದು ಗ್ಯಾರಟಿ ಎಂದು ಹೇಳಿದ್ದಾರೆ. ಡಿಎಂಕೆ ವಿರುದ್ಧದ ಆಡಳಿತ ವಿರೋಧಿ ಅಲೆಯನ್ನು ಟಿವಿಕೆ ವಿಭಜಿಸಿದ್ದು, ಸ್ಟಾಲಿನ್ ಸರ್ಕಾರವನ್ನು ಕೆಳಗಿಳಸಬೇಕೆಂಬ ಬಯಕೆ ಮತದಾರರಲ್ಲಿತ್ತು. ಹಾಗಾಗಿ ಎಐಎಡಿಎಂಕೆ ನೇತೃತ್ವದ ಡಿಎಂಕೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿದರು.

ರೀಲ್ ಮಾಡಲು ಟ್ಯಾಂಕ್ ಏರಿದ್ದ ಇಬ್ಬರನ್ನು ರಕ್ಷಿಸಿದ ವಾಯುಪಡೆ

ಲಖನೌ: ಸಾಮಾಜಿಕ ಮಾಧ್ಯಮಗಳಿಗೆ ರೀಲ್ ಮಾಡಲು ಶನಿವಾರ ನಿಷ್ಕ್ರಿಯ ನೀರಿನ ಟ್ಯಾಂಕ್ ಹತ್ತಿದ್ದ ಐವರು ಮಕ್ಕಳಲ್ಲಿ ಮೂವರು ಟ್ಯಾಂಕ್‌ನ ಏಣಿ ಕುಸಿದ ಪರಿಣಾಮ ಕೆಳಗೆ ಬಿದ್ದು ಗಾಯಗೊಂಡಿದ್ದಾರೆ. ಅವರಲ್ಲಿ 10 ವರ್ಷದ ಬಾಲಕ ಪ್ರಾಣವನ್ನೂ ಕಳೆದುಕೊಂಡಿದ್ದಾನೆ. ನತದೃಷ್ಟ ಮಕ್ಕಳು ಟ್ಯಾಂಕ್‌ನ ಮೆಟ್ಟಿಲ ಮೂಲಕ ಇಳಿಯುವಾಗ ಇದ್ದಕ್ಕಿದ್ದಂತೆ ಕುಸಿದಿರುವುದರಿಂದ ಮೂವರು ಮಕ್ಕಳು ಕೆಳಗೆ ಬಿದ್ದು ಗಾಯಗೊಂಡರು. ಅವರಲ್ಲಿ ಸಿದ್ಧಾರ್ಥ ಎನ್ನುವಾತ ಆಸ್ಪತ್ರೆಗೆ ದಾಖಲಾಗುವಷ್ಟರಲ್ಲಿ ಕೊನೆಯುಸಿರೆಳೆದಿದ್ದಾನೆ. ಇನ್ನುಳಿದ ಪವನ್ ಹಾಗೂ ಶಬನ್ ಎಂಬಿಬ್ಬರು ಮಕ್ಕಳು ಟ್ಯಾಂಕ್ ಮೇಲೆ ಸಿಲುಕಿಕೊಂಡಿದ್ದರು. ಅವರನ್ನು ಭಾನುವಾರ ರಕ್ಷಿಸಲಾಗಿದೆ.

ಆಧಾರ್ ಬದಲಾವಣೆ ಸುದ್ದಿ ಫೇಕ್

ನವದೆಹಲಿ: ಆಧಾರ್ ಕಾರ್ಡ್ ಸ್ವರೂಪ ಬದಲಾಯಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಇನ್ನುಮುಂದೆ ಅದರಲ್ಲಿ ವ್ಯಕ್ತಿಯ ಫೋಟೋ ಮತ್ತು ಕ್ಯೂಆರ್ ಕೋಡ್ ಮಾತ್ರ ಇರಲಿದೆ ಎಂಬ ಸುದ್ದಿ ಕೆಲ ದಿನಗಳಿಂದ ಭಾರೀ ವೈರಲ್ ಆಗಿದೆ. ಈ ಬಗ್ಗೆ ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋ ಸ್ಪಷ್ಟನೆ ನೀಡಿದ್ದು ಅದು ಸುಳ್ಳು ಸುದ್ದಿ ಎಂದು ಹೇಳಿದೆ. ಆಧಾರ್ ಕಾರ್ಡ್ ಬದಲಾಯಿಸುವ ಯಾವುದೇ ಯೋಜನೆ ಕೇಂದ್ರ ಸರ್ಕಾರದ ಮುಂದಿಲ್ಲ. ಈ ರೀತಿಯ ಸುಳ್ಳು ಸುದ್ದಿಗಳು ಹಾಗೂ ವರದಿಗಳು ಅನಗತ್ಯ ಗೊಂದಲವನ್ನು ಉಂಟು ಮಾಡುತ್ತವೆ. ಹಾಗಾಗಿ ಜನರು ಅದನ್ನು ನಿರ್ಲಕ್ಷಿಸಬೇಕು ಎಂದು ಹೇಳಿದೆ.

ದೇಶಾದ್ಯಂತ ವಿಪತ್ತು ನಿರ್ವಹಣೆಗೆ ಕೇಂದ್ರದ ಹೊಸ ವ್ಯವಸ್ಥೆ

ಇನ್ನು ವಿಪತ್ತಿನ ಭೀತಿ ಬೇಡ ಮೊಬೈಲ್‌ಗೇ ಬರುತ್ತೆ ಅಲರ್ಟ್

ಶನಿವಾರ ಮಧ್ಯಾಹ್ನ ನಿಮ್ಮ ಮೊಬೈಲ್‌ಗೆ ಹಠಾತ್ ಆಗಿ ಜೋರಾದ ಸೈರನ್ ಶಬ್ದದೊಂದಿಗೆ ತುರ್ತು ಎಚ್ಚರಿಕೆ ಎಂಬ ಅಲರ್ಟ್ ಮೆಸೆಜ್ ಬಂದಿರಬಹುದು. ಇದನ್ನು ಕಂಡು ಗಾಬರಿಯಾಗುವ ಅಗತ್ಯವಿಲ್ಲ. ಇದು ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ದೂರಸಂಪರ್ಕ ಇಲಾಖೆ ಸಹಯೋಗದೊಂದಿಗೆ ಜಾರಿಗೆ ತಂದಿರುವ ಅತ್ಯಾಧುನಿಕ ಸೆಲ್ ಬ್ರಾಡ್‌ಕಾಸ್ಟ್ ಅರ್ಲ್ಟ್ ಸಿಸ್ಟಮ್‌ನ ಪ್ರಯೋಗಾರ್ಥ ಪರೀಕ್ಷೆಯಾಗಿದೆ. ಹಾಗಿದ್ದರೆ ಏನಿದು ಹೊಸ ತಂತ್ರಜ್ಞಾನ? ಹೇಗೆ ಕೆಲಸ ಮಾಡುತ್ತದೆ ಮತ್ತು ಯಾವ ಸಂದರ್ಭದಲ್ಲಿ ಉಪಯೋಗ ಆಗುತ್ತದೆ ಎಂಬುದರ ಮಾಹಿತಿ ಇಲ್ಲಿದೆ...

ಏನಿದು ಸೆಲ್ ಬ್ರಾಡ್‌ಕಾಸ್ಟ್ ಅಲರ್ಟ್, ಕೆಲಸ ಏನು?

ಇದು ವಿಪತ್ತುಗಳ ಸಮಯದಲ್ಲಿ ಸಾರ್ವಜನಿಕರಿಗೆ ತ್ವರಿತವಾಗಿ ಎಚ್ಚರಿಕೆ ನೀಡುವ ಒಂದು ಆಧುನಿಕ ವ್ಯವಸ್ಥೆ. ಸಾಮಾನ್ಯ ಎಸ್‌ಎಂಎಸ್‌ಗಳಿಗಿಂತ ಇದು ಭಿನ್ನವಾಗಿದೆ. ಅತಿ ಕಡಿಮೆ ಸಮಯದಲ್ಲಿ, ಒಂದೇ ಬಾರಿಗೆ ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಲಕ್ಷಾಂತರ ಮೊಬೈಲ್ ಫೋನ್‌ಗಳಿಗೆ ಎಚ್ಚರಿಕೆ ಸಂದೇಶವನ್ನು ಕಳುಹಿಸಬಹುದು. ಸದ್ಯ ನಡೆಯುತ್ತಿರುವುದು ಕೇವಲ ಪರೀಕ್ಷಾರ್ಥ ಪ್ರಯೋಗ ಆಗಿದೆ. ಈ ಅಲರ್ಟ್ ಮೆಸೆಜ್ ಬಂದಾಗ ನೀವು ಯಾವುದೇ ಕ್ರಮ ತೆಗೆದುಕೊಳ್ಳುವ ಅಥವಾ ಗಾಬರಿಗೊಳ್ಳುವ ಅಗತ್ಯವಿಲ್ಲ. ತಂತ್ರಜ್ಞಾನವನ್ನು ಪರೀಕ್ಷಿಸಲು ಸರ್ಕಾರ ಮಾಡುತ್ತಿರುವ ಸಿದ್ಧತೆಯಾಗಿದೆ. ಜಾಗೃತ ನಾಗರಿಕ, ಸುರಕ್ಷಿತ ರಾಷ್ಟ್ರ ಎಂಬ ಧ್ಯೇಯದೊಂದಿಗೆ ಭಾರತ ಸರ್ಕಾರವು ದೇಶೀಯ ತಂತ್ರಜ್ಞಾನವನ್ನು ಬಳಸಿ ಈ ವ್ಯವಸ್ಥೆಯನ್ನು ರೂಪಿಸಿದೆ. ಮುಂದಿನ ದಿನಗಳಲ್ಲಿ ಇದು ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಸಾವಿರಾರು ಜೀವಗಳನ್ನು ಉಳಿಸಲು ಸಹಕಾರಿಯಾಗಲಿದೆ.

ಇದರ ಉದ್ದೇಶಗಳೇನು?

- ಭೂಕಂಪ, ಪ್ರವಾಹ, ಸುನಾಮಿ, ಗುಡುಗು-ಸಿಡಿಲು ಅಥವಾ ಅನಿಲ ಸೋರಿಕೆಯಂತಹ ತುರ್ತು ಸಂದರ್ಭಗಳಲ್ಲಿ ಜನರಿಗೆ ಮುನ್ಸೂಚನೆ ನೀಡಿ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಸೂಚಿಸಲು ಇದು ಸಹಕಾರಿಯಾಗಲಿದೆ.
- ಸಾಮಾನ್ಯ ಎಸ್‌ಎಂಎಸ್ ಕಳುಹಿಸಲು ಸಮಯ ತೆಗೆದುಕೊಳ್ಳುತ್ತದೆ, ಆದರೆ ಸೆಲ್ ಬ್ರಾಡ್‌ಕಾಸ್ಟ್ ಸೆಕೆಂಡುಗಳಲ್ಲೇ ಇಡೀ ನಗರ ಅಥವಾ ಜಿಲ್ಲೆಯ ಜನರನ್ನು ತಲುಪುತ್ತದೆ.
- ಈ ಸಂದೇಶ ಸ್ವೀಕರಿಸಲು ನಿಮ್ಮ ಫೋನ್‌ನಲ್ಲಿ ಇಂಟರ್ನೆಟ್ ಅಥವಾ ಡೇಟಾ ಆನ್ ಇರಬೇಕಾದ ಅಗತ್ಯವಿಲ್ಲ.

ವಿಶೇಷತೆಗಳು ಏನು?

- ಫೋನ್ ಸೈಲೆಂಟ್ ಮೋಡ್‌ನಲ್ಲಿದ್ದರೂ ಸಹ, ಈ ಎಚ್ಚರಿಕೆ ಬಂದಾಗ ಜೋರಾದ ಸೈರನ್ ಸದ್ದು ಮಾಡುತ್ತದೆ ಮತ್ತು ಫೋನ್ ವೈಬ್ರೇಟ್ ಆಗುತ್ತದೆ. ಇದರಿಂದ ಗಾಢ ನಿದ್ರೆಯಲ್ಲಿದ್ದರೂ ಎಚ್ಚರಗೊಳ್ಳಲು ಸಾಧ್ಯ.
- ಮೊಬೈಲ್ ಟವರ್‌ಗಳು ಜಾಮ್ ಆಗಿದ್ದರೂ ಸಹ ಈ ತಂತ್ರಜ್ಞಾನ ಕಾರ್ಯನಿರ್ವಹಿಸುತ್ತದೆ.
- ಈ ಸಂದೇಶಗಳು ಕನ್ನಡ ಸೇರಿದಂತೆ ಸ್ಥಳೀಯ ಭಾಷೆಗಳಲ್ಲಿ ದೊರೆಯುವುದರಿಂದ ಪ್ರತಿಯೊಬ್ಬರಿಗೂ ಸುಲಭವಾಗಿ ಅರ್ಥವಾಗುತ್ತದೆ.
- ವಿಪತ್ತು ಸಂಭವಿಸುವ ನಿರ್ದಿಷ್ಟ ಪ್ರದೇಶದ ಜನರಿಗೆ ಮಾತ್ರ ಈ ಸಂದೇಶ ಹೋಗುತ್ತದೆ, ಇದರಿಂದ ಬೇರೆಡೆಯಿರುವವರಿಗೆ ಅನಗತ್ಯ ಆತಂಕ ಉಂಟಾಗುವುದಿಲ್ಲ.

ಭಾರತಕ್ಕೆ ಇದರ ಅಗತ್ಯವೇನು?

ಭಾರತವು ಭೌಗೋಳಿಕವಾಗಿ ವೈವಿಧ್ಯಮಯವಾಗಿದ್ದು, ಪ್ರತಿವರ್ಷ ಚಂಡಮಾರುತ ಮತ್ತು ಪ್ರವಾಹಕ್ಕೆ ಸಾವಿರಾರು ಜನರು ಬಲಿಯಾಗುತ್ತಿದ್ದಾರೆ. ಸಾಂಪ್ರದಾಯಿಕ ಟಿವಿ ಅಥವಾ ರೇಡಿಯೋ ಸುದ್ದಿಗಳು ಎಲ್ಲರನ್ನೂ ತಲುಪದಿರಬಹುದು. ಆದರೆ ಇಂದು ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಇದೆ. ಹಾಗಾಗಿ, ವಿಪತ್ತು ಸಂಭವಿಸುವ ಮುನ್ನವೇ ಜನರನ್ನು ಎಚ್ಚರಿಸಿ ಸುರಕ್ಷಿತ ತಾಣಗಳಿಗೆ ಕಳುಹಿಸಲು ಇದು ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ.

ಇನ್ಯಾವ ದೇಶದಲ್ಲಿದೆ ಈ ಅಲರ್ಟ್ ಸಿಸ್ಟಂ?

ವಿಶ್ವದ ಅನೇಕ ಮುಂದುವರಿದ ದೇಶಗಳು ಈಗಾಗಲೇ ಈ ವ್ಯವಸ್ಥೆ ಜಾರಿಯಲ್ಲಿದೆ. ಸದ್ಯ ವಿಶ್ವದ 30ಕ್ಕೂ ಹೆಚ್ಚು ದೇಶಗಳು ಈ ರೀತಿಯ ತುರ್ತು ಎಚ್ಚರಿಕೆ ವ್ಯವಸ್ಥೆಯನ್ನು ಹೊಂದಿವೆ. ಅಮೆರಿಕ, ನೆದರ್‌ಲ್ಯಾಂಡ್, ಯುಕೆ, ಸೇರಿದಂತೆ ಯುರೋಪಿನ ಬಹುತೇಕ ರಾಷ್ಟ್ರಗಳಲ್ಲಿ ಈ ಅಲರ್ಟ್ ಸಿಸ್ಟಂ ಈಗಾಗಲೇ ಜಾರಿಯಲ್ಲಿದೆ. ಜಪಾನ್ 2007ರಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಫೋನ್‌ನಲ್ಲಿ ಈ ಸೆಟ್ಟಿಂಗ್ ಆನ್ ಆಗಿದೆಯೇ?

ಸಾಮಾನ್ಯವಾಗಿ ಈಗಿನ ಹೊಸ ಸ್ಮಾರ್ಟ್‌ಫೋನ್‌ಗಳಲ್ಲಿ ಅಲರ್ಟ್ ಸೆಟ್ಟಿಂಗ್ ಮೊದಲೇ ಆನ್ ಆಗಿರುತ್ತದೆ. ಆದರೂ ನಿಮ್ಮ ಮೊಬೈಲ್‌ನಲ್ಲಿ ಆನ್ ಆಗಿರದಿದ್ದರೆ ಹೀಗೆ ಮಾಡಿ.

- ಹೆಚ್ಚಿನ ಆಧುನಿಕ ಸ್ಮಾರ್ಟ್‌ಫೋನ್‌ಗಳಲ್ಲಿ ಇದು ಮೊದಲೇ ಆನ್ ಆಗಿರುತ್ತದೆ. ಆದರೂ ಒಮ್ಮೆ ಪರಿಶೀಲಿಸಿ:
- ಆಂಡ್ರೈಡ್ ಸೆಟ್ಟಿಂಗ್-ಸೆಫ್ಟಿ&ಎಮೆರ್ಜನ್ಸಿ- ವೈರ್‌ಲೆಸ್ ಎಮೆರ್ಜನ್ಸಿ ಅಲರ್ಟ್ಸ್- ಅಲೋ ಅಲರ್ಟ್ ಆನ್ ಮಾಡಿ
- ಐಫೋನ್: ಸೆಟ್ಟಿಂಗ್-ನೋಟಿಫಿಕೇಷನ್ಸ್-ಕೆಳಗಡೆ ಸ್ಕ್ರೋಲ್ ಮಾಡಿ- ಗವರ್ನಮೆಂಟ್ ಅಲರ್ಟ್ ಆನ್ ಮಾಡಿ



CMYK

ಮಂತ್ರಾಲಯ ಪುನರುತ್ಥಾನಗೊಳಿಸಿದ ಬಿಎಸ್‌ವೈ

'ಆಪತ್ಬಾಂಧವ' ಎಂದು ಸಂಬೋಧಿಸುತ್ತಿದ್ದ ಶ್ರೀ ಸುಯತೀಂದ್ರತೀರ್ಥರು

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಹಿಂದಿನ ಗುರುಗಳಾದ ಸುಯತೀಂದ್ರ ತೀರ್ಥರು ಬಿ.ಎಸ್.ಯಡಿಯೂರಪ್ಪ ಭೇಟಿಯಾದಾಗಲೆಲ್ಲ "ಆಪತ್ಬಾಂಧವ ಯಡಿಯೂರಪ್ಪ" ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಇದನ್ನು ಗಮನಿಸಿದ ಪತ್ರಕರ್ತರೊಬ್ಬರು ಸುಯತೀಂದ್ರ ತೀರ್ಥರನ್ನು "ಸ್ವಾಮೀಜಿ ಇಡೀ ಭಕ್ತ ಸಮುದಾಯ ತಮ್ಮನ್ನು ಆಪತ್ಬಾಂಧವ ಎಂದು ನಂಬಿ ಆರಾಧಿಸುತ್ತಿದೆ. ಆದರೆ ತಾವು ಯಡಿಯೂರಪ್ಪ ಅವರನ್ನು ಆಪತ್ಬಾಂಧವ ಎಂದು ಅಭಿಮಾನದಿಂದ ಕರೆಯುತ್ತಿದ್ದೀರಿ? ಏನಿದರ ಮರ್ಮ?" ಎಂದು ಪ್ರಶ್ನಿಸಿದರು.

ಸ್ವಾಮೀಜಿ ಒಂದು ಕ್ಷಣ ಭಾವುಕರಾದರು. "ಯಡಿಯೂರಪ್ಪ ಪ್ರಭಾವಿ ರಾಜಕಾರಣಿ ಎನ್ನುವ ಕಾರಣಕ್ಕೆ ಈ ಮಾತು ಹೇಳುತ್ತಿಲ್ಲ. ಅವರನ್ನು ಹೊಗಳಿ ಸಂತುಷ್ಟಗೊಳಿಸುವುದು ನಮ್ಮ ಉದ್ದೇಶವಲ್ಲ. ನಿಮಗೆಲ್ಲರಿಗೂ ಗೊತ್ತಿರುವಂತೆ 2009 ರಲ್ಲಿ ಪ್ರಕೃತಿ ವಿಕೋಪದಿಂದ ಸಂಕಷ್ಟಕ್ಕೆ ಸಿಲುಕಿ ಇಡೀ ಮಂತ್ರಾಲಯ ಜಲಾವೃತವಾದ ಸಂದರ್ಭದಲ್ಲಿ ನಾನು ಹಾಗೂ ಕೆಲವು ಭಕ್ತರು ಪ್ರವಾಹದ ಮಧ್ಯೆ ಸಿಲುಕಿದೆವು. ಎಲ್ಲವೂ ಮುಗಿದು ಹೋಯಿತು ಎಂದುಕೊಂಡು ಆತಂಕಗೊಂಡ ಆ ಘಳಿಗೆಯಲ್ಲಿ ಹೆಲಿಕಾಪ್ಟರ್ ಮೂಲಕ ನಮ್ಮನ್ನು ಯಡಿಯೂರಪ್ಪ ರಕ್ಷಿಸಿದರು. ಇಷ್ಟು ಮಾತ್ರವಲ್ಲ, ಸುರಕ್ಷತಾ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಕೊಂಡರು. ಜಲಪ್ರಳಯದಿಂದ ತನ್ನೆಲ್ಲಾ ಬೆಡಗು – ಬಣ್ಣ ಕಳೆದುಕೊಂಡಿದ್ದ ಮಂತ್ರಾಲಯ ಶ್ರೀ ಕ್ಷೇತ್ರಕ್ಕೆ ಪುನರುತ್ಥಾನ ಕಲ್ಪಿಸಿದರು. ಯಡಿಯೂರಪ್ಪ ನಿಜ ಅರ್ಥದಲ್ಲಿ ಆಪತ್ಬಾಂಧವ! ಎಂದು ಸ್ವಾಮೀಜಿ ಜಲಪ್ರಳಯದ ಆ ದಿನದ ಘಟನೆ ನಿಧಾನವಾಗಿ ಪತ್ರಕರ್ತರಿಗೆ ವಿವರಿಸಿದರು.

ಸದಾ ಲವಲವಿಕೆ....

ಹೌದು, ಯಡಿಯೂರಪ್ಪ ಎಲ್ಲರ ಆಪತ್ಬಾಂಧವ! ಆದ್ದರಿಂದಲೇ ಕನ್ನಡ ನಾಡಿನ ಜನ ಅವರನ್ನು ತಮ್ಮ ನಾಯಕ ಎಂದು ಗುರುತಿಸಿದೆ. ಅವರು ಈಚೆಗೆ ತಮ್ಮ 74ನೇಯ ಜನ್ಮದಿನವನ್ನು ಸರಳವಾಗಿ ಆಚರಿಸಿಕೊಂಡರು. ಅವರ ಚಟುವಟಿಕೆ, ಲವಲವಿಕೆ, ಓಡಾಟ, ಹೋರಾಟದ ಕೆಚ್ಚು ಜನಸ್ಪಂದನ ಗಮನಿಸಿದರೆ ಅವರಿನ್ನೂ 25 ಹರೆಯದವರಾಗಿ ಕಾಣುತ್ತಾರೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಬೆಳಗಾವಿ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಭೀಕರ ನೆರೆ ಬಂದು ಅಪಾರ ಆಸ್ತಿ, ಜೀವ ಹಾನಿಯಾಗಿತ್ತು. ಇದನ್ನು ಸಮರ್ಥವಾಗಿ ನಿಭಾಯಿಸಿ ಪ್ರವಾಹಪೀಡಿತರಿಗೆ ಅಗತ್ಯ ಪರಿಹಾರ ಒದಗಿಸಿದರು. ಖಾಸಗಿ ಉದ್ದಿಮೆದಾರರು ಹಾಗೂ ಮಠಗಳ ಸಹಭಾಗಿತ್ವದಲ್ಲಿ ಸಂತ್ರಸ್ತರಿಗಾಗಿ ಸುಮಾರು 12,000 ಮನೆಗಳನ್ನು ನಿರ್ಮಿಸಿ ವಿತರಿಸಿದರು. ಆಗ ಕೇಂದ್ರ ಗೃಹ ಸಚಿವರಾಗಿದ್ದ ಪಿ. ಚಿದಂಬರಂ 10 ವರ್ಷಗಳಲ್ಲಿ ಮಾಡಬೇಕಾಗದ ಕೆಲಸವನ್ನು ಯಡಿಯೂರಪ್ಪ ಒಂದು ವರ್ಷದ ಅವಧಿಯಲ್ಲಿ ಸಾಧಿಸಿದ್ದನ್ನು ಶ್ಲಾಘಿಸಿದರು. ಇದು ದೇಶದಲ್ಲಿ ಒಂದು ದಾಖಲೆಯಾಗಿ ಉಳಿದಿದೆ. ಈ ಮನೆಗಳನ್ನು ಪಡೆದ ಜನ ತಮ್ಮ ಮನೆಯಲ್ಲಿ ಬಿ.ಎಸ್. ವಾಯ್ ಫೋಟೊ ಇಟ್ಟು ಪೂಜಿಸುತ್ತಾರೆ. ಅವರು ಕೂಡಾ ಯಡಿಯೂರಪ್ಪ ಅವರನ್ನು ನಮ್ಮ ಆಪತ್ಬಾಂಧವ ಎಂದು ನಿತ್ಯ ಸ್ಮರಿಸುತ್ತಾರೆ.

ಪ್ರವಾಹದ ಬಾಧೆಗೆ ಒಳಗಾದ ಉತ್ತರ ಕರ್ನಾಟಕದ 330 ಹಳ್ಳಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿ ಅವರಿಗೆ ನೆಮ್ಮದಿಯ ಬದುಕ ಕಲ್ಪಿಸಿದ್ದು ಯಡಿಯೂರಪ್ಪ ಅವಧಿಯ ಒಂದು ಮಹತ್ವದ ದಾಖಲೆ. ಉಳಿದ ಅನೇಕ ರಾಜ್ಯಗಳು ಯಡಿಯೂರಪ್ಪ ಅವರ ಈ ಸಾಹಸವನ್ನು ಅಧ್ಯಯನ ಮಾಡಿ ತಮ್ಮಲ್ಲಿ ಜಾರಿಗೆ ಪ್ರಯತ್ನಿಸುತ್ತಿವೆ.

ಡಾ. ಮುರುಗೇಶ ಆರ್ ನಿರಾಣಿ
ಮಾಜಿ ಸಚಿವರು, ಬೀಳಗಿ

ನನ್ನ ರಾಜಕೀಯ ಗುರು....

ಯಡಿಯೂರಪ್ಪ ನನ್ನ ರಾಜಕೀಯ ಗುರು. ಅವರ ಸಮರ್ಪಣ ಮನೋಭಾವ, ಧೈರ್ಯ, ಋಜುತ್ವ, ನನ್ನನ್ನು ಬಹಳ ಆಕರ್ಷಿಸಿವೆ. ಆರೋಗ್ಯದ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಾರೆ. ಮುಂಜಾನೆ ಕಡ್ಡಾಯವಾಗಿ ವಾಯು ವಿಹಾರ ಮಾಡುತ್ತಾರೆ. ಊಟ ತುಂಬ ಮಿತವ್ಯಯ. ಸಮಾಜದಲ್ಲಿರುವ ಬಹುಪಾಲು ಬಡವರಿಗಾಗಿ ಏನನ್ನಾದರೂ ಮಾಡಲೇಬೇಕೆಂದು ಅವರು ಮೊದಲಿನಿಂದಲೂ ಚಿಂತಿಸುತ್ತಿದ್ದಾರೆ.

ಅಧಿಕಾರದ ಉತ್ತುಂಗದಲ್ಲಿದ್ದಾಗಲೂ ಅವರಲ್ಲಿ ಅದೇ ತುಡಿತವನ್ನು ನಾನು ಕಂಡಿದ್ದೇನೆ. ಅವರ ಎಲ್ಲರ ಪಾಲಿನ ಆಪತ್ಬಾಂಧವ ಆಗಿದ್ದಾರೆ. ಅವರೊಂದಿಗೆ ಪ್ರವಾಸ ಮಾಡುವ, ಸರಕಾರ ನಡೆಸುವ, ಪಕ್ಷ ಸಂಘಟಿಸುವ ಅನೇಕ ಸಭೆ ಸಮಾರಂಭಗಳಲ್ಲಿ ವೇದಿಕೆ ಹಂಚಿಕೆಕೊಳ್ಳುವ, ಅವರೊಂದಿಗೆ ಊಟಮಾಡುವ, ನಗುವ ಬಹುದೊಡ್ಡ ಭಾಗ್ಯ ನನಗೆ ದೊರೆತಿದೆ. ಧಾರವಾಡ ಜಿಲ್ಲೆಯ ಪ್ರವಾಸದ ಸಂದರ್ಭದಲ್ಲಿ ಬಾಲಕಿಯೊಬ್ಬಳು ಶಾಲೆಗೆ ಹೋಗಲು ಸೈಕಲ್ ಬೇಕು ಎಂದು ತಂದೆ ಎದುರು ಕಣ್ಣೀರು ಹಾಕುವುದನ್ನು ಪ್ರತ್ಯಕ್ಷವಾಗಿ ಕಂಡ ಯಡಿಯೂರಪ್ಪ ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಸೈಕಲ್ ನೀಡುವ ಮಹತ್ವದ ಯೋಜನೆ ಜಾರಿಗೆ ತಂದರು.



ನಾನು ರಾಜ್ಯದ ಬೃಹತ್ ಕೈಗಾರಿಕಾ ಸಚಿವನಾಗಿ 2010 ಮತ್ತು 2012 ರಲ್ಲಿ ಎರಡು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಏರ್ಪಡಿಸಿದ್ದೆ. ಇದ್ದರಿಂದ 3.93 ಲಕ್ಷ ಕೋಟಿ ಬಂಡವಾಳ ಹೂಡಿಕೆ ರಾಜ್ಯಕ್ಕೆ ಬಂದಿತ್ತು. 389 ಕೈಗಾರಿಕೆಗಳಿಗೆ ಒಪ್ಪಂದ 10 ಲಕ್ಷ ಹೊಸ ಉದ್ಯೋಗಳ ಸೃಷಿಗೆ ಅವಕಾಶ ದೊರೆಯಿತು. ದೇಶಕ್ಕೆ ದೊಡ್ಡ ಹೆಸರು ತಂದ ಈ ಸಮಾವೇಶ ಯಶಸ್ವಿಯಾಗಲು ಯಡಿಯೂರಪ್ಪ ಅವರ ಪ್ರೇರಣೆ ಹಾಗೂ ಪ್ರೋತ್ಸಾಹವೇ ಕಾರಣ. ಪ್ರಧಾನಿಯಾಗಿದ್ದ ಮನಮೋಹನ ಸಿಂಗ್ ಕೂಡಾ ಈ ಸಮಾವೇಶಗಳನ್ನು ಶ್ಲಾಘಿಸಿದ್ದಾರೆ.

ಅವರು ಮುಖ್ಯಮಂತ್ರಿಯಾಗಿ ಮಾಡಿದಷ್ಟು ಜನಪರ ಕೆಲಸಗಳನ್ನು ಕರ್ನಾಟಕದ ಯಾವುದೇ ಮುಖ್ಯಮಂತ್ರಿ ಮಾಡಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಅವರು ಯಾವುದೇ ಸಭೆಯಲ್ಲಿ ಭಾಗವಹಿಸಿರಲಿ, ಅಲ್ಲಿ ಚಪ್ಪಾಳೆ ಸುರಿಮಳೆ ತುಂಬಿರುತ್ತದೆ. ಜನ ತುಂಬು ಆಸಕ್ತಿಯಿಂದ ಬಿಎಸ್‌ವೈ. ಬಿ.ಜೆ.ಪಿ ಅಧ್ಯಕ್ಷರಾಗಬೇಕೆಂದು ಬಯಸುತ್ತಿದ್ದಾರೆ.

ಅವರು ನನ್ನನ್ನು ಬಹಳ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ನಾನು ಭೇಟಿಯಾದಾಗಲೆಲ್ಲ ಮುರುಗೇಶ ಮತ್ತೆ ಯಾವ ಕಾರ್ಖಾನೆ ಕಟ್ಟುತ್ತಿದ್ದಿರಿ ಎಂದೇ ಮಾತು ಆರಂಭಿಸುತ್ತಾರೆ. ಅವರು ಬೇಸರಗೊಂಡಿದ್ದನ್ನು, ನಿರಾಸೆಗೊಂಡಿದ್ದನ್ನು ನಾನು ಒಮ್ಮೆಯೂ ನೋಡಿಲ್ಲ. ನಾಯಕನಾದವನು ಎಂಥ ಒತ್ತಡದಲ್ಲಿಯೂ ಯೋಚಿಸುವ ಮನಸ್ಸು, ಕೇಳುವ ಕಿವಿ ಕಳೆದುಕೊಳ್ಳಬಾರದು. ಜನರು ಹೇಳುವ ಮಾತು ಕಿವಿಗೊಟ್ಟು ಕೇಳುವ ಸಂಯಮ ಸಮಾಧಾನ ರೂಢಿಸಿಕೊಳ್ಳಬೇಕು ಎಂದು ಅವರು ತಮ್ಮ ಸಂಗಾತಿಗಳಿಗೆ ಹೇಳುತ್ತಾರೆ. ■

ಸಾವಯವ ಕೃಷಿಗೆ ಪ್ರೋತ್ಸಾಹ...

ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಾವಯವ ಕೃಷಿಕನ ಮನೆಯಲ್ಲಿ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಶಿರೋಳ ಗ್ರಾಮದ ಶಿವಲಿಂಗಯ್ಯ ಗಣಾಚಾರಿ ಅವರ ತೋಟದ ಮನೆಯಲ್ಲಿ ದಿನಾಂಕ 26-6-2010 ರಂದು ವಾಸ್ತವ್ಯ ಮಾಡಿದ್ದರು. ಮರುದಿನ ಗ್ರಾಮದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯಲ್ಲಿ ಗ್ರಾಮದ ವಿದ್ಯಾರ್ಥಿನಿ ವಿಜಯಲಕ್ಷ್ಮೀ ಸದಾಶಿವ ಗಣಿ ಎಂಬಾಕೆ ಎದ್ದು ನಿಂತು ನನ್ನ ತಂದೆ ಬಡ ರೈತ ಅವರ ಆರೋಗ್ಯ ಕೆಟ್ಟಿದೆ, ದವಾಖಾನೆ ಖರ್ಚಿಗೆ ಇದ್ದ ಎರಡು ಎಕರೆ ಭೂಮಿ ಕೂಡ ಮಾರಿದ್ದಾರೆ. ನಾನು ಬಿ. ಎಸ್. ಸಿ. ಪಾಸಾಗಿ ಎಂಸಿಎ. ಬಾಗಲಕೋಟೆ ಕಾಲೇಜಿನಲ್ಲಿ ಓದುತ್ತಿದ್ದೇನೆ ಕಾಲೇಜ್ ಫೀ, ಹಾಸ್ಟೇಲ್ ಫೀ ಕಟ್ಟಲು ಸಾಧ್ಯವಾಗಲಿಲ್ಲ. ಈಗ ಶಿರೋಳ ಗ್ರಾಮಕ್ಕೆ ಬಂದು ಮನೆಯಲ್ಲಿ ಕುಳಿತಿದ್ದೇನೆ ನನಗೆ ನೆರವಾಗಬೇಕು ಎಂದು ವಿನಂತಿ ಮಾಡಿದಳು.

ಇನ್ನೊಮ್ಮೆ ನಿನ್ನ ಹೆಸರು ಹೇಳಮ್ಮ? ಎಂದು ಯಡಿಯೂರಪ್ಪ ಕೇಳಿದರು. ವಿಜಯಲಕ್ಷ್ಮೀ ಉತ್ತರಿಸಿದಳು. ನಾಡಿನ ಎಲ್ಲ ಮಕ್ಕಳಿಗೆ ನೆರವಾಗಬೇಕು ಎಂದು ನನ್ನ ಮನಸ್ಸು ಹಂಬಲಿಸುತ್ತಿದೆ, ಅದು ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ವಿಜಯಲಕ್ಷ್ಮೀ ನಿನ್ನನ್ನು ದತ್ತು ಪಡೆದಿದ್ದೇನೆ, ನಿನ್ನ ಓದಿನ ಖರ್ಚು ವೆಚ್ಚಕ್ಕೆ ಪೂರ್ಣ ಅನುಕೂಲ ಮಾಡುವೆ ಎಂದು ಸಭೆಯಲ್ಲಿ ಹೇಳಿದರು.

ವಾಗ್ದಾನ ಮಾಡಿದಂತೆ ಯಡಿಯೂರಪ್ಪ ವಿಜಯಲಕ್ಷ್ಮೀ ಶಿಕ್ಷಣಕ್ಕೆ ವರ್ಷಕ್ಕೆ 2 ಲಕ್ಷ 40 ಸಾವಿರ ಪಾವತಿ ಮಾಡಿದರು. ಆಕೆಗೆ ಯಾವುದೇ ಅನಾನುಕೂಲವಾಗದಂತೆ ನೋಡಿಕೊಂಡಿದ್ದಾರೆ. ಆಕೆಯ ತಂದೆ ಸದಾಶಿವ ಅವರ ಉಪಚಾರಕ್ಕೆ 1 ಲಕ್ಷ 20 ಸಾವಿರ ನೀಡಿದ್ದಾರೆ.

2009 ರಲ್ಲಿ ಜಲಪ್ರಳಯದಿಂದಾಗಿ ಮಂತ್ರಾಲಯ ಕ್ಷೇತ್ರದಲ್ಲಿ ನೀರು ನುಗ್ಗಿ ಅಸ್ತವ್ಯಸ್ತಗೊಂಡಿರುವುದು.

ಮೆಟ್ರೋಗೆ ಸೋಲಾರ್ ಆಸರೆ

ಬೆಂಗಳೂರಿನ ನಮ್ಮ ಮೆಟ್ರೋಗೆ ಸೋಲಾರ್ ವಿದ್ಯುತ್ ಲಭಿಸಿದರೆ ಈಗಿನ ದರವನ್ನು ಕಡಿಮೆ ಮಾಡಬಹುದು. ಮೆಟ್ರೋ ದರ ಪ್ರತಿವರ್ಷ ಅಧಿಕಗೊಳ್ಳುತ್ತಿದೆ. ಇದಕ್ಕೆ ಕೇಂದ್ರ ಕಾರಣವೋ ರಾಜ್ಯ ಸರ್ಕಾರ ಕಾರಣವೋ ಎಂಬ ಚರ್ಚೆ ನಡೆಯುತ್ತಿದೆ. ಈ ಚರ್ಚೆಯಿಂದ ಪ್ರಯೋಜನವಿಲ್ಲ. ಅದರ ಬದಲು ಮೆಟ್ರೋ ದರವನ್ನು ಕಡಿಮೆ ಮಾಡಲು ಏನು ಮಾಡಬೇಕೆಂಬುದರ ಚಿಂತನೆ ನಡೆಯಬೇಕು. ಬೆಂಗಳೂರು ನಗರದ ಜನ ಮೆಟ್ರೋ ಅವಲಂಬಿಸುವುದು ಅನಿವಾರ್ಯವಾಗಿದೆ. ಪ್ರತಿದಿನ 25-30 ಕಿಮೀ ಪ್ರಯಾಣ ಮಾಡುವವರು ಮೆಟ್ರೋಗೆ ಹೋಗುವುದು ಅನಿವಾರ್ಯ. ಸಿಟಿ ಬಸ್ ನಂಬಿಕೊಂಡದರೆ ಹೋಗಿ ಬರಲು ಆಗುವುದೇ ಇಲ್ಲ. ಇಂಥ ಸಂದರ್ಭದಲ್ಲಿ ಪ್ರತಿವರ್ಷ ಮೆಟ್ರೋ ದರ ಹೆಚ್ಚಿಸುತ್ತ ಹೋದರೆ ಜನಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಬೀಳಲಿದೆ. ಅದರಲ್ಲೂ ನಗರದಲ್ಲಿ ದುಡಿಯುವವರಿಗೆ ಹೆಚ್ಚಿನ ಆದಾಯ ಇರುವುದಿಲ್ಲ. ಸಂಬಳ ನಂಬಿಕೊಂಡು ಬದುಕಬೇಕು. ಸಂಬಳ ಏನೂ ಹೆಚ್ಚಾಗುವುದಿಲ್ಲ. ನಿಗದಿತ ಸಂಬಳಕ್ಕೆ ತಕ್ಕಂತೆ ನೌಕರರು ತಮ್ಮ ವೆಚ್ಚವನ್ನು ಮಾಡುತ್ತಾರೆ. ಇದಕ್ಕಿದ್ದಂತೆ ಮೆಟ್ರೋ ದರ ಅಧಿಕಗೊಂಡಲ್ಲಿ ಅದನ್ನು ಭರಿಸುವುದು ಕಷ್ಟ. ಇತ್ತೀಚೆಗೆ ಫೆಬ್ರವರಿಯಲ್ಲಿ ಮೆಟ್ರೋ ದರ ಅಧಿಕಗೊಂಡಿತು. ಸಂಸದರೂ ಸೇರಿದಂತೆ ಜನ ಪ್ರತಿಭಟಿಸಿದರು. ಪ್ರಯೋಜನವಾಗಲಿಲ್ಲ. ಇದರಲ್ಲಿ ರಾಜಕೀಯ ಕೆಲಸ ಮಾಡುವುದಿಲ್ಲ. ಮೆಟ್ರೋ ರೈಲು ನಿರ್ವಹಣೆಗೆ ಎಷ್ಟು ವೆಚ್ಚವಾಗುತ್ತದೆ. ಅದರಲ್ಲಿ ಹೆಚ್ಚಿನ ಅಂಶ ಯಾವುದು. ಅದರಲ್ಲಿ ಕಡಿಮೆ ಮಾಡುವುದು ಹೇಗೆ ಎಂಬುದರ ಅಧ್ಯಯನ ನಡೆಯಬೇಕು.

ಪವರ್ ಪ್ಲೇ
ಎಚ್.ಆರ್.ಶ್ರೀಶ
ಹಿರಿಯ ಪತ್ರಕರ್ತರು

ಮೆಟ್ರೋದಲ್ಲಿ ಸಿವಿಲ್ ಕಾಮಗಾರಿ ಹೆಚ್ಚು ಬಂಡವಾಳ ಕೇಳುತ್ತದೆ. ಅದನ್ನು ಬಿಟ್ಟರೆ ನೌಕರ ಸಿಬ್ಬಂದಿಗೆ ನೀಡುವ ಹಣ. ಅದನ್ನು ಕಡಿಮೆ ಮಾಡಲು ಬರುವುದಿಲ್ಲ. ಎಲ್ಲೆಲ್ಲಿ ಯಾಂತ್ರಿಕತೆ ಸಾಧ್ಯವೋ ಅಲ್ಲಿ ಅದನ್ನು ಬಳಸಬಹುದು. ಆದರೂ ಸಿಬ್ಬಂದಿ ಅಗತ್ಯ ಇದ್ದೇ ಇರುತ್ತದೆ. ಅದನ್ನು ಶೂನ್ಯಕ್ಕೆ ತರಲು ಬರುವುದಿಲ್ಲ. ಇನ್ನು ಗಮನಿಸದೇ ಹೋಗಿರುವ ಸಂಗತಿ ಎಂದರೆ ಪರಿಸರ ರಕ್ಷಣೆ. ಇದಕ್ಕೆ ಅಗುವ ವೆಚ್ಚವನ್ನು ಗಮನಿಸುತ್ತಿಲ್ಲ. ಮೆಟ್ರೋ ಬಳಸುವುದರಿಂದ ಪರಿಸರ ರಕ್ಷಣೆ ಸಾಧ್ಯವಾಗಿದೆ. ಬಸ್ ಹಾಗೂ ಇತರ ವಾಹನಗಳು ಬಳಸುವ ಇಂಧನದಿಂದ ಇಂಗಾಲಾಮ್ಲ ಹೊರಸೂಸುವುದನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಇದರಿಂದ ಆರೋಗ್ಯ ರಕ್ಷಣೆಗಾಗಿ ಹೆಚ್ಚು ಹಣ ಬಳಸಬಹುದು. ಮೆಟ್ರೋದಲ್ಲಿ ಓಡಾಡುವ ಪ್ರಯಾಣಿಕರ ಆರೋಗ್ಯ ರಕ್ಷಣೆಯೂ ಆಗುತ್ತಿದೆ ಎಂಬುದನ್ನು ರಾಜ್ಯ ಸರ್ಕಾರ ಗಮನಿಸಬೇಕು. ಮೆಟ್ರೋ ರೈಲು ವಿದ್ಯುತ್ ಬಳಸುವುದರಿಂದ ಇಂಗಾಲಾಮ್ಲ ಹೊರಸೂಸುವ ಸಮಸ್ಯೆ ತಪ್ಪಲಿದೆ. ಅಲ್ಲದೆ ಮೆಟ್ರೋ ಪ್ರಯಾಣಿಕರು ವಾಹನ ಬಳಸುವುದು ತಪ್ಪಲಿದೆ. ಅದರಿಂದ ನಾವು ಮೆಟ್ರೋಗೆ ಹೆಚ್ಚು ಬಂಡವಾಳ ಹೂಡುವುದು ಇಂದಿನ ಅಗತ್ಯ.

ಈಗ ಮೆಟ್ರೋ ವಾರ್ಷಿಕ ವೆಚ್ಚ 708 ಕೋಟಿ ರೂ. ಮೀರಿದೆ. ಇದರಲ್ಲಿ 116 ಕೋಟಿ ರೂ. ವಿದ್ಯುತ್‌ಗೆ ಹೋಗುತ್ತಿದೆ. ಇದನ್ನು ಕಡಿಮೆ ಮಾಡಲು ನಮ್ಮ ಗಮನಹರಿಸುವುದು ಅಗತ್ಯ. ಈಗ ಮೆಟ್ರೋ ಬಳಸುತ್ತಿರುವ ವಿದ್ಯುತ್ ದರ ಪ್ರತಿ ಯೂನಿಟ್‌ಗೆ 5-7 ರೂ. ಇದೆ. ಸೋಲಾರ್ ಬಳಸಿದರೆ ಪ್ರತಿ ಯೂನಿಟ್ ದರ 3.25-5.55 ರೂ. ಅಲ್ಲದೆ ರೈಲು ಬ್ರೇಕ್ ಹಾಕಿದರೆ ಅದರಿಂದಲೂ ವಿದ್ಯುತ್ ಉತ್ಪಾದನೆಯಾಗುತ್ತದೆ. ಹೀಗಾಗಿ ಸೋಲಾರ್‌ಗೆ ಆದ್ಯತೆ ನೀಡಿದರೆ ಮುಂದಿನ ದಿನಗಳಲ್ಲಿ ಮೆಟ್ರೋ ದರವನ್ನು ಕಡಿಮೆ ಮಾಡಬಹುದು. ಈಗ ದೆಹಲಿ, ಹೈದರಾಬಾದ್, ಬೆಂಗಳೂರು, ಜೈಪುರ, ಕೊಚ್ಚಿನ್, ಮುಂಬೈ, ನಾಗಪುರ ಮೆಟ್ರೋಗಳಲ್ಲಿ ಸೋಲಾರ್ ಉತ್ಪಾದನೆಗೆ ಆದ್ಯತೆ ನೀಡಲಾಗಿದೆ. ಮೆಟ್ರೋ ರೈಲ್ವೆ ನಿಲ್ದಾಣ, ಡಿಪೋ ಸೇರಿದಂತೆ ಎಲ್ಲ ಕಡೆ ಸೋಲಾರ್ ಫಲಕ ಅಳವಡಿಸಬಹುದು. ರಾಜ್ಯ ಸರ್ಕಾರಗಳು ತನ್ನ ಪಾಲಿನ ಬಂಡವಾಳವನ್ನು ಸೋಲಾರ್ ಅಳವಡಿಕೆಗೆ ಬಳಸಿದರೆ ಮೆಟ್ರೋ ದರವನ್ನು ಕಡಿಮೆ ಮಾಡಬಹುದು. ಒಂದುವೇಳೆ ಮೆಟ್ರೋ ಚಲಿಸಲು ಬೇಕಾದ ವಿದ್ಯುತ್ತನ್ನು ಬೆಸ್ಕಾಂನಿಂದ ಪಡೆದು ಉಳಿದ ಎಲ್ಲ ಉಪಕರಣಗಳಿಗೆ ಸೋಲಾರ್ ಬಳಸಬಹುದು. ಇದರಿಂದ ಇಂಗಾಲಾಮ್ಲ ಹೊರಸೂಸುವುದು ಇಳಿಮುಖಗೊಳ್ಳಲಿದೆ. 2030ಕ್ಕೆ ಇಂಗಾಲಾಮ್ಲ ಬಿಡುಗಡೆ ಶೂನ್ಯಕ್ಕೆ ಬರಬೇಕಿದೆ. ಅದಕ್ಕೆ ಈಗಿನಿಂದಲೇ ಯೋಜಿಸಿವುದು ಅಗತ್ಯ. ಒಂದು ವೇಳೆ ಮೆಟ್ರೋ ಆಸ್ತಿಯಲ್ಲಿ ಸೋಲಾರ್ ಉತ್ಪಾದನೆ ಕಡಿಮೆಯಾದರೆ ಸರ್ಕಾರ ಬಂಜರುಭೂಮಿಯಲ್ಲಿ ಸೋಲಾರ್ ಫಲಕ ಅಳವಡಿಸಿ ಅದನ್ನು ನೇರವಾಗಿ ಮೆಟ್ರೋಗೆ ನೀಡಬಹುದು. ಮೆಟ್ರೋ ತನ್ನದೇ ಆದ ಸೋಲಾರ್ ಪಾರ್ಕ್ ಸ್ಥಾಪಿಸಿಕೊಂಡಲ್ಲಿ ಪ್ರತಿ ಯೂನಿಟ್ ದರ 2.50ಕ್ಕೆ ಇಳಿಯುವುದರಲ್ಲಿ ಸಂದೇಹವಿಲ್ಲ. ಮೆಟ್ರೋ ಹೇಗಿದ್ದರೂ ಸಾಲ ಮಾಡಿದೆ. ಅದರಲ್ಲಿ ಸೋಲಾರ್ ಅಳವಡಿಕೆಗೆ ಹೆಚ್ಚು ಹಣ ತೊಡಗಿಸಿದರೆ ಕೆಲವೇ ವರ್ಷಗಳಲ್ಲಿ ಅದು ಹಿಂತಿರುಗಿ ಬರಲಿದೆ. ಮೆಟ್ರೋ ರೈಲು ವಾಣಿಜ್ಯ ಉದ್ದೇಶ ಪಡೆಯಬೇಕು ಎಂದಾಗ ಸೋಲಾರ್ ಬಗ್ಗೆ ಚಿಂತಿಸುವುದೂ ಅಗತ್ಯ. ನಮ್ಮ ಸಂಸದರು ಇಂಥ ದೀರ್ಘಕಾಲಿಕ ಯೋಜನೆಗಳತ್ತ ಗಮನಹರಿಸಬೇಕು. ಪ್ರತಿಭಟನೆ, ಆಡಳಿತ ಪಕ್ಷ ಟೀಕೆ ಕೆಲಸಕ್ಕೆ ಬರುವುದಿಲ್ಲ. ಜನರಿಗೆ ಪರಿಹಾರ ಬೇಕೆ ಹೊರತು ಪ್ರದರ್ಶನವಲ್ಲ. ಹಿಂದೆ ಜನ ಪ್ರತಿಭಟನೆಗೆ ಮಹತ್ವ ನೀಡುತ್ತಿದ್ದರು. ಈಗ ಅದೆಲ್ಲ ಕಾಲಹರಣ ಎಂಬುದು ಗೊತ್ತಾಗಿದೆ. ಅತಿ ಕಡಿಮೆ ವೆಚ್ಚದಲ್ಲಿ ಮೆಟ್ರೋ ನಡೆಯುವುದು ಹೇಗೆ ಎಂಬುದರ ಚಿಂತನೆ ನಡೆಯಬೇಕು. ಬೇರೆ ರಾಜ್ಯಗಳಲ್ಲಿ ಮೆಟ್ರೋ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದರ ಬಗ್ಗೆ ನಮ್ಮ ಸಂಸದರು ಹೋಗಿ ಅಧ್ಯಯನ ಮಾಡಿ ಬರಬೇಕು. ಅಲ್ಲಿಯ ಉತ್ತಮ ಕ್ರಮಗಳನ್ನು ಇಲ್ಲಿ ಜಾರಿಗೆ ತರುವಂತೆ ಒತ್ತಾಯ ಮಾಡಬಹುದು. ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ಸದ್ದಿಲ್ಲದೆ ಬದಲಾವಣೆ ತರಬಹುದು. ಮೆಟ್ರೋ ಯಾವ ಪಕ್ಷದ್ದೂ ಅಲ್ಲ. ಜನರಿಗೆ ಸೇರಿದ್ದು. ಅದನ್ನು ಉತ್ತಮ ಪಡಿಸಿದರೆ ಜನ ಸೇವೆ ಮಾಡಿದಂತೆ. ನಮ್ಮಿಂದಲೇ ಇದು ಸಂಚರಿಸುತ್ತಿದೆ ಎಂಬ ಭ್ರಮೆ ಬೇಡ. ಸೋಲಾರ್ ಹೆಚ್ಚು ಬಳಸಿದರೆ ಮೆಟ್ರೋ ದರ ಇಳಿಯುವುದರಲ್ಲಿ ಸಂದೇಹವಿಲ್ಲ. ಇನ್ನು ಸೋಲಾರ್ ವಿದ್ಯುತ್‌ಗೆ ಬರ ಎಂಬುದೇ ಇಲ್ಲ. ಮೆಟ್ರೋ ಒಂದುವೇಳೆ ಸೋಲಾರ್ ಖರೀದಿ ಮಾಡಲು ಟೆಂಡರ್ ಕರೆದರೆ ಖಾಸಗಿಯವರೇ ಅತಿ ಕಡಿಮೆ ದರದಲ್ಲಿ ವಿದ್ಯುತ್ ನೀಡಲು ಮುಂದೆ ಬರುವುದು ಖಚಿತ. ಈಗ ಖಾಸಗಿ ಬಂಡವಾಳ ಸೋಲಾರ್‌ಗೆ ಹೆಚ್ಚು ಹರಿದು ಬರುತ್ತಿದೆ. ಬೇರೆ ರಾಜ್ಯದವರೂ ಇಲ್ಲಿ ಬಂಡವಾಳ ಹೂಡಲು ಸಿದ್ಧರಿದ್ದಾರೆ. ಹೀಗಿರುವಾಗ ಮೆಟ್ರೊ ತನ್ನ ವಿದ್ಯುತ್ ದರವನ್ನು ಕಡಿಮೆ ಮಾಡಿಕೊಳ್ಳಲು ಎಲ್ಲ ಅವಕಾಶಗಳೂ ಇವೆ. ಇದರಿಂದ ಬೆಸ್ಕಾಂಗೆ ತೊಂದರೆ ಏನೂ ಆಗುವುದಿಲ್ಲ. ವೀಲಿಂಗ್ ಶುಲ್ಕ ಬಂದೇ ಬರುತ್ತದೆ. ರಾತ್ರಿ ಮಾತ್ರ ಮೆಟ್ರೋ ಬೆಸ್ಕಾಂ ವಿದ್ಯುತ್ ಬಳಸಿಕೊಳಬೇಕು. ಒಂದು ವೇಳೆ ಬ್ಯಾಟರಿ ದಾಸ್ತಾನು ಮಾಡಿಕೊಂಡರೆ ಆಗಲೂ ಉಳಿತಾಯವಾಗುತ್ತದೆ. ■

ಮೆಟ್ರೋ ಆಸ್ತಿಯಲ್ಲಿ ಸೋಲಾರ್ ಉತ್ಪಾದನೆ ಕಡಿಮೆಯಾದರೆ ಸರ್ಕಾರ ಬಂಜರುಭೂಮಿಯಲ್ಲಿ ಸೋಲಾರ್ ಫಲಕ ಅಳವಡಿಸಿ ಅದನ್ನು ನೇರವಾಗಿ ಮೆಟ್ರೋಗೆ ನೀಡಬಹುದು.

ಇಂತಿ ನಿಮ್ಮ ಬಾಲ್ಯದ ಆಪ್ತ ಗೆಳತಿ ಹೋಟ್ಲ ಶೇಷಮ್ಮ

ತಾರಾತಿಗಡಿ
ನರಸಿಂಹ ಪುಲಿಹೈದರ್
ಮುಖ್ಯ ವರದಿಗಾರ

ಮಾನ್ಯ ಸೋದಿ ಮಾಮಾ ಅವರಿಗೆ ಹೋಟೆಲ್ ಶೇಷಮ್ಮನ ಹೃದಯ ಪೂರ್ವಕ ನಮಸ್ಕಾರಗಳು.ಆ ರಾಜ್ಯಗಳ ಮತದಾನ ಮುಗಿದು ತಾವು ಮತ ಎಣಿಕೆ ರಿಸಲ್ಟ್ ಸಲುವಾಗಿ ಕಾಯುತ್ತಿದ್ದೀರಿ..ಅಂತಹ ಬಿಜಿ ಶೆಡ್ಯೂಲ್ ನಲ್ಲೂ ಈ ನನ್ನ ಪತ್ರ ತಪ್ಪದೇ ಓದುತ್ತೀರಿ ಎಂದು ಬಲವಾಗಿ ನಂಬಿದ್ದೇನೆ...ಓದಿಕೊಳ್ಳಿ...

ನಮ್ಮ ಹೊಟೆಲ್ ನಲ್ಲಿ ನಾವು ಮೊದಲು ಕಟಿಗಿ ಒಲಿ ಹಚ್ಚಿ ತಿಂಡಿ ತೀರ್ಥ ಮಾಡುತ್ತಿದ್ದೆವು. ನಂತರ ಸಿಲಿಂಡರ್ ಬಂತು..ತೆಗೆದುಕೊಂಡೆವು..ಒಳ್ಳೆಯದಾಯ್ತು ಅಂತ ಅಂದುಕೊಂಡೆವು...ಆದರೆ ಏನ್ರೀ ರೇಟು ಏರಿಸ್ಕೊಂಡು ಹೋದಿರಿ...ಒಂದ್ಸಲ ಒಕೆ ಎರಡು ಸಲ ಒಕೆ...ಪದೇ..ಪದೇ ಏರಿಸೋದು ಯಾಕೆ ಅಂತ ನಾವು ಕೇಳಿದರೆ ಅದಕ್ಕೆ ಏನೇನೋ ಉತ್ತರ ಹೇಳ್ತಾರೆ...ಸಿಲಿಂಡರ್ ಸಹವಾಸ ಸಾಕು ಅಂತ ಕಾಡಿನಲ್ಲಿ ಗಿಡ ಕಡಿದುಕೊಂಡು ಬರೋಣ ಅಂತ ಅಂದರೆ ಖಬರ್ ದಾರ್ ಅಂತ ಅಂತಾರೆ..ಇವೆಲ್ಲ ತುಟ್ಟಿ ಆಯಿತು ಅಂತ ದೋಸೆ...ಇಡ್ಲಿ..ಮಂಡಾಳೊಗ್ಗಣ್ಣಿ ಮಿರ್ಚಿ..ಚಾ ರೇಟು ಹೆಚ್ಚಿಗೆ ಮಾಡಿದರೆ ಹೋಗೋಗ್ ಹೋಟ್ಲಿಗೆ ಯಾರ್ ಬರ್ತಾರೆ ಅಂತ ಜನರು ಅಂತಾರೆ...ನಮಗೆ ಈಗ ದೊಡ್ಡ ಫಜೀತಿ ಆಗಿದೆ...ಸದ್ಯ ನೀವು...ನಮಗೆ ಪ್ರತಿವಾರ ಎರಡು ಬಂಡಿ ಕಟ್ಟಿಗೆ ಹಾಕಿಸಿಕೊಡಿ...ಇಲ್ಲಾ ಸಿಲಿಂಡರ್ ರೇಟ್ ಕಡಿಮೆ ಮಾಡಿ...ನಮಗೆ ನಿಮಗೆ ಭಾರೀ ದೋಸ್ತಿ ಅಂತ ಇದನ್ನು ಬರೆಯುತ್ತಿದ್ದೇನೆ...ನೀವು ತಿಳಿಯಬೇಕು...ನಾವು ಉಳಿಯಬೇಕು..ಇದರ ಮೇಲೆ ನಿಮ್ಮ ಮರ್ಜಿ. ■



75 ವರ್ಷಗಳ ಹಿಂದೆ.. ಅಮೃತ ಸಮಾಚಾರ 04-05-1951 ಶುಕ್ರವಾರ

ಪ್ರಜಾಸತ್ತಾತ್ಮಕ ರಂಗದ ವಿಸರ್ಜನೆ

ಹೊಸದಿಲ್ಲಿ ತಾ. 3– ಕಾಂಗ್ರೆಸ ಪ್ರಜಾಸತ್ತಾತ್ಮಕ ರಂಗವು ವಿಸರ್ಜಿಸಲ್ಪಡಬೇಕೆಂದು ಇಂದಿಲ್ಲಿ ಸೇರಿದ ಅದರ ಧುರೀಣರ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿತು. ಪ್ರಧಾನಮಂತ್ರಿ ಶ್ರೀ ನೆಹರು ಮತ್ತು ಮೌಲಾನಾ ಅಝಾದರ ಅಪೇಕ್ಷೆಯಂತೆ ತಮ್ಮ ಪಕ್ಷವನ್ನು ವಿಸರ್ಜಿಸಲು ಪ್ರಜಾಸತ್ತಾತ್ಮಕ ರಂಗದ ಧುರೀಣರು ನಿಶ್ಚಯಿಸಿದರು.

ಈ ನಿರ್ಧಾರವನ್ನು ಆಚಾರ್ಯ ಕೃಪಲಾನಿಯವರು ಸುದ್ದಿಗಾರರಿಗೆ ತಿಳಿಸುತ್ತ ಪ್ರಜಾಸತ್ತಾತ್ಮಕ ರಂಗದ ವಿಸರ್ಜನೆಯಿಂದ ನನಗೆ ಆನಂದವಾಗಿದೆ. ಕಾಂಗ್ರೆಸಿನಲ್ಲಿ ಪ್ರತ್ಯೇಕತೆಯ ಮನೋಭಾವನೆ ಬೆಳೆಯುವದೆಂದು ನಾನು ಮೊದಲೆ ಎಚ್ಚರಿಸುತ್ತೇನೆ. ಕಾಂಗ್ರೆಸಿನಲ್ಲಿರಬೇಕೋ ಬೇಡವೋ ಎಂಬುದನ್ನು ನಿರ್ಣಯಿಸಲು ರಂಗದ ಸದಸ್ಯರು ಸ್ವತಂತ್ರರಿರುವರು. ಈ ಬಗ್ಗೆ ಸಾಮೂಹಿಕ ನಿರ್ಣಯ ತೆಗೆದುಕೊಳ್ಳುವದು ಅಸಾಧ್ಯ ಎಂದು ನುಡಿದರು.

ಹಿಂದಿನ ರಾಷ್ಟ್ರಾಧ್ಯಕ್ಷರಿಗೆ ನಿವೃತ್ತಿ ವೇತನ

ಹೊಸದಿಲ್ಲಿ 3– ಪಾರ್ಲಿಮೆಂಟಿನಲ್ಲಿ ಇಂದು ವಿಶ್ವಭಾರತಿ ಮಸೂದೆ, ರಾಷ್ಟ್ರಾಧ್ಯಕ್ಷರ ನಿವೃತ್ತಿ ವೇತನ ಮಸೂದೆ ಮತ್ತು ಹೈದರಾಬಾದ ಸಾರ್ವಜನಿಕ ಕಂಪನಿ (ಡಿವಿಡೆಂಡಗಳ ಪರಿಮಿತಿಗೊಳಿಸುವ) ರದ್ದತಿ ಮಸೂದೆಗಳು ಪಾಸಾದವು. ವಿಶ್ವ ಭಾರತಿ ಮಸೂದೆಯು ಪಾಸಾದ ಕೂಡಲೆ ಸದಸ್ಯರು ಹರ್ಷೋದ್ಗಾರಗಳನ್ನು ಹೊರಡಿಸಿದರು.

ಸಂಯುಕ್ತ ಬಂಧ 5947



ಉತ್ತರ: 5946

ಎಡದಿಂದ ಬಲಕ್ಕೆ: 1. ಅರವಿಂದ, 3. ವಿಹಂಗಮ. 5. ಮಯೂರ, 6. ಸಮಾಧಾನ, 8. ಸಹವಾಸ, 11. ಕರ್ತವ್ಯಲೋಪ, 14. ಸವಿನಯ, 16. ಅತಿಶಯ, 17 ಮಧುರ, 18. ತೆರದಾಳ, 19. ಬಹುಮಾಸ.

ಮೇಲಿನಿಂದ ಕೆಳಕ್ಕೆ: 1. ಅವಸರ, 2. ದಮನ, 3. ವಿರಸ, 4. ಮಹಾಸತಿ, 7. ಧಾರ್ಮಿಕಜನ. 9. ಹಳೆಪದ್ಧತಿ, 12. ಹಂಸಗೀತೆ, 13. ನ್ಯಾಯದಾನ, 15. ಯಮ, 16. ಅರಬ.

ಎಡದಿಂದ ಬಲಕ್ಕೆ

1	ವಾಸ ಮಾಡುವುದನ್ನು ಬಿಟ್ಟು ಕೈಗೊಂಡ ವಿಹಾರ	3
3	ದನದ ಮೇಲೆ ಕುಳಿತ ಹಕ್ಕಿಗಳ ರೆಕ್ಕೆ	3
5	ನಾರದ ಬ್ರಹ್ಮನ ಮನಸ್ಸಿನಿಂದಲೇ ಜನಿಸಿದ ಮಗ	5
7	ಸಾಧಿಸಿ ಕಾರ್ಯರೂಪಕ್ಕೆ ತರಬಹುದಾದ ನಿರೀಕ್ಷೆ	3
8	ತಿರುಗಾಟದಲ್ಲೇ ನಿರತನಾಗಿರುವ ಭಿಕ್ಷುಕ	3
10	ಹೊಸ ಹನಿ ಬಿದ್ದ ಸ್ಥಳ ತುಂಬಾ ಹತ್ತಿರ	3
13	ತಾಯಿಗಾಗಿ ಐರಾವತ ಎತ್ತಿ ತಂದ ಲಂಕಾಧಿಪತಿ	3
15	ಗತ ಕಾಲದ ಘಟನೆಗಳು ಜ್ಞಾಪಕ ಬಂದಿದೆ	5
17	ಚಪ್ಪಟೆ ಸ್ಥಳದಲ್ಲಿ ನಿರ್ಮಿಸಿದ ಹಂದರ	3
18	ಸರಕ್ಕನೆಂದು ಬಂದ ಅಸುರ	3

ಮೇಲಿನಿಂದ ಕೆಳಕ್ಕೆ

1	ಪ್ರತಿಮೆಯ ಯಥಾರೂಪ	2
2	ಎಲ್ಲ ಜನರೂ ಒಂದೇ ಎಂದು ಸಾರಿದ ಸಮಾಜವಾದಿ ತತ್ವ	4
3	ಶಿವಾಜಿ ಮಹಾರಾಜ ಹೀಗೆ ಛತ್ರಕ್ಕೆ ಅಧಿಪತಿ	4
4	ಜನಗಳ ಬಳಿ ಇರುವ ಆಭರಣ	2
6	ಅಂಗಾಂಗಳಿಂದ ಮಾಡಿದ ಸಜ್ಜನರ ಸಹವಾಸ	3
7	ಸಾರವನ್ನು ಅರಸನಿಗೆ ಅರ್ಪಿಸಲು ಬಂದ ಆನೆ	3
9	ಕರ ಹಿಡಿದಾಗ ಕಣ ಕಣದಲ್ಲೂ ಕಂಡ ಇಂದ್ರಿಯ	3
11	ವಿಷ್ಣು ಶಿವ ಒಂದಾಗಿ ಬಂದಿದ್ದಾರೆ	4
12	ಸಂಕಲ್ಪ ಮಾಡಿದಾಗ ಬಂದ ಊಹೆ	3
13	ಸೀತಾಪತಿಯ ಹೆಸರಿನ ಶಹರು	4
14	ಪಾಂಡವರನ್ನು ಪ್ರತಿನಿಧಿಸಿದ ಸಂಖ್ಯೆ	2
16	ಮಹಾಭಾರತ ರಚನೆಕಾರ ಮಹರ್ಷಿ	2

ದಿನ ವಿಶೇಷ

ಸೋಮವಾರ: 04.05.2026

- ಶ್ರೀ ಶಾಲಿವಾಹನ ಶಕೆ 1948
- ಸೌರಮಾಸ: ಮೀನ, ದಿನ: 20
- ಮು. ಮಾಸ: ಶವ್ವಾಲ್, ದಿನ: 17

ಶ್ರೀ ಪರಾಭವ ಸಂವತ್ಸರ, **ಅಯನ:** ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ತದಿಗೆ (29.25), **ನಿತ್ಯನಕ್ಷತ್ರ:** ಅನೂರಾಧಾ (09.55), **ಯೋಗ:** ಪರಿಘ (23.19), **ಕರಣ:** ವಣಿಜ (16.13)
ಮಾಸ ನಿಯಾಮಕ: ಕಮಲಾಲಯ ಮಧುಸೂದನ
ಸೂರ್ಯೋದಯ: 06.02 (**ನಾಳೆ:** 06.00)
ಸೂರ್ಯಾಸ್ತ: 06.47 (**ನಾಳೆ:** 06.48)
ಮಳೆನಕ್ಷತ್ರ: ಭರಣೀ ಮೂರನೆಯ ಪಾದ.
ವೃಷಭಸಂಕ್ರಮಣ ಪ್ರಯುಕ್ತ ವಿಷ್ಣುಪದಪರ್ವ ಪುಣ್ಯಕಾಲ. ರವೇರಗ್ನಿನಕ್ಷತ್ರದೋಷ ಆರಂಭ. ಬಸವಾಪಟ್ಟಣದ ಶ್ರೀ ಚಂದ್ರಶೇಖರೇಂದ್ರ ಸ್ವಾಮಿಗಳ ಪುಣ್ಯತಿಥಿ. ಸಂತ ಸಂತ ಚೋಖೋಬಾ ಪುಣ್ಯತಿಥಿ. ಹಟ್ಟಿಯಂಗಡಿ ವರ್ಧಂತಿ. ಮೂಡಬಿದ್ರೆ ವೀರಮಾರುತಿ ಜಯಂತಿ. ಹೊನ್ನಾವರ ತಾ. ಅನಿಲಗೋಡ ಶ್ರೀ ಕುಮಾರರಾಮ ಮಹಾಸತಿ ದೇವಾಲಯದ ವಾರ್ಷಿಕ ಬಂಡಿಹಬ್ಬ. ಕೆ.ಆರ್.ಪೇಟೆ ತಾ. ಬೂಕನಕೆರೆ ಹೋಬಳಿ ಬಣ್ಣನಕೆರೆ ರಾಮಲಿಂಗೇಶ್ವರ ಓಕಳಿ ಹಬ್ಬ. ಕುಷ್ಟಗಿ ತಾ. ಮನ್ನೇರಾಳ ಚಂದಾಲಿಂಗೇಶ್ವರ ಜಾತ್ರೆ. ಗಂಗಾವತಿ ತಾ. ಕನಕಗಿರಿ ದುರ್ಗಮ್ಮ ಜಾತ್ರೆ. ನವಲಗುಂದ ತಾ. ಶಾನವಾಡ ಬಸವೇಶ್ವರ ಜಾತ್ರೆ. ರೋಣ ತಾ. ಕೊಕದಾಳ ಶ್ರೀ ಗುರು ಅಡವಿಸಿದ್ದೇಶ್ವರ ಜಾತ್ರೆ.

ಭಕ್ತಿಗೇಕೆ ಫಲವಿಲ್ಲ?

ಒಂದೆಡೆ ಮಂಗಗಳ ಗುಂಪೊಂದು ವಾಸವಾಗಿತ್ತು. ಅವೆಲ್ಲ ತಮ್ಮ ಹಸಿವು ಹಿಂಗಿಸಿಕೊಳ್ಳಲು ಒಬ್ಬ ರೈತನ ತೋಟದ ಒಳಹೊಕ್ಕವು. ಅಲ್ಲಿ ಬೆಳೆದ ಗಡ್ಡೆಗೆಣಸು, ಹಣ್ಣು-ಹಂಪಲುಗಳನ್ನೆಲ್ಲ ಹರಿದು ತಿನ್ನಲಾರಂಭಿಸಿದವು. ಅವು ತಿಂದದ್ದು ಅಲ್ಪ, ಕಿತ್ತು ಹರಿದು ಅತ್ತಿತ್ತ ಚೆಲ್ಲಾಪಿಲ್ಲಿಯಾಗುವಂತೆ ಎಸೆದದ್ದೇ ಹೆಚ್ಚು. ಮೊದಲೇ ಅವು ಕಪಿಗಳಲ್ಲವೇ!

ತೋಟದ ಮಾಲೀಕ ಬಂದು ನೋಡಿದ. ನಂದನವನದಂತಹ ಆ ಆನಂದವನ ನಂದಿದ ವನವಾಗಿತ್ತು, ಕಂದಿದ ವನವಾಗಿತ್ತು. ಮಂಗಗಳ ಉಪಟಳದಿಂದ ಬೇಸತ್ತ ಅವನು ತನ್ನೆಲ್ಲ ಆಳುಗಳನ್ನು ಕರೆದು ಅವರಿಂದ ಮಂಗಗಳಿಗೆ ಸರಿಯಾದ ಶಾಸ್ತಿ ಮಾಡಿಸಿದ. ಪೆಟ್ಟು ತಿಂದ ಮಂಗಗಳೆಲ್ಲ ಒಂದೆಡೆ ಸೇರಿ ಮೀಟಿಂಗ್ ಮಾಡಿದವಂತೆ.

'ಎಷ್ಟು ದಿನ ನಾವು ಇನ್ನೊಬ್ಬರದು ಕದ್ದು ತಿನ್ನುವುದು, ಏಟು ತಿಂದು ಬರುವುದು? ಇದೆಲ್ಲ ಸಾಕು. ನಾವೆಲ್ಲ ಸೇರಿ ಏಕೆ ನಮ್ಮದೇ ಆದ ತೋಟ ಮಾಡಿಕೊಳ್ಳಬಾರದು?' ಎಂದು ಚರ್ಚಿಸಿ ಕೊನೆಗೆ ಊರಿನಿಂದ ದೂರವಿರುವ ಒಂದು ಹಾಳು ಭೂಮಿಗೆ ಹೋದವು. ವಿಧವಿಧದ ಹಣ್ಣುಗಳ ಅಗಿಗಳನ್ನು ನೆಟ್ಟವು. ತೋಟ ತಯಾರಾಯಿತು. ಮಂಗಗಳಿಗೆ ಎಲ್ಲಿಲ್ಲದ ಹುರುಪು. ಅಗಿಗಳನ್ನು ನೆಟ್ಟು ಎರಡು ದಿನವಾಗಿರಲಿಲ್ಲ. ಈಗಾಗಲೇ ತಮ್ಮ ತೋಟದಲ್ಲಿ ಹಣ್ಣು ಬಂದಿರಬಹುದೆಂದು ಭಾವಿಸಿ ಅವೆಲ್ಲ ತೋಟದ ಕಡೆಗೆ ಧಾವಿಸಿದವು.

ಗುರುಬೋಧೆ
ಶ್ರೀ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು
ಶ್ರೀಶೈಲಪೀಠ.

ಅಗಿಗಳು ದೊಡ್ಡವೂ ಆಗಿರಲಿಲ್ಲ. ಇನ್ನು ಹಣ್ಣುಗಳೆಲ್ಲಿಂದ? ಸಸಿ ನೆಟ್ಟ ಸ್ಥಳ ಚೆನ್ನಾಗಿಲ್ಲವೆಂದು ಭಾವಿಸಿ ಅವುಗಳನ್ನು ಕಿತ್ತು ಇನ್ನೊಂದೆಡೆ ತೆಗ್ಗು ಅಗಿದು ನೆಟ್ಟವು. ಮತ್ತೆರಡು ದಿನಗಳ ತರುವಾಯ ಅಲ್ಲಿ ಬಂದು ಹಣ್ಣುಗಳಿಗಾಗಿ ಕಾತರಿಸಿ ನೋಡಿದವು. ನಿರಾಶೆಯೇ ಕಾದಿತ್ತು. ಮತ್ತೆಮತ್ತೆ ಸಸಿಗಳ ಸ್ಥಾನವನ್ನು ಬದಲಾಯಿಸಿದವು. ಹೀಗೆ ಎರಡು ದಿನಗಳಿಗೊಮ್ಮೆಯಂತೆ ಬಂದು ನೆಟ್ಟ ಸಸಿಗಳನ್ನು ಸ್ಥಳಾಂತರಿಸುತ್ತಲೇ ಹೋದವು. ತೋಟಕ್ಕಾಗಿ ಹಸನಗೊಳಿಸಿದ ಭೂಮಿಯೆಲ್ಲ ಮುಗಿದುಹೋಯಿತು. ತಂದ ಅಗಿಗಳು ಬಾಡಿದವೇ ವಿನಾ ಫಲ ಕೊಡಲಿಲ್ಲ. ಕಪಿಗಳು ಹಣ್ಣು ಸವಿಯಲಿಲ್ಲ.

ಇಲ್ಲಿ ಭೂಮಿಯಾಗಲಿ ಸಸಿಗಳಾಗಲಿ ಸರಿಯಾಗಿರಲಿಲ್ಲವೆಂದಲ್ಲ. ಹದವಾದ ಭೂಮಿ, ಫಲದಾಯಿಗಳಾಗಬಲ್ಲ ಸಸಿಗಳಿದ್ದರೂ ಅವನ್ನು ಒಂದೇ ಸ್ಥಳದಲ್ಲಿ ನೆಡದೆ ಸ್ಥಳಾಂತರಿಸುತ್ತ ಹೋದುದರಿಂದ ಫಲ ನೀಡಲಿಲ್ಲ. ಮಂಗಗಳಲ್ಲಿ ನಿಷ್ಠೆಯಿರಲಿಲ್ಲ ಮತ್ತು ಫಲ ಬಿಡುವವರೆಗೆ ಕಾಯುವಷ್ಟು ಸಂಯಮವಿರಲಿಲ್ಲ. ಆ ಕಾರಣಕ್ಕಾಗಿಯೇ ಫಲದಿಂದ ವಂಚಿತವಾದವು.

ಇದರಂತೆ ನಾವು ಆರಾಧಿಸುವ ದೇವರಲ್ಲಿ ನಮ್ಮ ಅಪೇಕ್ಷೆಗಳನ್ನು ಈಡೇರಿಸುವ ಸಾಮರ್ಥ್ಯವಿಲ್ಲವೆಂದಲ್ಲ. ಆದರೆ ಅದಕ್ಕಾಗಿ ಕೆಲ ಸಮಯವಾದರೂ ಕಾಯಬೇಕಾಗುತ್ತದೆ. ನಮ್ಮಲ್ಲಿ ನಾವು ನೆಟ್ಟ ಭಕ್ತಿಯ ಸಸಿ ಫಲ ಕೊಡುವಷ್ಟು ಸಮಯದವರೆಗೆ ಕಾಯುವ ಸಂಯಮ ಇಲ್ಲದ್ದರಿಂದ ದೇವರನ್ನು ಬದಲಾಯಿಸುತ್ತ ಹೋಗುತ್ತೇವೆ. ಇದರಿಂದಾಗಿ ಯಾವ ದೇವರಿಂದಲೂ ಇಷ್ಟಫಲವನ್ನು ಪಡೆಯಲಾಗದೆ ವಂಚಿತರಾಗುತ್ತೇವೆ. ■

ಇಂದಿನ ಭವಿಷ್ಯ

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು, ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

ರಾಹು ಕಾಲ ಬೆ. 07.30ರಿಂದ 09
ಗುಳಿಕ ಕಾಲ ಮ. 01.30ರಿಂದ 03
ಯಮಗಂಡ ಕಾಲ ಬೆ. 10.30ರಿಂದ 12
ಶುಭ ಸಂಖ್ಯೆ 9-4-1-3

ಮೇಷ: ವೃತ್ತಿಯಲ್ಲಿ ಹೊಸ ಅವಕಾಶ. ರೈಲ್ವೆ ಕಾರ್ಮಿಕರಿಗೆ ಒತ್ತಡ. ಉತ್ತಮ ಸಂಪಾದನೆ. ಅಡಚಣೆಗೆ ಮುಕ್ತಿ.

ವೃಷಭ: ವೃತ್ತಿಯಲ್ಲಿ ಮೋಸ. ಹೊಸ ಜವಾಬ್ದಾರಿ ಲಭ್ಯ. ಕೈಗೊಂಡ ಕೆಲಸದಲ್ಲಿ ಜಯ. ಮಿತ್ರರಲ್ಲಿ ಮನಸ್ತಾಪ.

ಮಿಥುನ: ವಿವಾಹ ಅಪೇಕ್ಷಿತರಿಗೆ ಲಾಭ. ಅನಪೇಕ್ಷಿತ ವಿಷಯಗಳಲ್ಲಿ ಮಾನಸಿಕ ಕಿರಿಕಿರಿ. ಸಂಪಾದನೆಯಲ್ಲಿ ಕ್ಷಯ.

ಕರ್ಕ: ಅನಿರೀಕ್ಷಿತ ಪ್ರಯಾಣ. ಹಿರಿಯರ ಆರೋಗ್ಯದಲ್ಲಿ ಸಮಸ್ಯೆ. ನೂತನ ಕಾರ್ಯಗಳಿಗೆ ತುಸು ಅಡಚಣೆ.

ಸಿಂಹ: ಕೈಗೊಂಡ ತಪ್ಪು ನಿರ್ಧಾರದಿಂದ ತೊಂದರೆ. ಹೂವು, ತರಕಾರಿ ವ್ಯಾಪಾರದಲ್ಲಿ ಲಾಭ. ಸಾಲಬಾಧೆ.

ಕನ್ಯಾ: ಆಪ್ತರಿಂದ ಮೋಸ. ಗರ್ಭಾಶಯ ತೊಂದರೆ. ಗಾಯಕರಿಗೆ ಶುಭ. ಕಾನೂನು ಸಮರದಲ್ಲಿ ಹಿನ್ನಡೆ.

ತುಲಾ: ಮಿತ್ರರ ಸಹಕಾರ. ರಾಜಕೀಯದವರಿಗೆ ಶುಭ. ವೈವಾಹಿಕ ಜೀವನ ನೆಮ್ಮದಿ. ನೂತನ ವಸ್ತು ಖರೀದಿ.

ವೃಶ್ಚಿಕ: ಬಡ್ಡಿಯ ವ್ಯವಹಾರದಲ್ಲಿ ನಷ್ಟ. ಸಹೋದ್ಯೋಗಿಗಳ ಜೊತೆಗೆ ಮನಸ್ತಾಪ. ಚಾಲನೆಯಲ್ಲಿ ಅಡಚಣೆ.

ಧನು: ಅಡಿಕೆ ವ್ಯಾಪಾರದಲ್ಲಿ ಲಾಭ. ಸಾರ್ವಜನಿಕ ಸಾರಿಗೆ ಚಾಲಕರಿಗೆ ಒತ್ತಡ. ಹೊಸ ಒಪ್ಪಂದಕ್ಕೆ ಶುಭ.

ಮಕರ: ಮಿಲಿಟರಿ ಅಧಿಕಾರಿಗಳಿಗೆ ಒತ್ತಡ. ಸ್ತ್ರೀಯರಿಂದ ಧನ ಲಾಭ. ವೃತ್ತಿರಂಗದಲ್ಲಿ ಉತ್ತಮ ಸ್ಥಾನ ಲಾಭ.

ಕುಂಭ: ತಾಂತ್ರಿಕ ವಿದ್ಯಾರ್ಥಿಗಳಿಗೆ ಶುಭ. ಹಿರಿಯರ ಭೇಟಿಯಿಂದ ನೆಮ್ಮದಿ. ಸ್ವಂತ ಮನೆಯ ಕನಸು ಸಾಕಾರ.

ಮೀನ: ಪುಸ್ತಕ ವ್ಯಾಪಾರಿಗಳಿಗೆ ಲಾಭ. ವೃತ್ತಿಯಲ್ಲಿ ಮಾನಸಿಕ ಒತ್ತಡ ಸಂಭವ. ಅಣ್ಣಂದಿರ ಸಹಕಾರ ಲಭ್ಯ.

Editor : Mahabaleshwar V.Bhat, Printed and Published by **Ashok Shanbhag** on behalf of Loka Shikshana Trust, Printed at Samyukta Karnataka PressC-23, Kapanoor Industrial Area, Kalaburagi and Published at H.No.1-1165-13, Gokul Nivas, Opp: Dr.Arati Sharma Hospital, Ivan-E-Shani, Station Area,Kalaburagi, Phone No. 08472-220848, e-mail:gulbsk2008@gmail.com RNI Regn.No.KARKAN/1999/2674 **Executive Editor : Mohan Hegde**

CMYK

ಸುದ್ದಿ ಮಿಂಚು

ಸುದೀಪ್ ಹೆಲಿಕ್ಯಾಪ್ಟರ್ ಇಳಿಯಲಿಲ್ಲ

ಸಿಂಧನೂರು: ನಗರದಲ್ಲಿ ಬಸನಗೌಡ ಫೌಂಡೇಷನ್ ನಿಂದ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮ ಹಿನ್ನೆಲೆಯಲ್ಲಿ ಪಿಡಬ್ಲ್ಯೂಡಿ ಕಾಲೇಜಿನ ಬಾಲಕರ ಪದವಿ ಪೂರ್ವ ಕಾಲೇಜಿನ ಮೈದಾನಕ್ಕೆ ಹೆಲಿಕ್ಯಾಪ್ಟರ್ ಮೂಲಕ ಆಗಮಿಸಿದ ಸಂದರ್ಭದಲ್ಲಿ ಹೂಮಾಲೆ ಹಾಕುವ ಮೂಲಕ ಸ್ವಾಗತಕೋರಿದರು. ಅಭಿಮಾನಿಗಳು ನಟ ಕಿಚ್ಚ ಸುದೀಪ್ ಪರ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಸೇರಿದಂತೆ ಇತರರು ಇದ್ದರು.

ನಟ ಕಿಚ್ಚ ಸುದೀಪ್ ಅವರನ್ನು ಕರೆತಂದಿದ್ದ ಹೆಲಿಕ್ಯಾಪ್ಟರ್ ನಿಗದಿತ ಹೆಲಿಪ್ಯಾಡ್ ಬಿಟ್ಟು ಬೇರೆ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಮಾಡಲಾಗಿತ್ತು.

ನಂತರ ಪೊಲೀಸ್ ಅಧಿಕಾರಿಗಳ ಸೂಚನೆ ಮೇರೆಗೆ ಹೆಲಿಕ್ಯಾಪ್ಟರ್ ಪೈಲಟ್ ಮತ್ತೊಮ್ಮೆ ಹೆಲಿಕ್ಯಾಪ್ಟರ್ ಮೇಲಕ್ಕೇರಿಸಿ ಬೇರೆ ಹೆಲಿಪ್ಯಾಡ್‌ಗೆ ಲ್ಯಾಂಡ್ ಮಾಡಿದ ಪ್ರಸಂಗ ಜರುಗಿತು.

ನಾಳೆ ಕಸಾಪದ ಸಂಸ್ಥಾಪನಾ ದಿನಾಚರಣೆ

ರಾಯಚೂರು: ನಗರದ ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮೇ 5ರಂದು ಬೆಳಿಗ್ಗೆ 10:30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

ಕಾರ್ಯಕ್ರಮವನ್ನು ಖ್ಯಾತ ವೈದ್ಯರು ಹಾಗೂ ವಿದ್ವಾಂಸ ಡಾ.ರವಿ ರಾಜೇಶ್ವರ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ವಹಿಸಲಿದ್ದಾರೆ. ಸ್ಟೇಷನ್ ಬಜಾರ್‌ನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ವೈಶಾಲಿ ಪಾಟೀಲ್ ಅವರು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡ ಕ್ರಿಯಾ ಸಮಿತಿ (ಕೆಕೆಆರ್‌ಟಿಸಿ) ಅಧ್ಯಕ್ಷ ಬಾವಸಲಿ, ಪ್ರಗತಿಪರ ಹೋರಾಟಗಾರ ಹಾಗೂ ಪ್ರಕಾಶಕ ಮಲ್ಲಪ್ಪ ಪಾಟೀಲ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಬಿ.ವಿಜಯ ರಾಜೇಂದ್ರ ಅವರು ಗೌರವ ಉಪಸ್ಥಿತಿ ನೀಡಲಿದ್ದಾರೆ. ಗಡಿನಾಡು ಕನ್ನಡ ಹೋರಾಟಗಾರ ಮಲ್ಲನಗೌಡ ಹಿಂದುಪೂರು (ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಪ್ರಶಸ್ತಿ ಪುರಸ್ಕೃತರು), ಚಿತ್ರಕಲಾವಿದ ಹೇಮರೆಡ್ಡಿ ಎನ್. (ಕರ್ನಾಟಕ ಲಲಿತಕಲಾ ಅಕಾಡೆಮಿ ವರ್ಣಶ್ರೀ ಪ್ರಶಸ್ತಿ ಪುರಸ್ಕೃತರು) ಹಾಗೂ ಹಿರಿಯ ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ ಅವರಿಗೆ ಗೌರವ ಸನ್ಮಾನ ಮಾಡಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಪ್ರತಿಭಾ ಗೋನಾಳ್ ಮತ್ತು ತಂಡದವರಿಂದ ಕನ್ನಡ ಹಾಡುಗಳ ಗೀತಗಾಯನ ನೀಡಲಿದ್ದಾರೆ ಎಂದು ಗೌರವ ಕಾರ್ಯದರ್ಶಿ ರಾವುತ್‌ರಾವ್ ಬರೂರು ತಿಳಿಸಿದ್ದಾರೆ.

ಜಾಗ ಮಂಜೂರಿಗೆ ಯೋಧರ ಸಂಘದ ಮನವಿ

ರಾಯಚೂರು: ಜಿಲ್ಲೆಯ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘ ವತಿಯಿಂದ ಸಂಘದ ಕಾರ್ಯಾಲಯಕ್ಕೆ ಸೂಕ್ತ ಸ್ಥಳಾವಕಾಶ ಮಂಜೂರು ಮಾಡಬೇಕು ಎಂದು ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅವರಿಗೆ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಮನವಿ ಸಲ್ಲಿಸಿದರು.

ಜಿಲ್ಲೆಯ ನಿವೃತ್ತ ಅರೆಸೇನಾ ಯೋಧರು ತಮ್ಮ ಸಮಸ್ಯೆಗಳು, ಕುಂದುಕೊರತೆಗಳ ಪರಿಹಾರಕ್ಕಾಗಿ ಸಂಘದ ಕಾರ್ಯಚಟುವಟಿಕೆಗಳನ್ನು ನಡೆಸಲು ಸ್ವಂತ ಕಾರ್ಯಾಲಯ ಅಥವಾ ಖಾಲಿ ಜಾಗವಿಲ್ಲದ ಕಾರಣ ಸಮಸ್ಯೆಯಾಗಿದೆ ಎಂದು ಹೇಳಿದರು.

ಅರೆಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸಿದ ಯೋಧರು ದೇಶದ ವಿವಿಧ ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಪ್ರದೇಶಗಳಲ್ಲಿ ಗಡಿರಕ್ಷಣೆ, ಆಂತರಿಕ ಭದ್ರತೆ, ನಕ್ಸಲ್ ಮತ್ತು ಉಗ್ರಪೀಡಿತ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಣೆ ಸೇರಿದಂತೆ ಪ್ರಕೃತಿ ವಿಕೋಪಗಳು, ಕೈಗಾರಿಕೆಗಳು, ಬಂದರು ಹಾಗೂ ವಿಮಾನ ನಿಲ್ದಾಣಗಳ ರಕ್ಷಣೆಯಲ್ಲಿ ಮಹತ್ವದ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ ಎಂದು ವಿವರಿಸಿದರು.

ಈ ಹಿನ್ನೆಲೆಯಲ್ಲಿ ಸಂಘದ ಕಾರ್ಯಾಲಯ ಸ್ಥಾಪನೆಗಾಗಿ ಯಾವುದೇ ಖಾಲಿ ಇರುವ ಸರಕಾರಿ ಹಳೆಯ ಕಟ್ಟಡದಲ್ಲಿ ಸ್ಥಳಾವಕಾಶ ಅಥವಾ ಸರ್ಕಾರಿ ಜಮೀನು ಮಂಜೂರು ಮಾಡಿಕೊಡುವಂತೆ ಸಂಘದ ಪದಾಧಿಕಾರಿಗಳು ಮನವಿ ಮಾಡಿದರು.

ಡಿಕೆಶಿ, ಖಂಡ್ರೆ ಕಾರ್ಯಕ್ರಮದಲ್ಲಿ ವಿದ್ಯುತ್ ಶಾರ್ಟ ಸರ್ಕ್ಯೂಟ್

ಸಿಂಧನೂರು (ರಾಯಚೂರು): ನಗರದ ತಾಲೂಕಾ ಕ್ರೀಡಾಂಗಣದಲ್ಲಿ ಬಸನಗೌಡ ಬಾದರ್ಲಿ ಫೌಂಡೇಶನ್‌ವತಿಯಿಂದ ಬಸನಗೌಡ ಬಾದರ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರವಿವಾರ ಆಯೋಜಿಸಿದ್ದ ಜನಪರ ಕಾರ್ಯಕ್ರಮಗಳ ಕೈಪಿಡಿ, 151 ಸಾಮೂಹಿಕ ವಿವಾಹ ಹಾಗೂ 5001 ಮಾತೆಯರಿಗೆ ಉಡಿ ತುಂಬವ ಕಾರ್ಯಕ್ರಮದ ವೇದಿಕೆ ಕಾರ್ಯಕ್ರಮ ಮುಗಿಯುತ್ತಿದ್ದಂತೆ ವೇದಿಕೆಯಿಂದ ನಿರ್ಗಮಿಸುವ ಮೆಟ್ಟಿಲುಗಳ ಪಕ್ಕದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯುಟ್ ಸಂಭವಿಸಿದ್ದು, ಕೆಲ ಅಂತರದಲ್ಲಿಯೇ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ ಮತ್ತು ಈಶ್ವರ ಖಂಡ್ರೆ ಬೆಂಕಿ ಅನಾಹುತದಿಂದ ಬಚಾವಾದ ಘಟನೆ ನಡೆದಿದೆ.

ವೇದಿಕೆ ಕಾರ್ಯಕ್ರಮ ಮುಗಿಸಿಕೊಂಡು ಉಪ ಮುಖ್ಯಮಂತ್ರಿ ಡಿಕೆ ಶಿವುಕುಮಾರ ಮತ್ತು ಸಚಿವ ಈಶ್ವರ ಖಂಡ್ರೆ ವೇದಿಕೆಯಿಂದ ನಿರ್ಗಮಿಸುವ ವೇಳೆ ವಿದ್ಯುತ್ ಅವಘಡ ಸಂಭವಿಸಿ ಬೆಂಕಿ ಹತ್ತಿಕೊಂಡಿತು. ತಕ್ಷಣ ಅಲ್ಲಿದ್ದ ಅವರ ಬೆಂಬಲಿಗರು ಅವರನ್ನು ಬಚಾವ್ ಮಾಡಿದರು.

ನಗರದ ತಾಲೂಕಾ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೃಹತ್ ವೇದಿಕೆಯನ್ನು ಹಾಕಲಾಗಿತ್ತು. ವೇದಿಕೆಗೆ ಬೇಕಾಗುವ ವಿದ್ಯುತ್ ಸರಬರಾಜಿಗೆ ಬಳಸುವ ವಿದ್ಯುತ್ ವೈರ್‌ಗಳಿಂದ ಈ ಅವಘಡ ಸಂಭವಿಸಿದೆ. ವಿದ್ಯುತ್ ಪೂರೈಕೆಗೆ ಬೇಕಾಗುವ ವೋಲ್ಟ್ ವೈರ್‌ಗಳನ್ನು ಬಳಸಬೇಕು ಅದು ಬಿಟ್ಟು ಕಡಿಮೆ ಪ್ರಮಾಣದ ವೋಲ್ಟ್ ಇರುವ ವಿದ್ಯುತ್ ವೈರ್‌ಗಳನ್ನು ಬಳಿಸಿದ್ದರಿಂದ ಇಂತಹ ಘಟನೆ ಸಂಭವಿಸಿರಬಹುದು.



ಹಟ್ಟಿಚಿನ್ನದಗಣಿ ಸಮೀಪದ ಯರಜಂತಿ ಗ್ರಾಮದ ಬಸವನಬಗಡಿ ದೊಡ್ಡಿಯಲ್ಲಿ ಇತ್ತೀಚಿಗೆ ಸುರಿದ ಮಳೆಯಲ್ಲಿ ಸಿಡಿಲು ಬಡಿದು ಮೃತಪಟ್ಟ ಕುಟುಂಬಕ್ಕೆ 5 ಲಕ್ಷ ರೂ ಚೆಕ್ ಶಾಸಕರಾದ ಮಾನಪ್ಪ ವಜ್ಜಲ್ ಹಾಗೂ ತಹಶೀಲ್ದಾರರಾದ ಸತ್ಯಮ್ಮ ಅವರು ಜಂಟಿಯಾಗಿ ವಿತರಿಸಿದರು.

ಸಿಡಿಲು ಬಡಿದು ಮಹಿಳೆ ಸಾವು : ಚೆಕ್ ವಿತರಣೆ

ಹಟ್ಟಿಚಿನ್ನದಗಣಿ : ಸಮೀಪದ ಪೈದೊಡ್ಡಿ ಗ್ರಾಮ ಪಂಚಾಯತ ವ್ಯಾಪ್ತಿಯ ಯರಜಂತಿ ಗ್ರಾಮದ ಬಸವನಬಗಡಿ ದೊಡ್ಡಿಯಲ್ಲಿ ಇತ್ತೀಚಿಗೆ ಸುರಿದ ಮಳೆಯಲ್ಲಿ ಸಿಡಿಲು ಬಡಿದು ಗ್ರಾಮದ ದುರುಗಮ್ಮ (49) ಎಂಬುವವರು ಮೃತಪಟ್ಟಿದ್ದರು.

ಸಿಡಿಲು ಬಡಿದು ಮೃತಳ ಕುಟುಂಬಕ್ಕೆ ಶಾಸಕರಾದ ಮಾನಪ್ಪ ವಜ್ಜಲ್ ಹಾಗೂ ಲಿಂಗಸಗೂರು ತಹಶೀಲ್ದಾರರಾದ ಸತ್ಯಮ್ಮ ಅವರು ಜಂಟಿಯಾಗಿ 5 ಲಕ್ಷ ರೂ ಚೆಕ್ ವಿತರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗಿರಿಮಲ್ಲನಗೌಡ ಪಾಟೀಲ್ ಕರಡಕಲ್, ಭೀಮಣ್ಣ ಕಸಬಾಲಿಂಗಸಗೂರು. ಶಿರೆಸ್ತೆದಾರ್ ಅಮರೇಶ, ಪಿಎಸ್ಐ ಧರ್ಮಣ್ಣ, ಕುಟುಂಬದ ಸದಸ್ಯರು, ಗ್ರಾಮಸ್ಥರು ಇತರರಿದ್ದರು.

ಆದರ್ಶಗಳ ಪಾಲನೆಯೇ ಜಯಂತಿಯ ಉದ್ದೇಶವಾಗಲಿ

ಅಫಜಲಪುರ: ಶಿಕ್ಷಣವನ್ನು ಸರಿಯಾಗಿ ಪಡೆದು ಬದುಕನ್ನು ಸ್ವಾವಲಂಬಿಯಾಗಿಸಿಕೊಂಡು ಸಮುದಾಯವನ್ನು ಸಮರ್ಥವಾಗಿ ಕಟ್ಟಿ ದೇಶಕ್ಕಾಗಿ ಎಲ್ಲರೂ ದುಡಿಯಬೇಕೆಂದು ಹೇಳಿಕೊಟ್ಟ ಡಾ. ಅಂಬೇಡ್ಕರ್ ಅವರ ಜಯಂತಿ ಎಂದರೆ ಕುಣಿದು ಕುಪ್ಪಳಿಸುವುದಲ್ಲ ಬದಲಾಗಿ ಅವರ ಆದರ್ಶಗಳ ಪಾಲನೆಯೇ ಜಯಂತಿಯ ಉದ್ದೇಶವಾಗಬೇಕು ಎಂದು ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ಚಂದ್ರಾಮ ಯಾಳವಾರ ಹೇಳಿದರು.

ಬಡಕುಟುಂಬಗಳಿಗೆ ನೆರವಾಗುವ ಕಾರ್ಯ ಶ್ಲಾಘನೀಯ

ಡಿಸಿಎಂ ಡಿ.ಕೆ ಶಿವಕುಮಾರ ಹೇಳಿಕೆ | ಸಾಮೂಹಿಕ ವಿವಾಹ, ಬಸನಗೌಡ ಬಾದರ್ಲಿ ಸಾಧನೆಯ ಪುಸ್ತಕ ಬಿಡುಗಡೆ

ಸಿಂಧನೂರು: ಬಡವರ ನೆರವಿಗಾಗಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ಕಾರ್ಯ ಶ್ಲಾಘನೀಯವಾಗಿದ್ದು, ಬಾದರ್ಲಿ ಅವರು ಶ್ರೀಮಂತನಲ್ಲದಿದ್ದರೂ ಜನರ ಕಳಕಳಿ ಹೊಂದಿದ ಯುವ ನಾಯಕನಾಗಿದ್ದಾನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರು ತಿಳಿಸಿದರು.

ನಗರದ ತಾಲೂಕಾ ಕ್ರೀಡಾಂಗಣದಲ್ಲಿ ಬಸನಗೌಡ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಹಾಗೂ ಬಸನಗೌಡ ಬಾದರ್ಲಿ ಅವರ ಒಂದು ವರ್ಷದ ಸಾಧನೆಯ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಪಕ್ಷದ ಸಂಘಟನೆಗೆ ಬಸನಗೌಡ ಬಾದರ್ಲಿ ಶ್ರಮವನ್ನು ಮೆಚ್ಚಿ ಪಕ್ಷದ ಹೈಕಮಾಂಡ್ ಶಾಸಕರನ್ನಾಗಿ ನೇಮಕ ಮಾಡಿದೆ. ಅವರ ಜೊತೆಗೆ ಪಕ್ಷ ಹಾಗೂ ಸರ್ಕಾರವಿದೆ. ತುಂಗಭದ್ರ ಜಲಾಶಯದ ಎಲ್ಲಾ ಗೇಟ್ ಗಳನ್ನು ಸಂಪೂರ್ಣವಾಗಿ ಅಳವಡಿಸುವ ಮೂಲಕ ರೈತರ ನೆರವಿಗೆ ಸರಕಾರವಿದ್ದು, ಬಾದರ್ಲಿ ಜೊತೆಗೆ ನಿಲ್ಲಲಿದ್ದು ಇರಲಿದೆ ಎಂದರು.

ಸಾಮೂಹಿಕ ವಿವಾಹ ನಮ್ಮ ಸಂಸ್ಕೃತಿಯನ್ನು ಕಾಪಾಡುವ ಮಹತ್ವ ಕಾರ್ಯಕ್ರಮವಾಗಿದೆ. ಧರ್ಮದಿಂದ ವಿಶ್ವಕ್ಕೆ ಶಾಂತಿ ಸಿಗಲಿದೆ ಎಂದ ಅವರು, ಬಾದರ್ಲಿ ಬೆಳೆಯಲು ಸದಾ ಸಹಕಾರ ಮಾಡುವುದಾಗಿ ಹೇಳಿದರು.



ಸಿಂಧನೂರಿನ ತಾಲೂಕು ಕ್ರೀಡಾಂಗಣದಲ್ಲಿ ಭಾನುವಾರ ಬಸನಗೌಡ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಹಾಗೂ ಬಸನಗೌಡ ಬಾದರ್ಲಿ ಅವರ ಒಂದು ವರ್ಷದ ಸಾಧನೆಯ ಪುಸ್ತಕ ಬಿಡುಗಡೆ ಸಮಾರಂಭ ನಡೆಯಿತು.

ವಿಧಾನ ಪರಿಷತ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಬಸನಗೌಡ ಬಾದರ್ಲಿ ಅವರನ್ನು ಬೆಳಸಿ ಜನಪರ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟು ದೊಡ್ಡ ನಾಯಕನಾಗಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ವಿಧಾನಸಭೆ ಸಭಾಪತಿ ಯು.ಟಿ.ಖಾದರ ಮಾತನಾಡಿ, ವಿಶ್ವದ ಸಂಸ್ಕೃತಿ ಭಾರತದಲ್ಲಿ ಇದ್ದರೆ ಭಾರತದ ಸಂಸ್ಕೃತಿ ಸಿಂಧನೂರಿನಲ್ಲಿ ಕಾಣಬಹುದು. ಧಾರ್ಮಿಕ ನಂಬಿಕೆ ನಮ್ಮ ದೌರ್ಬಲ್ಯ ಅಲ್ಲ. ಒಬ್ಬರು ಇನ್ನೊಬ್ಬರ ಸಂಸ್ಕೃತಿ ಅರ್ಥ ಮಾಡಿಕೊಂಡು ಸೋದರರಂತೆ ಜೀವನ ಸಾಗಿಸುವ ಮೂಲಕ ಸಾಮಾಜಿಕ ಸಾಮರಸ್ಯ ಕಾಪಾಡಬೇಕು ಎಂದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, 151 ಸಾಮೂಹಿಕ ವಿವಾಹ ಮಾಡುವ ಮೂಲಕ ಅವಿಸ್ಮರಣೀಯ ಕಾರ್ಯಕ್ರಮ ಮಾಡಿರುವ ಬಾದರ್ಲಿ ಬಡವರಿಗೆ ಅನುಕೂಲಕರವಾಗಿದ್ದು, ದಾಂಪತ್ಯ ಜೀವನ ಸುಖಕರ ವಾಗಲಿ. ಎಲ್ಲರು ಗಿಡ ಮರಗಳನ್ನು ಬೆಳೆಸಿ ಎಂದು ತಿಳಿಸಿದರು.

ಸಚಿವರಾದ ಮುನಿಯಪ್ಪ, ಮದು ಬಂಗಾರಪ್ಪ, ಚಿತ್ರ ನಟರಾದ ಕಿಚ್ಚ ಸುದೀಪ್ ಮಾತನಾಡಿದರು. ಸಚಿವರಾದ ಎನ್ ಎಸ್ ಬೋಸವರಾಜ. ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ. ಶಿವರಾಜ ತಂಗಡಗಿ. ಶಾಸಕರಾದ ಹಂಪಯ್ಯ ನಾಯಕ. ಬಸನಗೌಡ ತುರ್ವಿಹಾಳ. ಬಿ ಎಂ ನಾಗರಾಜ ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ. ಡಿ ಹೆಚ್ ಹುಲಗೇರಿ. ವಿಧಾನ ಪರಿಷತ ಶಾಸಕರಾದ ರಾಮಾಜಿಗೌಡ. ಜಕ್ಕಪ್ಪ.ಪುಟ್ಟಣ್ಣ ಪ್ರದೇಶ ಯುವ ಕಾಂಗ್ರೆಸ .ಮಾಜಿ ಅಧ್ಯಕ್ಷರಾದ ಮಹ್ಮದ ನಲಪಾಡ್ ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷರಾದ ಸುಜ್ಞಾನಮೂರ್ತಿ ಸೇರೀದಂತೆ ವಿವಿಧ ಮಠಾಧೀಶರು ಸೇರಿದಂತೆ ಇನ್ನಿತರ ಗಣ್ಯರು ವೇದಿಕೆಯ ಮೇಲೆ ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಎಂಎಲ್ಸಿ ವಸಂತಕುಮಾರ ಚಾಲನೆ

ರಾಯಚೂರು: ನಗರದ ವಾರ್ಡ್‌ನಂ 18ರಲ್ಲಿ 1.20ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯರಾದ ಎ.ವಸಂತಕುಮಾರ ಅವರು ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ ನಂ. 18 ರ ವಿವಿಧ ರಸ್ತೆಗಳ ಅಭಿವೃದ್ಧಿಗೆ ಕೆಕೆಆರ್‌ಡಿಬಿ ಯೋಜನೆಯಡಿಯಲ್ಲಿ ಸುಮಾರು 1.20 ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಇಲಾಖೆಯವರು ಗುಣಮಟ್ಟದ ಕಾಮಗಾರಿ ಮಾಡಬೇಕು. ಇದರ ಜೊತೆಗೆ ವಾರ್ಡಿಗೆ ಇನ್ನು ಬೇರೆ ಯಾವದಾದರೂ ಕಾಮಗಾರಿಗಳಿಗೆ ಅನುದಾನ ಬೇಕಿದ್ದರೆ ಈ ವರ್ಷ ಅನುದಾನ ಒದಗಿಸಿ ಕೊಡಲಾಗುವುದು ಎಂದು ಭರವಸೆ ನೀಡಿದರು.

ಆರ್‌ಡಿಎ ಮಾಜಿ ಅಧ್ಯಕ್ಷ ಅಬ್ದುಲ್ ಕರೀಂ, 18ನೇ ವಾರ್ಡನ ಮಹಾನಗರ ಪಾಲಿಕೆ ಸದಸ್ಯರಾದ ಲಲಿತಾ ಕಡಗೋಲ ಆಂಜನೇಯ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ದರೂರ್ ಬಸವರಾಜ್ ಪಾಟೀಲ್, ಆರ್ಯವೈಶ್ಯ ಮಹಾಸಭಾ ರಾಜ್ಯಉಪಾಧ್ಯಕ್ಷ ಕುಂಟನಾಳ ವೆಂಕಟೇಶ್, ಪೆಪ್ಸಿ ಗೋವಿಂದ, ಕೊಂಡಪ್ರಕಾಶ, ರಾಮಕೃಷ್ಣ ನಾಯಕ, ಎ.ಅರುಣ ಕುಮಾರ್, ಕೆ.ಅಸ್ಲಾಂ ಪಾಶ, ಜೆ ಸತ್ಯನಾಥ ,ಜೆ. ಆಂಜನಕುಮಾರ್,ಸಿ.ನಾಗರಾಜ, ವಿಜಯ್, ಮನೋಹರ್ ಇತರರಿದ್ದರು.

ರಾಯಚೂರಿನ ವಾರ್ಡ್ 18ರಲ್ಲಿ 1.20 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೆ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಅವರು ಭೂಮಿ ಪೂಜೆ ನೆರವೇರಿಸಿದರು.

ಶಿಕ್ಷಕರ ಸಂಘ: ಸನ್ಮಾನ



ಮಾನ್ವಿ ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ನೂತನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸನ್ಮಾನಿಸಲಾಯಿತು.

ಮಾನ್ವಿ: ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ನೂತನವಾಗಿ ಆಯ್ಕೆಯಾದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ಕಾರ್ಯಕಾರಿ ಸಮಿತಿ ಸದಸ್ಯರಾದ ಸುರೇಶ್‌ಕುರ್ಡಿ, ಸಬ್ಜಲಿಸಾಬ, ಮಲ್ಲಿಕಾರ್ಜುನ ಹಾಗೂ ಮಹಿಳಾ ಪ್ರತಿನಿಧಿ ಮಮತಾ.ಎಸ್.ಎಮ್‌ರನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕ.ರಾ.ಪ್ರಾ.ಶಾ.ಶಿ.ಸಂಘ ಮಾಜಿ ಅಧ್ಯಕ್ಷರಾದ ಮೂಕಪ್ಪ ಕಟ್ಟಿಮನಿ ಸನ್ಮಾನಿಸಿ ಗೌರವಿಸಿದರು.ಶಿಕ್ಷಕರಾದ ಮಹೇಶ. ಶ್ರೀನಿವಾಸ ವೈ ಇದ್ದರು.

ಮೂರ್ತಿ ಸ್ಥಾಪನಾ ನಿರ್ಣಯಕ್ಕೆ ಖಂಡನೆ

ಕಲಬುರಗಿ : ಇಲ್ಲಿನ ಗಂಜ್ ಪ್ರದೇಶದಲ್ಲಿನ ಕೆಎಂಎಫ್ ಗೆ ಸಂಭಂದಿಸಿದ ಸ್ಥಳದಲ್ಲಿ ಒಂದೇ ಕುಟುಂಬದ ಮಾಜಿ ಪ್ರಧಾನಿಗಳಾದ ಜವಾಹರ್ ಲಾಲ್ ನೆಹರು, ಇಂದಿರಾಗಾಂಧಿ, ರಾಜೀವ ಗಾಂಧಿ ಪ್ರತಿಮೆಗಳನ್ನು ಸ್ಥಾಪಿಸಲು ನಿರ್ಣಯ ಮಾಡಿದ ಮಹಾನಗರ ಪಾಲಿಕೆಯ ಕ್ರಮ ಖಂಡನೀಯ ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ತಿಳಿಸಿದ್ದಾರೆ.

ಚುನಾವಣೆಯಲ್ಲಿ ಹಣಬಲ ನಿಯಂತ್ರಿಸಲಿ

ಡಾ. ಬಸವರಾಜ ಕುಮ್ನೂರ್ ಅಭಿಮತ। ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣ

ಸಂ.ಕ. ಸಮಾಚಾರ ಕಲಬುರಗಿ: ಇತ್ತೀಚಿನ ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಹಣಬಲದಿಂದ ಪ್ರಾಮಾಣಿಕರು, ಸಮಾಜ ಸೇವಕರು, ನಿಷ್ಠಾವಂತ ರಾಜಕೀಯ ಕಾರ್ಯಕರ್ತರು ಮತ್ತು ಸಾಮಾಜಿಕ ಕಳಕಳಿಯುಳ್ಳವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲಿಕ್ಕೆ ಅವಕಾಶವೇ ಇಲ್ಲದಂತಾಗುತ್ತಿದೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ನಿವೃತ್ತ ಪ್ರಾಂಶುಪಾಲ ಡಾ. ಬಸವರಾಜ ಕುಮ್ನೂರ್ ತಿಳಿಸಿದರು.

ನಗರದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಶರಣಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿಯಿಂದ ಚುನಾವಣೆಗಳಲ್ಲಿ ಹಣಬಲ ನಿಯಂತ್ರಿಸಿ– ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿ, ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಹಣಬಲದಿಂದ ಪ್ರಜಾಪ್ರಭುತ್ವಕ್ಕೆ ಅಪಾಯ ಕಾದಿದೆ. ಚುನಾವಣೆಗಳನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸಲು ಸಂವಿಧಾನದ 324ನೇ ಅನುಚ್ಛೇದ ಪ್ರಕಾರ ಚುನಾವಣಾ ಆಯೋಗವು ಸ್ವತಂತ್ರವಾದ ಅಧಿಕಾರ ಹೊಂದಿದೆ. ಟಿ. ಎನ್. ಶೇಷನ್ ಮುಕ್ತ ಹಾಗೂ ಪಾರದರ್ಶಕ ಚುನಾವಣೆ ನಡೆಸುವ ಮುಖಾಂತರ ಚುನಾವಣಾ ಆಯೋಗದ ಘನತೆ ಹೆಚ್ಚಿಸಿದ್ದರು. ನಾವು ಕೂಡಾ ಪ್ರತಿಯೊಬ್ಬರೂ ಚುನಾವಣೆಗಳಲ್ಲಿ ಹಣ ಹಂಚಲು ಬಂದವರನ್ನು ತಿರಸ್ಕರಿಸುವ ಮೂಲಕ ಮತದ ಮೌಲ್ಯವನ್ನು ಎತ್ತಿ ಹಿಡಿಯಬೇಕಾಗಿದೆ ಎಂದರು.

ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅರ್ಥಶಾಸ್ತ್ರಜ್ಞ ಡಾ. ಬಸವರಾಜ ಕುಮ್ನೂರ್ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಸ್ತುವಾರಿ ಪ್ರಾಂಶುಪಾಲ ಡಾ. ಲಕ್ಷ್ಮೀಕಾಂತ ಖಣದಾಳ ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮದಿಂದ ದೂರವಿದ್ದು, ನಿತ್ಯ ತಪ್ಪದೇ ದಿನ ಪತ್ರಿಕೆಗಳನ್ನು ಓದಬೇಕು ಎಂದರು.

ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಸಂಸ್ಥಾಪಕ ರಮೇಶ ಆರ್ ಧುತ್ತರಗಿ ಪ್ರಾಸ್ತಾವಿಕವಾಗಿ ಮಾತನಾಡಿ, ಚುನಾವಣೆಗಳಲ್ಲಿ ಯಾವುದೇ ಆಸೆ–ಆಮಿಷಗಳಿಗೆ ಬಲಿಯಾಗದೆ ತಪ್ಪದೆ ಮತದಾನ ಮಾಡುತ್ತೇನೆ. ಕ್ರಿಮಿನಲ್ ಆರೋಪ ಹಿನ್ನೆಲೆವುಳ್ಳ ಅಭ್ಯರ್ಥಿಗಳಿಗೆ ನಾನು ಮತ ಹಾಕುವುದಿಲ್ಲ. ಚುನಾವಣೆಗಳಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ನನಗೆ ಸಹಿ ಎನಿಸದೆ ಇದ್ದಲ್ಲಿ ನಾನು ನೋಟಾಕ್ಕಾದರೂ ತಪ್ಪದೇ ಮತ ಹಾಕುತ್ತೇನೆ ಎಂದು ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಬಿ.ಎಡ್, ಪ್ರಶಿಕ್ಷಣಾರ್ಥಿಗಳಾದ ಕೆ.ಶ್ವೇತಾ, ಧರೇಶ, ಪ್ರಿಯದರ್ಶಿನಿ, ಸೈಯದ್ ಖಾನ್, ಭಾಗ್ಯಶ್ರೀ ಅತ್ಯುತ್ತಮವಾಗಿ ವಿಷಯ ಮಂಡಿಸಿದ್ದಕ್ಕೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಅಭಿನಯಾ ಸ್ವಾಗತಿಸಿದರು. ತನುಜಾ ಮಣ್ಣೂರ ನಿರೂಪಿಸಿದರು. ಮೇಘಾ ವಂದಿಸಿದರು.

> ಎಲ್ಲ ಚುನಾವಣೆಗಳಲ್ಲಿ ಹಣ ಹಂಚುವುದು ಅವ್ಯಾಹತವಾಗಿ ಸಾಗುತ್ತಿದ್ದು, ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಮನೆಗಳಲ್ಲಿ ಓಣಿಗಳಲ್ಲಿ ಗ್ರಾಮಗಳಲ್ಲಿ ನಗರಗಳಲ್ಲಿ ಸಮಾಜದಲ್ಲಿ ಜಾಗೃತಿ ಮೂಡಿಸುವುದರಿಂದ ಬದಲಾವಣೆ ತರಲು ಸಾಧ್ಯ.
> ■ ಡಾ. ಲಕ್ಷ್ಮೀಕಾಂತ ಖಣದಾಳ, ಉಸ್ತುವಾರಿ ಪ್ರಾಂಶುಪಾಲ.

ಆಸ್ಪತ್ರೆಗಳು ಹೆಚ್ಚಾದರೆ ಸಮಾಜ ರೋಗಗ್ರಸ್ತ ಎಂದರ್ಥ

ಸಂ. ಕ. ಸಮಾಚಾರ ಚಿತ್ತಾಪುರ: ಆಸ್ಪತ್ರೆಗಳು ಹೆಚ್ಚಾದರೆ ಸಮಾಜ ರೋಗಗ್ರಸ್ಥಗೊಂಡಿದೆ ಎಂದರ್ಥ. ಪೊಲೀಸ್ ಠಾಣೆಗಳು ಹೆಚ್ಚಾದರೆ ಸಮಾಜದಲ್ಲಿ ಅನೈತಿಕ, ಅಕ್ರಮ ಚಟುವಟಿಕೆಗಳು ಹೆಚ್ಚಾಗಿವೆ ಎಂದರ್ಥ ಎಂದು ಪತ್ರಕರ್ತ ಕಾಶಿನಾಥ್ ಗುತ್ತೇದಾರ್ ಹೇಳಿದರು.

ಪಟ್ಟಣದ ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದಲ್ಲಿ ಭಾರತೀಯ ಯುವ ರೆಡ್ ಕ್ರಾಸ್ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆಗಳ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿ, ಯುವಕರು ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗವಹಿಸಿ ಬದುಕು ನಾಶ ಮಾಡಿಕೊಳ್ಳುತ್ತಿದ್ದಾರೆ. ದೇಶದ ಶಕ್ತಿಯಾಗಿರುವ ಯುವಜನರು ದುಶ್ಚಟಗಳಿಂದ ದೂರ ಉಳಿಯಬೇಕು ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು ಎಂದು ಹೇಳಿದರು.

ಚಿತ್ತಾಪುರದ ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ಆರೋಗ್ಯ ತಪಾಸಣೆ ಶಿಬಿರದ ಉದ್ಘಾಟನೆ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ದಂತ ಆರೋಗ್ಯ ವೈದ್ಯಾಧಿಕಾರಿ ಡಾ.ಖನಿಜ್ ಫಾತಿಮಾ, ನಾವು ತಿನ್ನುವ ಆಹಾರ ಮತ್ತು ಜೀವನ ಶೈಲಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತದೆ. ದುರಭ್ಯಾಸಗಳು ಮತ್ತು ಸಮಾಜದ ಸಮಾಜದ ಕಲುಷಿತ ವಾತಾವರಣ ನಮ್ಮ ಆರೋಗ್ಯ ಹದಗೆಡಿಸುತ್ತದೆ. ಉತ್ತಮ ಆಹಾರ ಸೇವನೆ ಸ್ವಚ್ಛ ಪರಿಸರ ನಮ್ಮ ಬದುಕಿನ ಭಾಗವಾಗಬೇಕು ಎಂದು ಹೇಳಿದರು. ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ಸಂಗಪ್ಪ ಮಾಮನಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಪ್ತ ಸಮಾಲೋಚಕಿ ಸುಜ್ಞಾನಿ ಪಾಟೀಲ್, ಡಾ.ಶಶಿಧರ್ ಯಡ್ರಾಮಿ, ಆಸ್ಮಾ ನಿಖತ್, ಪ್ರಾಧ್ಯಾಪಕರಾದ ಪ್ರೊ. ಮಲ್ಲಪ್ಪ ಮಾನೇಗಾರ್, ಶರಣಬಸಪ್ಪ ರಾಯ್ಕೋಟಿ, ರೋಹಿಣಿ ಕಲ್ಮಟ್, ನಾಗವೇಣಿ, ಲಕ್ಷ್ಮೀಪುತ್ರ ಪಾಸೋಡಿ, ಕೈಲಾಸಪತಿ ವಿಶ್ವಕರ್ಮ, ಶರಣಪ್ಪ ದಿಗ್ಗಾಂವ, ಮರೆಪ್ಪ ಮೇತ್ರಿ, ಶ್ರೀಕಾಂತ್, ಅಭಿಷೇಕ್, ವಿಜಯಲಕ್ಷ್ಮೀ ರಾಠೋಡ, ಮಂಜುನಾಥ ದೇಶಪಾಂಡೆ, ಆಸ್ಪತ್ರೆಯ ನಿಜಾಮುದ್ದೀನ್, ಗುರುರಾಜ್ ಮುಗುಳಿ, ಪತ್ರಕರ್ತ ಸಂತೋಷಕುಮಾರ ಕಟ್ಟಿಮನಿ ಸೇರಿದಂತೆ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ.ಸೂಗುರೇಶ್ವರ ಆರ್. ಮಠಪತಿ ಸ್ವಾಗತಿಸಿದರು, ಮಲ್ಲಪ್ಪ ತೊಟ್ನಳ್ಳಿ ನಿರೂಪಿಸಿದರು. ಡಾ.ವಿಲಾಸ್ ವಂದಿಸಿದರು.

ವಾಡಿ ರೈಲ್ವೆ ನಿಲ್ದಾಣದ ಅಭಿವೃದ್ಧಿಗೆ ಬಿಜೆಪಿ ಆಗ್ರಹ

ಸಂ.ಕ.ಸಮಾಚಾರ ವಾಡಿ: ಪಟ್ಟಣದ ರೈಲ್ವೆ ನಿಲ್ದಾಣದಲ್ಲಿ ಶೌಚಾಲಯ ಕೋಣೆಗಳು ಶುಚಿತ್ವ ಇಲ್ಲದೆ, ಗಬ್ಬು ನಾರುತ್ತಿವೆ. ಬೇಕಾಬಿಟ್ಟಿ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯಲಾಗುತ್ತಿದೆ. ಸೇರಿ ವಿವಿಧ ಮೂಲಸೌಕರ್ಯ ಒದಗಿಸುವಂತೆ ಕೇಂದ್ರ ರೈಲ್ವೆ ವಿಭಾಗದ ಮುಖ್ಯ ವ್ಯವಸ್ಥಾಪಕ ರಾಜೀವ್ ಶ್ರೀವಾತ್ಸವ ಅವರಿಗೆ ಬಿಜೆಪಿ ವಾಡಿ ಘಟಕದ ಅಧ್ಯಕ್ಷ ವೀರಣ್ಣ ಯಾರಿ ಒತ್ತಾಯಿಸಿದರು.

ಅತಿದೊಡ್ಡ ರೈಲ್ವೆ ನಿಲ್ದಾಣ ಹೊಂದಿರುವ ವಾಡಿಯಲ್ಲಿ ಪ್ರಯಾಣಿಕರ ವಿಶ್ರಾಂತಿ ಸ್ಥಳ ಸಮರ್ಪಕ ನಿರ್ವಹಣೆ ಇಲ್ಲದೆ, ಕಸದ ತೊಟ್ಟಿಯಾಗಿದೆ. ಪರಿಣಾಮ ವಿವಿಧ ರಾಜ್ಯದಿಂದ ಬರುವ ಪ್ರಯಾಣಿಕರಿಗೆ ನಿಲ್ದಾಣದ ಹೊರಗಡೆಯೇ ವಿಶ್ರಾಂತಿ ಪಡೆದು, ತೊಂದರೆ ಅನುಭವಿಸುತ್ತಿದ್ದಾರೆ.

ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಪ್ರಾಥಮಿಕ ಚಿಕಿತ್ಸೆ ವ್ಯವಸ್ಥೆ ಮತ್ತು ಔಷಧ ಅಂಗಡಿ, ಸ್ವದೇಶಿ ಮಳಿಗೆ ಪ್ರಾರಂಭಕ್ಕೆ ಒತ್ತು ನೀಡಬೇಕು. ಗುಟುಕಾ, ಪ್ಲಾಸ್ಟಿಕ್ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂದು ಬಿಜೆಪಿ ಮುಖಂಡರು ಮನವಿ ಮಾಡಿದರು.

ವಾಡಿ ಪಟ್ಟಣದ ರೈಲ್ವೆ ನಿಲ್ದಾಣದ ಅಭಿವೃದ್ಧಿ ಮಾಡುವಂತೆ ಕೇಂದ್ರ ರೈಲ್ವೆ ವಿಭಾಗದ ಮುಖ್ಯ ವ್ಯವಸ್ಥಾಪಕ ರಾಜೀವ್ ಶ್ರೀವಾತ್ಸವ ಅವರಿಗೆ ಬಿಜೆಪಿ ಮುಖಂಡರು ಭೇಟಿ ಮಾಡಿ ಮನವಿ ಪತ್ರ ನೀಡಿದರು

ಅಮೃತ್ ಭಾರತ್ ಸ್ಟೇಷನ್ ಅಭಿವೃದ್ಧಿ ಯೋಜನೆಯಡಿ ರೈಲ್ವೆನಿಲ್ದಾಣದಲ್ಲಿ ವಿವಿಧ ಕಾಮಗಾರಿ ಆರಂಭಗೊಂಡಿವೆ. ಆದರೆ ಕಾಮಗಾರಿ ಸಂಪೂರ್ಣ ಕಳಪೆ ಮಟ್ಟದಿಂದ ಕೂಡಿದೆ. ಇದರಿಂದ ಕೋಟ್ಯಂತರ ರೂ. ಪೋಲಾಗುತ್ತಿದೆ. ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ತಪ್ಪಿತಸ್ಥರ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು. ವಾಡಿ ಕಾರ್ಡ್ ಕ್ಯಾಬ್ ಬಳಿಯ ಬ್ರೀಜ್ ಕಾಮಗಾರಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿವೆ. ತಕ್ಷಣ ಕಾಮಗಾರಿ ಪೂರ್ಣಗೊಳಿಸಬೇಕು.

ಪಟ್ಟಣದ ಸುತ್ತ ರೈಲ್ವೆ ಗೇಟ್ ನಿರ್ಮಾಣ ಮಾಡಿದರಿಂದ ಸಂಚಾರಕ್ಕೆ ತೊಂದರೆ ಉಂಟಾಗಿದೆ. ಇದರಿಂದ ವಿಜಯನಗರ, ಹನುಮಾನ ನಗರದ ನಿವಾಸಿಗಳಿಗೆ ಒಳ ಸೇತುವೆ ನಿರ್ಮಾಣ ಮಾಡಬೇಕು. ಎಂದು ಸೇರಿ ರೈಲ್ವೆ ಅಭಿವೃದ್ಧಿ ಮಾಡುವಂತೆ ಅಧಿಕಾರಿಗಳಿಗೆ ವೀರಣ್ಣ ಯಾರಿ ಒತ್ತಾಯಿಸಿದರು.

ಮುಖಂಡರಾದ ಅಶೋಕ ಹರನಾಳ, ಕಿಶನ ಜಾಧವ, ರಾಜಶೇಖರ ಧೂಪದ, ಸತೀಶ ಸಾವಳಗಿ, ಕುಮಾರ ಜಾಧವ, ನಿರ್ಮಲ ಇಂಡಿ, ಉಮಾಭಾಯಿ ಗೌಳಿ, ಆನಂದ ಸಂಗಶೆಟ್ಟಿ ಇದ್ದರು.

ಮೀಸಲು ಜಮೀನು ಇದ್ದರೂ ಗ್ರಾಮಸ್ಥರ ಹೈರಾಣು

■ **ಮನೋಹರ ಪೂಜಾರಿ**

ಯಡ್ರಾಮಿ: ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ರುದ್ರಭೂಮಿ ಸಮಸ್ಯೆ ಮುಂದುವರಿದಿದ್ದು, ಸರ್ಕಾರದ ಆದೇಶದಂತೆ ಸ್ಮಶಾನ ಭೂಮಿಗೆ ಜಮೀನು ಮೀಸಲು ಮಾಡಿದ್ದರೂ ಅಗತ್ಯ ಸೌಲಭ್ಯಗಳ ಕೊರತೆಯಿಂದ ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದಾರೆ. ಮೀಸಲು ಜಮೀನು ಇದ್ದರೂ ರಸ್ತೆ, ತಂತಿಬೇಲಿ, ನೀರು, ಶೆಡ್ ಸೇರಿ ಮೂಲ ವ್ಯವಸ್ಥೆಗಳು ಇಲ್ಲದ ಕಾರಣ ಸಾರ್ವಜನಿಕರಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ವಿವಿಧ ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಮೀಸಲು ಇಡಲಾಗಿದ್ದು, ತಾಲೂಕಿನ ಐನಾಪೂರ, ಅಖಂಡಹಳ್ಳಿ, ಯಡ್ರಾಮಿ, ಸೈದಾಪೂರ, ಹಂಗರಗಾ ಬಿ, ಮಳ್ಳಿ, ಕಣಮೇಶ್ವರ, ಮಾಗಣಗೇರಿ, ಕೊಂಡಗುಳಿ, ಕುಕನೂರ, ತೆಲಗಬಾಳ, ಕುರಳಗೇರಾ, ಬಿರಾಳ ಹಿಸ್ಸಾ, ಅಲ್ಲಾಪೂರ, ನಾಗರಹಳ್ಳಿ ಎಸ್.ಎಂ., ಕಡಕೋಳ, ಮಾಣಶಿವಣಗಿ, ಯತ್ನಾಳ, ಶಾಖಾಪೂರ ಎಸ್.ವೈ., ಹಂಚನಾಳ ಎಸ್.ವೈ., ಅರಳಗುಂಡಗಿ, ಮುರಗಾನೂರ, ಕೋಣಶಿರಸಗಿ, ಜಂಬೇರಾಳ, ವಡಗೇರಾ, ವಸ್ತಾರಿ, ಕುಮ್ಮನಶಿರಸಗಿ, ಸುಂಬಡ್, ಹಾಲಗತ್ತರಗಾ, ಇಜೇರಿ, ಮುತ್ತಕೋಡ, ಗೊಬ್ಬರವಾಡಗಿ, ಸಾಥಖೇಡ, ನೀರಡಗಿ ಎಸ್.ಎಂ., ಪಡಗದಹಳ್ಳಿ, ಆಲೂರ, ಕರಕಿಹಳ್ಳಿ, ಮಂಗಳೂರು, ಅಣಜಗಿ, ಬಿಳವಾರ, ಜಮಖಂಡಿ, ಕಾಚೂರ, ಕೋಣ್ಣೂರ, ಶಿವಪೂರ, ಮಲ್ಲಾಬಾದ, ಹಂಗರಗಾ ಕೆ, ಹರನಾಳ ಬಿ, ಮಾರಡಗಿ ಎಸ್.ಎಂ., ಕಾಸರಬೋಸಗಾ, ಗೋಗಿಹಾಳ, ಬಳಬಟ್ಟಿ, ನಂದಿಹಳ್ಳಿ, ಕಾಖಂಡಕಿ, ವರವಿ, ಅಂಬರಖೇಡ, ಯಲಗೋಡ, ಕಾಚಾಪೂರ ಹಾಗೂ ದುಮ್ಮದ್ರಿ ಗ್ರಾಮಗಳಲ್ಲಿ ಒಂದು ಎಕರೆಯಿಂದ ಐದು ಎಕರೆವರೆಗೆ ಜಮೀನು ಗುರುತಿಸಲಾಗಿದೆ.

ಸರ್ಕಾರದ ಆದೇಶದಂತೆ 1000 ಜನಸಂಖ್ಯೆ ಇರುವ ಗ್ರಾಮಗಳಿಗೆ ಕನಿಷ್ಠ 18 ರಿಂದ 20 ಗುಂಟೆ ಜಾಗ ರುದ್ರಭೂಮಿಗೆ ಇರಬೇಕು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿದೆ. ಆದರೆ ಅನೇಕ ಗ್ರಾಮಗಳಲ್ಲಿ ಗುರುತಿಸಿದ ಜಾಗಗಳು ಗ್ರಾಮದಿಂದ 5 ಕಿ.ಮೀ. ದೂರದಲ್ಲಿವೆ. ಕೆಲವೆಡೆ ಹೋಗಲು ದಾರಿಯೇ ಇಲ್ಲ. ಕೆಲವು ಜಾಗಗಳು ಕಲ್ಲುಗುಡ್ಡ ಪ್ರದೇಶದಲ್ಲಿದ್ದು ಅಂತ್ಯಸಂಸ್ಕಾರಕ್ಕೆ ಅಸೌಕರ್ಯ ಉಂಟಾಗಿದೆ.

ಇನ್ನೂ ಕೆಲವು ಗ್ರಾಮಗಳಲ್ಲಿ ಸರ್ಕಾರಿ ಜಾಗದ ಕೊರತೆಯಿಂದ ಸಮೀಪದ ಗ್ರಾಮದ ಜಮೀನು ಗುರುತಿಸಲಾಗಿದೆ. ಇದರಿಂದ ಎರಡು ಗ್ರಾಮಗಳ ಜನರಿಗೆ ತೊಂದರೆ ಆಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಸ್ಥಳೀಯರಿಗೆ ಯಾವ ಜಾಗ ಮೀಸಲಾಗಿದೆ ಎಂಬ ಮಾಹಿತಿ ಸರಿಯಾಗಿ ನೀಡಲಾಗಿಲ್ಲ. ಕೆಲವೆಡೆ ಮೀಸಲು ಜಮೀನು ಮಾಯವಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

ಎಕ್ಸ್‌ಟ್ರಾ ಕವರ್

ಓವರ್ಟನ್ ಎಸೆತಕ್ಕೆ 2.50 ಕೋ. ಮೌಲ್ಯದ ವಾಚ್ ಪೀಸ್ ಪೀಸ್

ಮುಂಬೈ: ಶನಿವಾರ ನಡೆದ ಮುಂಬೈ ಇಂಡಿಯನ್ಸ್ ಹಾಗೂ ಸಿಎಸ್‌ಕೆ ನಡುವಿನ ಐಪಿಎಲ್ ಪಂದ್ಯದಲ್ಲಿ ಅಚ್ಚರಿಯ ಘಟನೆಯೊಂದು ನಡೆದಿದೆ. ಸಿಎಸ್‌ಕೆ ಬೌಲರ್ ಜೇಮಿ (ಜೆಮ್ಮಿ) ಓವರ್ಟನ್ ಎಸೆತದಲ್ಲಿ ಸ್ಕೂಪ್ ಶಾಟ್ ಬಾರಿಸಲು ಯತ್ನಿಸಿದ ಮುಂಬೈ ಬ್ಯಾಟರ್ ತಿಲಕ್ ವರ್ಮಾ, ಚೆಂಡನ್ನು ಮಣಿಕಟ್ಟಿಗೆ ಹೊಡೆಸಿಕೊಂಡರು ಇದರ ರಭಸಕ್ಕೆ ಅವರು ಕಟ್ಟಿದ್ದ ಬರೋಬ್ಬರಿ 2.50 ಕೋಟಿ ರೂ. ಮೌಲ್ಯದ ದುಬಾರಿ ಫಿಟ್‌ನೆಸ್ ವಾಚ್ ಕಳಚಿ ಮೈದಾನಕ್ಕೆ ಬಿದ್ದು ಪೀಸ್ ಪೀಸ್ ಆಗಿದೆ! ಪೆಟ್ಟಾದ ಕಾರಣ ಮೈದಾನದಲ್ಲೇ ಚಿಕಿತ್ಸೆ ಪಡೆದು ಆಟ ಮುಂದುವರಿಸಿದ ತಿಲಕ್, ಕೇವಲ 5 ರನ್ ಗಳಿಸಿ ಘಟನೆಯಾದ 2ನೇ ಎಸೆತದಲ್ಲೇ ಔಟಾದರು. ಮೈದಾನದಲ್ಲಿ ದುಬಾರಿ ವಾಚ್ ತುಂಡಾದ ಈ ವಿಡಿಯೋ ಸದ್ಯ ಜಾಲತಾಣಗಳಲ್ಲಿ ಭಾರೀ ವೈರಲ್ ಆಗುತ್ತಿದೆ

ಮತ್ತೊಂದು ವಿಶ್ವಕಪ್ ಗೆಲ್ಲಲು ನಾವು ತಾಯಾರು: ಜೆಮಿಮಾ

ಮುಂಬೈ: ಮುಂಬರುವ 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟಕ್ಕೇರಲು ಟೀಮ್ ಇಂಡಿಯಾ ಸಜ್ಜಾಗಿದೆ. "ಮತ್ತೊಂದು ವಿಶ್ವಕಪ್ ಗೆಲ್ಲಲು ನಮ್ಮ ತಂಡವು ಇನ್ನಷ್ಟು ಹಸಿವಿನಿಂದ ಕಾಯುತ್ತಿದೆ" ಎಂದು ಭಾರತದ ಸ್ಟಾರ್ ಬ್ಯಾಟರ್ ಜೆಮಿಮಾ ರಾಡ್ರಿಗಸ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.
ಕಳೆದ ನವೆಂಬರ್ ನಲ್ಲಿ ನಡೆದಿದ್ದ 50–ಓವರ್‌ಗಳ ಏಕದಿನ ವಿಶ್ವಕಪ್‌ನಲ್ಲಿ ಐತಿಹಾಸಿಕ ಗೆಲುವು ಸಾಧಿಸಿರುವ ಭಾರತೀಯ ವನಿತೆಯರು, ಇದೀಗ ಅದೇ ಸ್ಫೂರ್ತಿಯೊಂದಿಗೆ ಟಿ20 ಮಾದರಿಯಲ್ಲೂ ವಿಶ್ವ ಚಾಂಪಿಯನ್ ಆಗುವ ಗುರಿ ಹೊಂದಿದ್ದಾರೆ.

ಶಿವಂ ದುಬೆ ತಂಡ ಸೇರಿದ ತೆಂಡೂಲ್ಕರ್ ಪುತ್ರ ಅರ್ಜುನ್

ಮುಂಬೈ: ಜೂನ್ ಮೊದಲ ವಾರದಲ್ಲಿ ಆರಂಭವಾಗಲಿರುವ 'ಟಿ20 ಮುಂಬೈ ಲೀಗ್ 2026' ಟೂರ್ನಿಯ ಹರಾಜು ಪ್ರಕ್ರಿಯೆ ಮುಕ್ತಾಯಗೊಂಡಿದೆ. ಶಿವಂ ದುಬೆ ಐಕಾನ್ ಆಟಗಾರನಾಗಿರುವ 'ಆರ್ಕ್ಸ್ ಅಂಧೇರಿ' ತಂಡವು ಅರ್ಜುನ್ ತೆಂಡೂಲ್ಕರ್ (ರೂ.10 ಲಕ್ಷ) ಹಾಗೂ ಮುಶೀರ್ ಖಾನ್ (ರೂ.11 ಲಕ್ಷ) ಅವರನ್ನು ಖರೀದಿಸಿದೆ.
ಆದರೆ, ರೂ. 12 ಲಕ್ಷಕ್ಕೆ 'ಸೋಬೋ ಮುಂಬೈ ಫಾಲ್ಕನ್ಸ್' ಪಾಲಾದ ಆಲ್‌ರೌಂಡರ್ ಆಕಾಶ್ ಪಾರ್ಕರ್ ಈ ಹರಾಜಿನ ಅತ್ಯಂತ ದುಬಾರಿ ಆಟಗಾರ ಎನಿಸಿಕೊಂಡಿದ್ದಾರೆ.

ತವರಲ್ಲೇ ಎಡವಿದ ಹೈದ್ರಾಬಾದ್

ಸನ್‌ರೈಸರ್ಸ್ ಮಣಿಸಿ ಬೀಗಿದ ಕೆಕೆಆರ್ । ನರೈನ್‌ಗೆ 200 ವಿಕೆಟ್

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ 45ನೇ ಪಂದ್ಯದಲ್ಲಿ ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ತವರಿನಲ್ಲೇ ಮುಖಭಂಗವಾಗಿದೆ. ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಂಘಟಿತ ಪ್ರದರ್ಶನ ನೀಡಿದ ಕೋಲ್ಕತ್ತಾ ನೈಟ್ ರೈಡರ್ಸ್ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಕೆಕೆಆರ್ ಟೂರ್ನಿಯಲ್ಲಿ 3ನೇ ಗೆಲುವು ದಾಖಲಿಸಿದರೆ, ಹೈದರಾಬಾದ್ 4ನೇ ಸೋಲನುಭವಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಸನ್‌ರೈಸರ್ಸ್ ತಂಡಕ್ಕೆ ಟ್ರಾವಿಸ್ ಹೆಡ್ (28 ಎಸೆತಗಳಲ್ಲಿ 61 ರನ್) ಸ್ಫೋಟಕ ಆರಂಭ ಒದಗಿಸಿದರು. ಆದರೆ, 100ರ ಗಡಿ ದಾಟಿದ ಬಳಿಕ ಹೈದರಾಬಾದ್‌ನ ಮಧ್ಯಮ ಕ್ರಮಾಂಕ ಅಕ್ಷರಶಃ ಕುಸಿದು ಬಿತ್ತು. ಕೇವಲ 60 ರನ್ ಅಂತರದಲ್ಲಿ ಕೊನೆಯ 9 ವಿಕೆಟ್ ಕಳೆದುಕೊಂಡ ಸನ್‌ರೈಸರ್ಸ್, 19 ಓವರ್‌ಗಳಲ್ಲಿ ಕೇವಲ 165 ರನ್‌ಗಳಿಗೆ ಆಲೌಟ್ ಆಯಿತು. ಕೆಕೆಆರ್ ಪರ ವರುಣ್ ಚಕ್ರವರ್ತಿ 3 ವಿಕೆಟ್ ಕಿತ್ತರೆ, ಸುನಿಲ್ ನರೈನ್ ಮತ್ತು ಕಾರ್ತಿಕ್ ತ್ಯಾಗಿ ತಲಾ 2 ವಿಕೆಟ್ ಪಡೆದು ಮಿಂಚಿದರು.

166 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಕೆಕೆಆರ್ ತಂಡಕ್ಕೆ ಫಿನ್ ಅಲೆನ್ (13 ಎಸೆತಗಳಲ್ಲಿ 29) ಬಿರುಸಿನ ಆರಂಭ ನೀಡಿದರು. ಆ ಬಳಿಕ ಜೊತೆಯಾದ ಅಜಿಂಕ್ಯ

ರಹಾನೆ (36 ಎಸೆತಗಳಲ್ಲಿ 43) ಹಾಗೂ ಯುವ ಬ್ಯಾಟರ್ ಅಂಗ್‌ಕ್ರಿಶ್ ರಘುವಂಶಿ (47 ಎಸೆತಗಳಲ್ಲಿ 59 ರನ್) ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ತಂಡವನ್ನು ಗೆಲುವಿನ ಸನಿಹ ತಂದರು. ಅಂತಿಮವಾಗಿ ರಿಂಕು ಸಿಂಗ್ (ಅಜೇಯ 22) ಅವರ ಫಿನಿಶಿಂಗ್ ಟಚ್‌ನೊಂದಿಗೆ ಕೆಕೆಆರ್ ಕೇವಲ 18.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು (166/3) ಸುಲಭವಾಗಿ ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರ್:	
	ಹೈದರಾಬಾದ್: 165/10 (19 ಓವರ್)
	ಕೋಲ್ಕತ್ತಾ : 169/3 (18.2 ಓವರ್)

ಸುನಿಲ್ ಡಬಲ್ ಸೆಂಚುರಿ

ಹೈದರಾಬಾದ್: ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕೆಕೆಆರ್ ಸ್ಪಿನ್ನರ್ ಸುನಿಲ್ ನರೈನ್ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಸಾಹಿಲ್ ಅರೋರಾ ವಿಕೆಟ್ ಪಡೆಯುವ ಮೂಲಕ ನರೈನ್, ಐಪಿಎಲ್ ಇತಿಹಾಸದಲ್ಲಿ 200 ವಿಕೆಟ್ ಪಡೆದ ವಿಶ್ವದ ಮೊಟ್ಟಮೊದಲ 'ವಿದೇಶಿ ಬೌಲರ್' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 2012ರಿಂದ ಕೆಕೆಆರ್ ಪರವೇ ಆಡುತ್ತಿರುವ ನರೈನ್, ಐಪಿಎಲ್‌ನಲ್ಲಿ 'ಒಂದೇ ಫ್ರಾಂಚೈಸಿ ಪರ 200 ವಿಕೆಟ್ ಕಬಳಿಸಿದ ಮೊದಲ ಬೌಲರ್' ಎಂಬ ವಿಶಿಷ್ಟ ದಾಖಲೆಗೂ ಭಾಜನರಾಗಿದ್ದಾರೆ.

ಪಂಜಾಬ್ ಮಣಿಸಿ ಸೇಡು ತೀರಿಸಿಕೊಂಡ ಗುಜರಾತ್

ಸೂರ್ಯಾಂಶ್ ಹೋರಾಟ ವ್ಯರ್ಥ

ಅಹಮದಾಬಾದ್: ಐಪಿಎಲ್ 2026ರ ಡಬಲ್ ಹೆಡರ್‌ನ 2ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಗುಜರಾತ್ ಟೈಟನ್ಸ್ ರೋಚಕ 4 ವಿಕೆಟ್‌ಗಳ ಜಯ ಸಾಧಿಸಿದೆ. ಈ ಮೂಲಕ ಈ ಹಿಂದಿನ ಮುಖಾಮುಖಿಯ ಸೋಲಿಗೆ ಸೇಡು ತೀರಿಸಿಕೊಂಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್, ಆರಂಭಿಕ ಆಘಾತದ ನಡುವೆಯೂ ಸೂರ್ಯಾಂಶ್ ಶೆಡ್ಗೆ (57) ಹಾಗೂ ಸ್ಟೊಯಿನಿಸ್ (40) ಹೋರಾಟದಿಂದ 163 ರನ್ ಕಲೆಹಾಕಿತು. ಗುಜರಾತ್ ಪರ ಜೇಸನ್ ಹೋಲ್ಡರ್ 4, ಸಿರಾಜ್ ಮತ್ತು ರಬಾಡ ತಲಾ 2 ವಿಕೆಟ್ ಕಿತ್ತು ಮಿಂಚಿದರು.

164 ರನ್‌ಗಳ ಗುರಿ ಬೆನ್ನತ್ತಿದ ಗುಜರಾತ್‌ಗೆ ಸಾಯಿ ಸುದರ್ಶನ್ ಆಧಾರವಾದರು. ನಾಯಕ ಗಿಲ್ (11) ಬೇಗನೆ ಔಟಾದರೂ, ಜೋಸ್ ಬಟ್ಲರ್ (26), ನಿಶಾಂತ್ ಸಿಂಧು (15) ಹಾಗೂ ವಾಷಿಂಗ್ಟನ್ ಸುಂದರ್ (32) ಉಪಯುಕ್ತ ಕಾಣಿಕೆ ನೀಡಿದರು. ಅಂತಿಮ ಓವರ್‌ವರೆಗೂ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ, ಗುಜರಾತ್ 19.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 167 ರನ್ ಗಳಿಸಿ ವಿಜಯಿಯಾಯಿತು.
ಸಂಕ್ಷಿಪ್ತ ಸ್ಕೋರ್: ಪಂಜಾಬ್: 163/9 (20 ಓವರ್)
ಗುಜರಾತ್: 167/6 (19.5 ಓವರ್)

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಪಂಜಾಬ್	09	06	02	13
02	ಆರ್‌ಸಿಬಿ	09	06	03	12
03	ಹೈದ್ರಾಬಾದ್	10	06	04	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	09	04	05	08
07	ಡೆಲ್ಲಿ	09	04	05	08
08	ಕೆಕೆಆರ್	09	03	05	07
09	ಮುಂಬೈ	09	02	07	04
10	ಲಖನೌ	08	02	06	04

ಇಂದು ಲಕ್ನೋ–ಮುಂಬೈ ಮುಖಾಮುಖಿ

ಪ್ಲೇ-ಆಫ್ ಅರ್ಹತೆಗಾಗಿ 'ಮಾಡು ಇಲ್ಲವೇ ಮಡಿ' ಕದನ!

ಮುಂಬೈ: ಸತತ ಸೋಲುಗಳಿಂದ ಕಂಗೆಟ್ಟಿರುವ ಮುಂಬೈ ಇಂಡಿಯನ್ಸ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡಗಳು ಐಪಿಎಲ್–2026ರ 47ನೇ ಪಂದ್ಯದಲ್ಲಿ ಇಂದು ಮುಖಾಮುಖಿಯಾಗಲಿವೆ. ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಹೈವೋಲ್ಟೇಜ್ ಪಂದ್ಯವು ಉಭಯ ತಂಡಗಳ ಪಾಲಿಗೆ, ವಿಶೇಷವಾಗಿ ಮುಂಬೈಗೆ ಪ್ಲೇ–ಆಫ್ ದೃಷ್ಟಿಯಿಂದ ಅಕ್ಷರಶಃ 'ಮಾಡು ಇಲ್ಲವೇ ಮಡಿ' ಪಂದ್ಯವಾಗಿದೆ.
ಪಾಯಿಂಟ್ಸ್ ಟೇಬಲ್‌ನಲ್ಲಿ 9ನೇ ಸ್ಥಾನದಲ್ಲಿರುವ ಮುಂಬೈ ಹಾಗೂ 10ನೇ ಸ್ಥಾನದಲ್ಲಿರುವ ಎಲ್‌ಎಸ್‌ಜಿ ಮುಂದಿನ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕಾದ ತೀವ್ರ ಒತ್ತಡದಲ್ಲಿವೆ. ಮುಂಬೈ ತಂಡ ಸದ್ಯ ತನ್ನ 10ನೇ ಪಂದ್ಯವನ್ನಾಡುತ್ತಿದ್ದು, ಇಂದು ಸೋತರೆ ಟೂರ್ನಿಯಿಂದ ಅಧಿಕೃತವಾಗಿ ಹೊರಬೀಳುವ ಆತಂಕದಲ್ಲಿದೆ.

ಸ್ಟಾರ್ ಆಟಗಾರರ ದಂಡೇ ಇದ್ದರೂ ಮುಂಬೈ ಬ್ಯಾಟರ್‌ಗಳಾದ ಸೂರ್ಯಕುಮಾರ್, ತಿಲಕ್ ವರ್ಮಾ, ಮತ್ತು ನಾಯಕ ಹಾರ್ದಿಕ್ ಪಾಂಡ್ಯ ಅವರ ವೈಫಲ್ಯ ತಂಡವನ್ನು ಕಾಡುತ್ತಿದೆ. ಬೌಲಿಂಗ್‌ನಲ್ಲೂ ಬುಮ್ರಾ, ಟ್ರೆಂಟ್ ಬೌಲ್ಟ್ ಸ್ಥಿರ ಪ್ರದರ್ಶನ ನೀಡಬೇಕಿದೆ. ಇತ್ತ ಲಕ್ನೋ ಕೂಡ ರಿಷಭ್ ಪಂತ್, ಮಿಚೆಲ್ ಮಾರ್ಷ್ ಹಾಗೂ ಮಾರ್ಕ್ರಾಮ್ ಅವರ ಬ್ಯಾಟಿಂಗ್ ಅನ್ನೇ ನೆಚ್ಚಿಕೊಂಡಿದೆ. ಐಪಿಎಲ್ ಇತಿಹಾಸದ ಮುಖಾಮುಖಿಯಲ್ಲಿ ಲಕ್ನೋ 4 ಬಾರಿ ಹಾಗೂ ಮುಂಬೈ ಕೇವಲ 2 ಬಾರಿ ಗೆದ್ದಿದೆ. ವಾಂಖೆಡೆ ಪಿಚ್ ಸಂಪೂರ್ಣ ಬ್ಯಾಟಿಂಗ್ ಸ್ನೇಹಿಯಾಗಿರುವುದರಿಂದ ಇಂದು ಬೃಹತ್ ಮೊತ್ತದ ರನ್–ಬೇಟೆ ನಿರೀಕ್ಷಿಸಬಹುದಾಗಿದೆ

ಶ್ರುತಿ ಅಹ್ಲಾವತ್‌ಗೆ ಸಿಂಗಲ್ಸ್ ಟೆನಿಸ್ ಐಟಿಎಫ್ ಪ್ರಶಸ್ತಿ

ನವದೆಹಲಿ: ಭಾರತದ ಶ್ರುತಿ ಅಹ್ಲಾವತ್ ಇಲ್ಲಿ ನಡೆದ ಐಟಿಎಫ್ ಡಬ್ಲ್ಯು15 ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಬಾಚಿಕೊಂಡಿದ್ದಾರೆ.
ಭಾನುವಾರ ಇಲ್ಲಿಯ ಡಿಎಲ್‌ಟಿಎ ಸ್ಟೇಡಿಯಂನಲ್ಲಿ ನಡೆದ ಅಂತಿಮ ಪಂದ್ಯದಲ್ಲಿ 19 ವರ್ಷ ವಯಸ್ಸಿನ ಶ್ರುತಿ, ಪೋಲೆಂಡಿನ ಜುಜಾನ್ನಾ ಕೊಲೊನಸ್ ಅವರನ್ನು 7–5, 6–2, 7–6 ಅಂತರದಿಂದ ಪರಾಭವಗೊಳಿಸಿ ಡಬ್ಲ್ಯುಟಿಎ ರ್‍ಯಾಂಕಿಂಗ್ ಪ್ರಕಾರ 900 ಕ್ರಮಾಂಕದ ಒಳಗಡೆ ಸ್ಥಾನ ಪಡೆದುಕೊಂಡರು.

ಎಪ್ರಿಲ್ 27 ರಿಂದ ಮೇ 3ರ ವರೆಗೆ ನಡೆದ 15,000 ಅಮೇರಿಕನ್ ಡಾಲರ್ ಬಹುಮಾನದ ಈ ಟೂರ್ನಿಯಲ್ಲಿ ಭಾರತದ 62 ಆಟಗಾರ್ತಿಯರೂ ಸೇರಿದಂತೆ ದೇಶ–ವಿದೇಶಗಳ ಒಟ್ಟು 74 ಆಟಗಾರ್ತಿಯರು ಪಾಲ್ಗೊಂಡಿದ್ದರು.

ಒಡಿಶಾ ವಿರುದ್ಧ 'ಬ್ಲೂಸ್' ಕದನ

ಚೊಚ್ಚಲ ಗೆಲುವಿನ ನಿರೀಕ್ಷೆಯಲ್ಲಿ ಮುಖ್ಯ ಕೋಚ್ ಮುನೋಜ್!

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ ಇಂದು ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ (ಬ್ಲೂಸ್) ಮತ್ತು ಒಡಿಶಾ ಎಫ್‌ಸಿ (ಜಗರ್ನಾಟ್ಸ್) ತಂಡಗಳು ಮುಖಾಮುಖಿಯಾಗಲಿವೆ. ಗೋವಾದ ಪಂಡಿತ್ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಈ ಹೈವೋಲ್ಟೇಜ್ ಕದನ ಜರುಗಲಿದೆ.
ತನ್ನ ಕಳೆದ ಪಂದ್ಯದಲ್ಲಿ ಬಲಿಷ್ಠ ಮುಂಬೈ ಸಿಟಿ ಎಫ್‌ಸಿ ವಿರುದ್ಧ ಡ್ರಾ (0–0) ಸಾಧಿಸಿದ್ದ ಬೆಂಗಳೂರು ಎಫ್‌ಸಿ ಆತ್ಮವಿಶ್ವಾಸದಲ್ಲಿದ್ದರೆ, ಅತ್ತ ಒಡಿಶಾ ತಂಡ ಸತತ ಸೋಲುಗಳಿಂದ ಕಂಗೆಟ್ಟಿದೆ. ಕಳೆದ 5 ಪಂದ್ಯಗಳಲ್ಲಿ 4 ಸೋಲು ಕಂಡಿರುವ ಒಡಿಶಾ, ಸದ್ಯ 6 ಅಂಕಗಳೊಂದಿಗೆ 13ನೇ ಸ್ಥಾನದಲ್ಲಿದೆ. ಇತ್ತ ಬೆಂಗಳೂರು 16 ಅಂಕಗಳೊಂದಿಗೆ 6ನೇ ಸ್ಥಾನ ಕಾಯ್ದುಕೊಂಡಿದೆ. ಐಎಸ್‌ಎಲ್ ಇತಿಹಾಸದಲ್ಲಿ ಉಭಯ ತಂಡಗಳು 16 ಬಾರಿ ಮುಖಾಮುಖಿಯಾಗಿದ್ದು, ತಲಾ 7 ಪಂದ್ಯಗಳನ್ನು ಗೆದ್ದು ಸಮಬಲ ಸಾಧಿಸಿವೆ (2 ಡ್ರಾ).
ಬೆಂಗಳೂರು ಎಫ್‌ಸಿಯ ನೂತನ ಕೋಚ್ ಪೆಪ್ ಮುನೋಜ್ ತಮ್ಮ ಮೊದಲ ಗೆಲುವಿನ ಹುಡುಕಾಟದಲ್ಲಿದ್ದಾರೆ. "ಒಡಿಶಾ ವಿರುದ್ಧದ ಪಂದ್ಯ ಸುಲಭವಲ್ಲ. ನಾವು ಪಂದ್ಯದ ಮೇಲೆ ಸಂಪೂರ್ಣ ಗಮನ ಕೇಂದ್ರೀಕರಿಸಿದ್ದು, ಗೆಲುವಿಗಾಗಿ ಹೋರಾಡಲಿದ್ದೇವೆ" ಎಂದು ಮುನೋಜ್ ತಿಳಿಸಿದ್ದಾರೆ. ಆದರೆ, ಸ್ನಾಯು ಸೆಳೆತದಿಂದಾಗಿ ಪ್ರಮುಖ ಆಟಗಾರರಾದ ನಿಖಿಲ್ ಪೂಜಾರಿ ಮತ್ತು ಆಶಿಕ್ ಕುರುನಿಯನ್ ಈ ಪಂದ್ಯದಿಂದ ಹೊರಗುಳಿದಿರುವುದು ತಂಡಕ್ಕೆ ಕೊಂಚ ಹಿನ್ನಡೆಯುಂಟುಮಾಡಿದೆ.

ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿ

ಮಾರ್ತಾ ಕೊಸ್ತ್ಯುಕ್‌ಗೆ ಮೊದಲ ಕಿರೀಟ

ಮ್ಯಾಡ್ರಿಡ್: ವಿಶ್ವದ 23ನೇ ಶ್ರೇಯಾಂಕಿತೆ ಉಕ್ರೇನಿನ ಮಾರ್ತಾ ಕೊಸ್ತ್ಯುಕ್ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್ ಕಿರೀಟ ಧರಿಸುವ ಮೂಲಕ ತಮ್ಮ ಟೆನಿಸ್ ಜೀವನದ ಮೊಟ್ಟ ಮೊದಲ ಡಬ್ಲ್ಯುಟಿಎ–1000 ಮಟ್ಟದ ಪ್ರಶಸ್ತಿ ಗೆದುಕೊಂಡ ಸಾಧನೆಗೈದರು.
ಶನಿವಾರ ನಡೆದ ಫೈನಲ್ಸ್‌ನಲ್ಲಿ 23 ವರ್ಷ ವಯಸ್ಸಿನ ಕೊಸ್ತ್ಯುಕ್ 9ನೇ ಸೀಡ್ ಹೊಂದಿದ್ದ ರಷ್ಯದ ಮಿರಾ ಅಂಡ್ರೀವಾರನ್ನು ಎರಡು ನೇರ ಸೆಟ್‌ಗಳಲ್ಲಿ 6–3, 7–5 ರಿಂದ ಪರಾಭವಗೊಳಿಸಿದರು.
ಈ ಗೆಲುವಿನೊಂದಿಗೆ ಕೊಸ್ತ್ಯುಕ್ ಮ್ಯಾಡ್ರಿಡ್ ಓಪನ್ ಪ್ರಶಸ್ತಿ ಜಯಿಸಿದ 'ಟಾಪ್ 20' ಹೊರಗಿನ ಕೇವಲ ಎರಡನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.



ಗೆದ್ದವರು ಸೋತು, ಸೋತವರು ಗೆದ್ದರು?

ಮೊದಲ ಪುಟದಿಂದ..
ಅಂಚೆ ಮತಗಳ ಮರು ಎಣಿಕೆಯಲ್ಲಿ ಶನಿವಾರ ಸಂಜೆ ಟಿ.ಡಿ.ರಾಜೇಗೌಡ ವಿಜಯ ಸಾಧಿಸಿದರು ಎಂದು ಹೇಳಲಾಗಿತ್ತು. ಆದರೆ ಮತ ಏಣಿಕೆಯಲ್ಲಿ ಭಾರಿ ಗೊಂದಲ ಉಂಟಾಗಿತ್ತು. ಶನಿವಾರ ಬೆಳಗ್ಗೆ ಏಳು ಗಂಟೆಗೆ ಆರಂಭವಾದ ಮತ ಎಣಿಕೆ ಮಧ್ಯರಾತ್ರಿ 1.30ರ ತನಕ ನಡೆದು ಭಾನುವಾರ ಬೆಳಗ್ಗೆ 4ಕ್ಕೆ ಚುನಾವಣಾಧಿಕಾರಿ ಹೇಳಿಕೆ ನೀಡಿದರು.
ಇಂದು ಬೆಳಗ್ಗೆ ಎಲ್ಲ ಗೊಂದಲಗಳಿಗೆ ಮಹತ್ವದ ತಿರುವು ಸಿಕ್ಕಿದೆ. 2023ರ ಮೇ 13ರಂದು ನಡೆದಿದ್ದ ಮತ ಎಣಿಕೆ ವೇಳೆ ಸಿಂಧು ಎಂದು ಪರಿಗಣಿಸಲಾಗಿದ್ದ ಮತಗಳು, ಈಗಿನ ಮರು ಎಣಿಕೆ ವೇಳೆ ತಿರಸ್ಕೃತಗೊಂಡಿವೆ.
ರಾತ್ರಿಯಿಡೀ ಹೈಡ್ರಾಮಾ: ಮರು ಎಣಿಕೆಯಲ್ಲಿ ಇಷ್ಟೊಂದು ದೊಡ್ಡಮಟ್ಟದ ವ್ಯತ್ಯಾಸ ಕಂಡುಬಂದ ಬೆನ್ನಲ್ಲೇ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ಶಾಸಕ ಟಿ.ಡಿ.ರಾಜೇಗೌಡ ಅವರು ಇಂದು ನಸುಕಿನ ಜಾವ 4 ಗಂಟೆಯವರೆಗೂ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಬೀಡುಬಿಟ್ಟಿದ್ದರು. ಕಾಂಗ್ರೆಸ್ ಮುಖಂಡ ಸುಧೀರ್‌ಕುಮಾರ್ ಮುರೋಳಿ ಅವರು ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಮತ್ತು ಅಂದಿನ ಚುನಾವಣಾಧಿಕಾರಿ ವೇದಮೂರ್ತಿ ವಿರುದ್ಧ ಮತಗಳ ತಿದ್ದುಪಡಿ ಮಾಡಲಾಗಿದೆ ಎಂದು ದೂರು ನೀಡಿದ್ದಾರೆ. ರಾಜೇಗೌಡರ ಮತಪತ್ರಗಳಲ್ಲಿ 'ಡಬ್ಬಲ್ ಟಿಕ್' ಮಾಡಿ ಉದ್ದೇಶಪೂರ್ವಕವಾಗಿ ಅವುಗಳನ್ನು ತಿರ ಸ್ಕೃತಗೊಳಿಸಲಾಗಿದೆ ಎಂದು ಕಾಂಗ್ರೆಸ್ ಆರೋಪ ಮಾಡುತ್ತಿದೆ. ಹೈಕೋರ್ಟ್ ಆದೇಶದಂತೆ ಮರು ಎಣಿಕೆ ಮಾಡಿದ್ದೇವೆ. ಹ್ಯಾಂಡ್ ಬುಕ್ ನಿಯಮಗಳ ಪ್ರಕಾರ ಸಿಂಧು ಮತ್ತು ಅಸಿಂಧು ಮತಗಳನ್ನು ನಿರ್ಧರಿಸಲಾಗಿದೆ. ವರದಿಯನ್ನು ಈಗ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.
ಚುನಾವಣಾಧಿಕಾರಿ ಹೇಳಿಕೆ: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಪರಿಶೀಲನೆ ಮತ್ತು ಮರು ಎಣಿಕೆ ಪ್ರಕ್ರಿಯೆಯು ಹೈಕೋರ್ಟ್‌ನ ಆದೇಶದಂತೆ ಪೂರ್ಣಗೊಂಡಿದೆ. ಏಪ್ರಿಲ್ 6ರಂದು ಹೈಕೋರ್ಟ್ ಹೊರಡಿಸಿದ ತೀರ್ಪಿನ ಪ್ರಕಾರ ಸಂಪೂರ್ಣ ಪ್ರಕ್ರಿಯೆ ಇಂದು ಮುಗಿಸಿದೆವು ಎಂದು ಚುನಾವಣಾಧಿಕಾರಿ ಗೌರವ್‌ಕುಮಾರ್‌ಶೆಟ್ಟಿ ತಿಳಿಸಿದ್ದಾರೆ.
ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಸುಮಾರು 279 ಅಂಚೆ ಮತಪತ್ರಗಳನ್ನು ಮರು ಪರಿಶೀಲನೆ ಮತ್ತು ಮರು ಎಣಿಕೆ ಮಾಡಲಾಯಿತು. ಇವಿಎಂ ಮತಗಳ ಬಗ್ಗೆ ಯಾವುದೇ ಆದೇಶವಿರಲಿಲ್ಲ. ಕಾಂಗ್ರೆಸ್ ಮುಖಂಡ ಸುಧೀರ್ ಕುಮಾರ್ ಮುರೋಳಿ ಅಂದಿನ ಚುನಾವಣಾಧಿಕಾರಿ ವೇದಮೂರ್ತಿ ವಿರುದ್ಧ ಅಂಚೆ ಮತಗಳನ್ನು ಅಕ್ರಮ ಮಾಡುವಿಕೆ ಆರೋಪದ ಮೇಲೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಕೈಗೊಳ್ಳಲಾಯಿತು ಎಂದರು.
ಮರು ಎಣಿಕೆಯ ನಂತರ ಅಭ್ಯರ್ಥಿಗಳ ಮತಗಳಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬಂದಿವೆ. 2023ರ ಮತ ಎಣಿಕೆಯಲ್ಲಿ ಮೇಲ್ಮನವಿದಾರ ಡಿ.ಎನ್. ಜೀವರಾಜ್‌ಗೆ 692 ಮತಗಳು ಬಂದಿದ್ದರೆ, ಮರು ಎಣಿಕೆಯ ನಂತರ ಅದು 690ಕ್ಕೆ ಇಳಿದಿದೆ.
ಟಿ.ಡಿ.ರಾಜೇಗೌಡ ಅವರಿಗೆ 569 ಮತಗಳು ಬಂದಿದ್ದವು. ಆದರೆ ಮರು ಎಣಿಕೆಯ ನಂತರ ಅವರ ಮತಗಳ ಸಂಖ್ಯೆ 314ಕ್ಕೆ ಇಳಿದು 255 ಮತಗಳ ವ್ಯತ್ಯಾಸವಾಗಿದೆ. ಈ ಕುರಿತು ವರದಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ. ಸ್ಟ್ರಾಂಗ್ ರೂಂಅನ್ನು ಸೀಲ್ ಮಾಡಲಾಗಿದೆ ಎಂದು ತಿಳಿಸಿದರು.

ಅಸಿಂಧುವಾದ 316 ಮತಗಳು

ಕಳೆದ 2023ರ ವಿಧಾನಸಭಾ ಚುನಾವಣೆಯ ಮತ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ 692 ಮತ, ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ 569 ಮತ ಬಿದ್ದಿದ್ದವು. 2026ರ ಮರು ಎಣಿಕೆಯಲ್ಲಿ ಜೀವರಾಜ್ 690 ಮತ (2 ಮತ ಕಡಿಮೆ) ರಾಜೇಗೌಡ 314 ಮತ (251 ಮತ ಕಡಿಮೆ) ಪಡೆದಿದ್ದಾರೆ. ರಾಜೇಗೌಡರಿಗೆ ಬಿದ್ದ 318 ಮತಗಳು ಮರು ಎಣಿಕೆಯಲ್ಲಿ ಅಸಿಂಧು ಎಂದು ಘೋಷಿಸಲಾಗಿದೆ. ಎಲ್ಲಾ ವರದಿಗಳನ್ನು ಚುನಾವಣಾ ಆಯೋಗ ಮತ್ತು ಹೈಕೋರ್ಟ್‌ಗೆ ಸಲ್ಲಿಕೆ ಮಾಡಲಾಗಿದೆ. ಮತ ಟ್ಯಾಂಪರಿಂಗ್ ಬಗ್ಗೆ ಪ್ರತಿಕ್ರಿಯೆ ನೀಡಲು ನನಗೆ ಅಧಿಕಾರ ಇಲ್ಲ.

▪ ಗೌರವ್‌ಕುಮಾರ್‌ಶೆಟ್ಟಿ । ಚುನಾವಣಾಧಿಕಾರಿ

ಫಲಿತಾಂಶ ತಡೆಯಲು ಕೈ ಯತ್ನ

ಫಲಿತಾಂಶ ಘೋಷಣೆ ಮಾಡದಂತೆ ತಡೆಯಲು ಹಾಗೂ ರಾಜೇಗೌಡರು ಹೈಕೋರ್ಟ್ ಮೆಟ್ಟಿಲೇರಿ ಕಾಲಾವಕಾಶ ಪಡೆಯಲು ಕುತಂತ್ರ ನಡೆಸುತ್ತಿದ್ದಾರೆ. ಜೀವರಾಜ್‌ಗೆ ಅನ್ಯಾಯವಾಗಿದೆ.

▪ ಬಿ.ವೈ.ವಿಜಯೇಂದ್ರ । ಬಿಜೆಪಿ ರಾಜ್ಯಾಧ್ಯಕ್ಷ

ಮೊಬೈಲ್ ಬಳಕೆ ತಡೆಗೆ ಬೌನ್ಸರ್

ಮೊದಲ ಪುಟದಿಂದ...
ಹೀಗಾಗಿ ಅಹೋರಾತ್ರಿಯಾಗಿ ಆಕೆಯನ್ನು ಕಾಯಲು ಹೆತ್ತವರು ತಿಂಗಳಿಗೆ 65 ಸಾವಿರ ರೂ. ನೀಡಿ ನಾಲ್ವರು ಬೌನ್ಸರ್‌ಗಳನ್ನು ನಿಯೋಜಿಸಿದರು. ಈ ಬಾಲಕಿಯನ್ನು ನಿಯಂತ್ರಿಸಲು ಔಷಧಿಗಳ ಜೊತೆಗೆ ಬೌನ್ಸರ್‌ಗಳ ನೇಮಕ ಅತ್ಯವಶ್ಯಕವಾಯಿತು ಎಂದು ವೈದ್ಯ ಡಾ. ಮೃಗೇಶ್ ವೈಷ್ಣವ್ ಹೇಳುತ್ತಾರೆ.
ಸೂರತ್‌ನಲ್ಲಿ 17 ವರ್ಷದ ಯುವಕ ತನ್ನ ತಂದೆಯ ಮೇಲಿನ ಕೋಪ ತೀರಿಸಿಕೊಳ್ಳಲು ಅವರು ಸಾಕಿದ ನಾಯಿಗೆ ಹೊಡೆಯುತ್ತಿದ್ದ. ಹೀಗಾಗಿ ನಾಯಿಯ ರಕ್ಷಣೆಗೆ ಯುವಕನ ತಂದೆ ಬೌನ್ಸರ್ ನೇಮಿಸಿದ್ದರು. ಎರಡು ಪಾಳಯಗಳಲ್ಲಿ ನಾಯಿ ರಕ್ಷಿಸಲು ಎಂಟು ಬೌನ್ಸರ್‌ಗಳನ್ನು ನಿಯೋಜಿಸಲಾಗಿತ್ತು. ಈ ಯುವಕನಿಗೆ ಆನ್‌ಲೈನ್ ಗೇಮಿಂಗ್ ಗೀಳು ಇತ್ತು. ತಂದೆಯೇನಾದರೂ ಬೆದರಿಸಿದರೆ ನಾಯಿಗೆ ಹೊಡೆಯುತ್ತಿದ್ದನೆಂದು ಹೇಳಲಾಗಿದೆ.

ಚಿತ್ರದುರ್ಗದಲ್ಲಿ ಭರ್ಜರಿ ಸಿದ್ಧತೆ

ಮೊದಲ ಪುಟದಿಂದ...
ಈ ಮೂಲಕ ಜನಸಾಗರವನ್ನೇ ಬರಮಾಡಿಕೊಳ್ಳಲು ಸಿದ್ಧತೆ ನಡೆಸಲಾಗುತ್ತಿದೆ. ಏ.26ರಂದು ಭೂಮಿ ಪೂಜೆ ಕಾರ್ಯಕ್ರಮವೇ ಮುಖಂಡರ ಸಮಾವೇಶದ ರೀತಿ ನಡೆದಿದ್ದು, ಮಠಾಧೀಶರು, ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿ ರಾಜ್ಯ ವಿವಿಧ ಭಾಗಗಳಿಂದ ಬಿಜೆಪಿಯ ಹಾಲಿ–ಮಾಜಿ ಜನಪ್ರತಿನಿಧಿಗಳು, ಪ್ರಮುಖ ಮುಖಂಡರ ಉಪಸ್ಥಿತಿ ಇತ್ತು.
ಪಕ್ಷದ ಪ್ರಮುಖರು ಪ್ರತಿನಿತ್ಯ ಸ್ಥಳಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸುತ್ತಿದ್ದು, ಸ್ವತಃ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಶನಿವಾರ ಖುದ್ದು ಭೇಟಿ ನೀಡಿ ಕಾರ್ಯ ಕ್ರಮ ಯಶಸ್ವಿಗೆ ಕೆಲ ಸೂಚನೆ ನೀಡಿದ್ದು ಗಮನರ್ಹ. ಮರುದಿನ ಭಾನುವಾರವೇ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಂಸದ ಬಿ.ವೈ.ರಾಘವೇಂದ್ರ, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಎಂ.ಪಿ.ರೇಣುಕಾಚಾರ್ಯ, ಶಾಸಕರಾದ ಹರೀಶ್ ಪೂಂಜಾ, ಅರಗ ಜ್ಞಾನೇಂದ್ರ, ಸುರೇಶ್‌ಗೌಡ ಸೇರಿ ನಾಯಕರ ದಂಡೇ ದುರ್ಗಕ್ಕೆ ದೌಡಾಯಿಸಿತ್ತು. ಬಳಿಕ ಎರಡ್ಮೂರು ಪೂರ್ವಭಾವಿ ಸಭೆ ನಡೆಸಲಾಯಿತು. ಸಂಜೆ ವಿವಿಧ ಮಠ ಗಳಿಗೆ ಭೇಟಿ ನೀಡಿ ಮಠಾಧೀಶರನ್ನು ಆಹ್ವಾನಿಸಲಾಯಿತು.
ವಿಧಾನಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇರುವಾಗ ದಾವಣಗೆರೆಯಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಸಿದ್ದರಾಮೋತ್ಸವ ರೀತಿಯೇ ಯಶಸ್ವಿ ಗೊಳಿಸಬೇಕೆಂದು ಪಣ ತೊಟ್ಟಿರುವ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಗಲು–ರಾತ್ರಿ ಶ್ರಮಿಸುತ್ತಿದ್ದಾರೆ. ಈಗಾಗಲೇ ಅನೇಕ ಪ್ರಮುಖರು ಚಿತ್ರದುರ್ಗ ದಲ್ಲಿಯೇ ಬೀಡುಬಿಟ್ಟಿದ್ದಾರೆ. ಚಿತ್ರದುರ್ಗ–ದಾವಣಗೆರೆ ಜಿಲ್ಲಾ ಕೇಂದ್ರದಲ್ಲಿನ ಲಾಡ್ಜ್‌ಗಳು, ಪ್ರವಾಸಿ ಮಂದಿರ ಸೇರಿ ವಿವಿಧ ಕೊಠಡಿಗಳನ್ನು ಕಾರ್ಯಕ್ರಮಕ್ಕಾಗಿಯೇ ಮುಂಗಡ ಕಾಯ್ದಿರಿ ಸಿದ್ದು, ಪ್ರಮುಖರು ಮೇ 8ರಂದೇ ಆಗಮಿಸಿ ತಂಗಲು ವ್ಯವಸ್ಥೆ ಮಾಡಲಾಗಿದೆ.

ಆಹ್ವಾನ ನೀಡಿದ್ದು ನಿಜ: ರಾಯರೆಡ್ಡಿ

ಮೊದಲ ಪುಟದಿಂದ..
ಖರ್ಗೆ ಯಾವತ್ತೋ ಸಿಎಂ ಆಗ್ಬೇಕಿತ್ತು: ರಾಜಕೀಯ ವಿದ್ಯಮಾನಗಳ ಕುರಿತು ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ವರಿಷ್ಠರು ಸಿಎಂ ಬದಲಾವಣೆ ಮಾಡುವ ಚಿಂತನೆಯಲ್ಲಿ ಇಲ್ಲ. ಹಾಗೇನಾದರೂ ಆಗಬೇಕಿದ್ದಲ್ಲಿ ಕಡ್ಡಾಯವಾಗಿ ಶಾಸಕರ ಅಭಿಪ್ರಾಯ ಕೇಳಲೇಬೇಕು. ಜೊತೆಗೆ ಯಾವತ್ತೋ ರಾಜ್ಯದ ಮುಖ್ಯಮಂತ್ರಿ ಆಗಬೇಕಾಗಿದ್ದ ಹಿರಿಯ ನಾಯಕರು ಹಾಗೂ ಎಐಸಿಸಿ ಅಧ್ಯಕ್ಷರೂ ಆಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಮುಖ್ಯಮಂತ್ರಿ ಆಗುವುದು ಅತ್ಯಂತ ಸೂಕ್ತವಾಗಲಿದೆ. ಕಳೆದ ವಾರ ದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿಯಾಗಿ ಕರ್ನಾಟಕದ ರಾಜಕೀಯ ಪರಿಸ್ಥಿತಿ ಕುರಿತು ಚರ್ಚಿಸಿದ್ದು, ರಾಜ್ಯ ರಾಜಕಾರಣಕ್ಕೆ ಮರಳುವಂತೆ ಆಹ್ವಾನ ಕೊಟ್ಟಿದ್ದೇವೆ ಎಂದು ತಿಳಿಸಿದ್ದಾರೆ.
ಕ್ಯಾಬಿನೆಟ್‌ಗೆ ಹಿರಿಯ–ಹೊಸ ಮುಖಗಳು: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಾಯಕತ್ವದ ಕುರಿತು ಅನಗತ್ಯವಾಗಿ ಸೃಷ್ಟಿಯಾಗುತ್ತಿರುವ ಗೊಂದಲಗಳಿಗೆ ಅಂತ್ಯಹಾಡಬೇಕೆಂದು ಮನವಿ ಮಾಡಿದ್ದೇನೆ. ಸಂಪುಟ ಸಂಪುಟ ಪುನಾರಚನೆ ಮಾಡಿ ಈಗಿರುವ ಕ್ಯಾಬಿನೆಟ್‌ನಿಂದ 25ಕ್ಕೂ ಅಧಿಕ ಸಚಿವರನ್ನು ಕೈಬಿಟ್ಟು ಹಿರಿಯ ಮತ್ತು ಯುವಮುಖಗಳಿಗೆ ಅವಕಾಶ ನೀಡುವಂತೆ ಕೇಳಿದ್ದೇನೆ ಎಂದು ರಾಯರೆಡ್ಡಿ ಹೇಳಿದ್ದಾರೆ. ಈವರೆಗೂ ದಲಿತರು ಸಿಎಂ ಆಗಿಲ್ಲ ಮುಂದೆ ಆದರೆ ತಪ್ಪಲ್ಲ. ಖರ್ಗೆಯವರು ಪ್ರಧಾನಿ ಆಗಬಹುದಿತ್ತು. ಬಿಜೆಪಿಯವರು 400 ಬರುತ್ತವೆ ಎನ್ನುತ್ತಿದ್ದರು. ಆದರೆ, 240ಕ್ಕೆ ನಿಂತರು. ಸ್ವಲ್ಪ ವ್ಯಾತ್ಯಾಸವಾಗಿದ್ದರೂ, ಮೋದಿ ಪ್ರಧಾನಿ ಆಗುತ್ತಿರಲಿಲ್ಲ. ನನಗೂ ಪ್ರಧಾನಿ ಆಗಬೇಕು ಎಂಬ ಆಸೆ ಇದೆ ಎಂದೂ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ತಮ್ಮ ಆಪ್ತನ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಣಾಕ್ಷ ಸಂದೇಶ ರವಾನಿಸಿರುವುದು ರಾಜಕೀಯ ರಣತಂತ್ರದ ಭಾಗ ಎನ್ನಲಾಗುತ್ತಿದೆ.

ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನಿರಾಕರಣೆ

ಮೊದಲ ಪುಟದಿಂದ...
ರಾಜ್ಯದ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಮಂಗಳೂರು, ಕಲಬುರಗಿ, ಬಾಗಲಕೋಟೆ ಜಿಲ್ಲಾ ಕೇಂದ್ರಗಳಲ್ಲಿ ಮಧ್ಯಾಹ್ನ 2ರಿಂದ ಸಾಯಂಕಾಲ 5.15 ರ ವರೆಗೆ ಪರೀಕ್ಷೆ ನಡೆಯಿತು. ರಾಜ್ಯದಲ್ಲಿ ಎಂಬಿಬಿಎಸ್ ಸೀಟುಗಳ ಸಂಖ್ಯೆ ಸುಮಾರು 11,500 ಇದ್ದು ದೇಶದಲ್ಲೇ ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಯಲಹಂಕದ ಪ್ರಥಮ ದರ್ಜೆ ಕಾಲೇಜು ಹಾಗೂ ಚಾಲುಕ್ಯ ವೃತ್ತದಲ್ಲಿರುವ ಆರ್.ಸಿ. ಕಾಲೇಜಿನ ಪರೀಕ್ಷಾ ಕೇಂದ್ರಗಳಲ್ಲಿ ತಡವಾಗಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲಾಗಿದೆ. ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ಪರೀಕ್ಷೆ ಆರಂಭವಾಗಿತ್ತು, ಮಧ್ಯಾಹ್ನ 1.30ರವರೆಗೆ ಪರೀಕ್ಷಾ ಕೇಂದ್ರಗಳಿಗೆ ತೆರಳಲು ಅವಕಾಶ ನೀಡಲಾಗಿತ್ತು. ಈ ವೇಳೆ ಪರೀಕ್ಷೆ ಬರೆಯಲು ಅತ್ತಿಬೆಲೆಯಿಂದ ಚಾಲುಕ್ಯ ವೃತ್ತದ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ ವಿದ್ಯಾರ್ಥಿನಿಗೆ ಪರೀಕ್ಷಾ ಕೇಂದ್ರದ ಸಿಬ್ಬಂದಿ ಪ್ರವೇಶ ನಿರಾಕರಿಸಿದರು. ಟ್ರಾಫಿಕ್‌ನಿಂದ ತಡವಾಯಿತು ಎಂದು ಮನವಿ ಮಾಡಿದರೂ ಅವಕಾಶ ಸಿಗದ ಹಿನ್ನೆಲೆ ಕಣ್ಣೀರಿಡುತ್ತ ಪರೀಕ್ಷಾ ಕೇಂದ್ರದಿಂದ ತೆರಳಿದರು.

ಸುದ್ದಿ ಮಿಂಚು

ಕಮಲನಗರ ತಾಲೂಕಿನ ಸಂಗಮ ಗ್ರಾಮದ ಸಂಗಮೇಶ್ವರ ಮಂಗಲ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಅಮೃತ ಮಹೋತ್ಸವದ ಅಭಿನಂದನಾ ಸಮಾರಂಭ ಹಾಗೂ ಜನತೆಯ ಜಂಗಮ ಗ್ರಂಥ ಲೋಕಾರ್ಪಣೆ ಮತ್ತು ಧ್ವನಿ ಸುರಳಿ ಬಿಡುಗಡೆ ಸಮಾರಂಭ ನಡೆಯಿತು.

ಸಾಮಾನ್ಯ ಜನರು ಸಾಧನೆ ಮಾಡಬಹುದು

ಸಂ.ಕ.ಸಮಾಚಾರ ಕಮಲನಗರ: ಪ್ರತಿಯೊಬ್ಬ ಸಾಮನ್ಯ ಮನುಷ್ಯನುಬದುಕಿನಲ್ಲಿ ಸಾಧನೆ ಮಾಡಿದರೆಅದನ್ನು ಪರಮಾತ್ಮನನ್ನು ಒಲಿಸಿಕೊಂಡು ಸಮಾಜದಲ್ಲಿದೊಡ್ಡ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯಎಂದುಹುಮನಾಬಾದ್‌ನ ಹಿರಿಯಸಾಹಿತಿಡಾ। ಸೋಮನಾಥ ಯರನಾಳ ನುಡಿದರು.

ತಾಲ್ಲೂಕಿನಸಂಗಮ ಗ್ರಾಮದಲ್ಲಿ ನಾಡೋಜಡಾ। ಬಸವಲಿಂಗ ಪಟ್ಟದ್ದೇವರಅಮೃತಮಹೋತ್ಸವದಅಭಿನಂದನಾ ಸಮಾರಂಭ ಹಾಗೂ ಜನತೆಯಜಂಗಮಗ್ರಂಥ ಲೋಕಾರ್ಪಣೆ ಮತ್ತುಧ್ವನಿ ಸುರಳಿ ಬಿಡುಗಡೆ ಸಮಾರಂಭದಲ್ಲಿಧ್ವನಿ ಸುರಳಿ ಬಿಡುಗಡೆಗೊಳಿಸಿ ಮಾತನಾಡಿದರು.

ಜಗತ್ತಿನಲ್ಲಿ ಸ್ವಾಮೀಜಿಗಳು, ಸನ್ಯಾಸಿಗಳೇ ಸಾಧನೆ ಮಾಡಬೇಕೆಂದಿಲ್ಲ. ಸಾಮನ್ಯ ಮನುಷ್ಯನು ಸಾಧನೆ ಮಾಡಬಹುದಾಗಿದೆ. ಅದಕ್ಕೆ ತಾಳ್ಮೆಯನ್ನು ಹೊಂದಿದಂತಹವನು ಈ ಸಾಧನೆ ಮಾಡಬಹುದಾಗಿದೆ.ಜೀವನದಲ್ಲಿಎಲ್ಲರಿಗೂ ಕಷ್ಟಗಳು ಬರುವುದು ಸಹಜ.ಆಗ ಯಾವ ಮನುಷ್ಯ ತಾಳ್ಮೆಯಿಂದ ಇದ್ದು ಬದುಕನ್ನು ನಗು-ನಗುತ್ತಾ ನಿರಾಸೆಗೊಳ್ಳದೆ ಸಾಗಿಸುತ್ತಾನೆ. ಆತ ಸಾಧನೆ ಮಾಡಿದ್ದಂತೆಯೇಆತ ಬಸವಣ್ಣನಿಗೆ ಒಲಿಸಿಕೊಂಡತೆಯೇ ಎಂದರು.

ನಾಡೋಜಡಾ। ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಸಮಾಜದಲ್ಲಿಯಾವುದೇ ವ್ಯಕ್ತಿ ನಿಸ್ವಾರ್ಥದಿಂದಧಾರ್ಮಿಕ, ಸಾಮಾಜಿಕ ಕೆಲಸ ಮಾಡಲು ಮುಂದಾಗುತ್ತಾನೆಯೇಆತನಿಗೆ ಸಮಾಜಅನೇಕರು ಅವನಿಗೆ ಬೆನ್ನೆಲುಬಾಗಿ ನಿಂತುಎಲ್ಲರೀತಿಯ ಸಹಾಯ-ಸಹಕಾರಕೊಡಲು ಮುಂದಾಗುತ್ತಾರೆ.ಪ್ರತಿಯೊಬ್ಬರೂ ವ್ಯಕ್ತಿಯ್ವ ಬೆಳೆಸಿಕೊಂಡು ಮಾರ್ಗದರ್ಶನ ಮಾಡುವಂತಹ ಕೆಲಸ ಮಾಡಬೇಕು.ದೂರದೃಷ್ಟಿ ಬರಬೇಕಾದರೆ ಮನಸ್ಸಿನ ತಪ್ಪಸ್ಸು ಬೆಳೆಸಿಕೊಂಡಾಗ ಮಾತ್ರ ಸಾಧ್ಯಎಂದರು.

ಹಿರೇಮಠ ಸಂಸ್ಥಾನ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಸಮ್ಮುಖಖೇಡ್-ಸಂಗಮ ನೀಲಾಂಬಿಕಾಶ್ರಮಡಾ। ಮಹಾದೇವಮ್ಮತಾಯಿ, ಜೈಪ್ರಕಾಶ ಬಿರಾದಾರ, ಶಾಂತಿವರ್ಧಕ ಶಿಕ್ಷಣ ಸಂಸ್ಥೆ ನಿರ್ದೇಶಕಿಡಾಗೀತಾಈಶ್ವರಖಂಡ್ರೆ, ಹುಮನಾಬಾದ್‌ರಾಜರಾಜೇಶ್ವರಿಟ್ರಸ್ಟ್‌ಅಧ್ಯಕ್ಷ ಪ್ರೇಮಾರಾಜಶೇಖರ ಪಾಟೀಲ, ಯಾದಗಿರಿಡಿಹೆಚ್‌ಒಡಾ। ಮಹೇಶ ಬಿರಾದಾರಕಾಂಗ್ರೆಸ್ ಮುಖಂಡರಾದಡಾ। ಭೀಮಸೇನ ಸಿಂಧೆ, ಸಾಹಿತಿರಘು ಶಂಖ ಹಾಗೂ ಇನ್ನೀತ್ತರರರುಇದ್ದರು.

ಸಂಜೀವಕುಮಾರಜುಮ್ಮ ನಿರೂಪಿಸಿದರು.ನಾಗಯ್ಯ ಸ್ವಾಮಿ ಸ್ವಾಗತಿಸಿದರು.ಸುನೀತಾ ಶಂಭುಲಿಂಗ ಪಾಟೀಲ ವಂದಿಸಿದರು.

ಪ್ರಾಧ್ಯಾಪಕಿಗೆ ಕಿರುಕುಳ, ಜೀವ ಬೆದರಿಕೆ

ಕಲಬುರಗಿ: ನಗರದ ಖಾಸಗಿ ವಿಶ್ವವಿದ್ಯಾಲಯದ ಮಹಿಳಾ ಪ್ರಾಧ್ಯಾಪಕಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿ, ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಸಹೋದ್ಯೋಗಿಯೊಬ್ಬರ ವಿರುದ್ಧ ಎಂ.ಬಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ನಾಲ್ಕು ವರ್ಷಗಳಿಂದ ಪ್ರಾಧ್ಯಾಪಕ ಪರಿಚಯವಿದ್ದರಿಂದ ಲಾಭ ಪಡೆದು 2024 ಮತ್ತು 2025ರಲ್ಲಿ ಮನೆಯ ಅಡಚಣೆಯ ನೆಪವೊಡ್ಡಿ ಪ್ರಾಧ್ಯಾಪಕಿಯರಿಂದ ಒಟ್ಟು 1.20 ಲಕ್ಷ ರೂ. ಹಣ ಸಾಲವಾಗಿ ಪಡೆದಿದ್ದರು.ಆರೋಪಿತನು ಅತಿ ಸಲಿಗೆಯಿಂದ ವರ್ತಿಸುವುದು, ಕೆಲಸ ಮುಗಿಸಿ ಮನೆಗೆ ಹೋಗುವಾಗ ಹಿಂಬಾಲಿಸುವುದು ಮಾಡುತ್ತಿದ್ದ ಎನ್ನಲಾಗಿದೆ. ಅಷ್ಟೇ ಅಲ್ಲದೆ, ಅಶ್ಲೀಲ ಪದಗಳನ್ನು ಬಳಸಿ ಲೈಂಗಿಕ ಕಿರುಕುಳ ನೀಡುತ್ತಿದ್ದ ಹಾಗೂ ನಿನ್ನದು ಎಲ್ಲಾ ನನ್ನ ಹತ್ತಿರ ಇದೆ ಎಂದು ಬೆದರಿಕೆ ಹಾಕುತ್ತಿದ್ದ ಎಂದು ದೂರಿನಲ್ಲಿ ಪ್ರಾಧ್ಯಾಪಕಿ ಎಂ.ಬಿ.ನಗರ ಠಾಣೆಯಲ್ಲಿ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಏಪ್ರಿಲ್ 3ರಂದು ಬೆಳಿಗ್ಗೆ 6 ಗಂಟೆಗೆ ಆರೋಪಿತನು ಪ್ರಾಧ್ಯಾಪಕಿಯರ ಮನೆಗೆ ಬಂದು, ನನ್ನ ಮೇಲೆ ಏನಾದರೂ ಎಫ್‌ಐಆರ್ ಮಾಡಿದರೆ ನಿನ್ನನ್ನು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ತಿಳಿದು ಬಂದಿದೆ. ಇದರಿಂದ ಭಯಭೀತರಾದ ಪ್ರಾಧ್ಯಾಪಕಿ ರಕ್ಷಣೆ ಕೋರಿ ಪೊಲೀಸರ ಮೊರೆ ಹೋಗಿ ದೂರು ನೀಡಿದ್ದಾರೆ. ಈ ಕುರಿತು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವರ ವಿರುದ್ಧ ಪ್ರಕರಣ ದಾಖಲು

ಕಲಬುರಗಿ: ಅನೈತಿಕ ಸಂಬಂಧ ಹೊಂದಿದ್ದನೆಂಬ ಕಾರಣಕ್ಕೆ ವ್ಯಕ್ತಿಯೊಬ್ಬನ ಮೇಲೆ ಗುಂಪೊಂದು ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿರುವ ಘಟನೆ ಕಲಬುರಗಿ ತಾಲೂಕಿನ ಕುಮಸಿ ಗ್ರಾಮದ ವ್ಯಾಪ್ತಿಯಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಸಬ್-ಅರ್ಬನ್ ಠಾಣೆಯಲ್ಲಿ ನಾಲ್ವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕುಮಸಿ ಗ್ರಾಮದ ನಿವಾಸಿ ಬೀರಪ್ಪ ಹಿರೇಕುರುಬರು ಎಂಬುವವರೇ ಹಲ್ಲೆಗೊಳಗಾದವರು.

ಮೇ 1ರಂದು ರಾತ್ರಿ ಬೀರಪ್ಪ ಅವರು ಕುಡಿದ ಅಮಲಿನಲ್ಲಿ ಮನೆಯಿಂದ ಹೊರಗೆ ಹೋಗಿದ್ದರು. ಮರುದಿನ ಬೆಳಿಗ್ಗೆ ಸುಮಾರು 10 ಗಂಟೆಯ ಹೊತ್ತಿಗೆ ಬೀರಪ್ಪ ಅವರು ಶಿವಗೌಡರ ಹೊಲದ ಬಳಿ ತೀವ್ರ ರಕ್ತದೊತ್ತಡದೊಂದಿಗೆ ಬಿದ್ದಿರುವುದು ಪತ್ತೆಯಾಗಿದೆ. ಗಾಯಾಳುವನ್ನು ತಕ್ಷಣವೇ 108 ಅಂಬುಲೆನ್ಸ್ ಮೂಲಕ ಕಲಬುರಗಿಯ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸ್ವಲ್ಪ ಚೇತರಿಸಿಕೊಂಡ ಬೀರಪ್ಪ ಅವರು ನೀಡಿದ ಮಾಹಿತಿ ಪ್ರಕಾರ, ಅವರು ಶರಣಮ್ಮ ಕಮ್ಮನ್ ಎಂಬುವವರ ಮನೆಗೆ ಹೋಗಿದ್ದಾಗ ಅಲ್ಲಿ ಹೊಂಚು ಹಾಕಿದ್ದ ಶ್ರೀಕಾಂತ, ಭರತ್, ಉಲ್ಲಾಸ್ ಮತ್ತು ಪಪ್ಪು ಎಂಬುವವರು ಸೇರಿ ಮನಬಂದಂತೆ ಹಲ್ಲೆ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.ಮಹಿಳೆಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದನೆಂಬ ಕಾರಣಕ್ಕೆ ಆಕೆಯ ಸಮಾಜದ ವ್ಯಕ್ತಿಗಳು ಈ ಕೃತ್ಯ ಎಸಗಿದ್ದಾರೆ ಎಂದು ಗಾಯಾಳುವಿನ ಪತ್ನಿ ಶಾಂತಾಬಾಯಿ ಅವರು ದೂರಿನ ಅನ್ವಯ ಕುರಿತು ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಸುರೇಶ ಹನುಮಸಾಗರ

ಕಲಬುರಗಿ: ನಗರದ ಎನ್‌ಜಿಓ ಕಾಲೋನಿ ನಿವಾಸಿ ಸುರೇಶ ಹನುಮಸಾಗರ (79) ನಿಧನರಾಗಿದ್ದಾರೆ. ಮೃತರು ಪತ್ನಿ, 3 ಪುತ್ರಿ. ಓರ್ವ ಪುತ್ರನನ್ನು ಅಗಲಿದ್ದು, ಅಂತ್ಯಕ್ರಿಯೆ ನೇರವೇರಿಸಲಾಗಿದೆ.

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ-ಬೆಂಗಳೂರು-ಕಲಬುರಗಿ

ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ

: ನೂತನ ವಿಳಾಸ :

ನಂ. 1-94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ - 585 102

ಮೊ: 9449985695-9481000249

ಸಂಸ್ಕಾರ, ಮೌಲ್ಯಗಳು ಶಿಕ್ಷಣದಷ್ಟೇ ಪ್ರಮುಖ

ಸುಮೇಧಾನಂದ ಶ್ರೀ ಅಭಿಮತ । ರಾಮಕೃಷ್ಣ ಆಶ್ರಮದಲ್ಲಿ ವಸಂತ ವಿಹಾರ ಶಿಬಿರಕ್ಕೆ ಚಾಲನೆ

ಸಂ.ಕ.ಸಮಾಚಾರ ಬೀದರ್: ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಸಂಸ್ಕಾರ, ಮೌಲ್ಯ, ನೈತಿಕ ಪಾಠ ಸಿಗುವುದು ತೀರ ಕಮ್ಮಿಯಾಗಿದೆ. ದೇಶದ ಭವಿಷ್ಯವಾದ ಮಕ್ಕಳು ಮುಂದೆ ಅಡ್ಡ ಹಾದಿ ಹಿಡಿಯುವುದಕ್ಕೆ ಇದರ ಕೊರತೆಯೇ ಕಾರಣವಾಗುತ್ತಿದೆ. ಮಕ್ಕಳ ಭವಿಷ್ಯ ದೃಷ್ಟಿಯಿಂದ ಪಾಲಕರು ಶಿಕ್ಷಣದಷ್ಟೇ ಮಹತ್ವ ಸಂಸ್ಕಾರ, ಮೌಲ್ಯಗಳಿಗೂ ನೀಡುವುದು ಅನಿವಾರ್ಯವಾಗಿದೆ ಎಂದು ವಿಜಯನಗರ (ಹೊಸಪೇಟೆ) ರಾಮಕೃಷ್ಣ ಗೀತಾಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಸುಮೇಧಾನಂದ ಮಹಾರಾಜ ಹೇಳಿದರು.

ಇಲ್ಲಿನ ಶಿವನಗರದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಹಮ್ಮಿಕೊಂಡ 8 ದಿನದ ವಸಂತ ವಿಹಾರ ವಸತಿಯುತ ಶಿಬಿರಕ್ಕೆ ಭಾನುವಾರ ಸಂಜೆ ಚಾಲನೆ ನೀಡಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಕೇವಲ ಪಾಠಪುಸ್ತಕಗಳ ಜ್ಞಾನಕ್ಕೆ ಮಾತ್ರ ಸೀಮಿತವಾಗಬಾರದು. ಶಿಕ್ಷಣ ವ್ಯಕ್ತಿಗೆ ಉದ್ಯೋಗ ಕೊಡಬಹುದು, ಆದರೆ ಸಂಸ್ಕಾರವು ಅವನಿಗೆ ವ್ಯಕ್ತಿತ್ವ ಕೊಡುತ್ತದೆ. ಮೌಲ್ಯಗಳು, ನೈತಿಕತೆಗಳೇ ವ್ಯಕ್ತಿಯ ಜೀವನದ ಸಾರ್ಥಕತೆ ನಿರ್ಧರಿಸುತ್ತವೆ ಎಂಬುದು ಯಾರೂ ಮರೆಯಕೂಡದು ಎಂದು ಸಲಹೆ ನೀಡಿದರು.

ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಸತ್ಸಂಸ್ಕಾರ ಬೆಳೆಸುವುದು ಅತ್ಯಂತ ಅಗತ್ಯವಾಗಿದೆ. ಸತ್ಯ, ಶ್ರದ್ಧೆ, ಶಿಸ್ತು, ಸೇವಾಭಾವನೆ, ಹಿರಿಯರ ಗೌರವ ಇವುಗಳನ್ನೇ ಜೀವನದ ಆಧಾರವಾಗಿಸಬೇಕು. ದೇಶದ ದೊಡ್ಡ ಶಕ್ತಿಯಾಗಿರುವ ಯುವಜನರು ಇಂದು ದಾರಿ ತಪ್ಪುತ್ತಿರುವುದು ನಾವು ನೋಡುತ್ತಿದ್ದೇವೆ. ಇದಕ್ಕೆ ಮೌಲ್ಯಗಳ ಕೊರತೆಯೇ ಮುಖ್ಯ ಕಾರಣ. ಮಕ್ಕಳ ಚಾರಿತ್ರ್ಯ ನಿರ್ಮಾಣವೇ ವಸಂತ ವಿಹಾರ ಶಿಬಿರದ ಉದ್ದೇಶವಾಗಿದೆ.

ಬೀದರ್‌ನ ಶಿವನಗರದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಹಮ್ಮಿಕೊಂಡ ವಸಂತ ವಿಹಾರ ಶಿಬಿರವನ್ನು ವಿಜಯನಗರ ರಾಮಕೃಷ್ಣ ಗೀತಾಶ್ರಮದ ಅಧ್ಯಕ್ಷ ಸ್ವಾಮಿ ಸುಮೇಧಾನಂದ ಮಹಾರಾಜ ಉದ್ಘಾಟಿಸಿದರು. ಸ್ವಾಮಿ ಜ್ಯೋತಿರ್ಮಯಾನಂದ ಮಹಾರಾಜ ಇದ್ದರು.

ಶಾರೀರಿಕ, ಮಾನಸಿಕ ಬೆಳವಣಿಗೆ ಜೊತೆಗೆ ಆಧ್ಯಾತ್ಮಿಕ ಚಿಂತನೆಗೂ ಇಲ್ಲಿ ಪ್ರಾಮುಖ್ಯತೆ ನೀಡಲಾಗುತ್ತಿದೆ. ಯೋಗ, ಧ್ಯಾನ, ಪ್ರಾರ್ಥನೆ, ಕ್ರೀಡೆ, ವ್ಯಕ್ತಿತ್ವ ವಿಕಸನ ತರಗತಿ, ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳ ಸಮಗ್ರ ವಿಕಾಸಕ್ಕೆ ಬುನಾದಿ ಹಾಕುತ್ತವೆ ಎಂದರು.

ಶಿಬಿರದ ರೂವಾರಿ, ಬೀದರ್ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಜ್ಯೋತಿರ್ಮಯಾನಂದ ಮಹಾರಾಜ ಸಾನಿಧ್ಯ ವಹಿಸಿ ಮಾತನಾಡಿ, ಮೌಲ್ಯಗಳೇ ಜೀವನಕ್ಕೆ ನಿಜವಾದ ಬೆಳಕು ನೀಡುತ್ತವೆ. ಆಧ್ಯಾತ್ಮಿಕ ಚಿಂತನೆ ಜೀವನಕ್ಕೆ ಸಮತೋಲನ ನೀಡುತ್ತದೆ. ಯೋಗ, ಧ್ಯಾನ ಮತ್ತು ಪ್ರಾರ್ಥನೆಗಳ ಮೂಲಕ ಮನಸ್ಸನ್ನು ಶುದ್ಧಗೊಳಿಸಬಹುದು. ಇದರಿಂದ ಏಕಾಗ್ರತೆ, ಆತ್ಮವಿಶ್ವಾಸ ಮತ್ತು ಧೈರ್ಯ ವೃದ್ಧಿಯಾಗುತ್ತದೆ. ಬಾಹ್ಯಲೋಕ ಗೆಲ್ಲುವುದಕ್ಕಿಂತ ಮೊದಲು ನಿಮ್ಮೊಳಗಿನ ಮನಸ್ಸನ್ನು ಗೆಲ್ಲಿರಿ. ಇದೇ ಉನ್ನತತೆಗೆ ಒಯ್ಯುತ್ತದೆ ಎಂದರು.

ಮಕ್ಕಳ ವ್ಯಕ್ತಿತ್ವ ರೂಪಿಸಲು ಪೂರಕವಾಗಿ ಕಳೆದ 15 ವರ್ಷಗಳಿಂದ ಆಶ್ರಮ ವಸಂತ ವಿಹಾರ ಶಿಬಿರ ನಡೆಸುತ್ತಿದೆ. ಶಿಬಿರದಲ್ಲಿ ಪಾಲ್ಗೊಂಡ ಬಹುತೇಕರು ಆದರ್ಶ ಬದುಕು ಕಂಡುಕೊಳ್ಳುತ್ತಿದ್ದಾರೆ. ಇದು ಟೈಮ್‌ಪಾಸ್ ಶಿಬಿರವಲ್ಲ, ಜೀವನದ ಮಾರ್ಗದರ್ಶನ ನೀಡುವ ಮೌಲ್ಯಯುತ ವೇದಿಕೆಯಾಗಿದೆ. ಬೀದರ್ ಮಾತ್ರವಲ್ಲ, ಬೆಂಗಳೂರು, ಕಲಬುರಗಿ, ವಿಜಯಪುರ ಇತರೆಡೆಯಿಂದಲೂ ಮಕ್ಕಳು ಬಂದಿದ್ದಾರೆ ಎಂದು ಹೇಳಿದರು.

ಸ್ವಾಮಿ ಸುಮೇಧಾನಂದ ಮಹಾರಾಜ ಅವರ ಭಜನ, ಸಂಗೀತ ಸಭಿಕರಿಗೆ ಆಧ್ಯಾತ್ಮ ಲೋಕದಲ್ಲಿ ತೇಲಿಸಿತು. ಆಶ್ರಮದ ಭಕ್ತರು ಇದ್ದರು. ಶಿಬಿರ ಮೇ 10ರಂದು ಮುಗಿಯಲಿದೆ. ಸೋಮವಾರ ಮಧ್ಯಾಹ್ನದವರೆಗೂ 3 ರಿಂದ 9ನೇ ತರಗತಿವರೆಗಿನ ಮಕ್ಕಳಿಗೆ ಶಿಬಿರಕ್ಕೆ ಸೇರಿಸಲು ಅವಕಾಶವಿದೆ.

ಸಂಸ್ಕಾರವಿಲ್ಲದ ಜ್ಞಾನವು ಸಮಾಜಕ್ಕೆ ಅಪಾಯಕಾರಿ!

ಅಂಕ ಹಾಗೂ ಪದವಿಗಳೇ ಜೀವನದ ಯಶಸ್ಸನ್ನು ನಿರ್ಧರಿಸುವುದಿಲ್ಲ. ಕಮ್ಮಿ ಅಂಕ ಹಾಗೂ ಅಲ್ಪ ಪದವಿ ಹೊಂದಿದ ಅನೇಕರು ವಿಶ್ವವೇ ತಿರುಗಿ ನೋಡುವಂಥ ಅಗಾಧ ಸಾಧನೆ ಮಾಡಿರುವ ಅಸಂಖ್ಯ ಉದಾಹರಣೆ ನಮ್ಮಲ್ಲಿವೆ. ಜ್ಞಾನವು ದೀಪದಂತೆ, ಆದರೆ ಅದಕ್ಕೆ ಬೆಳಕು ನೀಡುವುದೇ ಸಂಸ್ಕಾರ. ಸಂಸ್ಕಾರವಿಲ್ಲದ ಜ್ಞಾನ ಸಮಾಜಕ್ಕೆ ಅಪಾಯಕಾರಿಯಾಗಬಹುದು ಎಂದು ಸ್ವಾಮಿ ಜ್ಯೋತಿರ್ಮಯಾನಂದ ಮಹಾರಾಜ ಹೇಳಿದರು. ನೀವು ಎಷ್ಟು ಓದಿದ್ದೀರಿ? ಯಾವ ಹುದ್ದೆಯಲ್ಲಿದ್ದಿರಿ ಎಂಬುದಕ್ಕಿಂತಲೂ ನೀವು ಎಂಥ ವ್ಯಕ್ತಿಯಾಗಿದ್ದಿರಿ ಎಂಬುದೇ ಮುಖ್ಯ. ಅಂತೆಯೇ ನಮ್ಮ ಹಿರಿಯರು, ಚಿಂತಕರು ಏನಾದರೂ ಆಗು ಮೊದಲು ಮಾನವನಾಗು ಎಂಬ ಸಂದೇಶ ನೀಡಿದ್ದಾರೆ. ಮಕ್ಕಳಲ್ಲಿ ಬಾಲ್ಯದಿಂದಲೇ ಸಂಸ್ಕಾರ ಬಿತ್ತಬೇಕು. ಅದೇ ಮುಂದಿನ ದಿನಗಳಲ್ಲಿ ಒಳ್ಳೆಯ ವ್ಯಕ್ತಿತ್ವವಾಗಿ ಅರಳುತ್ತದೆ. ಸಂಪತ್ತು, ಹುದ್ದೆ, ಅಧಿಕಾರವೆಲ್ಲವೂ ತಾತ್ಕಾಲಿಕ. ಆದರೆ ಚಾರಿತ್ರ್ಯ ಶಾಶ್ವತವಾಗಿದೆ. ಇಂದಿನ ಯುವಜನತೆ ವಿವಿಧ ಪ್ರಲೋಭನೆಗಳಿಗೆ ಒಳಗಾಗಿ ದಾರಿ ತಪ್ಪುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದರಿಂದ ಹೊರಬರಲು ಆತ್ಮನಿಗ್ರಹ ಮತ್ತು ನೈತಿಕ ಮೌಲ್ಯಗಳೇ ಪರಿಹಾರ ಎಂದು ಪ್ರತಿಪಾದಿಸಿದರು.

ಪೋಷಕರು ಮಕ್ಕಳಿಗೆ ಹಣ, ಸಂಪತ್ತು ಕೊಡಲು ಮಾತ್ರ ಪ್ರಯತ್ನಿಸಬಾರದು. ಮೌಲ್ಯ ಮತ್ತು ಸಂಸ್ಕಾರಗಳನ್ನು ನೀಡುವುದೇ ಅವರಿಗೆ ನಿಮ್ಮ ದೊಡ್ಡ ಕೊಡುಗೆಯಾಗಲಿದೆ. ಸಂಸ್ಕಾರವಂತ ಮಕ್ಕಳು ಎಲ್ಲಿದ್ದರೂ ಅವರ ಸಮಾಜದ, ರಾಷ್ಟ್ರದ ಆಸ್ತಿಯಾಗಿ ಕೆಲಸ ಮಾಡಿ, ಕುಟುಂಬಕ್ಕೆ ಕೀರ್ತಿ ತರುತ್ತಾರೆ. ಈ ಶಿಬಿರ ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ದಾರಿದೀಪವಾಗಿದೆ.

■ **ಸ್ವಾಮಿ ಜ್ಯೋತಿರ್ಮಯಾನಂದ**
ರಾಮಕೃಷ್ಣ ಆಶ್ರಮ ಬೀದರ್

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದಷ್ಟೇ ಪೋಷಕರ ಕರ್ತವ್ಯವಲ್ಲ, ಉತ್ತಮ ಸಂಸ್ಕಾರಗಳನ್ನು ಬೆಳೆಸುವುದು ಅಷ್ಟೇ ಪ್ರಮುಖವಾಗಿದೆ. ಮನೆ, ಶಾಲೆ ಮತ್ತು ಸಮಾಜ ಎಂಬ ಮೂರು ವೇದಿಕೆಗಳು ಸರಿಯಾಗಿ ಕೆಲಸ ಮಾಡಿದಾಗಲೇ ಒಳ್ಳೆಯ ನಾಗರಿಕರನ್ನು ರೂಪಿಸಲು ಸಾಧ್ಯ. ಇಂಥ ಶಿಬಿರ ಮಕ್ಕಳನ್ನು ಸರಿಯಾದ ದಾರಿಗೆ ಕೊಂಡೊಯ್ಯುವ ಪ್ರಮುಖ ವೇದಿಕೆ.

■ **ಸ್ವಾಮಿ ಸುಮೇಧಾನಂದ ಮಹಾರಾಜ**
ರಾಮಕೃಷ್ಣ ಗೀತಾಶ್ರಮ ವಿಜಯನಗರ

ಮೊಬೈಲ್ ಟವರ್‌ಗಳಿಂದಿಲ್ಲ ಗ್ರಾಪಂಗಳಿಗೆ ಆದಾಯ

14 ಗ್ರಾಪಂಗಳಲ್ಲಿ 44 ಟವರ್‌ಗಳು । 1.30 ಕೋಟಿ ರೂ ತೆರಿಗೆ ಹಣ ಬಾಕಿ

■ **ನವೀನ್ ಎನ್ ಗಂಜಿ**

ಸಂ. ಕ.ಸಮಾಚಾರ ಚಿಟಗುಪ್ಪ : ತಾಲೂಕಿನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಮೊಬೈಲ್ ಟವರ್‌ಗಳಿಂದ ಎಲ್ಲೆಡೆ ಉತ್ತಮ ನೆಟವರ್ಕ ಸಿಗುತ್ತಿದ್ದು, ಗ್ರಾಮಗಳು ಡಿಜಿಟಲಿಕರಣವಾಗುತ್ತಿವೆ. ಆದರೆ ಟವರ್‌ಗಳಿಂದ ಗ್ರಾಪಂಗಳಿಂದ ತೆರಿಗೆ ವಸೂಲಿಯಾಗದಿರುವುದರಿಂದ ಬೊಕ್ಕಸಕ್ಕೆ ಕತ್ತರಿ ಬಿದ್ದು ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದೆ.

ಗ್ರಾಮಗಳಲ್ಲಿ ಖಾಸಗಿ ಟೆಲಿಕಾಂ ಕಂಪನಿಗಳು ಮೊಬೈಲ್ ಟವರ್‌ಗಳನ್ನು ಸ್ಥಾಪಿಸಿ ಸೇವೆ ನೀಡುತ್ತಿದ್ದರೂ ಗ್ರಾಪಂಗಳಿಗೆ ನಿಗದಿತ ತೆರಿಗೆ ಪಾವತಿಸುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ.

ತಾಲೂಕಿನಲ್ಲಿ ಒಟ್ಟು 14 ಗ್ರಾಪಂಗಳಿವೆ. ಬೇಮಳಖೇಡಾ 4, ಉಡಮನಳ್ಳಿ 4, ಚಾಂಗಲೇರಾ 1. ಮೀನಕೇರಾ 2, ಮನ್ನಾಎಖೇಳಿ 7. ನಿರ್ಣಾ 2, ಮುತ್ತಂಗಿ 2, ಮಂಗಲಗಿ 4, ಉಡಬಾಳ್ 1, ಬೆಳಕೇರಾ 4, ತಾಳಮಡಗಿ 4, ಮುಸ್ತರಿ 2, ಕೊಡಂಬಲ್ 2, ಇಟಗಾ 5 ದಲ್ಲಿ ಒಟ್ಟು 44 ಮೊಬೈಲ್ ಟವರ್‌ಗಳಿವೆ, 2024/25. 2025/26 ನೇ ಸಾಲಿನಲ್ಲಿ ಈ ಟವರ್‌ಗಳಿಂದ ಅಂದಾಜು ಸುಮಾರು 1 ಕೋಟಿ 30 ಲಕ್ಷಕ್ಕೂ ಅಧಿಕ ತೆರಿಗೆ ಹಣ ಗ್ರಾಪಂಗಳಿಗೆ ಪಾವತಿಯಾಗಬೇಕಿತ್ತು.

ಈ ಮುಂಚೆ ಮೊಬೈಲ್ ಟವರ್‌ಗಳನ್ನು ಆಸ್ತಿ ಎಂದು ಪರಿಗಣಿಸಿ ಆಸ್ತಿ ತೆರಿಗೆ ವಿಧಿಸಲಾಗುತ್ತಿತ್ತು, ಆದರೆ ಕೇಂದ್ರ ಸರ್ಕಾರದ ನೂತನ ಮಾರ್ಗಸೂಚಿಗಳ ಅನ್ವಯ ಮೊಬೈಲ್ ಟವರ್‌ಗಳನ್ನು ದೂರಸಂಪರ್ಕ ಮೂಲಸೌಕರ್ಯವಾಗಿ ಪರಿಗಣಿಸಲಾಗಿದ್ದು



ಟವರ್‌ಗಳಿಗೆ ಆಸ್ತಿ ತೆರಿಗೆ ವಿಧಿಸುವಲ್ಲಿ ನಿರ್ಬಂಧಗಳು ಎದುರಾಗಿವೆ. ಪರಿಣಾಮವಾಗಿ ಗ್ರಾಪಂಗಳ ಪ್ರಮುಖ ಅದಾಯದ ಮೂಲವೇ ಕುಂಠಿತವಾಗಿದೆ ಎಂದು ಹೆಸರು ಹೇಳಲಿಚ್ಚಿಸದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬೇಸರದಿಂದ ನುಡಿಯುತ್ತಾರೆ.

ಕೆಲವು ಪಂಚಾಯತಿಗಳು ಸ್ಥಳಿಯ ಮಟ್ಟದಲ್ಲಿ ಲೈಸೆನ್ಸ ಶುಲ್ಕ ಅಥವಾ ಸೇವಾ ಶುಲ್ಕ ವಿಧಿಸಲು ಹೊರಟಾಗ ಟೆಲಿಕಾಂ ಕಂಪನಿಗಳು ವಿವಿಧ ನಿಯಮಗಳನ್ನು ಉಲ್ಲೇಖಿಸಿ ತೆರಿಗೆ ಪಾವತಿಯನ್ನು ತಪ್ಪಿಸುತ್ತಿವೆ. ಇದರಿಂದ ಪಂಚಾಯತ್‌ಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಹಣದ ಕೊರತೆ ಎದುರಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮೊಬೈಲ್ ಬಳಕೆ ಹೆಚ್ಚುತ್ತಿರುವುದರಿಂದ ಟವರ್‌ಗಳ ಸಂಖ್ಯೆಯೂ ಹೆಚ್ಚುತ್ತಿದೆ, ಆದರೆ ಪಂಚಾಯತಿಗಳಿಗೆ ನೇರವಾಗಿ ಯಾವುದೇ ಆರ್ಥಿಕ ಲಾಭವಾಗುತ್ತಿಲ್ಲ.

ಈ ವಿಷಯವನ್ನು ಪಂಚಾಯತ್ ರಾಜ್ ಹಾಗು ಟೆಲಿಕಾಂ ಇಲಾಖೆ ರಾಜ್ಯ, ಕೇಂದ್ರ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಗ್ರಾಪಂಗಳಿಗೆ ನ್ಯಾಯಸಮ್ಮತ ಆದಾಯ ಬರುವಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಬೇಕು ಎಂಬುದು ಬಹುತೇಕ ಜನಪ್ರತಿನಿಧಿಗಳ ಅಗ್ರಹವಾಗಿದೆ.

ಮನ್ನಾಎಖೇಳಿ ಗ್ರಾಪಂನಲ್ಲಿ ಮೊನ್ನೆ ಜರುಗಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಬಹುತೇಕ ಪಿಡಿಒ ಗಳು ಟವರ್ ಕಂಪನಿಗಳು ತೆರಿಗೆ ಪಾವತಿಸುತ್ತಿಲ್ಲ, ಇದರಿಂದಾಗಿ ಕುಡಿಯುವ ನೀರು ಸೇರಿದಂತೆ ಇನ್ನಿತರ ಕೆಲಸಗಳಿಗೆ ಹಣದ ಕೊರತೆಯಾಗುತ್ತಿದೆ ಎಂದು ಶಾಸಕ ಡಾ ಶೈಲೇಂದ್ರ ಬೆಲ್ದಾಳೆಯವರಲ್ಲಿ ಗೋಳು ತೋಡಿಕೊಂಡಿದ್ದರು. ಟವರ್ ಕಂಪನಿಗಳಿಗೆ ತೆರಿಗೆ ಪಾವತಿಸುವಂತೆ ನೋಟಿಸ್ ನೀಡಿ ಎಂದು ಶಾಸಕರು ಸೂಚಿಸಿದ್ದರು, ಅಲ್ಲದೇ ದಿನಗಳ ಹಿಂದೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿರೀಶ ಬಧೋಲೆ ಟವರ್‌ಗಳಿಂದ ಬಾಕಿ ಉಳಿದ ತೆರಿಗೆ ಹಣವನ್ನು ವಸೂಲು ಮಾಡುವಂತೆ ಎಲ್ಲ ಪಂಚಾಯತ್‌ಗಳಿಗೆ ಸೂಚಿಸಿದ್ದರು.

ಒಟ್ಟಿನಲ್ಲಿ ಗ್ರಾಮಗಳಿಗೆ ನೆಟವರ್ಕ ಸಿಕ್ಕಿದೆ ಆದರೆ ಪಂಚಾಯತಿ ಬೊಕ್ಕಸ ಖಾಲಿ, ಈ ಗೊಂದಲ ಬಗೆಹರೆಯಬೇಕಾದರೆ ಕೇಂದ್ರ ರಾಜ್ಯ ಸರ್ಕಾರಗಳು ಜಂಟಿ ನೀತಿ ಜಾರಿಗೆ ತರಬೇಕು.



ಕೋಲಿ ಸಮಾಜಕ್ಕಿಲ್ಲ ರಾಜಕೀಯ ಪ್ರಾತಿನಿಧ್ಯ

ಸಂ.ಕ.ಸಮಾಚಾರ ಹುಮನಾಬಾದ್ : ಜನಸಂಖ್ಯೆ ಆಧರಿಸಿ, ಕೋಲಿ ಸಮಾಜಕ್ಕೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಯಾವ ರಾಜಕೀಯ ಪಕ್ಷಗಳು ಪ್ರಾತಿನಿಧ್ಯ ಕೊಟ್ಟಿಲ್ಲ ಎಂದು ಅಖಿಲ ಭಾರತ ಕೋಲಿ ಸಮಾಜದ ಕರ್ನಾಟಕ ರಾಜ್ಯಾಧ್ಯಕ್ಷ ದತ್ತಾತ್ರೇಯ್ ರೆಡ್ಡಿ ಅವರು ತಿಳಿಸಿದರು.

ನವದೆಹಲಿಯಲ್ಲಿ ಜೂನ್ 21ರಂದು ನಡೆಯಲಿರುವ ಕೋಲಿ ಸಮಾಜದ ರಾಷ್ಟ್ರ ಮಟ್ಟದ ಸಮಾವೇಶ ಪ್ರಯುಕ್ತ ಭಾನುವಾರದಂದು ನಗರದ ವಿವಿಐಪಿ ಗೆಸ್ಟ್ ಹೌಸ್‌ನಲ್ಲಿ ಸಂಯುಕ್ತ ಕರ್ನಾಟಕ ಪ್ರತಿನಿಧಿ ಜತೆ ಮಾತನಾಡಿ, ರಾಷ್ಟ್ರೀಯ ಸಮಾವೇಶದಲ್ಲಿ ಕನಿಷ್ಟ 50ಸಾವಿರಕ್ಕೂ ಅಧಿಕ ಜನ ಸೇರಿವ ನಿರೀಕ್ಷೆ ಇದೆ. ಸಮುದಾಯದಲ್ಲಿರುವ ಆಂತರೀಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ, ಸರ್ವರನ್ನು ಒಂದೇ ವೇದಿಕೆಗೆ ಕರೆತಂದು ಸಮಾಜಕ್ಕೆ ಸಾಮಾಜಿಕ, ಧಾರ್ಮಿಕ ಹಾಗೂ ವಿಶೇಷವಾಗಿ ರಾಜಕೀಯ ಪ್ರಾತಿನಿಧ್ಯದ ಕುರಿತು ಚಿಂತನಗೋಷ್ಠಿಗಳು ನಡೆಯಲಿದ್ದು, ಸಮಾವೇಶವನ್ನು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ ಉದ್ಘಾಟಿಸಲಿದ್ದಾರೆ. ಈ ಸಮಾವೇಶದಲ್ಲಿ ಕೇಂದ್ರದ ಗೃಹ ಸಚಿವ ಅಮಿತ ಷಾ, ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಒಳಗೊಂಡು ಇನ್ನೂ ಅನೇಕ ಮುಯಖಂಡರು ಭಾಗವಹಿಸಲಿದ್ದಾರೆ ಎಂದರು. ಸಮಾಜ ಸಂಘಟನೆ ಉದ್ದೇಶದಿಂದ ಕಳೆದ ತಿಂಗಳಿಂದ ರ್‍ಯಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂದರು.

ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಶರಣು ಎಖ್ಖೆಳ್ಳಿ ಕಂದಗೂಳ್, ಉಪಾಧ್ಯಕ್ಷ ಸಿದ್ಧಲಿಂಗ ಅಯ್ಯಣ್ಣೋರ, ಯುವ ಘಟಕದ ತಾಲ್ಲೂಕು ಅಧ್ಯಕ್ಷ ದಯಾನಂದ ಮೇತ್ರಿ ಇದ್ದರು.

ಬುದ್ಧರ ಸಂದೇಶ ಸ್ಫೂರ್ತಿದಾಯಕ

ಸಂ.ಕ.ಸಮಾಚಾರ ಭಾಲ್ಕಿ: ಗೌತಮ ಬುದ್ಧನ ಸಂದೇಶಗಳು ಸರ್ವವ್ಯಾಪಿಯಾಗಿದ್ದು ಸ್ಫೂರ್ತಿದಾಯಕವಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ 498ನೆಯ ಮಾಸಿಕ ಶಿವಾನುಭವಗೋಷ್ಠಿ, ಬುದ್ಧಜಯಂತಿ ಮತ್ತು ಶಿವನಾಗಮಯ್ಯ ಸ್ಮರಣೋತ್ಸವಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಗೌತಮ ಬುದ್ಧಇಡೀ ವಿಶ್ವಕ್ಕೆ ಶಾಂತಿ, ಸಹನೆ, ಸಹಬಾಳ್ವೆ, ಸೋದರತೆಯನ್ನು ಬಿತ್ತಿದರು. ಭಾರತದಲ್ಲಿ ಹುಟ್ಟಿ ಬೆಳೆದ ಗೌತಮ ಬುದ್ಧರು ಇಡೀ ವಿಶ್ವಕ್ಕೆ ಶಾಂತಿಯ ಸಂದೇಶ ಸಾರಿದ್ದಾರೆ. ಅವರ ಸಂದೇಶಗಳು ಇಡೀ ಮಾನವಕುಲಕ್ಕೆ ಮಾನವೀಯತೆಯ ಮಾರ್ಗದರ್ಶಿಯಾಗಿದೆ ಎಂದು ಅವರು ತಿಳಿಸಿದರು.

ಭಂತೇಕಶ್ಯಪ್ಪ ದಿವ್ಯ ಸಮ್ಮುಖ ವಹಿಸಿದ್ದರು.ತಾಲೂಕು ಭಾರತೀಯ ಬೌದ್ಧ ಮಹಾಸಭೆಯ ಅಧ್ಯಕ್ಷ ವಿಶ್ವನಾಥ ಮೋರೆ ಅಧ್ಯಕ್ಷತೆ ವಹಿಸಿದ್ದರು.ತಾಲೂಕು ವಚನ ಸಾಹಿತ್ಯ ಪರಿಷತ್ತು ಗುಂಡಪ್ಪ ಸಂಗಮಕರ್ ಅನುಭಾವ ನೀಡಿದರು.ನಿವೃತ್ತ ಶಿಕ್ಷಕ ಡಿ.ಡಿ.ಸಿಂಧೆ ಬಸವ ಗುರುವಿನ ಪೂಜೆ ನೆರವೇರಿಸಿದರು. ಎಪಿಎಂಸಿ ಮಾಜಿ ಉಪಾಧ್ಯಕ್ಷ ಶಿವಕುಮಾರ ಮೇತ್ರೆ ಸೇರಿದಂತೆ ಅನೇಕರಿದ್ದರು. ದೀಪಕ ಠಮಕೆ ನಿರೂಪಿಸಿದರು.



ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ನಡೆದ ಗೌತಮ ಬುದ್ಧನ ಜಯಂತಿ ಕಾರ್ಯಕ್ರಮದಲ್ಲಿ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿದರು. ಭಂತೇ ಕಶ್ಯಪ್ಪ, ವಿಶ್ವನಾಥ ಮೋರೆ ಇತರರಿದ್ದರು.

ಅಫಜಲಪುರ(ಗ್ರಾಮೀಣ): ತಾಲೂಕಿನ ಮಣ್ಣೂರ ಗ್ರಾಮದಲ್ಲಿ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ ಅಫಜಲಪುರ ಹಾಗೂ ಮಣ್ಣೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಸಮುದಾಯ ಆಧಾರಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಮಣ್ಣೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ.ಸಂಜೀವಿನಿ ಜಾಧವ, ಆರೋಗ್ಯ ನಿರೀಕ್ಷಣಾಧಿಕಾರಿ ವಿಠ್ಠಲ ಬಡಿಗೇರ, ಪ್ರಕಾಶ ಬಿರಾದಾರ, ಹಣಮಂತ ಅಲ್ಲಾಪೂರ ,ಶ್ರೀಶೈಲ ಕಲಶೆಟ್ಟಿ, ರವಿಕುಮಾರ ಭುರಲಿ, ಗೌತಮ ಮೈಸಲಗಿ, ಶಿವರಾಜ ವಾರಿಕ, ನಾಜ್ಮಿನ್ ಸಾತ್ಕೇಡ, ಜ್ಯೋತಿ ಹಾಲು, ಮಾಲಾಶ್ರೀ, ಭೌರಮ್ಮ ಲೋಹಾರ, ಶಬಾನಾ ಕೊರಬು, ಗೌರಬಾಯಿ ಮೋಸಲಗಿ ಇತರರಿದ್ದರು.

ಕಲ್ಯಾಣ ರೈಲು ಸಂಪರ್ಕ ಮತ್ತಷ್ಟು ಗಟ್ಟಿ

ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಕೋಚ್ । ವಾಯಾ ಕಲಬುರಗಿ ಸಂಚಾರ । 15 ಗಂಟೆ ಪ್ರಯಾಣ

■ **ಸ.ದಾ.ಜೋಶಿ**

ಸಂ.ಕ.ಸಮಾಚಾರ ಬೀದರ್: ಬಹು ಬೇಡಿಕೆ ಹಾಗೂ ಮಹಾತ್ವಾಕಾಂಕ್ಷೆಯ ವಾಯಾ ಕಲಬುರಗಿ ಸಂಚರಿಸಲಿರುವ ಬೆಂಗಳೂರು-ಮುಂಬೈ ನಡುವಿನ ವಂದೇ ಭಾರತ್ ಸ್ಲೀಪರ್ ರೈಲು ಸೇವೆಗೆ ಶೀಘ್ರ ಹಸಿರು ನಿಶಾನೆ ಸಿಗಲಿದೆ. ಇದು ಕಲ್ಯಾಣ ಕರ್ನಾಟಕ ಭಾಗದ ರೈಲು ಸಂಪರ್ಕ ಜಾಲ ಮತ್ತಷ್ಟು ಬಲಪಡಿಸಲಿದ್ದು, ಈ ಭಾಗಕ್ಕೆ ಕೇಂದ್ರ ಸರ್ಕಾರದ ಬಹು ದೊಡ್ಡ ಕೊಡುಗೆ ಎನಿಸಿದೆ.

ದೇಶದ ಸಿಲಿಕಾನ್ ಸಿಟಿ ಹಾಗೂ ವಾಣಿಜ್ಯ ನಗರಿಗೆ ಇದು ನೇರ ಸಂಪರ್ಕ ಕಲ್ಪಿಸಲಿದ್ದು, ಭಾರತದ ಎರಡನೇ ವಂದೇ ಭಾರತ್ ಸ್ಲೀಪರ್ ಕೋಚ್ ಹೈಸ್ಪೀಡ್ ರೈಲು ಇದಾಗಿದೆ. ಕಳೆದ ಜನವರಿ 17ರಂದು ಹೌರಾ-ಕಾಮಾಖ್ಯ ಮಾರ್ಗದಲ್ಲಿ ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಶುರುವಾಗಿದೆ. ರೈಲ್ವೆ ಇಲಾಖೆ ಮೂಲಗಳ ಪ್ರಕಾರ ಇನ್ನೆರಡು ತಿಂಗಳಲ್ಲಿ ಈ ರೈಲು ಸಂಚಾರ ಶುರುವಾಗಲಿದೆ. ಈ ಹೈಸ್ಪೀಡ್ ರೈಲು ಬೆಂಗಳೂರು-ಮುಂಬೈ ನಡುವಿನ ಸುಮಾರು 1150 ಕಿಮೀ ದೂರ ಕೇವಲ 14-15 ಗಂಟೆಗಳಲ್ಲೇ ಕ್ರಮಿಸಲಿದ್ದು, ಬೇರೆ ರೈಲಿಗಿಂತ 8-9 ಗಂಟೆ ಸಮಯ ಉಳಿಸಲಿದೆ.

ಬೆಂಗಳೂರಿನ ಕೆಎಸ್‌ಆರ್ ರೈಲು ನಿಲ್ದಾಣದಿಂದ ಸಂಜೆ ಹೊರಡುವ ಈ ರೈಲು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್‌ಗೆ (ಸಿಎಸ್‌ಎಂಟಿ) ಮರು ದಿವಸ ಬೆಳಿಗ್ಗೆ ತಲುಪಲಿದೆ. ಯಲಹಂಕ, ರಾಯಚೂರು (ಮಂತ್ರಾಲಯ ರಸ್ತೆ), ಯಾದಗಿರಿ, ಕಲಬುರಗಿಯಲ್ಲಿ ಈ ರೈಲು ನಿಲುಗಡೆಯಾಗಲಿದೆ. ಇಲ್ಲಿಂದ ಸೊಲ್ಲಾಪುರ, ದೌಂಡ್, ಪುಣೆ, ಲೋಣಾವಾಲಾದಿಂದ ಮುಂಬೈಗೆ ತಲುಪಲಿದೆ. ಸದ್ಯಕ್ಕೆ ಬೆಂಗಳೂರು-ಮುಂಬೈ ನಡುವೆ ವಾಯಾ ಕಲಬುರಗಿ ಮಾರ್ಗದಲ್ಲಿ ಉದ್ಯಾನ್ ಎಕ್ಸ್‌ಪ್ರೆಸ್ ಸಂಚರಿಸುತ್ತದೆ. ಇದು 22-24 ಗಂಟೆ ಪಡೆಯುತ್ತದೆ. ಹೀಗಾಗಿ ವಂದೇ ಭಾರತ್ ಸ್ಲೀಪರ್ ಕೋಚ್ ಕಲ್ಯಾಣ ಭಾಗದ ಸಂಪರ್ಕ ಗಟ್ಟಿಗೊಳಿಸುವಲ್ಲಿ ಭಾರಿ ಮಹತ್ವ ಪಡೆದಿದೆ.

ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಐಷಾರಾಮಿ ಸೌಲಭ್ಯಗಳನ್ನು ಹೊಂದಿದ್ದು, ದೂರ ಪ್ರಯಾಣಕ್ಕೆಂದೇ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಬೆಂಗಳೂರು-ಮುಂಬೈ ಅಂತರ ಸನಿಹ ಮಾಡುವ ಜೊತೆಗೆ ರೈಲು ಪ್ರಯಾಣ ಇನ್ನಷ್ಟು ಆರಾಮದಾಯಕವೂ ಮಾಡುತ್ತಿರುವುದು ಇದರ ವಿಶೇಷವಾಗಿದೆ. ಪ್ರಯಾಣಿಕರಿಗೆ ಇದು ರಾತ್ರಿ ಸಂಚಾರ ದಿ ಬೆಸ್ಟ್ ಸೇವೆ ನೀಡಲಿದೆ. ಮುಂಚೆ ಇದು ಹುಬ್ಬಳ್ಳಿ ಮಾರ್ಗ ಸಂಚರಿಸುವ ಬಗ್ಗೆ ಚರ್ಚೆಗಳು ನಡೆದಿದ್ದವು. ಆದರೆ ಇತ್ತೀಚೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರೇ ಇದು ವಾಯಾ ಕಲಬುರಗಿ ಸಂಚರಿಸುವ ಘೋಷಣೆ ಮಾಡಿ, ರೂಟ್ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

ಕಲಬುರಗಿ, ರಾಯಚೂರು, ಯಾದಗಿರಿ ಭಾಗದ ಜನರು ಬೆಂಗಳೂರು ಜೊತೆಗೆ ಪುಣೆ, ಮುಂಬೈಗೂ ಹೆಚ್ಚು ಸಂಪರ್ಕ ಹೊಂದಿದ್ದಾರೆ. ಹೀಗಾಗಿ ವಂದೇ ಭಾರತ್ ಸ್ಲೀಪರ್ ಕೋಚ್ ಈ ಭಾಗದ ಜನರಿಗೆ ಹಾಗೂ ವ್ಯಾಪಾರೋದ್ಯಮಿಗಳಿಗೆ ಸಾಕಷ್ಟು ಅನುಕೂಲತೆ ಕಲ್ಪಿಸಲಿದೆ. ಸದ್ಯ ಕಲಬುರಗಿ-ಬೆಂಗಳೂರು ನಡುವೆ ವಂದೇ ಭಾರತ್ ಚೇರ್ ಕಾರ್ ಆಸನವುಳ್ಳ ರೈಲು ಸಂಚರಿಸುತ್ತಿದೆ. ಇದರೊಟ್ಟಿಗೆ ಈಗ ಬೆಂಗಳೂರು-ಮುಂಬೈ ಸ್ಲೀಪರ್ ಕೋಚ್ ವಂದೇ ಭಾರತ್ ಸೇವೆ ಲಭ್ಯವಾಗುತ್ತಿದೆ. ಚೇರ್ ಕಾರ್‌ಗೆ ಹೋಲಿಸಿದರೆ ಸ್ಲೀಪರ್ ಕೋಚ್ ಸೌಕರ್ಯ, ಸುರಕ್ಷತೆ ಮತ್ತು ವಿನ್ಯಾಸದಲ್ಲಿ ಬಲು ಭಿನ್ನವಿದ್ದು, ಕಲ್ಯಾಣದ ಜನರನ್ನು ಖುಷ್ ಮಾಡಿದೆ.

180 ಕಿಮೀ ವೇಗ

ಗರಿಷ್ಠ 180 ಕಿಮೀ ವೇಗ ಸಂಚರಿಸುವ ಸಾಮರ್ಥ್ಯ ವಂದೇ ಭಾರತ್ ಸ್ಲೀಪರ್ ರೈಲಿಗಿದೆ. ಪ್ರಯಾಣಿಕರಿಗೆ ಮಲಗಲು ಉತ್ತಮ ವ್ಯವಸ್ಥೆ, ಸ್ವಚ್ಛ ಬೋಗಿಗಳು ಹಾಗೂ ಸುಧಾರಿತ ಸೌಲಭ್ಯಗಳಿವೆ. ಈ ರೈಲನ್ನು ಇಂಟಿಗ್ರಲ್ ಕೋಚ್ ಫ್ಯಾಕ್ಟರಿಯ ತಂತ್ರಜ್ಞಾನ ಬಳಸಿ (ಬೆಂಗಳೂರಿನ ಬಿಇಎಂಎಲ್) ಸಂಸ್ಥೆ ಅಭಿವೃದ್ಧಿಪಡಿಸಿದೆ. ಕಿತ್ತಳೆ ಮತ್ತು ಬೂದು ಬಣ್ಣದ ವಿನ್ಯಾಸವುಳ್ಳ ಈ ಸ್ಲೀಪರ್ ರೈಲು ರಾತ್ರಿ ಪ್ರಯಾಣಿಕರಿಗೆ ಆರಾಮದಾಯಕ ಜೊತೆಗೆ ಹೊಸ ಅನುಭೂತಿಯೂ ನೀಡಲಿದೆ. ಹೀಗಾಗಿ ಪ್ರಯಾಣಿಕರು ಈ ಸಂಚಾರಕ್ಕಾಗಿ ಈಗ ಕಾತರರಾಗಿದ್ದಾರೆ. ದೇಶದಲ್ಲಿ ಸದ್ಯ ವಂದೇ ಭಾರತ್ ಅತ್ಯಂತ ವೇಗದ ರೈಲು ಸೇವೆಯಾಗಿದೆ. ಇದರ ಗರಿಷ್ಠ ವೇಗ ಗಂಟೆಗೆ 160 ಕಿಮೀ ಇದೆ. ಈಗ ಬರುತ್ತಿರುವ ಹೊಸ ಸ್ಲೀಪರ್ ಕೋಚ್ ವೇಗ 180 ಕಿಮೀವರೆಗೆ ಇದೆ. ವಂದೇ ಭಾರತ್ ಪೂರ್ಣ ಎಸಿ ಸೌಲಭ್ಯ, ಆಹಾರ ಸೇರಿದಂತೆ ಉತ್ತಮ ಪ್ರಯಾಣದ ಅನುಭವ ನೀಡುತ್ತದೆ. ಬರುವ ಆಗಸ್ಟ್ 1ರಿಂದ ಇದು ಕಾರ್ಯಾಚರಣೆ ಮಾಡುವ ಸಾಧ್ಯತೆಗಳಿವೆ.

823 ಪ್ರಯಾಣಿಕರ ಸಾಮರ್ಥ್ಯ

ವಂದೇ ಭಾರತ್ ಸ್ಲೀಪರ್ ಕೋಚ್‌ನಲ್ಲಿ 823 ಪ್ರಯಾಣಿಕರು ಸಂಚರಿಸಬಹುದು. ಇದರಲ್ಲಿ 11 ಎಸಿ 3-ಟೈರ್ ಕೋಚ್, 4 ಎಸಿ 2-ಟೈರ್ ಕೋಚ್ ಮತ್ತು 1 ಫಸ್ಟ್ ಎಸಿ ಕೋಚ್ ಸೇರಿದಂತೆ ಒಟ್ಟು 16 ಕೋಚ್‌ಗಳಿವೆ. ಬೆನ್ನು ನೋವು ಆಗದಂತೆ ಅತ್ಯಾಧುನಿಕ ಹಾಸಿಗೆ, ಆಕರ್ಷಕ ರಾತ್ರಿ ದೀಪಗಳು, ಚಾರ್ಜಿಂಗ್ ಪಾಯಿಂಟ್, ಸ್ವಯಂಚಾಲಿತ ಬಾಗಿಲು, ಸುಧಾರಿತ ಸಸ್ಪೆನ್ಷನ್‌ಗಳಿವೆ. ಒಳಗೆ ಶಬ್ದ ಸಹ ಹೆಚ್ಚು ಬರದಂತೆ ವಿನ್ಯಾಸ ಮಾಡಲಾಗಿದೆ. ಫಸ್ಟ್ ಕ್ಲಾಸ್ ಎಸಿ ಪ್ರಯಾಣಿಕರಿಗೆ ಶವರ್ ಮತ್ತು ಶಿಶುಪಾಲನಾ ಸೌಲಭ್ಯವೂ ಇದರಲ್ಲಿದೆ. ಇಡೀ ರೈಲು ಸಿಸಿಟಿವಿ ಕಣ್ಗಾವಲು ಮತ್ತು ಅಪಘಾತ ತಡೆಯ "ಕವಚ" ವ್ಯವಸ್ಥೆ ಸಹ ಹೊಂದಿದೆ. ಇದರ ದರ ಇನ್ನೂ ಫಿಕ್ಸ್ ಆಗಿಲ್ಲ. ಆದರೆ ಅಂದಾಜಿನ ಪ್ರಕಾರ ಎಸಿ 3-ಟೈರ್‌ಗೆ 2,500-3000 ರೂ., ಎಸಿ 2-ಟೈರ್‌ಗೆ 3,200-3700, ಮತ್ತು ಫಸ್ಟ್ ಎಸಿಗೆ 3,800-4500 ರೂ.ವರೆಗೆ ಟಿಕೆಟ್ ನಿಗದಿಪಡಿಸಬಹುದು ಎನ್ನಲಾಗುತ್ತಿದೆ.

ಸುದ್ದಿ ಮಿಂಚು



ಕಲಬುರಗಿಯ ಅನುಭಾವ ಮಂಟಪದಲ್ಲಿ ಅರಿವಿನ ಮನೆಯ ದತ್ತಿ ಕಾರ್ಯಕ್ರಮ ನಡೆಯಿತು.

ಪರಿಪೂರ್ಣ ಮಾನವನಾಗುವುದೇ ಷಟಸ್ಥಲ

ಸಂ.ಕ. ಸಮಾಚಾರ ಕಲಬುರಗಿ: ಷಟಸ್ಥಲಗಳು ಮಾನವನ ಉನ್ನತಿಗೆ ಕ್ರಮಿಸುವ ಆರು ಹಂತಗಳಾಗಿವೆ ಎಂದು ಐಟಿಐ ಕಾಲೇಜಿನ ತರಬೇತಿ ಅಧಿಕಾರಿ ಭಾರತಿ ಹುಳಗೋಳ ಹೇಳಿದರು.

ಇಲ್ಲಿನ ಜಯನಗರದ ಬಸವ ಸಮಿತಿಯ ಅನುಭಾವ ಮಂಟಪದ ಡಾ. ಬಿ ಡಿ ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರದಲ್ಲಿ ಬಸವಾದಿ ಶರಣರ ಸ್ಮರಣಾರ್ಥ ಜರುಗಿದ ಅರಿವಿನ ಮನೆ 890ನೆಯ ದತ್ತಿ ಕಾರ್ಯಕ್ರಮದಲ್ಲಿ ಷಟಸ್ಥಲ ಯಾತ್ರೆ ಮಾನವ ಪ್ರಜ್ಞೆಯ ಉನ್ನತಿಯ ಕಡೆಗೆ ವಿಷಯದ ಕುರಿತು ಅನುಭಾವ ನೀಡಿದ ಅವರು, ಭಕ್ತಸ್ಥಲ ಜಾಗೃತಿಯ ಹಂತ, ಮಹೇಶ್ವರ ಹಂತವೆಂದರೆ ಆಂತರಂಗಿಕ ಶುದ್ಧಿಯಾಗಿದೆ. ಪ್ರಸಾದಿ ಹಂತ ಅನುಗ್ರಹದ ಹಂತವಾಗಿದೆ. ಪ್ರಾಣಲಿಂಗಿ ಹಂತ ಅಸಾಧಾರಣವಾದುದನ್ನು ಬಯಸುತ್ತದೆ. ನಾವು ದೈವಿ ಸ್ವರೂಪ ಎಂಬ ಭಾವ ಬಲಿಯುತ್ತದೆ. ಅಂತರಂಗದಲ್ಲಿ ದೇವರಿದ್ದಾನೆ ಎಂಬ ಭಾವ ಗಟ್ಟಿಗೊಳ್ಳುವ ಹಂತವಾಗಿದೆ. ಶರಣಸ್ಥಲವೆಂದರೆ ಶರಣಾಗತಿಯ ಹಂತವಾಗಿದೆ. ಇದು ಅಹಂಕಾರ ತೊರೆದ ಹಂತವಾಗಿದೆ. ಐಕ್ಯಸ್ಥಲವೆಂದರೆ ಪ್ರತಿಯೊಂದರಲ್ಲಿ ದೇವರನ್ನು ಕಾಣುವ ಹಂತವಾಗಿದೆ. ಷಟಸ್ಥಲವೆಂದರೆ ನಿರ್ಭೀತವಾಗಿ ಮಾನವನಾಗುವ ಮತ್ತು ದೇವನಾಗುವ ಹಂತಗಳೇ ಆಗಿವೆ. ಇವು ಕೇವಲ ಲಿಂಗಾಯತ ಧರ್ಮದ ಆಚರಣೆಗಳಲ್ಲ , ಪ್ರತಿಯೊಬ್ಬ ಮಾನವನು ಪಾಲಿಸಬೇಕಾದ ಆಚರಣೆಗಳಾಗಿವೆ. ಐಕ್ಯಸ್ಥಲ ವೆಂದರೆ ಲಿಂಗವೇ ತಾನಾಗುವ, ಮಾನವನೇ ದೇವನಾಗುವ ಹಂತವಾಗಿದೆ ಎಂದರು.

ಬಸವ ಸಮಿತಿಯ ಅಧ್ಯಕ್ಷೆ ಡಾ. ವಿಲಾಸವತಿ ಖೂಬಾ, ಡಾ. ವೀರಣ್ಣ ದಂಡೆ, ಡಾ.ಜಯಶ್ರೀ ದಂಡೆ, ಉದ್ಯಮಿ ರಾಜೇಂದ್ರ ಖೂಬಾ, ಕಾರ್ಯದರ್ಶಿ ಡಾ. ಆನಂದ ಸಿದ್ಧಾಮಣಿ, ಡಾ.ಕೆ. ಎಸ್. ವಾಲಿ , ಶರಣಗೌಡ ಪಾಟೀಲ್ ಪಾಳಾ, ಉದ್ದಂಡಯ್ಯ ಭಾಗವಹಿಸಿದರು. ಸಾಕ್ಷಿ ಸತ್ಯಂಪೇಟ ನಿರೂಪಿಸಿದರು

ಕಲಬುರಗಿಯಲ್ಲಿ ರಾಷ್ಟ್ರಮಟ್ಟದ ನೀಟ್ ಪರೀಕ್ಷೆ ನಡೆಯಿತು.

ನಗರಾದ್ಯಂತ ನೀಟ್ ಪರೀಕ್ಷೆ ಸುಸೂತ್ರ

ಸಂ. ಕ. ಸಮಾಚಾರ ಕಲಬುರಗಿ: ವೈದ್ಯಕೀಯ, ದಂತ, ಆಯುರ್ವೇದ, ಹೋಮಿಯೋಪಥಿ ಮತ್ತು ನ್ಯಾಚರೋಪತಿ ಕೋರ್ಸ್‌ಗಳ ರಾಷ್ಟ್ರೀಯ ಮಟ್ಟದ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್)–2026 ಭಾನುವಾರ ದೇಶಾದ್ಯಂತ ನಡೆದಿದ್ದು, ನಗರದ 20 ಕಡೆ ಸರಾಗವಾಗಿ ಮತ್ತು ಸುಸೂತ್ರವಾಗಿ ನಡೆಯಿತು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮಾರ್ಗಸೂಚಿಯಂತೆ ಆಧಾರ್, ಬಯೋಮೆಟ್ರಿಕ್, ಮುಖ ಗುರುತಿಸುವಿಕೆ ಮತ್ತು ಕಡ್ಡಾಯವಾಗಿ ಸಿಸಿಟಿವಿ ಭದ್ರತೆ ಮತ್ತು ಬಿಗಿ ಪೊಲೀಸ್ ಬಂದೋಬಸ್ತ್ ಮಧ್ಯೆ, ಮಧ್ಯಾಹ್ನ 2 ರಿಂದ 5 ಗಂಟೆವರೆಗೆ ಕರ್ನಾಟಕ ಕೇಂದ್ರೀಯ ವಿವಿ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪ್ರಾದೇಶಿಕ ಕಚೇರಿ, ಜೇವರ್ಗಿ ಕಾಲೋನಿಯ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ನೂತನ ವಿದ್ಯಾಲಯ ಸಂಸ್ಥೆ ಸೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅನುದಾನಿತ ಪಿಯು ಕಾಲೇಜು ಸೇರಿ 20 ಪರೀಕ್ಷಾ ಕೇಂದ್ರಗಳಲ್ಲಿ 7,768 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೆ, 341 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾದರು. ಯಾವುದೇ ಅಹಿತಕರ ಘಟನೆ ನಡೆಯದೆ ಅತ್ಯಂತ ಶಾಂತಿಯುತವಾಗಿ ಸುಸೂತ್ರವಾಗಿ ಪರೀಕ್ಷೆ ನಡೆಯಿತು ಎಂದು ನಗರ ನೋಡಲ್ ಅಧಿಕಾರಿ ಡಾ. ಶಂಭುಲಿಂಗ 'ಸಂಯುಕ್ತ ಕರ್ನಾಟಕ'ಕ್ಕೆ ತಿಳಿಸಿದರು.

ಪುಸ್ತಕ ಖರೀದಿಸಿ ಓದುವವರ ಸಂಖ್ಯೆ ಕ್ಷೀಣ

ಸಿಯುಕೆ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ ಅಸಮಾಧಾನ | ಶಿವಾನಂದ ಸ್ವಾಮೀಜಿ ಅವರಿಗೆ ಪ್ರಶಸ್ತಿ ಪ್ರದಾನ

ಸಂ.ಕ. ಸಮಾಚಾರ ಕಲಬುರಗಿ: ಇತ್ತೀಚೆಗೆ ಪುಸ್ತಕಗಳನ್ನು ಖರೀದಿಸಿ ಓದುವವರ ಸಂಖ್ಯೆ ಕಡಿಮೆ ಆಗುತ್ತಿದ್ದು, ಬರೆಯುವವರ ಸಂಖ್ಯೆಯೂ ಇಳಿಮುಖವಾಗುತ್ತಿದೆ. ಇಂದಿನ ಯುವಕರು ಬಸವಣ್ಣ, ಅಕ್ಕಮಹಾದೇವಿ ಸೇರಿ ಬಸವಾದಿ ಶರಣರ ಬದುಕು ಮತ್ತು ಬರಹದ ಬಗ್ಗೆ ಪ್ರೇರಣೆ ಪಡೆದು ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದು ಸಿಯುಕೆ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ ಹೇಳಿದರು.

ನಗರದ ಕೆಕೆಸಿಸಿಐ ಸಭಾಂಗಣದಲ್ಲಿ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನದಿಂದ ಈಚೆಗೆ ನಡೆದ ಬಸವ ಪ್ರಕಾಶನ ಸಂಸ್ಥಾಪಕರಾದ ಲಿಂ.ಬಸಮ್ಮ ಬ.ಕೊನೇಕ್ ಅವರ 13ನೇ ಪುಣ್ಯ ಸ್ಮರಣೋತ್ಸವ ಪ್ರಯುಕ್ತ ರಾಜ್ಯ ಮಟ್ಟದ 'ಬಸವ ಸಿರಿ' ಪ್ರಶಸ್ತಿ ಪ್ರದಾನ, ಕಾಯಕ ದಿನಾಚರಣೆ ಮತ್ತು ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿ, 12ನೇ ಶತಮಾನದಲ್ಲಿ ಬಸವಾದಿ ಶರಣರು ಸಮ ಸಮಾಜ ನಿರ್ಮಿಸಿದರು.

ಕಲಬುರಗಿಯಲ್ಲಿ ಸಿದ್ಧಲಿಂಗೇಶ್ವರ ಬುಕ್ ಡಿಪೋದಿಂದ ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನಮಠದ ಶಿವಾನಂದ ಸ್ವಾಮೀಜಿ 'ಬಸವ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಚನಗಳ ಮೂಲಕ ಸಮಾಜದಲ್ಲಿನ ಅಂಕು ಡೊಂಕು ತಿದ್ದಿದವರು ಎಂದರು. ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನಮಠದ ಶಿವಾನಂದ ಸ್ವಾಮೀಜಿ 'ಬಸವ ಸಿರಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಕಾಯಕವೇ ಕೈಲಾಸ ಎಂಬ ಬಸವಣ್ಣನವರ ತತ್ವದಡಿ, ಕಾಯಕ ಕೇವಲ ಜೀವನೋಪಾಯವಲ್ಲ, ಅದು ವ್ಯಕ್ತಿತ್ವವನ್ನು ರೂಪಿಸುವ, ಪರಿಶುದ್ಧಗೊಳಿಸುವ ಮತ್ತು ಸಮಾಜವನ್ನು ಕಟ್ಟುವ ಪ್ರಕ್ರಿಯೆಯಾಗಿದೆ ಎಂದರು.

ಡಾ. ಸಿ. ಆರ್. ಚಂದ್ರಶೇಖರ್ ನಾಲ್ಕು ಹಾಗೂ ಶರಣಬಸಪ್ಪ ವಡ್ಡನಕೇರಿ ಸಂಪಾದಿತ ಕಾಯಕ ಶರಣರು ಸೇರಿ ಐದು ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಸಾಹಿತಿ ಡಾ.ಕಾವ್ಯಶ್ರೀ ಮಹಾಗಾಂವಕರ್ ಮಾತನಾಡಿದರು. ಸಾಹಿತಿ ಡಾ. ಗವಿಸಿದ್ದಪ್ಪ ಪಾಟೀಲ್ ಕೃತಿಗಳ ಪರಿಚಯಿಸಿದರು. ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಅಧ್ಯಕ್ಷ ಡಾ.ಬಸವರಾಜ ಕೊನೇಕ ಅಧ್ಯಕ್ಷತೆ ವಹಿಸಿದ್ದರು. ಸಿದ್ಧಲಿಂಗ ಕೊನೇಕ್, ಶರಣಬಸವ ಕೊನೇಕ್, ಈರಣ್ಣ ಕೊನೇಕ್, ಪ್ರೀತಿ ಕೊನೇಕ್, ಡಾ.ಲಕ್ಷ್ಮೀ ಕೊನೇಕ್, ವೀರಣ್ಣ ಮಹಾಂತಗೋಳ, ಶಿವಾನಂದ ಕಶೆಟ್ಟಿ, ಡಾ. ಚಿ.ಸಿ.ನಿಂಗಣ್ಣ, ಶಿವರಾಜ ಕಾಳಗಿ, ಗಂಗಾಧರ ದೇಸಾಯಿ ಇದ್ದರು. ಪ್ರೊ. ಶಿವರಾಜ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಶರಣಬಸಪ್ಪ ವಡ್ಡನಕೇರಿ ನಿರೂಪಿಸಿದರು.

ಬಸವ ಸಿರಿ ಪ್ರಶಸ್ತಿ ಪ್ರದಾನ

ಲಿಂ. ಬಸಮ್ಮ ಕೊನೇಕ್ ಅವರ 13ನೇ ಸ್ಮರಣೋತ್ಸವ ಪ್ರಯುಕ್ತ ನೀಡುವ 2026ನೇ ಸಾಲಿನ ರಾಜ್ಯ ಮಟ್ಟದ 'ಬಸವ ಸಿರಿ' ಪ್ರಶಸ್ತಿ ಹಾಗೂ 11 ಸಾವಿರ ಗೌರವ ಧನವನ್ನು ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನ ಮಠದ ಶ್ರೀ ಶಿವಾನಂದ ಸ್ವಾಮೀಜಿಗಳಿಗೆ ನೀಡಿ ಗೌರವಿಸಲಾಯಿತು. ಜತೆಗೆ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ 3ನೇ ರ‍್ಯಾಂಕ್ ಪಡೆದ ಗಣೇಶ ಬೋಸ್ಲೆ ಹಾಗೂ ಪಿಯುಸಿಯಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆದ ಸೃಷ್ಟಿ ಪಾಟೀಲ್‌ಗೆ ಸನ್ಮಾನಿಸಲಾಯಿತು.

ವ್ಯಕ್ತಿತ್ವ ವಿಕಸನಕ್ಕೆ ಎನ್ನೆಸ್ಸೆಸ್ ಸೂಕ್ತ ವೇದಿಕೆ

ಸಂ.ಕ.ಸಮಾಚಾರ ಸೇಡಂ: ಆತ್ಮವಿಶ್ವಾಸ ಹೆಚ್ಚಲು ಮತ್ತು ವ್ಯಕ್ತಿತ್ವ ವಿಕಸನಕ್ಕೆ ಎನ್ನೆಸ್ಸೆಸ್ ಸೂಕ್ತ ವೇದಿಕೆಯಾಗಿದೆ ಎಂದು ಸಂಶೋಧಕ ಸಾಹಿತಿ ಮುಡುಬಿ ಗುಂಡೇರಾವ ಅಭಿಮತವ್ಯಕ್ತಪಡಿಸಿದರು.

ಪಟ್ಟಣದ ಕೊತ್ತಲಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ನೃಪತುಂಗ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ ಎನ್ನೆಸ್ಸೆಸ್ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಸಕ್ರಿಯವಾಗಿ ಎನ್ನೆಸ್ಸೆಸ್ ಶಿಬಿರಗಳಲ್ಲಿ ತೊಡಗಿಕೊಳ್ಳುವ ಮೂಲಕ ಶಿಸ್ತು, ಸಹಬಾಳ್ವೆ, ಸ್ವಾವಲಂಬನೆ, ಮಾನವೀಯತೆ, ಶ್ರಮದಾನ, ಸ್ವಚ್ಛತೆ, ಸಹನೆ, ಸಕರಾತ್ಮಕ ಮೌಲ್ಯಗಳನ್ನು ರೂಢಿಸಿಕೊಂಡು ಸಮಗ್ರ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಇತಿಹಾಸ, ಕೃಷಿ, ಜಾನಪದ, ಆರೋಗ್ಯ, ಸಾಹಿತ್ಯ, ಸಂಗೀತ, ರಂಗಭೂಮಿ ಮುಂತಾದ ಮೌಲ್ಯಗಳನ್ನು ತಿಳಿದುಕೊಂಡು ಭವಿಷ್ಯತ್ತಿನಲ್ಲಿ ಸುಂದರ ಬದುಕು ಕಟ್ಟಿಕೊಳ್ಳಬೇಕು, ದೇವಾಲಯ, ಸ್ಮಾರಕಗಳ, ಕೋಟೆ, ಕೊತ್ತಲಗಳ, ದೇವಸ್ಮಾರಕಗಳನ್ನು ರಕ್ಷಿಸುವ ಕೆಲಸವಾಗಬೇಕು, ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳಸಬೇಕು ಎಂದು ಸಲಹೆ ನೀಡಿದರು.

ಸೇಡಂದ ನೃಪತುಂಗ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ ಎನ್ನೆಸ್ಸೆಸ್ ವಿಶೇಷ ಶಿಬಿರವನ್ನು ಸಾಹಿತಿ ಮುಡುಬಿ ಗುಂಡೇರಾವ ಉದ್ಘಾಟಿಸಿದರು.

> ಯುವಕರು ದೇಶದ ಸಂಪತ್ತು, ಜ್ಞಾನವನ್ನು ಬೆಳಿಸಿಕೊಂಡು ಸಮಾಜಕ್ಕೆ ಅಮೂಲ್ಯ ಕಾಣಿಕೆ ನೀಡಬೇಕು, ದೇಶಭಕ್ತಿ, ಶ್ರಮಗೌರವ ಮುಂತಾದ ಮೌಲ್ಯಗಳನ್ನು ಶಿಬಿರ ಗಳಿಂದ ಕಲಿಯಬೇಕು, ಆದರ್ಶ ವ್ಯಕ್ತಿಗಳಾಗಬೇಕು.
>
> ■ **ಪ್ರೊ.ಶಾಮಸುಂದ ಕಲಾಲ್**
> ಪ್ರಾಚಾರ್ಯ, ನೃಪತುಂಗ ಕಾಲೇಜ್

ಸಂಸ್ಥೆಯ ಸಹಕಾರ್ಯದರ್ಶಿ ಡಾ. ಸದಾನಂದ ಬೂದಿ, ಪ್ರಾಚಾರ್ಯ ಪ್ರೊ. ಶಾಮಸುಂದರ ಕಲಾಲ ಮಾತನಾಡಿದರು. ವಿಜಯಶಂಕರ ಹೊಸಪೇಟ, ಶಿವಶರಣಯ್ಯ ಮಠ, ಡಾ. ಸುವರ್ಣ ವರ್‍ಖೆ, ಜಗನ್ನಾಥ ಪಾಟೀಲ, ಪವನಕುಮಾರ, ಅರ್ಜುನ ರಾಠೋಡ, ಸುರೇಶಕುಮಾರ ಬಬಲಾದ, ಅಂಜನಾ ಆರ್, ಸುಗಂದಾ, ಮಯೂರ ಕ್ಷೀರಸಾಗರ, ಸರಸ್ವತಿ ಬಿ, ಅಧಿಕಾರಿ ಮಹಮ್ಮದ ಅಸ್ಲಾಂ ನದಾಫ್ ಸ್ವಾಗತಿಸಿದರು, ಅಮರೆಮ್ಮ ಮಮಾಜಿ ನಿರೂಪಿಸಿದರು. ಅಶ್ವಿನಿ ವಂದಿಸಿದರು.

ಕುಟುಂಬವನ್ನೇ ಕೊಲ್ಲುವ ಮದ್ಯಪಾನ

ಸಂ.ಕ.ಸಮಾಚಾರ ಚಿತ್ತಾಪುರ: ಮದ್ಯಪಾನ ಎಂಬ ದುಶ್ಚಟ ಕೇವಲ ವ್ಯಕ್ತಿಯನಲ್ಲ ಆತನ ಇಡೀ ಕುಟುಂಬವನ್ನೇ ಕೊಲ್ಲುತ್ತದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯಾದಗಿರಿ ಜಿಲ್ಲಾ ನಿರ್ದೇಶಕ ವಸಂತ್ ಗೌಡ ಹೇಳಿದರು.

ಪಟ್ಟಣದ ಕಂಬಳೇಶ್ವರ ಸಂಸ್ಥಾನ ಮಠದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ವತಿಯಿಂದ ಏರ್ಪಡಿಸಲಾಗಿದ್ದ ಏಳು ದಿನಗಳ ಮದ್ಯ ವ್ಯರ್ಜನ ಶಿಬಿರದಲ್ಲಿ ಅವರು ಮಾತನಾಡಿ, ಸಾರಾಯಿ ಕುಡಿತ ಎಂಬುವುದು ವ್ಯಕ್ತಿಯ ಜೀವನಕ್ಕೆ ಅಂಟಿದ ಮಹಾರೋಗವಾಗಿ ಬದುಕು ಹಾಳು ಮಾಡುತ್ತಿದೆ. ಈ ದುಶ್ಚಟ ಬಿಡಲು ಎಷ್ಟೇ ಪ್ರಯತ್ನಿಸಿದರೂ ಇದರಿಂದ ಮುಕ್ತಿ ಸಾಧ್ಯವಾಗದೆ ಅನೇಕ ಜನರು ಜೀವನದಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂದರು.

ಪ್ರಾಸ್ತವಿಕವಾಗಿ ಮಾತನಾಡಿದ ಜನಜಾಗೃತಿ ವೇದಿಕೆಯ ಪ್ರಾದೇಶಿಕ ಯೋಜನೆ ಅಧಿಕಾರಿ ರಾಜೇಶ್ ಕೆ, ಧರ್ಮಸ್ಥಳ ಸಂಸ್ಥೆಯಿಂದ ಇದುವರೆಗೂ 2050 ಶಿಬಿರಗಳನ್ನು ಕರ್ನಾಟಕದ ವಿವಿಧೆಡೆ ಯಶಸ್ವಿಯಾಗಿ ಸಂಘಟಿಸಲಾಗಿದೆ. ಚಿತ್ತಾಪುರದಲ್ಲಿ 2051ನೇ ಶಿಬಿರ ನಡೆಯುತ್ತಿದ್ದು, ಈಗಾಗಲೇ 40ಕ್ಕೂ ಹೆಚ್ಚು ಜನ ಮದ್ಯ ವ್ಯಸನಿಗಳು ಶಿಬಿರಾರ್ಥಿಗಳಾಗಿ ಪಾಲ್ಗೊಂಡಿದ್ದಾರೆ. ಮದ್ಯಪಾನ ಚಟದಿಂದ ಮದ್ಯಪಾನದಿಂದ ಬಿಡುಗಡೆ ಹೊಂದಲು ಸಾಧ್ಯವಾಗುತ್ತಿಲ್ಲವೋ ಅಂತವರು ಶಿಬಿರದಲ್ಲಿ ಭಾಗವಹಿಸಿ ಮದ್ಯಪಾನ ಮುಕ್ತ ಜೀವನ ನಡೆಸಲು ಮುಂದಾಗಬೇಕು ಎಂದರು.



ಕಂಬಳೇಶ್ವರ ಸಂಸ್ಥಾನ ಮಠದಲ್ಲಿ ಏರ್ಪಡಿಸಲಾಗಿದ್ದ ಏಳು ದಿನಗಳ ಮದ್ಯ ವ್ಯರ್ಜನ ಶಿಬಿರವನ್ನು ಶ್ರೀ ಸೋಮಶೇಖರ ಶಿವಾಚಾರ್ಯ ಉದ್ಘಾಟಿಸಿದರು.

ಶಿಬಿರದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಂಬಳೇಶ್ವರ ಮಠದ ಪೀಠಾಧಿಪತಿ ಶ್ರೀಸೋಮಶೇಖರ್ ಶಿವಾಚಾರ್ಯರು, ಸಾರಾಯಿ ಕುಡಿತ ಎಂಬುವುದು ಸಂಸಾರವನ್ನೇ ಸರ್ವನಾಶ ಮಾಡುತ್ತಿದೆ. ಇದರಿಂದ ಹೊರಬರಲಾಗದೆ ಅನೇಕ ಕುಟುಂಬಗಳು ನರಕದ ಜೀವನ ನಡೆಸುತ್ತಿವೆ ಎಂದರು.

ಮದ್ಯ ವ್ಯರ್ಜನ ಸಮಿತಿ ಉಪಾಧ್ಯಕ್ಷ ಪ್ರಹ್ಲಾದ್ ವಿಶ್ವಕರ್ಮ, ಕ್ಷೇತ್ರ ಯೋಜನಾಧಿಕಾರಿ ಗುರುರಾಜ್ ಬಿ, ಸೋಮಶೇಖರ ಟೋಕಾಪೂರ, ನಾಗೇಂದ್ರ, ವೆಂಕಟೇಶ, ಮೇಲ್ವಿಚಾರಕಿ ಅರ್ಚನಾ ಸೇರಿ ಸ್ವ ಸಹಾಯ ಸಂಘದ ಸದಸ್ಯರು, ತಾಲೂಕಿನ ಸೇವಾ ಪ್ರತಿನಿಧಿಗಳು, ಶೌರ್ಯ ತಂಡದ ಸದಸ್ಯರು ಭಾಗವಹಿಸಿದರು.

ಯಲ್ಲಮ್ಮ ದೇವಿ ಜಾತ್ರೆ: ಪ್ರಸಾದ ವಿತರಣೆ

ಅಫಜಲಪುರ: ತಾಲೂಕಿನ ಮಣ್ಣೂರ ಗ್ರಾಮದ ಬಜಾರಕಟ್ಟೆ ಆವರಣದಲ್ಲಿ ಆದರ್ಶ ಗೆಳೆಯರ ಬಳಗದ ವತಿಯಿಂದ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಜಾತ್ರೆಗೆ ಕರ್ನಾಟಕ, ಮಹಾರಾಷ್ಟ್ರ, ಆಂದ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯ ಹಾಗೂ ವಿವಿಧ ಜಿಲ್ಲೆಗಳಿಂದಲೂ, ಆಗಮಿಸಿದ್ದ ಭಕ್ತರಿಗೆ ಆದರ್ಶ ಗೆಳೆಯರ ಬಳಗದ ಸದಸ್ಯರು ಪ್ರಸಾದ ವ್ಯವಸ್ಥೆ ಮಾಡಿದ್ದರು. ಸದಸ್ಯರು 11 ವರ್ಷಗಳಿಂದ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮತ್ತು ಶುದ್ದ ಕುಡಿಯುವ ನೀರು ತಂಪಾದ ಮಜ್ಜಿಗೆ ಸೇವೆ ಮಾಡುತ್ತ ಬಂದಿದ್ದಾರೆ. ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದ್ದಾರೆ. ಹಾಲಯ್ಯ ಹೀರೇಮಠ, ಮಹಾದೇವಪ್ಪ ಕರೂಟಿ, ವಿಶ್ವನಾಥ ಅಜಗೊಂಡ, ರಮೇಶ ಬಾಕೆ, ಸಾ.ಸಿ ಬೆನಕನಹಳ್ಳಿ, ಬಳಗದ ಯಲ್ಲಾಲಿಂಗ ಪೂಜಾರಿ, ಪ್ರಸನ್ನ ಆಲೂರ, ಮಲ್ಲಿಕಾರ್ಜುನ ಬಾಗೇವಾಡಿ, ಮಲ್ಲಿನಾಥ ರೋಡಗಿ, ಪ್ರಭುಲಿಂಗ ಆಲೂರ, ಚಂದ್ರಕಾಂತ ಹಳಗೋದಿ, ಜಗದೀಶ ದೇಶಟ್ಟಿ, ಶಿವಾನಂದ ಬಲ್ಲಾ, ಅನೀಲಗೌಡ ಕರೂಟಿ, ಸಚೀನ ಕೊಪ್ಪ, ಶಿವಾನಂದ ವಾಲಿ, ಪ್ರಭುಲಿಂಗ ಮಠಪತಿ, ಪ್ರವೀಣ ಬಾಕೆ, ಸೋಮನಾಥ ನಂದಿಮಠ, ಮಲ್ಲಿಕಾರ್ಜುನ ಸೂಗೂರ, ಸಾಯಬಣ್ಣ ಕುಂಬಾರ, ಧಾನಪ್ಪ ಕೊಪ್ಪ, ರಾಹುಲ ಅಜಗೊಂಡ, ಶಿವಯ್ಯ ಕಳ್ಳಿಮಠ, ಮಿಥುನ ನಂದಿ, ಚನ್ನಪ್ಪ ಅಜಗೊಂಡ, ಪಿಂಟು ತಕ್ಕಾ, ಇತರರಿದ್ದರು.



ಉರ್ಸ್ ಶರೀಫ್ ಅಧಿಕೃತ ಸಮಾರಂಭಗಳು ಆರಂಭ

ಕಲಬುರಗಿ : ಜುಲೂಸ್–ಎ–ಸಂದಲ್ ಮುಬಾರಕ್ ಕಲಬುರಗಿ (ಗುಲ್ಬರ್ಗಾ) ನಗರದಲ್ಲಿ ಸುಲ್ತಾನ್–ಎ–ದಕ್ಕನ್ ಹಜರತ್ ಅವರ 622ನೇ ಉರ್ಸ್ ಶರೀಫ್ ಅಂಗವಾಗಿ ನಡೆದ ಜುಲೂಸ್–ಎ–ಸಂದಲ್ ಮುಬಾರಕ್ ಭವ್ಯವಾಗಿ ಆರಂಭವಾಯಿತು. ಭಾನುವಾರ, ಉರ್ಸ್ ಶರೀಫ್ ಕಾರ್ಯಕ್ರಮಗಳು ಅಧಿಕೃತವಾಗಿ ಪ್ರಾರಂಭವಾದವು. ಹಜರತ್ ಸಜ್ಜಾದಾ ನಶೀನ್ ಡಾ. ಹಾಫಿಜ್ ಸಯ್ಯದ್ ಮಹಮ್ಮದ್ ಅಲಿ ಅಲ್ ಹುಸೈನೀ ಸಾಹೇಬ್ ಅವರ ಮಾರ್ಗದರ್ಶನದಲ್ಲಿ ನಮಾಝ್–ಎ–ಅಸರ್ ಅನ್ನು ಮೌಲಾನಾ ಅಬ್ದುಲ್ ರಶೀದ್ ಸಾಹೇಬ್ ನೆರವೇರಿಸಿದರು.

ನಂತರ ಮೆಫಿಲ್–ಎ–ಸಮಾ ಕಾರ್ಯಕ್ರಮ ಆಯೋಜಿಸಲಾಯಿತು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಕವ್ವಾಲರು ಭಾಗವಹಿಸಿ ಭಕ್ತಿಗೀತೆಗಳ ಮೂಲಕ ಮುಬಾರಕ್‌ಬಾದಿ ಸಲ್ಲಿಸಿದರು.

ಮೆಫಿಲ್–ಎ–ಸಮಾ ನಂತರ, ಸಂಜೆ 6:15ಕ್ಕೆ ಸಜ್ಜಾದಾ ನಶೀನ್ ಡಾ. ಸಯ್ಯದ್ ಮಹಮ್ಮದ್ ಅಲಿ ಅಲ್ ಹುಸೈನೀ ಸಾಹೇಬ್ ಅವರು ಸಂದಲ್ ಮುಬಾರಕ್‌ನ ಕಷ್ತಿಗಳನ್ನು ತಮ್ಮ ತಲೆಯ ಮೇಲೆ ಹೊತ್ತು ಜುಲೂಸ್ ಅನ್ನು ಆರಂಭಿಸಿದರು.

ಜುಲೂಸ್–ಎ–ಸಂದಲ್ ಮಹಬೂಬ್ ಗುಲ್ಶನ್‌ನಿಂದ ಪ್ರಾರಂಭವಾಗಿ ದರ್ಗಾಹ ಹಜರತ್ ಖ್ವಾಜಾ ಬಂದಾ ನವಾಜ್ (ರ.ಅ) ಕಡೆಗೆ ಹೊರಟಿತು. ಜುಲೂಸ್ ಮುಂಚೆ ರಿಫಾಈ ಫುಕ್ರಾಗಳ ದಂಡು ಸಾಗುತ್ತಿದ್ದು, ಅವರ ಭಾವಪೂರ್ಣ ಆಧ್ಯಾತ್ಮಿಕ ಪ್ರದರ್ಶನಗಳು ಜನರ ಗಮನ ಸೆಳೆದವು.ಈ ಜುಲೂಸ್ ಸೂಪರ್ ಮಾರ್ಕೆಟ್, ಚೌಕ್, ಮಾರ್ಕೆಟ್ ಮಸೀದಿ ಮಾರ್ಗವಾಗಿ ಸಾಗಿತು, ಅಲ್ಲಿ ಮಘ್ರಿಬ್ ನಮಾಝ್ ನೆರವೇರಿಸಲಾಯಿತು. ನಂತರ ಸರಾಫ್ ಬಜಾರ್, ಚೌಕ್ ಮಸೀದಿ, ಬಹಮನಿ ಚೌಕ್, ನ್ಯಾಷನಲ್ ಚೌಕ್ ಮಾರ್ಗವಾಗಿ ಗ್ಯಾರಹ್ ಸೀಢಿ ಕಡೆಗೆ ಮುಂದುವರಿಯಿತು. ಕಾರ್ಯಕ್ರಮದ ಪ್ರಕಾರ, ಜುಲೂಸ್ ರಾತ್ರಿ 10:30ಕ್ಕೆ ಗ್ಯಾರಹ್ ಸೀಢಿ ತಲುಪಲಿದೆ, ಅಲ್ಲಿ ಸಂದಲ್ ಮುಬಾರಕ್‌ಗೆ ಸಜ್ಜಾದಾ ನಶೀನ್ ಸ್ವತಃ ಸ್ವಾಗತ ಕೋರಲಿದ್ದಾರೆ. ಈ ಸಂದರ್ಭದಲ್ಲಿ ಡಾ. ಸಯ್ಯದ್ ಮುಸ್ತಫಾ ಅಲ್ ಹುಸೈನೀ ಸಾಹೇಬ್, ಸಯ್ಯದ್ ಮಹಮ್ಮದ್ ಸಯ್ಯದ್ ಹುಸೈನೀ ಸಾಹೇಬ್ (ಸಜ್ಜಾದಾ ನಶೀನ್ ಅವರ ಹಿರಿಯ ಪುತ್ರ), ಸಯ್ಯದ್ ಶಾ ಸಫಿಯುಲ್ಲಾ ಹುಸೈನೀ, ಸಯ್ಯದ್ ಶಾ ರಹೀಮುಲ್ಲಾ ಹುಸೈನೀ, ಸಯ್ಯದ್ ಶಾ ಹಸನ್ ಶಬ್ಬೀರ್ ಹುಸೈನೀ (ರೋಜಾ–ಎ–ಖುರ್ದ್ ಸಜ್ಜಾದಾ ನಶೀನ್), ಸಯ್ಯದ್ ಶಾ ತಕಿಣಟಿಜಜಿಟಿಜಜಲ್ಲಾ ಹುಸೈನೀ, ಸಯ್ಯದ್ ಅಹ್ಮದ್ ಹುಸೈನೀ, ಸಯ್ಯದ್ ಮುರ್ತಜಾ ಹುಸೈನೀ, ಸಯ್ಯದ್ ಅಕೀಬ್ ಹುಸೈನೀ ಸೇರಿದಂತೆ ಬಂದಾ ನವಾಜ್ ಖಾಂದಾನದ ಸದಸ್ಯರು ಹಾಜರಿದ್ದರು. ಇದಲ್ಲದೆ ಸಜ್ಜಾದ್ಗಾನ್, ಮಶಾಯಿಖ್–ಎ–ಇಜಾಮ್, ಉಲಮಾ–ಎ–ಕಿರಾಮ್ ಹಾಗೂ ಸಾವಿರಾರು ಭಕ್ತರು ಮತ್ತು ಜಾಯರೀನ್‌ಗಳ ಭವ್ಯ ಉಪಸ್ಥಿತಿಯಿಂದ ನಗರದೆಲ್ಲೆಡೆ ಐತಿಹಾಸಿಕ ರಸ್ತೆಗಳ ಮೇಲೆ ಆತ್ಮೀಯ ಮತ್ತು ಆಧ್ಯಾತ್ಮಿಕ ವಾತಾವರಣ ಕಂಡುಬಂತು.

ಉದ್ಯಾನವನ ಉದ್ಘಾಟನೆ

ರಾಯಚೂರು: ನಗರದ ವಾರ್ಡ್ ನಂ. 5ರ ಕಾಕತೀಯ ಕಾಲೋನಿಯಲ್ಲಿ ಅಭಿವೃದ್ಧಿಪಡಿಸಲಾದ ಉದ್ಯಾನವನವನ್ನು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಉದ್ಘಾಟಿಸಿದರು. 2024–25ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ, ವಾರ್ಡ್ ನಂ. 5ರ ಕಾಕತೀಯ ಕಾಲೋನಿ ಯ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

AFFIDVIT

It is general information that I **RAHEMAN S/o ABDUL HAQ SHAIKH**, R/o E/8/1754, Filter Bed Road, Fatima Masjid, Taj Nagar Muslim Sangh, VTC-Gulbarga, Po-GB N Gunj, District-Kalaburagi, Karnataka-585104, declare that name of mine and my father and mother have been wrongly written as **ABDUL SHAKUR SHAIKH and HASINABEE in my Birth Certificate No. 750759492.** The actual name min and my father and my mother are **ABDUL HAQ SHAIKH and MALAN BEE** respectively, which may be amended accordingly.

Hence, this affidavit sworn on this day of 6th March, 2026 at Kalaburagi.

Advocate & Notary by,
Sachin S Maroor

AFFIDVIT

It is general information that I **ARMAN SHAIKH S/o ABDUL HAQ SHAIKH**, R/o E/8/1754, Filter Bed Road, Fatima Masjid, Taj Nagar Muslim Sangh, VTC-Gulbarga, Po-GB N Gunj, District-Kalaburagi, Karnataka-585104, declare that name of mine and my father and mother have been wrongly written as **ARMAN and ABDUL SHAKUR SHAIKH and HASINABEE in my Birth Certificate No. 750760793.** The actual name min and my father and my mother are **ARMAN SHAIKH and ABDUL HAQ SHAIKH and MALAN BEE** respectively, which may be amended accordingly.

Hence, this affidavit sworn on this day of 6th March, 2026 at Kalaburagi.

Advocate & Notary by,
Sachin S Maroor

ಕಸ್ತೂರಿ ತಪ್ಪದೆ ಓದಿ

CITATION

IN THE COURT OF THE PRL SENIOR CIVIL, JUDGE AT KALABLURAGI
MVC.NO. 371/2023

Smt. Bhimabai W/o Devappa. age: 75 years Occ: Nil R/o, Muttaga, Tq; Shahabad Dist: Kalaburagi, Now resding at H.No. 52/1, Karuneshwar Nagar, Kalaburagi,

V/S

1) Ratna Tanaji Malusare S/o Tanaji Malusare, Age: Major, Occ: Businees, R/o at Godvali, Post: Khingar, Tal, Mahabaleshwar, Satara MH-412 802, (Owner of motor cycle bearing Reg.No.MH.11-DC.3365)

2)MAGMA HDI General Insurance Co. Ltd., through its Branchy Manager, MAGMA FINCORP Ltd, # 40, Foundatio NHouse, 4th Floor, 2tn main road, CKC, Garden Mission road, Bangalore-560027, Phone No. 080 40544799

3) Renuka W/o Santosh Pawar, Age: 26 years, Occ: Coole, R/o Ravoor Tq; Chittapur Dist: Kalaburagi

CLAIM PETITION U/SEC. 166 OF IMV ACT

To, The above named respondent No.3

Whereas, the above named petitioner have filed the petition claiming the compensation of Rs.. 38,50,000/- for the grievous head injuries and other multiple bleeding and internal injuries result in death, in the accident the vehicle involved in the accident i.e, vehicle bearing Reg. No. MH-11-DC-3365-Motor cycle occurred on: 17-02-2022 at about 4:30 at pm on Kagina Bridge NH Road, Shankarwadi, Tq; Shahabad in the limits of Shahabad Town P.. The Hon'ble court issued summons through RPAD to you and same were returned un-served as you are intentionally avoiding to receive them. Therefore, you are hereby directed to appear before the Hon'ble court in personally of through pleader on: 8/6/26 at about 10AM to answer the claim petition. If you fail to appear on the said date and time, the case will be heald and decided in your absence on merits. Given under my hand and seal of the court, on this 07 day april 2026 at Kalaburagi.

Advocate claimat Petitioner

BY ORDER OF THE COURT
CHIEF MINISTERIAL OFFICER
PRL.(SR.DN)CIVIL JUDGE & MACT COURT KALABUARGI

ಅರಿವಿನ ವಿಸ್ತಾರ ಹೆಚ್ಚಿಸಿದ ರಂಗ ಪ್ರದರ್ಶನಗಳು

ಪ್ರೊ. ಈಶ್ವರ ಎಂ.ಇಂಗನ್ ರಚಿಸಿದ ಹತ್ತು ಬೌದ್ಧ ನಾಟಕಗಳ ಬಿಡುಗಡೆ

ಸಂ.ಕ.ಸಮಾಚಾರ ಕಲಬುರಗಿ : ಪ್ರಭಾವಶಾಲಿ ಮಾಧ್ಯಮವಾದ ನಾಟಕಗಳ ಮೂಲಕ ಬೌದ್ಧ ತಾತ್ವಿಕ ಚಿಂತನೆಗಳ ಅರಿವಿನ ವಿಸ್ತಾರ ಹೆಚ್ಚಿಸುವಲ್ಲಿ ಪ್ರೊ.ಈಶ್ವರ ಇಂಗನ್ ಕೊಡುಗೆ ಅಪಾರವಾಗಿದೆ. ಬಿಡುಗಡೆಗೊಂಡ ಹತ್ತೂ ನಾಟಕಗಳು ಬುದ್ಧ ಪೂರ್ಣಿಮೆ ಮತ್ತು ವಿವಿಧ ಸಂದರ್ಭಗಳಲ್ಲಿ ಪ್ರದರ್ಶನಗೊಂಡವುಗಳಾಗಿವೆ. ಪ್ರೊ.ಇಂಗನ್ ರಚಿಸಿದ ಹತ್ತು ನಾಟಕಗಳ ಸಂಕಲನದಲ್ಲಿ ಗತಕಾಲ ಹಾಗೂ ವರ್ತಮಾನವನ್ನು ಮುಖಾಮುಖಿಗೊಳಿಸಿದಂತೆ ಕಂಡುಬಂದರೂ ಅಂತರಾಳದಲ್ಲಿ ಮಾತ್ರ ಅವರೆಡರ ನಡುವೆ ಒಂದು ಬಗೆಯ ಅನುಸಂಧಾನವಿದೆ ಎಂದು ಹಿರಿಯ ಲೇಖಕ ಪ್ರೊ.ಎಚ್.ಟಿ.ಪೋತೆ ಅಭಿಪ್ರಾಯ ಪಟ್ಟಿದ್ದಾರೆ.

ಬುದ್ಧಾಂಕುರ ನಾಟಕವು ಈ ಸಂಕಲನದ ಹತ್ತು ನಾಟಕಗಳಲ್ಲಿ ಮೊದಲನೆಯದಾಗಿದ್ದು, ಸಿದ್ಧಾರ್ಥನ ಜನನದ ಸಂದರ್ಭ, ಆತನ ಭವಿಷ್ಯವಾಣಿ, ಘಟನಾತ್ಮಕ ವಸ್ತುವನ್ನು ಆಧರಿಸಿದ್ದಾಗಿದೆ. ಜಲ ಎಂಬ ಎರಡನೇ ನಾಟಕದಲ್ಲಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಸಂಘರ್ಷದ ವಸ್ತುಹೊಂದಿದೆ. ಶಾಕ್ಯರ ಸಂಘ. ಸಂಘದ ವಿರುದ್ಧ ಹೋದವರಿಗೆ ಶಿಕ್ಷೆ. ಶಾಕ್ಯರು ಮತ್ತು ಕೋಳಿಯನ್ನರ ನಡುವಿನ ಯುದ್ಧ. ಸಿದ್ಧಾರ್ಥ ಹೇಳಿದ ಹೇಳಿಕೆ ಖಂಡಿಸಿ, ಆತನ ಕುಟುಂಬಕ್ಕೆ ಬಹಿಷ್ಕಾರದ ಶಿಕ್ಷೆ ತಪ್ಪಿಸುವುದರ ಸಲುವಾಗಿ ತಾನೊಬ್ಬನೇ ರಾಜ್ಯಬಿಟ್ಟು ಅರಣ್ಯಕ್ಕೆ ಹೋಗಲು ನಿರ್ಧರಿಸುತ್ತಾನೆ.

ಹಿರಿಯ ನಾಟಕಕಾರ ಪ್ರೊ. ಈಶ್ವರ ಎಂ.ಇಂಗನ್ ರಚಿಸಿದ ಹತ್ತು ಬೌದ್ಧ ನಾಟಕಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಲಬುರಗಿಯ ಬುದ್ಧವಿಹಾರದಲ್ಲಿ ಬಿಡುಗಡೆಗೊಳಿಸಿದರು.

ಮೂರನೇ ನಾಟಕ ಧಮ್ಮಚಕ್ರವಾಗಿದೆ. ಇದರಲ್ಲಿ ಸಿದ್ಧಾರ್ಥ ಗೌತಮನು ಅಜ್ಞಾನದ ಅಂಧಕಾರವನ್ನು ಹೊಡೆದೊಡಿಸಿ ಜ್ಞಾನದ ಬೆಳಕನ್ನು ತರಲು ಮುನಿ ಭಾಸ್ಕರ್ ಅವರಿಂದ ಪರಿವ್ರಾಜಕ ದೀಕ್ಷೆಯನ್ನು ಪಡೆದು ಉರುವೇಲ ರಾಜ್ಯದ ಸೇನಾ ಎಂಬ ಹಳ್ಳಿಗೆ ಸಿದ್ಧಾರ್ಥ ಒಬ್ಬನೇ ಬರುವನು. ಅದು ಧ್ಯಾನ ಮಾಡಲು ಪ್ರಶಾಂಕವಾದ ಸ್ಥಳವಾಗಿತ್ತು. ಶಾಂತಿಯ ಮಾರ್ಗದಲ್ಲಿ ನಡೆದು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಅನ್ನ ನೀರಿಲ್ಲದೆ ತಪಸ್ಸು ಮಾಡುವುದು. ಪರಿವ್ರಾಜಕರು ಬಂದು ಸೇರುವುದು. ಮುಂತಾದ ಘಟನಾವಳಿಗಳನ್ನು ಈ ನಾಟಕ ಹೊಂದಿದೆ.

ನಾಲ್ಕನೆಯ ನಾಟಕ ಉಪಗುಪ್ತವಾಗಿದೆ. ಈ ನಾಟಕವು ಮಥುರಾ ಪಟ್ಟಣದ ವಾಸವದತ್ತಾ ಎಂಬ ರಾಜ ನರ್ತಕಿಯು ತನ್ನ ನರ್ತನೆಗೆ ಹಾಗೂ ಸೌಂದರ್ಯಕ್ಕೆ ಹೆಸರುವಾಸಿಯಾಗಿದ್ದಳು. ಸೌಂದರ್ಯದ ಬಗ್ಗೆ ಹೆಮ್ಮೆಯಿತ್ತು. ಬೌದ್ಧ ಧಮ್ಮದ ತತ್ವಗಳ ಸೌಂದರ್ಯದ ಎದುರು ತನ್ನ ಸೌಂದರ್ಯ ಏನೂ ಅಲ್ಲ ಎಂಬ ಅರಿವಾಗಿ ಸಂಘವನ್ನು ಸೇರುತ್ತಾಳೆ.

ಐದನೆಯ ನಾಟಕ ಅಹಿಂಸಕವಾಗಿದೆ. ಅಂಗುಲಿಮಾಲ ಕಥಾನಕ ಹೊಂದಿದೆ. ಆರನೆಯ ನಾಟಕ ಕೃಷಾ ಗೌತಮಿ ಕುರಿತಾದ ಕಥಾಹಂದರ ಒಳಗೊಂಡಿದೆ. ಏಳನೆಯದು ಅಮ್ರಪಾಲಿ ಕಥೆಯನ್ನು ಒಳಗೊಂಡಿದೆ. ಬುದ್ಧನು ಅಮ್ರಪಾಲಿಗೆ ಸತ್ಯದ ಮಾರ್ಗ ತೋರಿಸಿ, ತನ್ನ ಸಂಘದಲ್ಲಿ ಸೇರಿಸಿಕೊಳ್ಳುತ್ತಾನೆ. ಮುಂದೆ ಅವಳು, ಒಬ್ಬ ಬೌದ್ಧ ಭಿಕ್ಕುಣಿಯಾಗಿ ಧಮ್ಮ ಪ್ರಚಾರ ಮಾಡುತ್ತಾಳೆ.

ಸುಜಾತ ಎಂಬ ಎಂಟನೆಯ ನಾಟಕವು ಸುಜಾತ ಮತ್ತು ಸಿದ್ಧಾರ್ಥನ ಪರಿಚಯದ ಘಟನೆಯನ್ನು ಒಳಗೊಂಡಿದೆ. ಚಾಂಡಾಲಿನಿ ಎಂಬ ನಾಟಕವು ಈ ಸಂಕಲನದ ಒಂಭತ್ತನೆಯ ನಾಟಕವಾಗಿದೆ. ತನ್ನ ಶಿಷ್ಯನಾದ ಆನಂದನು ದಾರಿಯಲ್ಲಿ ಸಾಗುವಾಗ ಚಾಂಡಾಲಿನಿ ಎಂಬ ಯುವತಿಗೆ ಕುಡಿಯಲು ನೀರು ಕೇಳುತ್ತಾನೆ. ಅವಳು ಆನಂದನ ಮೇಲೆ ಮೋಹಗೊಳ್ಳುತ್ತಾಳೆ. ಅವಳ ಮನಸ್ಸನ್ನು ಪರಿವರ್ತಿಸುವ ದೃಶ್ಯವನ್ನು ಈ ನಾಟಕ ಒಳಗೊಂಡಿದೆ. ಪಟಾಚಾರ ಇದು ಸಂಕಲನದ ಹತ್ತನೆಯ ನಾಟಕವಾಗಿದೆ. ಬೌದ್ಧಧರ್ಮದಲ್ಲಿ ಪಟಾಚಾರಾಳ ಹೆಸರು ಬಹಳ ಪ್ರಸಿದ್ಧವಾಗಿದೆ. ಇಲ್ಲಿರುವ ಹತ್ತೂ ನಾಟಕಗಳು ಚಾರಿತ್ರಿಕ ಅಂಶಗಳನ್ನು ತಾತ್ವಿಕವಾಗಿ ವಿಶ್ಲೇಷಿಸುವ ಮಾದರಿಯನ್ನು ಅನುಸರಿಸಿವೆ.

ಸುದ್ದಿ ಮಿಂಚು

ಗಾಂಧಿ ಪರಿವಾರದ ಮೂರ್ತಿ ಸ್ಥಾಪನಾ ನಿರ್ಣಯಕ್ಕೆ ಖಂಡನೆ

ಕಲಬುರಗಿ : ಇಲ್ಲಿನ ಗಂಜ್ ಪ್ರದೇಶದಲ್ಲಿನ ಕೆಎಂಎಫ್ ಗೆ ಸಂಭಂದಿಸಿದ ಸ್ಥಳದಲ್ಲಿ ಒಂದೇ ಕುಟುಂಬದ ಮಾಜಿ ಪ್ರಧಾನಿಗಳಾದ ಜವಾಹರ್ ಲಾಲ್ ನೆಹರು, ಇಂದಿರಾಗಾಂಧಿ, ರಾಜೀವ ಗಾಂಧಿ ಪ್ರತಿಮೆಗಳನ್ನು ಸ್ಥಾಪಿಸಲು ನಿರ್ಣಯ ಮಾಡಿದ ಮಹಾನಗರ ಪಾಲಿಕೆಯ ಕ್ರಮ ಖಂಡನೀಯ ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ತಿಳಿಸಿದ್ದಾರೆ.

ವಿಚಿತ್ರ ಅಂದರೆ ದೇಶದ ಘಟಾನುಘಟಿ ಮಾಜಿ ಪ್ರಧಾನಿಗಳನ್ನು ಕಡೆಗಣಿಸಿ ಒಂದೇ ಕುಟುಂಬದ ಮೂರು ಪ್ರಧಾನಿಗಳ ಪ್ರತಿಮೆ ಸ್ಥಾಪನೆ ಸಿದ್ದತೆ ನಡೆಸುತ್ತಿರುವ ಕ್ರಮ ಸಮರ್ಥನೀಯವಲ್ಲ ಎಂದು ಟೀಕಿಸಿದ್ದಾರೆ.

ಯಾವುದೇ ಅನುಮತಿ ಪಡೆಯದೆ ಅಡಿಗಲ್ಲನ್ನೂ ಹಾಕದೆ, ಕದ್ದುಮುಚ್ಚಿ ಸದ್ದಿಲ್ಲದೆ ಕಾಮಗಾರಿ ಪ್ರಾರಂಭಸಿರೋದು ಅನುಮಾನಕ್ಕೆ ಎಡೆಮಾಡಿದೆ. ಮಹಾನಗರದಲ್ಲಿ ಪ್ರತಿಮೆಗಳನ್ನು ಸ್ಥಾಪಿಸುವುದೆ ಆಗಿದ್ದರೆ, ಜೈಜವಾನ್ ಜೈಕಿಸಾನ್ ಘೋಷಣೆಯಿಂದ ಅನ್ನದಾತನಿಗೆ ಗೌರವ ತಂದ ಮಾಜಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಪ್ರತಿಮೆಯನ್ನು ಎಪಿಎಂಸಿಯಲ್ಲಿ ಸ್ಥಾಪಿಸಲಿ. ಅಥವಾ ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ, ಅಥವಾ ನಮ್ಮ ನೆರೆಯ ರಾಜ್ಯದವರಾದ ಪಿ. ವಿ. ನರಸಿಂಹರಾವ್ ಪ್ರತಿಮೆ ಸ್ಥಾಪಿಸಲಿ. ಕಲ್ಯಾಣ ಕರ್ನಾಟಕ ಪ್ರದೇಶ ವಿಮೋಚನೆಗಾಗಿ ಶ್ರಮಿಸಿದ ಮಹಾನುಭಾವರ ಅಥವಾ ಕಲಬುರಗಿ ಜಿಲ್ಲೆಯಿಂದ ಮುಖ್ಯಮಂತ್ರಿಗಳಾಗಿದ್ದವರು ಪ್ರತಿಮೆ ಸ್ಥಾಪಿಸಲಿ ಎಂದು ಆಗ್ರಹಿಸಿರುವ ಅವರು, ಕೇವಲ ಗಾಂಧಿ ಕುಟುಂಬದ ಮೂವರು ರಾಜಕಾರಣಿಗಳ ಪ್ರತಿಮೆ ಸ್ಥಾಪಿಸುವುದಕ್ಕೆ ಮುಂದಾದರೆ ಉಗ್ರ ಹೋರಾಟ ಅನಿವಾರ್ಯವಾಗಿ ಮಾಡಬೇಕಾಗುತ್ತೆ ಎಂದು ಎಚ್ಚರಿಸಿದ್ದಾರೆ. ವಿವಿಧ ಹೋರಾಟ ಸಮಿತಿಗಳ ಮುಖಂಡರಾದ ಶ್ರವಣಕುಮಾರ ನಾಯಕ್, ಲಕ್ಷ್ಮೀಕಾಂತ ಸ್ವಾದಿ, ಮಹೇಶ ಕೆಂಬಾವಿ ಇತರರು ಬೆಂಬಲಿಸಿದ್ದಾರೆ ಎಂದು ನರಿಬೋಳ ತಿಳಿಸಿದ್ದಾರೆ.

ಭಕ್ತರ ಸಮ್ಮುಖದಲ್ಲಿ ಶ್ರೀ ಯಲ್ಲಮ್ಮ ದೇವಿ ಪಲ್ಲಕ್ಕಿ ಉತ್ಸವ ಜರುಗಿತು.

ಚಿಟ್ಟಲಗಿ, ಡಿ ಜೆ ಸದ್ದಿಗೆ ಕುಣಿದ ಯುವಕರು

ಸಂ.ಕ.ಸಮಾಚಾರ ಅಫಜಲಪುರ: ತಾಲೂಕಿನ ಮಣ್ಣೂರ ಗ್ರಾಮದಲ್ಲಿ ಏ.29 ರಿಂದ ಮೇ 2 ರವರೆಗೆ ಶ್ರೀ ಯಲ್ಲಮ್ಮದೇವಿ ಜಾತ್ರೆ ನಿಮಿತ್ತ ವಿವಿಧ ಕಾರ್ಯಕ್ರಮಗಳು ಜರುಗಿದವು. 29 ರಂದು ಸಾಯಂಕಾಲ ಶಿವಬಾಳನಗರದ ಭಕ್ತಾದಿಗಳಿಂದ ನಂದಿಕೋಲ ಮೆರವಣಿಗೆ, ವಿವಿಧ ವಾದ್ಯ ವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಿ ಮಂದಿರಕ್ಕೆ ಆಗಮಿಸಿತು. 30 ರಂದು ಯಲ್ಲಮ್ಮ ದೇವಿ ಬಾಸಿಂಗ ಮೆರವಣಿಗೆ ವಿವಿಧ ವಾದ್ಯ ವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಿಯ ಮಂದಿರಕ್ಕೆ ಆಗಮಿಸಿತು. ಪ್ರೇಮಾ ಅಫಜಲಪುರ ಹಾಗೂ ಸಂಗಡಿಗರಿಂದ ಚೌಡಕಿ ಆಟ ಹಾಗೂ ಚೌಡಕಿ ಪದಗಳು ಜರುಗಿದವು.

1 ರಂದು ಶುಕ್ರವಾರ ಆಗಿ ಹುಣ್ಣಿಮೆಯಂದು ಡಾ. ಶಂಭುಲಿಂಗ ಶಿವಾಚಾರ್ಯರು ಪಡಸಾವಳಗಿ ಮತ್ತು ಉದಗಿರಮಠ ಇವರಿಂದ ದೇವಿಯ ರುದ್ರಾಭಿಷೇಕ ಜರುಗಿತು. ದೇವಿಯ ವಸ್ತ್ರಾಭರಣ, ನೈವೇದ್ಯ ಅರ್ಪಣೆ, ಪಲ್ಲಕ್ಕಿ ಮೆರವಣಿಗೆ ನವಿಲು ಕುಣಿತ ಕರಡಿ ಕುಣಿತ ಕುದುರೆ ಕುಣಿತ ಗೊಂಬೆ ಕುಣಿತ ಡೊಳ್ಳಿನ ವಾಲಗ ಸೇರಿದಂತೆ ವಿವಿಧ ವಾದ್ಯ ವೈಭವಗಳೊಂದಿಗೆ ಭೀಮಾ ನದಿಯಲ್ಲಿರುವ ದೇವಿಯ ಮಂದಿರಕ್ಕೆ ತಲುಪಿದವು. ಬಾಸಿಂಗ ಮೆರವಣಿಗೆ ದೇವಿಯ ಪಲ್ಲಕ್ಕಿ ಸ್ವಾಗತಿಸಿತು. ಮದ್ದು ಸುಡುವ ಕಾರ್ಯಕ್ರಮ ನಂತರ ಪಲ್ಲಕ್ಕಿ ಮೆರವಣಿಗೆ ಗ್ರಾಮದಲ್ಲಿರುವ ದೇವಿಯ ಮಂದಿರಕ್ಕೆ ಆಗಮಿಸಿತು. 1ರಿಂದ 5 ರವರೆಗೆ ಹೊಸ ಪಾದಗಟ್ಟೆ ಹಾಗೂ ಬನ್ನಿ ಮಹಾಕಾಳಿ ದೇವಸ್ಥಾನದ ಹತ್ತಿರ ಜಾನುವಾರುಗಳ ಹಾಗೂ ಕುರಿಗಳ ಭವ್ಯ ಜಾತ್ರೆ ನಡೆಯುತ್ತಿದೆ. 2 ರಂದು ವಿದ್ಯಾಶ್ರೀ ಮಸಬಿನಾಳ ಹರದೇಶ ನಾಗೇಶ ಹಾಗೂ ಮಕ್ತುಮಸಾಬ ಸೊನ್ನಾಳ ಅವರಿಂದ ಗೀ ಗೀ ಪದಗಳು ಜರುಗಿದವು ಸಾಯಂಕಾಲ ಕುಸ್ತಿಗಳು ನಡೆದವು. ಜಾನುವಾರು ಜಾತ್ರೆಯಲ್ಲಿ ಉತ್ತಮ ಜಾನುವಾರುಗಳಿಗೆ ಯಲ್ಲಮ್ಮ ದೇವಿ ಟ್ರಸ್ಟ್ ಕಮಿಟಿ ವತಿಯಿಂದ 5 ರಂದು ಬಹುಮಾನ ವಿತರಿಸಲಾಗುವುದು.

ತೆಲ್ಲೂರ ಗ್ರಾಮದಲ್ಲಿ ಡಾ. ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು.

ಆದರ್ಶಗಳ ಪಾಲನೆಯೇ ಜಯಂತಿಯ ಉದ್ದೇಶವಾಗಲಿ

ಅಫಜಲಪುರ: ಶಿಕ್ಷಣವನ್ನು ಸರಿಯಾಗಿ ಪಡೆದು ಬದುಕನ್ನು ಸ್ವಾವಲಂಬಿಯಾಗಿಸಿಕೊಂಡು ಸಮುದಾಯವನ್ನು ಸಮರ್ಥವಾಗಿ ಕಟ್ಟಿ ದೇಶಕ್ಕಾಗಿ ಎಲ್ಲರೂ ದುಡಿಯಬೇಕೆಂದು ಹೇಳಿಕೊಟ್ಟ ಡಾ. ಅಂಬೇಡ್ಕರ್ ಅವರ ಜಯಂತಿ ಎಂದರೆ ಕುಣಿದು ಕುಪ್ಪಳಿಸುವುದಲ್ಲ ಬದಲಾಗಿ ಅವರ ಆದರ್ಶಗಳ ಪಾಲನೆಯೇ ಜಯಂತಿಯ ಉದ್ದೇಶವಾಗಬೇಕು ಎಂದು ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ಚಂದ್ರಾಮ ಯಾಳವಾರ ಹೇಳಿದರು.

ತಾಲೂಕಿನ ತೆಲ್ಲೂರ ಗ್ರಾಮದಲ್ಲಿ ನಡೆದ ಚಿಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವಂತಾಗಬೇಕು. ಸಣ್ಣ ಹಳ್ಳಿಯ ಮಗುವೊಂದು ಐಎಎಸ್, ಐಪಿಎಸ್ ನಂತ ಉನ್ನತ ಹುದ್ದೆಗಳನ್ನು ಅಲಂಕರಿಸಿ ಅಂಬೇಡ್ಕರ್ ಕಂಡ ಕನಸು ನನಸಾಗಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಮುಖರಾದ ನಾಗರಾಜ್ ಕಟ್ಟಿಮನಿ, ಓಂಪ್ರಕಾಶ ಮಾತನಾಡಿ, ಜಯಂತಿಗಳ ಆಚರಣೆಯ ಅರ್ಥ ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ತಿಳಿಯುವುದು ಮತ್ತು ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುವುದಾಗಬೇಕು ಎಂದರು.

ಗ್ರಾಮದ ಮುಖಂಡ ಸಿದ್ದು ಮಗಿ ಪ್ರಾಸ್ತಾವಿಕವಾಗಿ ಮಾತನಾಡಿ, ಅಂಬೇಡ್ಕರ್ ಅವರನ್ನು ದಲಿತ ಸೂರ್ಯ, ದಲಿತ ನಾಯಕ ಎಂದು ಸಂಕುಚಿತಗೊಳಿಸುವುದು ಸರಿಯಲ್ಲ. ಅವರು ವಿಶ್ವನಾಯಕರಾಗಿದ್ದಾರೆ. ಅವರ ವಿಚಾರಗಳು ಭಾರತವನ್ನು ಬಲಿಷ್ಠವಾಗಿ ಕಟ್ಟಲು ಸ್ಫೂರ್ತಿಯಾಗಿವೆ ಎಂದರು.

ಯುವ ಮುಖಂಡ ಯಲ್ಲಪ್ಪ ಗ್ಯಾನಾಗೋಳ ಮುಂದಾಳತ್ವದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಅಂಬೇಡ್ಕರ್ ಭಾವಚಿತ್ರದ ಉತ್ಸವ ಅದ್ದೂರಿಯಾಗಿ ಜರುಗಿತು.

ಪ್ರಮುಖರಾದ ಮುತ್ತಪ್ಪ ಹಾದಿಮನಿ, ಮಲ್ಲಿಕಾರ್ಜುನ ಸಕ್ಪಾಲ್, ಶರಣಬಸು ತಳಕೇರಿ, ನಿಂಗಪ್ಪ ಹುಮ್ಮನ್, ಚಿದಾನಂದ ಅಳ್ಳಗಿ, ಸಾಯಬಣ್ಣ ತಳಕೇರಿ, ರಾವುತ್ ಬಗಲೂರ, ಕರೆಪ್ಪ ಹುಮ್ಮನ್, ಗೌತಮ ಗ್ಯಾನಾಗೋಳ, ಸಂತೋಷ್ ಹುಮ್ಮನ್, ನಿಂಗಪ್ಪ ತಳಕೇರಿ ಸೇರಿ ಅನೇಕರು ಇದ್ದರು.

ನಿಧನ ವಾರ್ತೆ

ಸುರೇಶ ಹನುಮಸಾಗರ

ಕಲಬುರಗಿ: ನಗರದ ಜೇವರ್ಗಿ ಕಾಲನಿ ನಿವಾಸಿ, ಆರೋಗ್ಯ ಇಲಾಖೆ ನಿವೃತ್ತ ಅಧೀಕ್ಷಕ ಸುರೇಶ ಹನುಮಸಾಗರ (79) ಭಾನುವಾರ ನಿಧನ ಹೊಂದಿದರು. ಮೃತರು ಪತ್ನಿ, ಮೂವರು ಪುತ್ರಿಯರು, ಪುತ್ರನನ್ನು ಅಗಲಿದ್ದಾರೆ.

ಚುನಾವಣೆಯಲ್ಲಿ ಹಣಬಲ ನಿಯಂತ್ರಿಸಲಿ

ಡಾ. ಬಸವರಾಜ ಕುಮ್ನೂರ್ ಅಭಿಮತ। ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣ

ಸಂ.ಕ. ಸಮಾಚಾರ ಕಲಬುರಗಿ: ಇತ್ತೀಚಿನ ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಹಣಬಲದಿಂದ ಪ್ರಾಮಾಣಿಕರು, ಸಮಾಜ ಸೇವಕರು, ನಿಷ್ಠಾವಂತ ರಾಜಕೀಯ ಕಾರ್ಯಕರ್ತರು ಮತ್ತು ಸಾಮಾಜಿಕ ಕಳಕಳಿಯುಳ್ಳವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲಿಕ್ಕೆ ಅವಕಾಶವೇ ಇಲ್ಲದಂತಾಗುತ್ತಿದೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ನಿವೃತ್ತ ಪ್ರಾಂಶುಪಾಲ ಡಾ. ಬಸವರಾಜ ಕುಮ್ನೂರ್ ತಿಳಿಸಿದರು.

ನಗರದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಶರಣಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿಯಿಂದ ಚುನಾವಣೆಗಳಲ್ಲಿ ಹಣಬಲ ನಿಯಂತ್ರಿಸಿ– ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿ, ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಹಣಬಲದಿಂದ ಪ್ರಜಾಪ್ರಭುತ್ವಕ್ಕೆ ಅಪಾಯ ಕಾದಿದೆ. ಚುನಾವಣೆಗಳನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸಲು ಸಂವಿಧಾನದ 324ನೇ ಅನುಚ್ಛೇದ ಪ್ರಕಾರ ಚುನಾವಣಾ ಆಯೋಗವು ಸ್ವತಂತ್ರವಾದ ಅಧಿಕಾರ ಹೊಂದಿದೆ. ಟಿ. ಎನ್. ಶೇಷನ್ ಮುಕ್ತ ಹಾಗೂ ಪಾರದರ್ಶಕ ಚುನಾವಣೆ ನಡೆಸುವ ಮುಖಾಂತರ ಚುನಾವಣಾ ಆಯೋಗದ ಘನತೆ ಹೆಚ್ಚಿಸಿದ್ದರು. ನಾವು

ಪ್ರಜಾಪ್ರಭುತ್ವ ಉಳಿಸಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅರ್ಥಶಾಸ್ತ್ರಜ್ಞ ಡಾ. ಬಸವರಾಜ ಕುಮ್ನೂರ್ ಉದ್ಘಾಟಿಸಿದರು.

ಕೂಡಾ ಪ್ರತಿಯೊಬ್ಬರೂ ಚುನಾವಣೆಗಳಲ್ಲಿ ಹಣ ಹಂಚಲು ಬಂದವರನ್ನು ತಿರಸ್ಕರಿಸುವ ಮೂಲಕ ಮತದ ಮೌಲ್ಯವನ್ನು ಎತ್ತಿ ಹಿಡಿಯಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಸ್ತುವಾರಿ ಪ್ರಾಂಶುಪಾಲ ಡಾ. ಲಕ್ಷ್ಮೀಕಾಂತ ಖಣದಾಳ ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮದಿಂದ ದೂರವಿದ್ದು, ನಿತ್ಯ ತಪ್ಪದೇ ದಿನ ಪತ್ರಿಕೆಗಳನ್ನು ಓದಬೇಕು ಎಂದರು.

ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಸಂಸ್ಥಾಪಕ ರಮೇಶ ಆರ್ ಧುತ್ತರಗಿ ಪ್ರಾಸ್ತಾವಿಕವಾಗಿ ಮಾತನಾಡಿ, ಚುನಾವಣೆಗಳಲ್ಲಿ ಯಾವುದೇ ಆಸೆ–ಆಮಿಷಗಳಿಗೆ ಬಲಿಯಾಗದೆ ತಪ್ಪದೆ ಮತದಾನ ಮಾಡುತ್ತೇನೆ. ಕ್ರಿಮಿನಲ್ ಆರೋಪ ಹಿನ್ನೆಲೆವುಳ್ಳ ಅಭ್ಯರ್ಥಿಗಳಿಗೆ ನಾನು ಮತ ಹಾಕುವುದಿಲ್ಲ. ಚುನಾವಣೆಗಳಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ನನಗೆ ಸಹಿ ಎನಿಸದೆ ಇದ್ದಲ್ಲಿ ನಾನು ನೋಟಾಕ್ಕಾದರೂ ತಪ್ಪದೇ ಮತ ಹಾಕುತ್ತೇನೆ ಎಂದು ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಬಿ.ಎಡ್, ಪ್ರಶಿಕ್ಷಣಾರ್ಥಿಗಳಾದ ಕೆ.ಶ್ವೇತಾ, ಧರೇಶ, ಪ್ರಿಯದರ್ಶಿನಿ, ಸೈಯದ್ ಖಾನ್, ಭಾಗ್ಯಶ್ರೀ ಅತ್ಯುತ್ತಮವಾಗಿ ವಿಷಯ ಮಂಡಿಸಿದ್ದಕ್ಕೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಅಭಿನಯಾ ಸ್ವಾಗತಿಸಿದರು. ತನುಜಾ ಮಣ್ಣೂರ ನಿರೂಪಿಸಿದರು. ಮೇಘಾ ವಂದಿಸಿದರು.

> ಎಲ್ಲ ಚುನಾವಣೆಗಳಲ್ಲಿ ಹಣ ಹಂಚುವುದು ಅವ್ಯಾಹತವಾಗಿ ಸಾಗುತ್ತಿದ್ದು, ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಮನೆಗಳಲ್ಲಿ ಓಣಿಗಳಲ್ಲಿ ಗ್ರಾಮಗಳಲ್ಲಿ ನಗರಗಳಲ್ಲಿ ಸಮಾಜದಲ್ಲಿ ಜಾಗೃತಿ ಮೂಡಿಸುವುದರಿಂದ ಬದಲಾವಣೆ ತರಲು ಸಾಧ್ಯ.
> ■ ಡಾ. ಲಕ್ಷ್ಮೀಕಾಂತ ಖಣದಾಳ,
> ಉಸ್ತುವಾರಿ ಪ್ರಾಂಶುಪಾಲ.

ಆಸ್ಪತ್ರೆಗಳು ಹೆಚ್ಚಾದರೆ ಸಮಾಜ ರೋಗಗ್ರಸ್ತ ಎಂದರ್ಥ

ಸಂ. ಕ. ಸಮಾಚಾರ ಚಿತ್ತಾಪುರ: ಆಸ್ಪತ್ರೆಗಳು ಹೆಚ್ಚಾದರೆ ಸಮಾಜ ರೋಗಗ್ರಸ್ಥಗೊಂಡಿದೆ ಎಂದರ್ಥ. ಪೊಲೀಸ್ ಠಾಣೆಗಳು ಹೆಚ್ಚಾದರೆ ಸಮಾಜದಲ್ಲಿ ಅನೈತಿಕ, ಅಕ್ರಮ ಚಟುವಟಿಕೆಗಳು ಹೆಚ್ಚಾಗಿವೆ ಎಂದರ್ಥ ಎಂದು ಪತ್ರಕರ್ತ ಕಾಶಿನಾಥ್ ಗುತ್ತೇದಾರ್ ಹೇಳಿದರು.

ಪಟ್ಟಣದ ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದಲ್ಲಿ ಭಾರತೀಯ ಯುವ ರೆಡ್ ಕ್ರಾಸ್ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆಗಳ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿ, ಯುವಕರು ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗವಹಿಸಿ ಬದುಕು ನಾಶ ಮಾಡಿಕೊಳ್ಳುತ್ತಿದ್ದಾರೆ. ದೇಶದ ಶಕ್ತಿಯಾಗಿರುವ ಯುವಜನರು ದುಶ್ಚಟಗಳಿಂದ ದೂರ ಉಳಿಯಬೇಕು ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ದಂತ ಆರೋಗ್ಯ ವೈದ್ಯಾಧಿಕಾರಿ ಡಾ.ಖನಿಜ್ ಫಾತಿಮಾ, ನಾವು ತಿನ್ನುವ ಆಹಾರ ಮತ್ತು ಜೀವನ ಶೈಲಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತದೆ. ದುರಭ್ಯಾಸಗಳು ಮತ್ತು ಸಮಾಜದ ಸಮಾಜದ ಕಲುಷಿತ ವಾತಾವರಣ ನಮ್ಮ ಆರೋಗ್ಯ ಹದಗೆಡಿಸುತ್ತದೆ. ಉತ್ತಮ ಆಹಾರ ಸೇವನೆ ಸ್ವಚ್ಛ ಪರಿಸರ ನಮ್ಮ ಬದುಕಿನ ಭಾಗವಾಗಬೇಕು ಎಂದು ಹೇಳಿದರು.

ಚಿತ್ತಾಪುರದ ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ಆರೋಗ್ಯ ತಪಾಸಣೆ ಶಿಬಿರದ ಉದ್ಘಾಟನೆ ಜರುಗಿತು.

ರೇವಣಸಿದ್ದಪ್ಪ ಕಾಂತ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ಸಂಗಪ್ಪ ಮಾಮನಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಪ್ತ ಸಮಾಲೋಚಕಿ ಸುಜ್ಞಾನಿ ಪಾಟೀಲ್, ಡಾ.ಶಶಿಧರ್ ಯಡ್ರಾಮಿ, ಆಸ್ಮಾ ನಿಖತ್, ಪ್ರಾಧ್ಯಾಪಕರಾದ ಪ್ರೋ. ಮಲ್ಲಪ್ಪ ಮಾನೇಗಾರ್, ಶರಣಬಸಪ್ಪ ರಾಯ್ಕೋಟಿ, ರೋಹಿಣಿ ಕಲ್ಮಟ್, ನಾಗವೇಣಿ, ಲಕ್ಷ್ಮೀಪುತ್ರ ಪಾಸೋಡಿ, ಕೈಲಾಸಪತಿ ವಿಶ್ವಕರ್ಮ, ಶರಣಪ್ಪ ದಿಗ್ಗಾಂವ, ಮರೆಪ್ಪ ಮೇತ್ರಿ, ಶ್ರೀಕಾಂತ್, ಅಭಿಷೇಕ್, ವಿಜಯಲಕ್ಷ್ಮೀ ರಾಠೋಡ, ಮಂಜುನಾಥ ದೇಶಪಾಂಡೆ, ಆಸ್ಪತ್ರೆಯ ನಿಜಾಮುದ್ದೀನ್, ಗುರುರಾಜ್ ಮುಗುಳಿ, ಪತ್ರಕರ್ತ ಸಂತೋಷಕುಮಾರ ಕಟ್ಟಿಮನಿ ಸೇರಿದಂತೆ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ.ಸೂಗುರೇಶ್ವರ ಆರ್. ಮಠಪತಿ ಸ್ವಾಗತಿಸಿದರು, ಮಲ್ಲಪ್ಪ ತೊಟ್ನಳ್ಳಿ ನಿರೂಪಿಸಿದರು. ಡಾ.ವಿಲಾಸ್ ವಂದಿಸಿದರು.

ವಾಡಿ ರೈಲ್ವೆ ನಿಲ್ದಾಣದ ಅಭಿವೃದ್ಧಿಗೆ ಬಿಜೆಪಿ ಆಗ್ರಹ

ಸಂ.ಕ.ಸಮಾಚಾರ ವಾಡಿ: ಪಟ್ಟಣದ ರೈಲ್ವೆ ನಿಲ್ದಾಣದಲ್ಲಿ ಶೌಚಾಲಯ ಕೋಣೆಗಳು ಶುಚಿತ್ವ ಇಲ್ಲದೆ, ಗಬ್ಬು ನಾರುತ್ತಿವೆ. ಬೇಕಾಬಿಟ್ಟಿ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯಲಾಗುತ್ತಿದೆ. ಸೇರಿ ವಿವಿಧ ಮೂಲಸೌಕರ್ಯ ಒದಗಿಸುವಂತೆ ಕೇಂದ್ರ ರೈಲ್ವೆ ವಿಭಾಗದ ಮುಖ್ಯ ವ್ಯವಸ್ಥಾಪಕ ರಾಜೀವ್ ಶ್ರೀವಾತ್ಸವ ಅವರಿಗೆ ಬಿಜೆಪಿ ವಾಡಿ ಘಟಕದ ಅಧ್ಯಕ್ಷ ವೀರಣ್ಣ ಯಾರಿ ಒತ್ತಾಯಿಸಿದರು.

ಅತಿದೊಡ್ಡ ರೈಲ್ವೆ ನಿಲ್ದಾಣ ಹೊಂದಿರುವ ವಾಡಿಯಲ್ಲಿ ಪ್ರಯಾಣಿಕರ ವಿಶ್ರಾಂತಿ ಸ್ಥಳ ಸಮರ್ಪಕ ನಿರ್ವಹಣೆ ಇಲ್ಲದೆ, ಕಸದ ತೊಟ್ಟಿಯಾಗಿದೆ. ಪರಿಣಾಮ ವಿವಿಧ ರಾಜ್ಯದಿಂದ ಬರುವ ಪ್ರಯಾಣಿಕರಿಗೆ ನಿಲ್ದಾಣದ ಹೊರಗಡೆಯೇ ವಿಶ್ರಾಂತಿ ಪಡೆದು, ತೊಂದರೆ ಅನುಭವಿಸುತ್ತಿದ್ದಾರೆ.

ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಪ್ರಾಥಮಿಕ ಚಿಕಿತ್ಸೆ ವ್ಯವಸ್ಥೆ ಮತ್ತು ಔಷಧ ಅಂಗಡಿ, ಸ್ವದೇಶಿ ಮಳಿಗೆ ಪ್ರಾರಂಭಕ್ಕೆ ಒತ್ತು ನೀಡಬೇಕು. ಗುಟುಕಾ, ಪ್ಲಾಸ್ಟಿಕ್ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂದು ಬಿಜೆಪಿ ಮುಖಂಡರು ಮನವಿ ಮಾಡಿದರು.

ವಾಡಿ ಪಟ್ಟಣದ ರೈಲ್ವೆ ನಿಲ್ದಾಣದ ಅಭಿವೃದ್ಧಿ ಮಾಡುವಂತೆ ಕೇಂದ್ರ ರೈಲ್ವೆ ವಿಭಾಗದ ಮುಖ್ಯ ವ್ಯವಸ್ಥಾಪಕ ರಾಜೀವ್ ಶ್ರೀವಾತ್ಸವ ಅವರಿಗೆ ಬಿಜೆಪಿ ಮುಖಂಡರು ಭೇಟಿ ಮಾಡಿ ಮನವಿ ಪತ್ರ ನೀಡಿದರು

ಅಮೃತ್ ಭಾರತ್ ಸ್ಟೇಷನ್ ಅಭಿವೃದ್ಧಿ ಯೋಜನೆಯಡಿ ರೈಲ್ವೆನಿಲ್ದಾಣದಲ್ಲಿ ವಿವಿಧ ಕಾಮಗಾರಿ ಆರಂಭಗೊಂಡಿವೆ. ಆದರೆ ಕಾಮಗಾರಿ ಸಂಪೂರ್ಣ ಕಳಪೆ ಮಟ್ಟದಿಂದ ಕೂಡಿದೆ. ಇದರಿಂದ ಕೋಟ್ಯಂತರ ರೂ. ಪೋಲಾಗುತ್ತಿದೆ. ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ತಪ್ಪಿತಸ್ಥರ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು. ವಾಡಿ ಕಾರ್ಡ್ ಕ್ಯಾಬ್ ಬಳಿಯ ಬ್ರೀಜ್ ಕಾಮಗಾರಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿವೆ. ತಕ್ಷಣ ಕಾಮಗಾರಿ ಪೂರ್ಣಗೊಳಿಸಬೇಕು.

ಪಟ್ಟಣದ ಸುತ್ತ ರೈಲ್ವೆ ಗೇಟ್ ನಿರ್ಮಾಣ ಮಾಡಿದರಿಂದ ಸಂಚಾರಕ್ಕೆ ತೊಂದರೆ ಉಂಟಾಗಿದೆ. ಇದರಿಂದ ವಿಜಯನಗರ, ಹನುಮಾನ ನಗರದ ನಿವಾಸಿಗಳಿಗೆ ಒಳ ಸೇತುವೆ ನಿರ್ಮಾಣ ಮಾಡಬೇಕು. ಎಂದು ಸೇರಿ ರೈಲ್ವೆ ಅಭಿವೃದ್ಧಿ ಮಾಡುವಂತೆ ಅಧಿಕಾರಿಗಳಿಗೆ ವೀರಣ್ಣ ಯಾರಿ ಒತ್ತಾಯಿಸಿದರು.

ಮುಖಂಡರಾದ ಅಶೋಕ ಹರನಾಳ, ಕಿಶನ ಜಾಧವ, ರಾಜಶೇಖರ ಧೂಪದ, ಸತೀಶ ಸಾವಳಗಿ, ಕುಮಾರ ಜಾಧವ, ನಿರ್ಮಲ ಇಂಡಿ, ಉಮಾಭಾಯಿ ಗೌಳಿ, ಆನಂದ ಸಂಗಶೆಟ್ಟಿ ಇದ್ದರು.

ಕಾರ್ಮಿಕರ ಬೆವರಿಗೊಂದು ಗೌರವ

ಸಂ.ಕ. ಸಮಾಚಾರ ಆಳಂದ: ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಕಾರ್ಮಿಕರ ಕಲ್ಯಾಣದತ್ತ ಕಾಳಜಿ ತೋರಿದ ಕಾರ್ಯಕ್ರಮ ಗಮನ ಸೆಳೆಯಿತು. ರಾಜ್ಯದ ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ಅವರ ಬಳಗದ ಅಖಿಲ ಭಾರತ ಕಾಂಗ್ರೆಸ್ ಟ್ರೇಡ್ ಯುನಿಯನ್ ತಾಲೂಕು ಘಟಕದ ಅಧ್ಯಕ್ಷ ಅಬ್ದುಲ್ ಖಾದರ್ ನೇತೃತ್ವದಲ್ಲಿ ಮಟಕಿ ರಸ್ತೆಯ ಕೊಳಚೆ ಪ್ರದೇಶದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಬಿಸಿಲಿನಿಂದ ರಕ್ಷಣೆಗಾಗಿ ಟೋಪಿಗಳು ಹಾಗೂ ಕರವಸ್ತ್ರಗಳನ್ನು ವಿತರಿಸಲಾಯಿತು.

ಬೇಸಿಗೆ ತೀವ್ರತೆ ನಡುವೆ ದಿನಪೂರ್ತಿ ಹೊರಾಂಗಣದಲ್ಲಿ ದುಡಿಯುವ ಕಾರ್ಮಿಕರು ಎದುರಿಸುತ್ತಿರುವ ಸಂಕಷ್ಟ ಮನಗಂಡು ಈ ಉಪಕ್ರಮ ಕೈಗೊಳ್ಳಲಾಗಿದೆ. ಸರ್ಕಾರ ಬಿಸಿಲಿನ ತೀವ್ರತೆಯಿಂದ ಜನರು ಹೊರಬಾರದಂತೆ ಸಲಹೆ ನೀಡಿದರೂ, ಕಾರ್ಮಿಕ ವರ್ಗಕ್ಕೆ ಕೆಲಸಕ್ಕಾಗಿ ಹೊರಬರುವುದು ಅನಿವಾರ್ಯವಾಗಿದೆ. ಇಂತಹ ಸಂದರ್ಭಗಳಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯವಾಗಿದ್ದು, ಟೋಪಿ ಮತ್ತು ಕರವಸ್ತ್ರಗಳಂತಹ ಸರಳ ಆದರೆ ಉಪಯುಕ್ತ ವಸ್ತುಗಳ ವಿತರಣೆ ಕಾರ್ಮಿಕರಿಗೆ ಕೆಲಮಟ್ಟಿಗೆ ತಂಪಿನ ನೆರಳಾಗಲಿದೆ. ಕಾರ್ಮಿಕರಿಗೆ ಸಕಾಲಕ್ಕೆ ಸೌಲಭ್ಯ ನೀಡಲು ಸಚಿವರಿಗೆ ಮತ್ತು ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ಅವರು ಹೇಳಿದರು.

ಜಾಫರ್ ಹಂಗರಗೆ, ಸಾಬೀರ್ ತಾಸೆವಾಲೆ, ಹಮ್ಮಿದ ಶೇಖ, ಆಸೀಫ್ ಅಮ್ಮನೆ, ವಸೀಂ ಖಂಡುವಾಲೆ ಸೇರಿ ಹಲವರಿದ್ದು, ಕಾರ್ಮಿಕರ ಜತೆ ಮಾತನಾಡಿ ಅವರ ಸಮಸ್ಯೆಗಳನ್ನೂ ಆಲಿಸಿದರು.

ಆಳಂದನಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ಅಬ್ದುಲ್ ಖಾದರ ಅವರು ಕಾರ್ಮಿಕರಿಗೆ ಟೋಪಿ ಮತ್ತು ಕರವಸ್ತ್ರಗಳನ್ನು ವಿತರಿಸಿದರು.

ಮುಕ್ತ ಪತ್ರಿಕೋದ್ಯಮಕ್ಕೆ ಬೆಂಬಲ ನೀಡುವುದು ಅಗತ್ಯ

ಸಂ.ಕ. ಸಮಾಚಾರ ಕಲಬುರಗಿ: ಸಮಾಜಕ್ಕೆ ಸ್ವತಂತ್ರ, ನಿರ್ಭೀತ, ನ್ಯಾಯಯುತ ಪತ್ರಿಕೋದ್ಯಮ ಅಗತ್ಯ. ಪತ್ರಿಕೋದ್ಯಮವು ಮುಕ್ತವಾಗಿ ಕಾರ್ಯನಿರ್ವಹಿಸಲು ಬೆಂಬಲ ನೀಡುವುದು ಅವಶ್ಯಕವಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ನಗರದ ಖಾದ್ರಿ ಚೌಕ್‌ನಲ್ಲಿನ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಚಟುವಟಿಕೆಗಳ ಬಗ್ಗೆ ನಿಗಾವಹಿಸಿ, ದೇಶದ ಸಮಸ್ಯೆಗಳ ಬಗ್ಗೆ ಮೇಲಿಂದ ಮೇಲೆ ಬೆಳಕು ಚೆಲ್ಲಿ, ಅದಕ್ಕೆ ಪರಿಹಾರ ಹುಡುಕುವಂತೆ ಮಾಡಿ ಸ್ವಸ್ಥ, ಸದೃಢ ರಾಷ್ಟ್ರ ನಿರ್ಮಾಣಕ್ಕೆ 'ಮಾಧ್ಯಮ ರಂಗ' ತನ್ನದೇ ಆದ ಅದ್ವಿತೀಯ ಕೊಡುಗೆ ನೀಡುತ್ತಿದೆ. ರಾಷ್ಟ್ರದ ಹಿತ ಬಂದಾಗ, ನ್ಯಾಯವನ್ನು ಒದಗಿಸಿಕೊಡಲು ಪತ್ರಕರ್ತರಿಗೆ ಧೈರ್ಯ, ನಿರ್ಭೀತಿಯಿಂದ ಬರೆಯಲು ಪೂರಕವಾದ ವಾತಾವರಣ ಅಗತ್ಯ. ಸಮಾಜದ ಒಳಿತಿಗಾಗಿ ಹರಿತವಾದ ಬರವಣಿಗೆಯ ಮೂಲಕ ನ್ಯಾಯವನ್ನು ಒದಗಿಸಿಕೊಟ್ಟು, ಪ್ರಾಣತ್ಯಾಗ ಮಾಡಿದ ಪತ್ರಕರ್ತರನ್ನು ಮರೆಯುವಂತಿಲ್ಲ. ಸಮಾಜ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು, ಸರ್ಕಾರದ ವಿವಿಧ ಯೋಜನೆಗಳನ್ನು ಜನರಿಗೆ ಮುಟ್ಟಿಸುವ ಕಾರ್ಯ ಮಾಡುವ ಮೂಲಕ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವಲ್ಲಿ ಮಾಧ್ಯಮಗಳು ಮೊದಲಿನಿಂದಲೂ ಕಾರ್ಯನಿರ್ವಹಿಸುತ್ತಿವೆ. ಪತ್ರಿಕಾ ಧರ್ಮ ಕಾಪಾಡುವ, ಸಾಹಸಿ ಪತ್ರಕರ್ತರಿಗೆ ಬೆಂಬಲ ನೀಡುವುದು ಅಗತ್ಯವಾಗಿದೆ ಎಂದರು.

ಸಂಸ್ಥೆ ಅಧ್ಯಕ್ಷ ಅಸ್ಲಾಂ ಶೇಖ್, ಶಿಕ್ಷಕಿಯರಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಲಬುರಗಿಯಲ್ಲಿ ವಿಶ್ವ ಪತ್ರಿಕಾ ಸ್ವಾತಂತ್ರ ದಿನ ಆಚರಿಸಲಾಯಿತು.

ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಆಳಂದ: ಪಟ್ಟಣದ ರಾಜ್ಯ ಹೆದ್ದಾರಿ 10 ರ ಮೇಲೆ ಬರುವ ಹೊಸ ತಹಸಿಲ್ ಕಚೇರಿ ಮುಂಭಾಗದಲ್ಲಿ ಹೊಸದಾಗಿ ಆರಂಭವಾಗಿರುವ ಕರ್ನಾಟಕ ಸರಕಾರ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಸರಕಾರಿ ಪಾಲಿಟೆಕ್ನಿಕ್ ಡಿಪ್ಲೋಮಾ 2026–27ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ವರ್ಷದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಚಾರ್ಯರು ತಿಳಿಸಿದ್ದಾರೆ. ಕೃತಕ ಬುದ್ದಿಮತ್ತೆ, ಸಿವ್ಹಿಲ್ ಎಂಜನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್ ಎಂಜನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಾತಿಗಳು ಪ್ರಾರಂಭವಾಗಿದ್ದು ಅರ್ಹ ಅಭ್ಯರ್ಥಿಗಳು ತಮ್ಮ ಶಾಲಾ ದಾಖಲಾತಿಗಳೊಂದಿಗೆ 30ರೊಳಗಾಗಿ ದಾಖಲಾತಿ ಮಾಡಿಕೊಳ್ಳಬೇಕು. ಇಲ್ಲಿ ಸುಸಜ್ಜಿತ ಕಟ್ಟಡ, ಅನುಭವಿ ಉಪನ್ಯಾಸಕರಿಂದ ಪಾಠ ಬೋಧನೆ, ಪ್ರಯೋಗಾಲಯ ಸೇರಿ ಎಲ್ಲ ಸೌಲಭ್ಯಗಳು ಹೊಂದಿದ್ದು ಇದರ ಲಾಭವನ್ನು ವಿದ್ಯಾರ್ಥಿಗಳು, ಪಾಲಕರು ಪಡೆಯುವಂತೆ ಕೋರಿದ್ದಾರೆ. ಮಾಹಿತಿಗಾಗಿ 7760309348 ಗೆ ಸಂಪರ್ಕಿಸಬಹುದು.

ಮೀಸಲು ಜಮೀನು ಇದ್ದರೂ ಗ್ರಾಮಸ್ಥರ ಹೈರಾಣು

ವಿವಿಧೆಡೆ ರುದ್ರಭೂಮಿಗೆ ಜಮೀನು ಮೀಸಲು, ಸೌಲಭ್ಯ ಮಾತ್ರ ಶೂನ್ಯ

■ **ಮನೋಹರ ಪೂಜಾರಿ**

ಯಡ್ರಾಮಿ: ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ರುದ್ರಭೂಮಿ ಸಮಸ್ಯೆ ಮುಂದುವರಿದಿದ್ದು, ಸರ್ಕಾರದ ಆದೇಶದಂತೆ ಸ್ಮಶಾನ ಭೂಮಿಗೆ ಜಮೀನು ಮೀಸಲು ಮಾಡಿದ್ದರೂ ಅಗತ್ಯ ಸೌಲಭ್ಯಗಳ ಕೊರತೆಯಿಂದ ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದಾರೆ. ಮೀಸಲು ಜಮೀನು ಇದ್ದರೂ ರಸ್ತೆ, ತಂತಿಬೇಲಿ, ನೀರು, ಶೆಡ್ ಸೇರಿ ಮೂಲ ವ್ಯವಸ್ಥೆಗಳು ಇಲ್ಲದ ಕಾರಣ ಸಾರ್ವಜನಿಕರಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ವಿವಿಧ ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಮೀಸಲು ಇಡಲಾಗಿದ್ದು, ತಾಲೂಕಿನ ಐನಾಪೂರ, ಅಖಂಡಹಳ್ಳಿ, ಯಡ್ರಾಮಿ, ಸೈದಾಪೂರ, ಹಂಗರಗಾ ಬಿ, ಮಳ್ಳಿ, ಕಣಮೇಶ್ವರ, ಮಾಗಣಗೇರಿ, ಕೊಂಡಗುಳಿ, ಕುಕನೂರ, ತೆಲಗಬಾಳ, ಕುರಳಗೇರಾ, ಬಿರಾಳ ಹಿಸ್ಸಾ, ಅಲ್ಲಾಪೂರ, ನಾಗರಹಳ್ಳಿ ಎಸ್.ಎಂ., ಕಡಕೋಳ, ಮಾಣಶಿವಣಗಿ, ಯತ್ನಾಳ, ಶಾಖಾಪೂರ ಎಸ್.ವೈ., ಹಂಚನಾಳ ಎಸ್.ವೈ., ಅರಳಗುಂಡಗಿ, ಮುರಗಾನೂರ, ಕೋಣಶಿರಸಗಿ, ಜಂಬೇರಾಳ, ವಡಗೇರಾ, ವಸ್ತಾರಿ, ಕುಮ್ಮನಶಿರಸಗಿ, ಸುಂಬಡ್, ಹಾಲಗತ್ತರಗಾ, ಇಜೇರಿ, ಮುತ್ತಕೋಡ, ಗೊಬ್ಬರವಾಡಗಿ, ಸಾಥಖೇಡ, ನೀರಡಗಿ ಎಸ್.ಎಂ., ಪಡಗದಹಳ್ಳಿ, ಆಲೂರ, ಕರಕಿಹಳ್ಳಿ, ಮಂಗಳೂರು, ಅಣಜಗಿ, ಬಿಳವಾರ, ಜಮಖಂಡಿ, ಕಾಚೂರ, ಕೋಣ್ಣೂರ, ಶಿವಪೂರ, ಮಲ್ಲಾಬಾದ, ಹಂಗರಗಾ ಕೆ, ಹರನಾಳ ಬಿ, ಮಾರಡಗಿ ಎಸ್. ಎಂ., ಕಾಸರಬೋಸಗಾ, ಗೋಗಿಹಾಳ, ಬಳಬಟ್ಟಿ, ನಂದಿಹಳ್ಳಿ, ಕಾಖಂಡಕಿ, ವರವಿ, ಅಂಬರಖೇಡ, ಯಲಗೋಡ, ಕಾಚಾಪೂರ ಹಾಗೂ ದುಮ್ಮದ್ರಿ ಗ್ರಾಮಗಳಲ್ಲಿ ಒಂದು ಎಕರೆಯಿಂದ ಐದು ಎಕರೆವರೆಗೆ ಜಮೀನು ಗುರುತಿಸಲಾಗಿದೆ.



ಯತ್ನಾಳ ಗ್ರಾಮದಲ್ಲಿ ಅಂತ್ಯ ಸಂಸ್ಕಾರಕ್ಕೆ ಸ್ಥಳವಿಲ್ಲದೆ ಶವದೊಂದಿಗೆ ಇತ್ತೀಚೆಗೆ ಪ್ರತಿಭಟನೆ ಮಾಡಿದ ಸಾರ್ವಜನಿಕರು.

ಸರ್ಕಾರದ ಆದೇಶದಂತೆ 1000 ಜನಸಂಖ್ಯೆ ಇರುವ ಗ್ರಾಮಗಳಿಗೆ ಕನಿಷ್ಠ 18 ರಿಂದ 20 ಗುಂಟೆ ಜಾಗ ರುದ್ರಭೂಮಿಗೆ ಇರಬೇಕು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿದೆ. ಆದರೆ ಅನೇಕ ಗ್ರಾಮಗಳಲ್ಲಿ ಗುರುತಿಸಿದ ಜಾಗಗಳು ಗ್ರಾಮದಿಂದ 5 ಕಿ.ಮೀ. ದೂರದಲ್ಲಿವೆ. ಕೆಲವೆಡೆ ಹೋಗಲು ದಾರಿಯೇ ಇಲ್ಲ. ಕೆಲವು ಜಾಗಗಳು ಕಲ್ಲುಗುಡ್ಡ ಪ್ರದೇಶದಲ್ಲಿದ್ದು ಅಂತ್ಯಸಂಸ್ಕಾರಕ್ಕೆ ಅಸೌಕರ್ಯ ಉಂಟಾಗಿದೆ.

ಇನ್ನೂ ಕೆಲವು ಗ್ರಾಮಗಳಲ್ಲಿ ಸರ್ಕಾರಿ ಜಾಗದ ಕೊರತೆಯಿಂದ ಸಮೀಪದ ಗ್ರಾಮದ ಜಮೀನು ಗುರುತಿಸಲಾಗಿದೆ. ಇದರಿಂದ ಎರಡು ಗ್ರಾಮಗಳ ಜನರಿಗೆ ತೊಂದರೆ ಆಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಸ್ಥಳೀಯರಿಗೆ ಯಾವ ಜಾಗ ಮೀಸಲಾಗಿದೆ ಎಂಬ ಮಾಹಿತಿ ಸರಿಯಾಗಿ ನೀಡಲಾಗಿಲ್ಲ. ಕೆಲವೆಡೆ ಮೀಸಲು ಜಮೀನು ಮಾಯವಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲ ಮೀಸಲು ಜಮೀನುಗಳ ಮರುಸಮೀಕ್ಷೆ ನಡೆಸಿ, ಗ್ರಾಮಗಳಿಗೆ ಸಮೀಪದಲ್ಲಿ ಸೂಕ್ತ ಜಾಗ ನಿಗದಿ ಮಾಡಬೇಕು. ಜತೆಗೆ ರಸ್ತೆ, ತಂತಿಬೇಲಿ, ನೀರು, ಬೆಳಕು ಸೇರಿ ಮೂಲಸೌಕರ್ಯಗಳನ್ನು ತಕ್ಷಣ ಕಲ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

> ಸರ್ಕಾರ ರುದ್ರಭೂಮಿಗೆ ಜಮೀನು ಮೀಸಲು ಮಾಡಿದ್ದರೂ ಜನರಿಗೆ ಯಾವುದೇ ಪ್ರಯೋಜನವಾಗಿಲ್ಲ. ಹಲವು ಕಡೆ ರಸ್ತೆ, ಬೇಲಿ, ನೀರು, ವಿದ್ಯುತ್ ಸೌಲಭ್ಯಗಳಿಲ್ಲ. ಕೆಲವೆಡೆ ಜಾಗ ದೂರದಲ್ಲಿದ್ದು ಅಂತ್ಯಸಂಸ್ಕಾರಕ್ಕೆ ತೊಂದರೆಯಾಗುತ್ತಿದೆ. ದಾಖಲೆಗಳಲ್ಲಿ ಇರುವ ಜಮೀನು ಸ್ಥಳದಲ್ಲಿಲ್ಲ ಎನ್ನುವ ಅನುಮಾನವೂ ಇದೆ. ತಕ್ಷಣ ಸಮೀಕ್ಷೆ ನಡೆಸಿ ಮೂಲಸೌಕರ್ಯ ಕಲ್ಪಿಸಬೇಕು.
> ■ ಶಂಕರಲಿಂಗ ಪೂಜಾರಿ,
> ಬಿಜೆಪಿ ಮುಖಂಡ.

> ತಾಲೂಕಿನ ವಿವಿಧ ಗ್ರಾಮಗಳಲ್ಲಿ ರುದ್ರಭೂಮಿಗೆ ಮೀಸಲು ಮಾಡಿರುವ ಜಮೀನುಗಳ ಬಗ್ಗೆ ಬಂದಿರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸ್ಥಳ ಪರಿಶೀಲನೆ ನಡೆಸಿ ರಸ್ತೆ, ಬೇಲಿ ಸೇರಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ದಾಖಲೆಗಳಲ್ಲಿ ಇರುವ ಜಮೀನುಗಳ ಸ್ಥಿತಿ ಪರಿಶೀಲಿಸಿ ಸಮಸ್ಯೆ ಇರುವ ಕಡೆ ತಕ್ಷಣ ಪರಿಹಾರ ಒದಗಿಸಲಾಗುವುದು.
> ■ ಯಲ್ಲಪ್ಪ ಸುಬೇದಾರ
> ತಹಸೀಲ್ದಾರ್, ಯಡ್ರಾಮಿ.